ಮಾನವಿಕ ಕರ್ಣಾಟಕ

ಸಂಪುಟ ೧ ಸಂಚಿಕೆ ೪

೪

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೧

ಲೇಖಕರಿಗೆ ಸೂಚನೆಗಳು

೧. ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨. ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩. ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪. ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫. ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭. ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸ ಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮. ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧ ಸಂಚಿಕೆ ೪

೪

ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೧

MANAVIKA KARNATAKA, Kannada quarterly of the University of Mysore. Volume 1, Number 4, August 1971. Edited by H. S. Krishnaswamy Iyengar and Dr. A. V. Narasimha Murthy.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಬಿ. ಕೆ. ಗುರುರಾಜರಾವ್

ವಿ. ಡಿ. ಕೃಷ್ಣಸ್ವಾಮಿ

ಭಾರತದ ಇತಿಹಾಸಪೂರ್ವಕಾಲದ, ಅದರಲ್ಲೂ ಶಿಲಾಯುಗ ಸಂಸ್ಕೃತಿಗಳ ಅಧ್ಯಯನ ಮಾಡಿದ ಭಾರತೀಯರಲ್ಲಿ ಶ್ರೀ ವಿ. ಡಿ. ಕೃಷ್ಣಸ್ವಾಮಿಯವರು ಅಗ್ರಮಾನ್ಯರು. ಭಾರತದಲ್ಲಿ ಶಿಲಾಯುಗ ಸಂಸ್ಕೃತಿಗಳ ಅಧ್ಯಯನ ಶೈಶವಾವಸ್ಥೆಯಲ್ಲೇ ಬಾಲಗ್ರಹದೋಷಪೀಡಿತವಾಗಿ ತೊಳಲಾಡುತ್ತಿದ್ದಾಗ, ಅಮಿತ ಶ್ರದ್ಧೆ ಉತ್ಸಾಹಗಳಿಂದ ಬಹಳ ಕಷ್ಟಸಾಧ್ಯವಾದ ಈ ವಿಭಾಗವನ್ನು ಆರಿಸಿಕೊಂಡು ಮೂರು ದಶಕಗಳ ಕಾಲ ದುಡಿದು, ತರುಣ ಪೀಳಿಗೆಯ ಹತ್ತಾರು ಭಾರತೀಯ ಪುರಾತತ್ವಜ್ಞರಿಗೆ ತರಬೇತಿ ನೀಡಿ, ಆ ವಿಭಾಗದ ಅಧ್ಯಯನಕ್ಕೆ ಘನತೆ ತಂದು ಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಜೀವನದ ಸೂಕ್ಷ್ಮ ಚಿತ್ರ ನಿರೂಪಿಸಹೊರಟರೆ ಭಾರತದ ಇತಿಹಾಸಪೂರ್ವಕಾಲದ ಒಂದು ವಿಹಂಗಮ ನೋಟ ಒದಗಿಸಿದಂತಾಗುತ್ತದೆ. ಭಾರತದ ಪ್ರಾಕ್‌ಚಾರಿತ್ರ ಕ್ಷೇತ್ರದಲ್ಲಿ ಇತ್ತೀಚಿನ ಕೆಲವು ಬೆಳವಣಿಗೆಗಳನ್ನು ಬಿಟ್ಟರೆ, ಉಳಿದೆಲ್ಲವುಗಳಲ್ಲಿಯೂ ಕೃಷ್ಣಸ್ವಾಮಿಯವರ ಪಾತ್ರ ವೈಶಿಷ್ಟ್ಯಪೂರ್ಣವಾಗಿತ್ತು. ಭಾರತದ ಶಿಲಾಯುಗ ಮತ್ತು ಬೃಹತ್ ಶಿಲಾಸಮಾಧಿ ಸಂಸ್ಕೃತಿಗಳ ಅಧ್ಯಯನ ರಂಗದಲ್ಲಿ ಇವರು ಚಿರಸ್ಮರಣೀಯರು.

ಜೀವನದ ಸೂಕ್ಷ್ಮ ಪರಿಚಯ

ಕೃಷ್ಣಸ್ವಾಮಿಯವರದು ಒಂದು ಸಾರ್ಥಕ ಜೀವನ. ತಮಿಳು ನಾಡಿನ ಚೆಂಗಲ್ಪಟ್ಟು ಜಿಲ್ಲೆಯ ವೆಂಬಾಕ್ಕಂ ಗ್ರಾಮದಲ್ಲಿ ಸಂಪ್ರದಾಯಸ್ಥ ಶ್ರೀವೈಷ್ಣವ ಕುಟುಂಬವೊಂದರಲ್ಲಿ ಮಾತಾಪಿತರ ಹಿರಿಯ ಪುತ್ರರಾಗಿ ೧೯೦೫ರಲ್ಲಿ ಇವರು ಜನಿಸಿದರು. ಮದ್ರಾಸಿನಲ್ಲಿ ವಿದ್ಯಾಭ್ಯಾಸ ಮಾಡಿ, ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಭೂವಿಜ್ಞಾನ ಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಉತ್ತಮ ದರ್ಜೆಯಲ್ಲಿ ಪಡೆದರು. ಅನಂತರ ಆ ಸಂಸ್ಥೆಯಲ್ಲಿ ವಿದ್ಯಾರ್ಥಿವೇತನ ಪಡೆದು ಸಂಶೋಧನೆಯಲ್ಲಿ ನಿರತರಾದರು. ಈ ಸುಮಾರಿನಲ್ಲಿ ಕೃಷ್ಣಸ್ವಾಮಿಯವರು ಮೈಸೂರಿನ ಸುಪ್ರಸಿದ್ಧ ದಿವಾನರಲ್ಲೊಬ್ಬರಾಗಿದ್ದ ಸಿ. ರಂಗಾಚಾರ್ಲು ಅವರ ಮನೆತನಕ್ಕೆ ಸೇರಿದ್ದ

ಹೆಣ್ಣನ್ನು ವಿವಾಹವಾದರು. ಕೃಷ್ಣಸ್ವಾಮಿ ದಂಪತಿಗಳಿಗೆ ಇಬ್ಬರೇ ಮಕ್ಕಳು. ವಿವಾಹವಾದ ಸ್ವಲ್ಪಕಾಲಾನಂತರ ಬ್ರಿಟನ್ನಿಗೆ ತೆರಳಿ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಲಂಡನ್ ಪುರಾತತ್ವಶಾಲೆಯಲ್ಲಿ (ಲಂಡನ್ ಸ್ಕೂಲ್ ಆಫ್ ಆರ್ಕಿಯಾಲೊಜಿ) ಪುರಾತತ್ವ ವಿಭಾಗದಲ್ಲಿ ಡಿಪ್ಲೊಮಾ ಪದವಿ ಪಡೆದು ಭಾರತಕ್ಕೆ ಹಿಂದಿರುಗಿದರು. ೧೯೪೪ರಲ್ಲಿ ಭಾರತ ಪುರಾತತ್ವ ಇಲಾಖೆಯಲ್ಲಿ ಕೇವಲ ೭೦ ರೂ. ಮಾಸಿಕ ವೇತನದ ಮೇಲೆ ಸಂಶೋಧಕರಾಗಿ ಸೇರಿದ ಕೃಷ್ಣಸ್ವಾಮಿ ಸ್ವಂತ ಪರಿಶ್ರಮ ಮತ್ತು ಪಾಂಡಿತ್ಯಗಳಿಂದ ಹಂತಹಂತವಾಗಿ ಮೇಲೇರಿ ಇಲಾಖೆಯ ಉನ್ನತ ಹುದ್ದೆಗಳಲ್ಲೊಂದಾದ ಮಹೋಪಮುಖ್ಯ ನಿರ್ದೇಶಕರ (ಡೆಪ್ಯೂಟಿ ಡೈರೆಕ್ಟರ್-ಜನರಲ್ ಆಫ್ ಆರ್ಕಿಯಾಲೊಜಿ) ಪದವಿ ತಲುಪಿದರು. ಈ ಮೊದಲೇ ಇವರು ಮದ್ರಾಸ್ ವಲಯದ ಮೇಲ್ವಿಚಾರಕರಾಗಿದ್ದಾಗ ೧೯೫೦ರಲ್ಲಿ ಇವರಿಗೆ ಪತ್ನೀವಿಯೋಗವಾಯಿತು. ನಿಜವಾಗಿಯೂ ಜೀವನಸಂಗಾತಿಯಾಗಿದ್ದ ಆಕೆಯ ಮರಣ ಅವರ ಜೀವನದ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡಿತು. ಸ್ವಾಭಾವಿಕವಾಗಿಯೇ ಹಾಸ್ಯಮನೋಭಾವದವರಾಗಿದ್ದ ಕೃಷ್ಣಸ್ವಾಮಿಯವರಲ್ಲಿ ಒಂದು ರೀತಿಯ ವಿರಕ್ತಭಾವ ಹುಟ್ಟಿ, ಅನಂತರ ಜೀವನದುದ್ದಕ್ಕೂ ವೈಯಕ್ತಿಕ ಜೀವನದಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿರಲಿಲ್ಲ. ಈ ವಿರಕ್ತಿ ಎಲ್ಲಿಯವರೆಗೆ ಹೋಗಿದ್ದಿತೆಂದರೆ, ಅವರು ಕಚೇರಿಯ ಹೊರಗಿದ್ದ ಸಮಯದಲ್ಲಿ ಕಾವಿಬಟ್ಟೆ ಉಡಲು ಆರಂಭಿಸಿದ್ದರು. ಈ ವಿರಕ್ತಿಯಿಂದ ಅವರು ವಿದ್ವಜ್ಜೀವನವನ್ನಾಗಲಿ, ಸರ್ಕಾರೀ ಕೆಲಸವನ್ನಾಗಲಿ ಯಾವ ರೀತಿಯಲ್ಲೂ ಕಡೆಗಣಿಸಲಿಲ್ಲ. ೧೯೬೨ರಲ್ಲಿ ಇವರಿಗೆ ತಮ್ಮ ೫೮ನೆಯ ವಯಸ್ಸಿನಲ್ಲಿ ಮಾತೃವಿಯೋಗವಾಯಿತು. ಅದಾದ ಕೇವಲ ಒಂದು ವಾರದೊಳಗೆ, ಅವರಿನ್ನೂ ಅಂತ್ಯಕರ್ಮಗಳಲ್ಲಿ ತೊಡಗಿದ್ದಾಗ ಅವರ ಒಬ್ಬರೇ ಸೋದರಿ ವಿಧವೆಯಾದರು. ಈ ದುರ್ಘಟನೆಗಳ ಪರಂಪರೆ ಅವರನ್ನು ಜರ್ಝರಿತರನ್ನಾಗಿಸಿದರೂ, ಪ್ರಾಗಿತಿಹಾಸ ಅಧ್ಯಯನ ಕ್ಷೇತ್ರದಲ್ಲಿ ಆಸಕ್ತಿ ಹೆಚ್ಚುತ್ತಿತ್ತು. ೧೯೬೩ರಲ್ಲಿ ಅವರು ಸರ್ಕಾರಿ ಸೇವೆಯಿಂದ ನಿವೃತ್ತರಾದರು. ಆದರೆ ದುಡಿಮೆ ಅವರ ಜೀವನದ ಅಂತಸ್ಸತ್ತ್ವವಾಗಿತ್ತು. ತತ್‌ಕ್ಷಣ ಕಲ್ಕತ್ತೆಯ ಭಾರತೀಯ ವಸ್ತುಸಂಗ್ರಹಾಲಯದ (ಇಂಡಿಯನ್ ಮ್ಯೂಸಿಯಂ) ಆಡಳಿತ ವರ್ಗ ಇವರನ್ನು ಆ ಸಂಸ್ಥೆಯ ನಿರ್ದೇಶಕರಾಗಲು ಆಹ್ವಾನಿಸಿತು. ಮೂರು ವರ್ಷಗಳ ಸೇವೆಯ ಅನಂತರ ಅದನ್ನು ಬಿಟ್ಟು ಹೊರಬಂದಾಗ ಹೈದರಾಬಾದಿನ ಸಾಲಾರ್‌ಜಂಗ್ ವಸ್ತುಪ್ರದರ್ಶನಾಲಯದ ಆಡಳಿತ ವರ್ಗದವರು ಇವರನ್ನು ಆ ಸಂಸ್ಥೆಯ ನಿರ್ದೇಶಕರಾಗಿರುವಂತೆ ಕೋರಿದರು. ಅಲ್ಲೂ ಮೂರು ವರ್ಷಗಳಿಗೂ ಹೆಚ್ಚು ಕಾಲ ದುಡಿದು ೧೯೬೯ರಲ್ಲಿ ವಿಶ್ರಾಂತಿ ಬಯಸಿ ತಮ್ಮ ಜನ್ಮಸ್ಥಳವಾದ ಮದ್ರಾಸಿನಿಂದ ಬಂದು ಬೆಂಗಳೂರಿನ ಸ್ವಂತ ಮನೆಯಲ್ಲಿ ನೆಲಸಿದರು. ಆದರೆ ವಿಶ್ರಾಂತ ಜೀವನ ಅವರಿಗೆ ಲಭ್ಯವಿರಲಿಲ್ಲ. ದೇಶದ ಸುಪ್ರಸಿದ್ಧ

ವಾಣಿಜ್ಯೋದ್ಯಮಿಗಳಾದ ಬಿರ್ಲಾ ಮನೆತನದವರು ರಾಜಾಸ್ಥಾನದ ಪಿಲಾನಿಯಲ್ಲಿ ಸ್ಥಾಪಿಸಲು ನಿಶ್ಚಯಿಸಿದ್ದ ವೈಜ್ಞಾನಿಕ, ತಾಂತ್ರಿಕ ಮತ್ತು ಮಾನವಿಕ ವಸ್ತು ಪ್ರದರ್ಶನಾಲಯದ ಮೊದಲ ನೇತಾರರಾಗಿ ಅದನ್ನು ಸುವ್ಯವಸ್ಥಿತಗೊಳಿಸಲು ಅವರನ್ನು ಆಹ್ವಾನಿಸಿದರು. ೬೫ ವರ್ಷಗಳ ಉತ್ಸಾಹೀ ತರುಣ ಕೃಷ್ಣಸ್ವಾಮಿ ದುಡಿಮೆಯ ಕರೆಗೆ ಓಗೊಟ್ಟು ಸಿದ್ಧರಾದರು. ಆದರೆ ಈ ಮಧ್ಯೆ ಅವರಿಗೆ ಹರ್ನಿಯಾ ತೊಂದರೆ ಉಂಟಾದುದರಿಂದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಪಿಲಾನಿಗೆ ತೆರಳುವು ದಾಗಿ ನಿರ್ಧರಿಸಿ ೧೯೭೦ರ ಜೂನ್ ಅಂತ್ಯಭಾಗದಲ್ಲಿ ಆಸ್ಪತ್ರೆಗೆ ದಾಖಲಾದರು. ಶಸ್ತ್ರಚಿಕಿತ್ಸೆ ಸಫಲವಾಯಿತು; ಅವರು ಗುಣಮುಖರಾಗುತ್ತಿದ್ದರು. ಆದರೆ ಶಸ್ತ್ರಚಿಕಿತ್ಸೆಯ ಕಾಲದಲ್ಲಿ ಹಾಕಲಾಗಿದ್ದ ಹೊಲಿಗೆಗಳು ಬಿಟ್ಟುಹೋಗಿ, ಸಮಸ್ಯೆ ಯುದ್ಭವಿಸಿ ಜುಲೈ ತಿಂಗಳ ೧೫ರಂದು ನಿಧನ ಹೊಂದಿದರು.

ಇತಿಹಾಸಪೂರ್ವಕಾಲದ ಅಧ್ಯಯನಕ್ಕೆ ಅವರ ಕೊಡುಗೆ

ಭಾರತ ಸರ್ಕಾರದ ಭೂವಿಜ್ಞಾನ ಇಲಾಖೆಯ ರಾಬರ್ಟ್ ಬ್ರೂಸ್‌ಫುಟ್ ೧೮೬೩ರಲ್ಲಿ ಮದ್ರಾಸ್ ನಗರದ ಬಳಿಯ ಪಲ್ಲಾವರಂನಲ್ಲಿ ಭಾರತದಲ್ಲಿ ದೊರಕಿದ ಮೊದಲ ಕೈಗೊಡಲಿಯನ್ನು ಬೆಳಕಿಗೆ ತಂದಾಗ ಭಾರತದ ಪ್ರಾಗಿತಿಹಾಸ ಹುಟ್ಟಿತು. ಅನಂತರ ಮೂರು ದಶಕಗಳ ಕಾಲ ಅವರೂ ಅವರ ಸಹೋದ್ಯೋಗಿ ವಿಲಿಯಂ ಕಿಂಗ್ ಅವರೂ ಪರ್ಯಾಯ ದ್ವೀಪೀಯ ಭಾರತದ ಎಲ್ಲ ಮೂಲೆಗಳಿಂದಲೂ ಪುರಾತತ್ವ ಅವಶೇಷಗಳನ್ನು ಸಂಗ್ರಹಿಸಿದರು. ಅನಂತರ ನಾಲ್ಕು ದಶಕಗಳ ಕಾಲ ಸ್ಥಗಿತವಾಗಿದ್ದ ಈ ಅಧ್ಯಯನವನ್ನು ಗೋದಾವರಿ ಜಿಲ್ಲೆಯ ಅಧಿಕಾರಿ ಯಾಗಿದ್ದ ಎಲ್. ಎ. ಕ್ಯಾಮಿಯಾಡಿ ಮುಂದುವರಿಸಿ ಸಂಗ್ರಹಿಸಿದ ಕಲ್ಲಿನಾಯುಧ ಗಳನ್ನು ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಮೈಲ್ಸ್ ಸಿ. ಬರ್ಕಿಟ್ ಅವರು ಪರಿಶೀಲಿಸಿ ಒಂದು ಉತ್ತಮ ಪ್ರಬಂಧವನ್ನು ೧೯೩೦ರಲ್ಲಿ ಪ್ರಕಟಿಸಿದರು. ಇದರ ಫಲವಾಗಿ ವಿಶ್ವದ ಅನೇಕ ಪುರಾತತ್ವಜ್ಞರ ಗಮನ ಭಾರತದತ್ತ ಹೊರಳಿತು. ಅದೇ ಸಮಯದಲ್ಲಿ ಭೂವಿಜ್ಞಾನದಲ್ಲಿ ಎಂ.ಎ. ಪದವಿ ಪಡೆದು ಸಂಶೋಧನ ವಿದ್ಯಾರ್ಥಿಯಾಗಿದ್ದ ಕೃಷ್ಣಸ್ವಾಮಿಯವರು ಬ್ರೂಸ್‌ಫುಟ್‌ರಿಂದ ಬೆಳಕಿಗೆ ಬಂದಿದ್ದ ಮದ್ರಾಸಿನ ಪರಿಸರದಲ್ಲಿದ್ದ ಇತಿಹಾಸಪೂರ್ವನೆಲೆಗಳ ಅಧ್ಯಯನದಲ್ಲಿ ನಿರತ ರಾಗಿದ್ದರು. ೧೯೩೫ರಲ್ಲಿ ಅಮೆರಿಕದ ಯೇಲ್ ಮತ್ತು ಬ್ರಿಟನ್ನಿನ ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳವರು ತಜ್ಞರ ಜಂಟಿತಂಡವೊಂದನ್ನು ಇತಿಹಾಸಪೂರ್ವ ಸಂಸ್ಕೃತಿ ಮತ್ತು ತತ್ಕಾಲೀನ ಪರಿಸ್ಥಿತಿಗಳ ವಿಷಯವಾಗಿ ಸಂಶೋಧನೆ ನಡೆಸಲು ಭಾರತಕ್ಕೆ ಕಳುಹಿಸಿದರು. ತಂಡದ ನಾಯಕ ಖ್ಯಾತ ಭೂವಿಜ್ಞಾನಿ ಹೆಲ್ಮಟ್ ಡಿ ಟೆರ್ರಾ, ಸದಸ್ಯರು ಇತಿಹಾಸಪೂರ್ವಜ್ಞ ಟಿ. ಟಿ. ಪ್ಯಾಟರ್‌ಸನ್ ಮತ್ತು ನಷ್ಟಜೀವಿಶಾಸ್ತ್ರಜ್ಞ ಟೇಲ್‌ಹಾಡ್ ಡಿ ಚಾರ್ಡಿನ್. ಇವರು ಕಾಶ್ಮೀರ ಪಂಜಾಬು

ಪ್ರಾಂತ್ಯಗಳಲ್ಲಿಯ ಹಿಮಾಲಯ ಪರ್ವತ ಪ್ರದೇಶಗಳಲ್ಲೂ ಮಧ್ಯಪ್ರದೇಶದ ಜಬ್ಬಲ್ಪುರದ ಬಳಿಯಲ್ಲಿಯ ನರ್ಮದಾ ನದೀ ಕಣಿವೆಯಲ್ಲೂ ದೀರ್ಘಸಂಶೋಧನೆಗಳನ್ನು ನಡೆಸಿದರು. ಆ ತಂಡದ ಪ್ಯಾಟರ್‌ಸನ್ ಮೂರು ನಾಲ್ಕು ದಿನಗಳ ಮಟ್ಟಿಗೆ ಮದ್ರಾಸಿಗೆ ಆಗಮಿಸಿದಾಗ ಅವರನ್ನು ಆ ಪರಿಸರದ ಶಿಲಾಯುಗ ನೆಲೆಗಳಿಗೆ ಕರೆದೊಯ್ದು ಮಾರ್ಗದರ್ಶಿಯಾಗುವುದಲ್ಲದೆ ಅವರ ಪಾಂಡಿತ್ಯದಿಂದ ವಿಶೇಷಜ್ಞಾನ ಪಡೆಯುವ ಸೌಲಭ್ಯ ಕೃಷ್ಣಸ್ವಾಮಿಯವರಿಗೆ ದೊರಕಿತು. ಈ ಭಾರತೀಯ ತರುಣರ ಉತ್ಸಾಹ, ಶ್ರದ್ಧೆ ಮತ್ತು ಇತಿಹಾಸಪೂರ್ವಕಾಲದ ಬಗೆಗಿದ್ದ ಆಸಕ್ತಿಗಳನ್ನು ಮೆಚ್ಚಿಕೊಂಡ ಆ ತಂಡದವರ ಪ್ರಭಾವದಿಂದ ಕೃಷ್ಣಸ್ವಾಮಿಯವರಿಗೆ ಲಂಡನ್ನಿಗೆ ತೆರಳಿ ಅಲ್ಲಿನ ಪುರಾತತ್ವಶಾಲೆಯಲ್ಲಿ ಉನ್ನತ ಶಿಕ್ಷಣ ಪಡೆಯುವ ಸೌಲಭ್ಯ ದೊರಕಿತು. ಭಾರತೀಯರಲ್ಲಿ ಪ್ರಾಗಿತಿಹಾಸದ ಅಧ್ಯಯನ ನಡೆಸುತ್ತಿದ್ದು, ವಿಶೇಷ ತರಬೇತಿ ಪಡೆಯಲು ವಿದೇಶಕ್ಕೆ ಹೋದವರಲ್ಲಿ ಇವರೇ ಮೊದಲಿಗರು. ಲಂಡನ್ನಿನಲ್ಲಿ ಉನ್ನತ ಶಿಕ್ಷಣವನ್ನೂ ಡಿಪ್ಲೊಮಾ ಪದವಿಯನ್ನೂ ಪಡೆದು ತಮ್ಮ ಕಾರ್ಯಕ್ಷೇತ್ರವಾದ ಮದ್ರಾಸಿಗೆ ಹಿಂತಿರುಗಿದರು.

ಅನಂತರ ಮದ್ರಾಸಿನ ಪರಿಸರದಲ್ಲಿ ತಮ್ಮ ಅಧ್ಯಯನವನ್ನು ಮುಂದುವರಿಸಿದರು. ೧೯೩೮ರಲ್ಲಿ ಮದ್ರಾಸಿನಲ್ಲಿ ನಡೆದ ಭಾರತೀಯ ವಿಜ್ಞಾನ ಸಂಸ್ಥೆಯ (ಇಂಡಿಯನ್ ಅಕಡೆಮಿ ಆಫ್ ಸೈನ್ಸಸ್) ಅಧಿವೇಶನದಲ್ಲಿ 'ಮದ್ರಾಸಿನ ಸುತ್ತ ಇತಿಹಾಸಪೂರ್ವ ಮಾನವ' (ಪ್ರೀ-ಹಿಸ್ಟಾರಿಕ್ ಮ್ಯಾನ್ ರಿರೌಂಡ್ ಮಡ್ರಾಸ್) ಎಂಬ ಪ್ರೌಢಪ್ರಬಂಧವನ್ನು ಮಂಡಿಸಿದರು. ಈಗಲೂ ಕೋರ್ತಲ್ಯೆಯಾರ್ ನದೀ ಕಣಿವೆಯಲ್ಲಿರುವ ಪ್ರಸಿದ್ಧ ಪ್ರಾಗೈತಿಹಾಸಿಕ ನೆಲೆಗಳ ಅಧ್ಯಯನಕ್ಕೆ ಮೂಲಾಧಾರವಾದ ಲೇಖನವಿದು. ಆ ಪ್ರದೇಶದ ನದೀ ಮಟ್ಟಗಳು, ಭೂವಿಜ್ಞಾನ ರೀತ್ಯಾ ಅವುಗಳ ಕಾಲನಿರ್ಣಯ, ನದೀ ಮಟ್ಟಗಳಲ್ಲಿ ಕಾಣಬರುವ ಶಿಲಾಯುಗ ಸಂಸ್ಕೃತಿಗಳ ವಿಶ್ಲೇಷಣಾತ್ಮಕ ಪರಿಶೀಲನೆ ಇಲ್ಲಿ ದೊರಕುತ್ತವೆ. ಆವರೆಗೂ ಭಾರತದಲ್ಲಿ ಪ್ರಾಗೈತಿಹಾಸಿಕ ಸಂಸ್ಕೃತಿಗಳನ್ನು ಈ ರೀತಿಯಾಗಿ ಅಭ್ಯಾಸ ಮಾಡಿರದಿದ್ದು ಮುಂದಿನ ಪೀಳಿಗೆಯವರಿಗೆ ಇದೊಂದು ಮಾರ್ಗದರ್ಶಕವಾಯಿತು. ಇಷ್ಟಾದರೂ ಅವರಿಗೆ ಪುರಾತತ್ವ ಇಲಾಖೆಯಲ್ಲಿ ನೌಕರಿ ದೊರೆಯಲಿಲ್ಲ. ತಮ್ಮ ಹೃದಯಕ್ಕೆ ಹತ್ತಿರವಾದ ಆ ಕ್ಷೇತ್ರ ಬಿಟ್ಟು ಬೇರೆ ರಂಗಕ್ಕೆ ಹೋಗಲು ಇವರು ಸಿದ್ಧರಾಗಿರಲಿಲ್ಲ.

೧೯೪೪ರಲ್ಲಿ ಭಾರತೀಯ ಪುರಾತತ್ವ ಇಲಾಖೆಯನ್ನು ವೈಜ್ಞಾನಿಕ ರೀತಿಯಲ್ಲಿ ಪುನರ್ವ್ಯವಸ್ಥೆಗೊಳಿಸುವ ಸಲುವಾಗಿ ಡಾ. ರಾಬರ್ಟ್ ಎರಿಕ್ ಮಾರ್ಟಿಮರ್ ವೀಲರ್ ಅವರನ್ನು ಮುಖ್ಯ ನಿರ್ದೇಶಕರನ್ನಾಗಿ ನೇಮಕ ಮಾಡಲಾಯಿತು. ವೀಲರ್ ಇಲಾಖೆಯ ಕಾರ್ಯರಂಗವನ್ನು ವಿಸ್ತಾರಗೊಳಿಸುವಾಗ, ಇಲಾಖೆ ಆವರೆಗೂ ಅಲಕ್ಷಿಸಿದ್ದ ಶಿಲಾಯುಗಸಂಸ್ಕೃತಿಗಳ ಅಧ್ಯಯನವನ್ನು ಪ್ರಾರಂಭಿಸಲು ನಿರ್ಧರಿಸಿ, ಅದಕ್ಕೆ ಅರ್ಹ ವ್ಯಕ್ತಿಯನ್ನು ಅನ್ವೇಷಿಸಲು ತೊಡಗಿದಾಗ ಅವರಿಗೆ

ಮೊದಲು ಗೋಚರಿಸಿದವರು ಕೃಷ್ಣಸ್ವಾಮಿ. ಮದ್ರಾಸಿನ ಈ ತರುಣರನ್ನು ಮೊದಲಿಗೆ ಸಂಶೋಧಕರನ್ನಾಗಿ ೭೦ರೂ. ಮಾಸಿಕ ವೇತನದ ಮೇಲೆ ನೇಮಿಸಿಕೊಂಡರೂ ಕೆಲವೇ ಮಾಸಗಳ ತರುವಾಯ ಅವರ ಕಾರ್ಯತತ್ಪರತೆಯಿಂದ ತೃಪ್ತರಾಗಿ ಅವರನ್ನು ಇಲಾಖೆಯ ಪ್ರಾಗಿತಿಹಾಸಕಾರರೆಂದು ನೇಮಿಸಿದರು. ಆ ಹುದ್ದೆಯಲ್ಲಿ ಅವರ ಮುಖ್ಯ ಕೆಲಸ ಭಾರತದ ಎಲ್ಲ ಭಾಗಗಳಲ್ಲೂ ಇದ್ದ ಪೂರ್ವ ಶಿಲಾಯುಗದ ಅವಶೇಷಗಳನ್ನು ಪರಿಶೋಧಿಸಿ ಆ ಸಂಸ್ಕೃತಿಯ ರೂಪರೇಷೆಗಳನ್ನು ಹೊರಡಿಸುವುದಾಗಿತ್ತು. ಅದು ಬಹಳ ಕಷ್ಟಕರವಾದ ಕೆಲಸವಾಗಿತ್ತು. ಯೂರೋಪು ಮತ್ತು ಸ್ವಲ್ಪ ಮಟ್ಟಿಗೆ ಆಫ್ರಿಕಗಳಲ್ಲಿ ಪೂರ್ವ ಶಿಲಾಯುಗದ ಅವಶೇಷಗಳು ದೊರಕುವ ಭೂಪದರಗಳ ಕಾಲನಿರ್ಣಯ, ಸಮಕಾಲೀನ ವಾತಾವರಣ, ಸಸ್ಯ ಮತ್ತು ಪ್ರಾಣಿ ಜೀವನಗಳ ಬಗ್ಗೆ ಸಂಶೋಧನೆ ನಡೆದಿತ್ತು. ಭಾರತದಲ್ಲಾದರೋ ಆ ದಿಕ್ಕಿನಲ್ಲಿ ಬಹಳ ಸ್ವಲ್ಪ ಕೆಲಸವಾಗಿತ್ತು. ೧೯೩೦ರಲ್ಲಿ ಮೈಲ್ಸ್ ಸಿ. ಬರ್ಕಿಟ್ ಮತ್ತು ೧೯೩೫ರಲ್ಲಿ ಯೇಲ್–ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳ ಜಂಟಿ ತಂಡ ಮಾಡಿದ್ದ ಸೀಮಿತವಾದ ಸಂಶೋಧನೆಗಳಿಂದ ಕೆಲವು ಪ್ರದೇಶಗಳ ಭೂಸ್ತರಗಳಿಗೆ ಮಾತ್ರ ತಾತ್ಕಾಲಿಕ ಕಾಲನಿರ್ಣಯ ಮಾಡಬಹುದಾಗಿತ್ತು. ಉಳಿದ ಪ್ರದೇಶಗಳ ಬಗ್ಗೆ ಏನೂ ತಿಳಿದಿರಲಿಲ್ಲ. ಇಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಕಾರ್ಯಾರಂಭಮಾಡಿ ಕೇವಲ $1\frac{1}{2}$ ವರ್ಷಗಳ ಕಾಲದಲ್ಲಿ ಭಾರತದ ಪ್ರಮುಖ ಪೂರ್ವ ಶಿಲಾಯುಗ ನೆಲೆಗಳನ್ನು ಅಭ್ಯಸಿಸಿ, ಒಂದು ವಿಶ್ಲೇಷಣಾತ್ಮಕ ಪ್ರಬಂಧವನ್ನು ತಯಾರಿಸಿದರು. ೧೯೪೭ರಲ್ಲಿ ಪ್ರಕಟವಾದ 'ಶಿಲಾಯುಗ ಭಾರತ' (ಸ್ಟೋನ್ ಏಜ್ ಇಂಡಿಯಾ) ಈ ಉಪಖಂಡದಲ್ಲಿ ಆದಿಮಾನವ ಮೊದಲ ಬಾರಿ ಕಂಡಾಗ ಇದ್ದ ಪರಿಸ್ಥಿತಿಗಳನ್ನು ಅಧ್ಯಯನ ಮಾಡಲು ಬೇಕಾದ ಹಿನ್ನೆಲೆಯನ್ನು ಒದಗಿಸುವ ಮತ್ತು ಪೂರ್ವಶಿಲಾಯುಗಸಂಸ್ಕೃತಿಗಳ ಸ್ಥೂಲ ಪರಿಚಯ ಮಾಡಿಕೊಡುವ ಅಮೂಲ್ಯವಾದ ಕಾಣಿಕೆ.

ಈ ಮಧ್ಯೆ ಇತಿಹಾಸಪೂರ್ವ ಸಂಸ್ಕೃತಿಗಳ ಅಧ್ಯಯನ ಮುಂದುವರಿಸುತ್ತಿದ್ದರೂ ತಮ್ಮ ಮೊದಲ ಕಾರ್ಯರಂಗವಾದ ಮದ್ರಾಸಿನಲ್ಲೂ ದಕ್ಷಿಣ ಭಾರತಾದ್ಯಂತವೂ ಅಸಂಖ್ಯಾತವಾಗಿದ್ದ, ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಪುರಾತತ್ವಜ್ಞರ ಗಮನ ಸೆಳೆದಿದ್ದ ಬೃಹತ್ ಶಿಲಾಸಮಾಧಿ ಸಂಸ್ಕೃತಿರಂಗದಲ್ಲಿದ್ದ ಅವ್ಯವಸ್ಥೆ ಇವರ ಮನ ಸೆಳೆದಿತು. ಬೇರೆ ಬೇರೆ ವಿದ್ವಾಂಸರು ವಿವಿಧ ರೀತಿಯ ಪದಗಳನ್ನು ಈ ಸಮಾಧಿ ಪ್ರಕಾರಗಳನ್ನು ವರ್ಣಿಸಲು ಉಪಯೋಗಿಸುತ್ತಿದ್ದರು. ಸಾವಿರಾರು ಸಮಾಧಿಗಳನ್ನು ಅಗೆದು ಶೋಧಿಸಿದ್ದರೂ ಅವುಗಳ ವಿವಿಧ ಪ್ರಕಾರಗಳನ್ನು ತಿಳಿಸುವ ಹೆಸರುಗಳಾಗಲಿ ಅವುಗಳ ಖಚಿತ ಕಾಲಪರಿಮಿತಿಯಾಗಲಿ ತಿಳಿದಿರಲಿಲ್ಲ. ಆದುದರಿಂದ ವೈಶಿಷ್ಟ್ಯಪೂರ್ಣ ಲಕ್ಷಣಗಳಿಂದ ಕೂಡಿದ್ದ ಮೂರು ಪ್ರದೇಶಗಳಲ್ಲಿನ—ತಮಿಳುನಾಡಿನ ಚಿಂಗಲ್ಪಟ್ಟು ಜಿಲ್ಲೆ, ಹಳೆಯ ಪುದುಕೋಟೆ

ಸಂಸ್ಥಾನ ಮತ್ತು ಕೊಚಿನ್ ಸಂಸ್ಥಾನಗಳಲ್ಲಿನ—ಈ ಸಂಸ್ಕೃತಿಗೆ ಸೇರಿದ ಸಮಾಧಿಗಳನ್ನು ವ್ಯಾಪಕವಾಗಿ ಅಭ್ಯಸಿಸಿ, 'ದಕ್ಷಿಣ ಭಾರತದ ಬೃಹತ್ ಶಿಲಾಸಮಾಧಿ ಪ್ರಕಾರಗಳು' (ಮೆಗಾಲಿತಿಕ್ ಟೈಪ್ಸ್ ಆಫ್ ಸೌತ್ ಇಂಡಿಯ) ಎಂಬ ಉತ್ತಮ ಪ್ರಬಂಧವನ್ನು ೧೯೪೯ರಲ್ಲಿ ಪ್ರಕಟಿಸಿದರು.

ಈ ಮಧ್ಯೆ ೧೯೪೮ರಲ್ಲಿ ವೀಲರ್ ತಮ್ಮ ಅಧಿಕಾರಾವಧಿಯನ್ನು ಮುಗಿಸಿಕೊಂಡು ಸ್ವದೇಶಕ್ಕೆ ಮರಳುವ ಮುನ್ನ ಇಲಾಖೆಯನ್ನು ವಿಸ್ತರಿಸಿದರು. ಈ ವಿಸ್ತೃತ ಇಲಾಖೆಯಲ್ಲಿ ಹಳೆಯ ಮೈಸೂರು ರಾಜ್ಯ, ಆಗಿನ ಮದ್ರಾಸು ಪ್ರಾಂತ್ಯ ಮತ್ತು ಈಗಿನ ಕೇರಳ ಪ್ರದೇಶಗಳನ್ನೊಳಗೊಂಡಿದ್ದ ದಕ್ಷಿಣ ವಲಯ ಹೆಚ್ಚು ವಿಸ್ತಾರವಾದುದು. ವೀಲರ್ ಅಧಿಕಾರ ಬಿಡುವ ಮೊದಲು ಕೃಷ್ಣಸ್ವಾಮಿಯವರ ಕಾರ್ಯದಕ್ಷತೆ ಮತ್ತು ಪಾಂಡಿತ್ಯಗಳನ್ನು ಮೆಚ್ಚಿಕೊಂಡು ಅವರಿಗೆ ಬಡತಿ ಕೊಟ್ಟು ಈ ಬೃಹದ್ವಲಯದ ನಿರ್ದೇಶಕರನ್ನಾಗಿ ಮಾಡಿದರು. ದಕ್ಷಿಣವಲಯ, ಅನಂತರ ವಿಶಾಖ ಪಟ್ಟಣವನ್ನು ಕೇಂದ್ರವಾಗಿರಿಸಿಕೊಂಡಿದ್ದ ಆಗ್ನೇಯವಲಯ ಮತ್ತು ಔರಂಗಾಬಾದ್ ಕೇಂದ್ರವಾಗಿದ್ದ ನೈಋತ್ಯವಲಯಗಳಲ್ಲಿ ಮೇಲ್ವಿಚಾರಕರಾಗಿದ್ದು ಪುನಃ ತಮ್ಮ ಮೆಚ್ಚಿನ ಕಾರ್ಯಕ್ಷೇತ್ರವಾದ ಮದ್ರಾಸಿಗೆ, ದಕ್ಷಿಣವಲಯಕ್ಕೆ ಮೇಲ್ವಿಚಾರಕರಾಗಿ, ೧೯೫೫ರಲ್ಲಿ ಬಂದರು.

೧೯೪೯ರಲ್ಲಿ ವಿಶ್ವವಿಖ್ಯಾತ ಭೂವೈಜ್ಞಾನಿಕ–ಕಾಲನಿರ್ಣಯತಜ್ಞ (ಜಿಯೊಕ್ರೊನಾಲೊಜಿಸ್ಟ್) ಬ್ರಿಟನ್ನಿನ ಎಫ್. ಇ. ಜಾಯಿನರ್ ಸರ್ಕಾರದ ಆಹ್ವಾನದ ಮೇಲೆ ಭಾರತಕ್ಕೆ ಬಂದು ಇಲ್ಲಿಯ ಪ್ರಮುಖ ಶಿಲಾಯುಗ ನೆಲೆಗಳ ಕಾಲನಿರ್ಣಯ ಮಾಡುವ ಸಲುವಾಗಿ ಅಧ್ಯಯನ ಪ್ರಾರಂಭಿಸಿದರು. ಅವರಿಗೆ ಸಹಾಯಕ ಪ್ರಾಗಿತಿಹಾಸಪಟುವಾಗಿ ನೇಮಿತರಾದ ಕೃಷ್ಣಸ್ವಾಮಿ ಭಾರತದ ಪ್ರಮುಖ ನೆಲೆಗಳೆಲ್ಲವನ್ನೂ ಮತ್ತೊಂದು ಬಾರಿ ಸಂದರ್ಶಿಸುವಂತಾಯಿತು. ಆಗ ಅವರು ಬೆಳಕಿಗೆ ತಂದ ಶಿಲಾಯುಗ ಸಂಸ್ಕೃತಿಗಳ ಮೇಲೆ ತಮ್ಮ ಸಂಶೋಧಕ–ವಿದ್ಯಾರ್ಥಿ (ಈಗ ದಕ್ಷಿಣ ವಲಯದ ನಿರ್ದೇಶಕ) ಶ್ರೀ ಕೆ. ವಿ. ಸೌಂದರರಾಜನ್‌ರೊಂದಿಗೆ 'ಸಿಂಗ್ರೌಲಿ ಕಣಿವೆಯ ಶಿಲಾಯುಧ ಸಂಸ್ಕೃತಿಗಳು' (ದಿ ಲಿತಿಕ್ ಟೂಲ್ ಇಂಡಸ್ಟ್ರೀಸ್ ಆಫ್ ಸಿಂಗ್ರೌಲಿ ಬೇಸಿನ್) ಎಂಬ ಉತ್ಕೃಷ್ಟ ಲೇಖನವನ್ನು ೧೯೫೧ರಲ್ಲಿ ಹೊರತಂದರು. ಈ ಅವಿರತ ಸಂಶೋಧನೆ, ದುಡಿತಗಳ ಮಧ್ಯೆ ಇವರ ಮೇಲೆ ಹೊರಿಸಲಾದ ಮತ್ತೊಂದು ಪ್ರಮುಖ ಕರ್ತವ್ಯವೆಂದರೆ ಪುರಾತತ್ವದ ವಿಷಯದಲ್ಲಿ ಆಸಕ್ತರಾಗಿದ್ದ ತರುಣ ಪೀಳಿಗೆಯವರಿಗೆ ಸೂಕ್ತ ತರಬೇತಿ ನೀಡುವುದು. ಇತ್ತೀಚೆಗೆ ಭಾರತ ಸರ್ಕಾರದ ಪುರಾತತ್ವ ಇಲಾಖೆಯ ಅಂಗವಾಗಿ ಒಂದು ಪುರಾತತ್ವ ಶಾಲೆಯನ್ನು (ಸ್ಕೂಲ್ ಆಫ್ ಆರ್ಕಿಯಾಲೊಜಿ) ಒಬ್ಬ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ಪ್ರಾರಂಭಿಸಿದ್ದಾರೆ. ಈ ಶಾಲೆಯ ವಿದ್ಯಾರ್ಥಿಗಳಿಗೆ ಎಲ್ಲ ಪರಿಣತ ಅಧಿಕಾರಿಗಳೂ ತರಬೇತಿ ನೀಡಬೇಕಾಗಿದೆ. ಇಂಥ ಮಹತ್ಕಾರ್ಯವನ್ನು ತಮ್ಮ ಇತರ

ಕಾರ್ಯಗಳೊಂದಿಗೆ ಒಬ್ಬರೇ ನಿರ್ವಹಿಸಬೇಕಾಗಿತ್ತು. ಈಗ ಪುರಾತತ್ತ್ವ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳಾಗಿರುವ ಎಂ. ಎನ್. ದೇಶಪಾಂಡೆ, ವೈ. ಡಿ. ಶರ್ಮ, ಬಿ. ಕೆ. ಥಾಪರ್, ಕೆ. ವಿ. ಸೌಂದರರಾಜನ್, ಡಾ. ಎನ್. ಆರ್. ಬ್ಯಾನರ್ಜಿ, ಡಾ. ಆರ್. ಸುಬ್ರಹ್ಮಣ್ಯಂ ಮುಂತಾದವರು ಅವರಿಂದ ತರಬೇತಿ ಪಡೆದವರಲ್ಲಿ ಮುಖ್ಯರು.

೧೯೫೩ರಲ್ಲಿ ಭಾರತ ಪುರಾತತ್ತ್ವ ಇಲಾಖೆಗೆ ಐವತ್ತು ತುಂಬಿದ ನೆನಪಿಗಾಗಿ ಚಿನ್ನದ ಹಬ್ಬದ ಸಂಚಿಕೆಯೊಂದನ್ನು ಹೊರಡಿಸಲಾಯಿತು. ಆ ಗ್ರಂಥದಲ್ಲಿ ಅವರೆವಿಗೆ ಭಾರತೀಯ ಶಿಲಾಯುಗ ಸಂಸ್ಕೃತಿಗಳ ಅಧ್ಯಯನದಲ್ಲಿ ನಡೆದಿದ್ದ ಪ್ರಗತಿಯ ವಿಹಂಗಮನೋಟವನ್ನೊದಗಿಸುವ 'ಪ್ರಾಗಿತಿಹಾಸದಲ್ಲಿ ಪ್ರಗತಿ' (ಪ್ರೋಗ್ರೆಸ್ ಇನ್ ಪ್ರಿ-ಹಿಸ್ಟೊರಿ) ಎಂಬ ಲೇಖನವನ್ನು ಪ್ರಕಟಿಸಿದರು. ಅದು ಇತ್ತೀಚಿನ ವರೆಗೂ ಶಿಲಾಯುಗ ಸಂಸ್ಕೃತಿಗಳ ಮೇಲೆ ಏಕಮಾತ್ರ ಅಧಿಕಾರಯುತ ಲೇಖನವಾಗಿತ್ತು. ಈ ಮಧ್ಯೆ ಅವರು ಹಿಂದೆ ಹೇಳಿದಂತೆ ವಿವಿಧ ವಲಯಗಳಲ್ಲಿ ಮೇಲ್ವಿಚಾರಕರಾಗಿದ್ದುಕೊಂಡು ಇಡೀ ವಲಯದ ಆಡಳಿತ, ಅಲ್ಲಿಯ ಪ್ರಮುಖ ದೇವಾಲಯ ಕೋಟೆ ಕೊತ್ತಲಗಳು ಮುಂತಾದ ಪುರಾತನ ಸ್ಮಾರಕಗಳ ಸಂರಕ್ಷಣೆ, ದುರಸ್ತಿ ಮುಂತಾದ ಕಾರ್ಯಗಳನ್ನು ಗಮನಿಸಬೇಕಾಗಿದ್ದುದರಿಂದ ಸಂಶೋಧನಾತ್ಮಕ ಅಧ್ಯಯನವನ್ನು ಮುಂದುವರಿಸಲು ಸಮಯ ದೊರಕದಾಯಿತು. ಆದರೆ ಈ ನಷ್ಟವನ್ನು ಅವರು ಬೇರೆ ರೀತಿಯಲ್ಲಿ ತುಂಬಿಕೊಟ್ಟರು. ೧೯೪೮ ರಿಂದ ೧೯೫೫ರ ವರೆಗೆ ದಕ್ಷಿಣ ಭಾರತದ ವಿವಿಧ ವಲಯಗಳಲ್ಲಿದ್ದು ಆ ಪ್ರದೇಶಗಳಲ್ಲಿದ್ದ ಪುರಾತನ ಸ್ಮಾರಕಗಳ ದುರಸ್ತಿಯೇ ಮುಂತಾದ ಕಾರ್ಯಗಳನ್ನು ಬಹಳ ದಕ್ಷತೆಯಿಂದ ಮಾಡಿಸಿದರು. ತಂಜಾವೂರಿನ ಬೃಹದೀಶ್ವರ ದೇವಾಲಯ, ಮಾಮಲ್ಲಪುರದ (ಮಹಾಬಲಿಪುರ) ಪ್ರಸಿದ್ಧ ದೇವಾಲಯ, ಗುಹೆ ಮತ್ತು ಕೆತ್ತನೆಗಳು, ಜಿಂಜಿಯ ಬೆಟ್ಟದ ಮೇಲಿರುವ ಕೋಟೆ ಮತ್ತು ಅದರೊಳಗಿನ ಕಟ್ಟಡಗಳು, ಮೈಸೂರು ಬಳಿಯಿರುವ ಸೋಮನಾಥಪುರದ ದೇವಾಲಯ, ಶ್ರವಣಬೆಳಗೊಳದ ಬಸದಿಗಳು, ಬೆಂಗಳೂರಿನಲ್ಲಿರುವ ಟೀಪುವಿನ ಕೋಟೆ ಮತ್ತು ಅರಮನೆ, ಶ್ರೀರಂಗಪಟ್ಟಣದ ಅರಮನೆ, ಅಜಂತ ಮತ್ತು ಎಲ್ಲೋರಗಳ ಗುಹೆಗಳು, ಹಂಪಿಯ ಅವಶೇಷಗಳು ಮುಂತಾದ ಪುರಾತನ ಅವಶೇಷಗಳ ಸಂರಕ್ಷಣೆ, ಆ ಸ್ಥಳಗಳಲ್ಲಿ ಪ್ರವಾಸಿಗಳಿಗೆ ಉಂಟಾಗುತ್ತಿದ್ದ ಕಷ್ಟಗಳಿಗೆ ಪರಿಹಾರ ಕ್ರಮ—ಈ ವಿಷಯಗಳಲ್ಲಿ ಇವರು ಕೈಗೊಂಡ ಕ್ರಮಗಳು ಆದರ್ಶಪ್ರಾಯವಾಗಿದ್ದುವೆಂದು ವೀಲರ್ ಮುಂತಾದ ಅನೇಕ ತಜ್ಞರು ಹೊಗಳಿದ್ದಾರೆ. ಸರ್ಕಾರದಿಂದ ದೊರೆಯುತ್ತಿದ್ದ ಅಲ್ಪ ಮೊತ್ತವನ್ನು ಸದುಪಯೋಗಪಡಿಸಿಕೊಂಡು ಇವರು ಸಾಧಿಸಿದ ಪ್ರಗತಿ ನಿಜವಾಗಿಯೂ ಪ್ರಶಂಸನೀಯ.

೧೯೫೫ರ ಸೆಪ್ಟೆಂಬರ್ ತಿಂಗಳಲ್ಲಿ, ವಿಶ್ರಾಂತಿ ಹೊಂದುವ ಕಾಲ ಅನತಿದೂರ

ವಿದ್ದಾಗ, ಇವರಿಗೆ ಅನಿರೀಕ್ಷಿತವಾಗಿ ಮತ್ತೊಂದು ಬಡತಿ ದೊರಕಿತು. ಆಗ ಹೊಸದಾಗಿ ಮಂಜೂರಾದ ಮಹೋಪಮುಖ್ಯ ನಿರ್ದೇಶಕ ಹುದ್ದೆಗೆ ಇವರನ್ನು ಆರಿಸಲಾಯ್ತು. ದೆಹಲಿಯಲ್ಲಿ ೧೯೪೫ರ ಜನವರಿಯಲ್ಲಿ ನಡೆದ ಭಾರತೀಯ ವಿಜ್ಞಾನ ಸಂಸ್ಥೆಯ ಅಧಿವೇಶನದಲ್ಲಿ ಮಾನವಶಾಸ್ತ್ರ–ಪ್ರಾಕ್ತನಶಾಸ್ತ್ರಗಳ ವಿಭಾಗದ ಅಧ್ಯಕ್ಷರಾಗಿ ಆಯ್ಕೆಯಾದರು. ಅಧ್ಯಕ್ಷ ಪೀಠದಿಂದ ಇವರು ಮಾಡಿದ ಭಾಷಣ ವಿದ್ವತ್ಪೂರ್ಣವಾದುದು. 'ಭಾರತದಲ್ಲಿ ನವಶಿಲಾಯುಗದ ಸ್ವರೂಪ' (ನಿಯೊಲಿತಿಕ್ ಪ್ಯಾಟರ್ನ್ ಆಫ್ ಇಂಡಿಯ) ಎಂಬ ಈ ಪ್ರಬಂಧದಲ್ಲಿ ಆವರೆವಿಗೆ ಭಾರತದ ಹಲವಾರು ಭಾಗಗಳಲ್ಲಿ ಕಂಡುಬಂದಿದ್ದ ಆಹಾರೋತ್ಪಾದನ ಹಂತದ ಸಂಸ್ಕೃತಿಗಳ ಅವಶೇಷಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ನವಶಿಲಾಯುಗ ಸಂಸ್ಕೃತಿಯ ಸ್ವರೂಪವನ್ನು ವಿಶ್ಲೇಷಿಸಿದ್ದಾರೆ. ಈ ಲೇಖನವನ್ನು ಪರಿಷ್ಕರಿಸಿ ಪುನಃ ೧೯೬೬ರಲ್ಲಿ ಪ್ರಕಟಿಸಿದರು.

ಈ ಮೊದಲೇ ತಿಳಿಸಿರುವಂತೆ ೧೯೬೦ರಿಂದ ಇಲಾಖೆಯವರು ದೆಹಲಿಯಲ್ಲಿ ಪುರಾತತ್ವ ಶಾಲೆಯನ್ನು ಪ್ರಾರಂಭಿಸಿದಾಗ ಕೃಷ್ಣಸ್ವಾಮಿ ಅಮಿತ ಉತ್ಸಾಹದಿಂದ, ಪುನರ್ಯೌವನ ಪಡೆದವರಂತೆ ದುಡಿಯಲಾರಂಭಿಸಿದರು. ಆ ಶಾಲೆಗೆ ಸೇರಿದ ವಸ್ತುಸಂಗ್ರಹಾಲಯಕ್ಕೆ ದೇಶದ ಎಲ್ಲ ಭಾಗಗಳಿಂದಲೂ ಅವಶೇಷಗಳನ್ನು ಸಂಗ್ರಹಿಸಿ ವ್ಯವಸ್ಥೆಗೊಳಿಸಿದರು. ಇದಲ್ಲದೆ ಶಾಲೆಯ ವಿದ್ಯಾರ್ಥಿಗಳನ್ನು ಹಿಮಾಲಯದಿಂದ ಹಿಡಿದು ಕನ್ಯಾಕುಮಾರಿಯ ವರೆಗಿನ ಶಿಲಾಯುಗ ನೆಲೆಗಳ ಮತ್ತು ಪುರಾತನ ದೇವಾಲಯಗಳ ಅಧ್ಯಯನಕ್ಕಾಗಿ ಕರೆದುಕೊಂಡು ಹೋಗಿ ಅವರಿಗೆ ತರಬೇತಿ ಕೊಡುತ್ತಿದ್ದರು. ಮೂರು ವರ್ಷಗಳಿಗೂ ಹೆಚ್ಚು ಕಾಲ ಈ ರೀತಿಯ ಸೇವೆ ಸಲ್ಲಿಸಿದ ಅನಂತರ ೧೯೬೩ರಲ್ಲಿ ಅವರು ಪುರಾತತ್ವ ಇಲಾಖೆಯಿಂದ ನಿವೃತ್ತರಾದರು.

ಅವರ ಕಾರ್ಯತತ್ಪರತೆ, ಸಂಘಟನ ಶಕ್ತಿ ಮತ್ತು ವಿದ್ವತ್ತುಗಳ ಪರಿಚಯ ಪಡೆದಿದ್ದ ವಿದ್ವಲ್ಲೋಕ ಅವರ ಈ ಶಕ್ತಿಗಳನ್ನು ವ್ಯರ್ಥವಾಗಿಸಲು ಸಿದ್ಧವಿರಲಿಲ್ಲ. ಕಲ್ಕತ್ತೆಯ ಭಾರತೀಯ ವಸ್ತು ಸಂಗ್ರಹಾಲಯದ ಆಡಳಿತ ವರ್ಗದವರು ಇವರನ್ನು ಆ ಸಂಸ್ಥೆಯ ನಿರ್ದೇಶಕರನ್ನಾಗಿ ಆರಿಸಿದರು. ಆ ಹುದ್ದೆಯಲ್ಲಿ ಮೂರು ವರ್ಷಗಳ ಕಾಲ ಸೇವೆಸಲ್ಲಿಸುತ್ತಿದ್ದಾಗ ಪುರಾತತ್ವಕ್ಕೆ ಸಂಬಂಧಿಸಿದ ವಿಭಾಗದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದುದೇ ಅಲ್ಲದೆ ಸ್ವಲ್ಪ ಮಟ್ಟಿಗೆ ಅಲಕ್ಷಿಸಿದ್ದ ಆ ವಿಭಾಗಕ್ಕೆ ಯೋಗ್ಯ ಪ್ರಾಧಾನ್ಯ ದೊರಕುವಂತೆ ಮಾಡಿದರು. ದುಡಿಮೆ ಸಾಕೆಂದು ಅವರು ಅಲ್ಲಿಂದ ಬಂದರೇನೋ ಹೌದು. ಆದರೆ ಅವರನ್ನು ಬಿಟ್ಟುಕೊಡಲು ಪುರಾತತ್ವಜ್ಞರು ಒಪ್ಪಲಿಲ್ಲ. ದಕ್ಷಿಣ ಭಾರತದಲ್ಲೇ ಅಪೂರ್ವವೆನಿಸಿರುವ ಹೈದರಾಬಾದಿನ ಸಾಲಾರ್ ಜಂಗ್ ಕಲಾ ವಸ್ತುಸಂಗ್ರಹಾಲಯದ ಆಡಳಿತ ಸಮಿತಿಯವರು, ಆ ಸಂಸ್ಥೆಯ ನಿರ್ದೇಶಕತ್ವವನ್ನು ವಹಿಸಿಕೊಳ್ಳಲು ಇವರಿಗೆ ಆಗ್ರಹ

ಪೂರ್ಣ ಕರೆಯಿತ್ತುದನ್ನೂ ದುಡಿಯಲು ಹಿಂದೆಗೆಯದ ಶ್ರೀ ಕೃಷ್ಣಸ್ವಾಮಿಯವರು ಪುನಃ ಕಾರ್ಯನಿರತರಾದುದನ್ನೂ ಹಿಂದೆಯೇ ಹೇಳಲಾಗಿದೆ. ಅಪಾರ ವಸ್ತುಗಳು ಸಂಗ್ರಹ ಅಲ್ಲಿದ್ದು, ಅವುಗಳನ್ನು ಸರಿಯಾಗಿ ಪ್ರದರ್ಶಿಸಲು ಬೇಕಾದ ಸ್ಥಳದ ಅಭಾವ ವಿದ್ದುದರಿಂದ ಒಂದು ರೀತಿಯ ಅವ್ಯವಸ್ಥೆ ಕಂಡುಬರುತ್ತಿತ್ತು. ಒಳಗಿನ ಉಗ್ರಾಣಗಳಲ್ಲಿ ಅಸಂಖ್ಯಾತ ಸುಂದರ ಕಲಾವಸ್ತುಗಳು ಹುದುಗಿದ್ದುವು. ಅವೆಲ್ಲ ವನ್ನೂ ಸೂಕ್ತವಾಗಿ ವರ್ಗೀಕರಿಸಿ, ಸಕ್ರಮವಾಗಿ ಅಣಿಗೊಳಿಸಲು ಪ್ರಯತ್ನಿಸಿದಾಗ ಕೃಷ್ಣಸ್ವಾಮಿಯವರಿಗೆ ಅಲ್ಲಿಯ ಕುಂದುಕೊರತೆಗಳ ಪರಿಚಯ ದೊರಕಿತು. ತತ್‌ಕ್ಷಣ ಆಡಳಿತ ಮಂಡಲಿಯವರೊಂದಿಗೆ ಸಮಾಲೋಚನೆ ನಡೆಸಿ, ಆ ಸಂಗ್ರಹಾಲಯಕ್ಕೆ ತಕ್ಕುದಾದ ಒಂದು ಭವ್ಯ ಆಧುನಿಕ ಕಟ್ಟಡವನ್ನು ನಿರ್ಮಿಸು ವಂತೆ ಏರ್ಪಡಿಸಿದರು. ಹೊಸ ಕಟ್ಟಡ ಸಿದ್ಧವಾದ ಅನಂತರ ಕಲಾವಸ್ತುಗಳನ್ನು ಆ ಕಟ್ಟಡಕ್ಕೆ ಸಾಗಿಸಿ ಆಧುನಿಕ ಪ್ರದರ್ಶನ ಪದ್ಧತಿಗಳಿಗನುಸಾರವಾಗಿ ಪುನರ್ವ್ಯವಸ್ಥೆ ಗೊಳಿಸಿರುವುದು ಇವರ ಶಿಸ್ತು, ದಕ್ಷತೆಗಳ ಪ್ರತೀಕವಾಗಿದೆ.

ಕೃಷ್ಣಸ್ವಾಮಿಯವರು ಒಬ್ಬ ಕಾರ್ಯನಿಷ್ಠ ವ್ಯಕ್ತಿ. ಆರಡಿಗಳಿಗೂ ಸ್ವಲ್ಪ ಹೆಚ್ಚಿನ ಭೀಮಕಾಯ. ಈ ವ್ಯಕ್ತಿ ಮೊದಲ ನೋಟಕ್ಕೆ ಭಯ ಹುಟ್ಟಿಸು ವಂತಿದ್ದರೂ ಇವರ ಪರಿಚಯ ಬೆಳದಂತೆಲ್ಲ ಇವರ ಮೃದು ಸ್ವಭಾವ, ಸರಳತೆ ಮತ್ತು ಕರುಣಾರ್ದ್ರ ಹೃದಯದ ಅರಿವಾಗುತ್ತಿತ್ತು. ಶೀಘ್ರ ಮತ್ತು ಉಗ್ರಕೋಪಿ ಗಳಾದ ಕೃಷ್ಣಸ್ವಾಮಿ ಅಷ್ಟೇ ಬೇಗ ಬೆಣ್ಣೆಯಂತಾಗುತ್ತಿದ್ದರು. ಕಷ್ಟದಲ್ಲಿರು ವವರಿಗೆ ಶಕ್ತಿಮೀರಿ ಸಹಾಯ ಮಾಡುವ ದೈವೀಗುಣ ಅವರಲ್ಲಿತ್ತು. ಅವರಲ್ಲಿ ದೃಢನಿರ್ಧಾರವಿತ್ತು. ಕೈಗೊಂಡ ಕಾರ್ಯವನ್ನು ಎಷ್ಟೇ ಕಷ್ಟ ಬಂದರೂ ಬಿಡದೆ ಸಾಧಿಸುವ ಛಲವಿತ್ತು. ಯಾವುದೇ ಅಧ್ಯಯನವನ್ನು ಕೈಗೊಂಡರೂ ಆಳವಾಗಿ, ಸಮಗ್ರವಾಗಿ ಪರಿಶೀಲಿಸಿ ಖಚಿತವಾದ ಅಭಿಪ್ರಾಯಗಳನ್ನು ತಳೆಯು ತ್ತಿದ್ದರು. ಅವರ ಪ್ರಕಟನೆಗಳು ಅಲ್ಪ ಸಂಖ್ಯಾತ ಮತ್ತು ಕಿರಿಯ ಗಾತ್ರದವು ಗಳಾಗಿದ್ದರೂ ಒಂದೊಂದೂ ವಿದ್ವತ್ಪೂರ್ಣವಾದವು; ಮತ್ತು ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ದಶಕಗಳವರೆಗೂ ಅಧಿಕಾರಪೂರ್ಣವಾಗಿದ್ದುವು. ಭಾರತದ ಪ್ರಾಗೈತಿಹಾಸಿಕ ಅಧ್ಯಯನದಲ್ಲಿ ಅವರು ಮಾರ್ಗ ಪ್ರವರ್ತಕರು. ಮೇಲೆ ಹೇಳಿದ ಲೇಖನಗಳನ್ನಲ್ಲದೆ ಇನ್ನೂ ಹಲವಾರು ಲೇಖನಗಳನ್ನು ಅವರು ವಿದ್ವತ್ಸಭೆ ಗಳಲ್ಲಿ ಮಂಡಿಸಿದ್ದಾರೆ. ೧೯೬೫ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಶಂಕರ-ಪಾರ್ವತೀ ದತ್ತಿಯ ಭಾಷಣಮಾಲೆಯಲ್ಲಿ 'ಕರ್ಣಾಟಕದ ಶಿಲಾ ಕೆತ್ತನೆ ಮತ್ತು ರೇಖಾಚಿತ್ರಗಳು (ಪೆಕ್‌ಡ್ ರಾಕ್ ಎನ್‌ಗ್ರೇವಿಂಗ್ಸ್ ಅಂಡ್ ಲೈನ್ ಡ್ರಾಯಿಂಗ್ಸ್) ಮತ್ತು 'ಭಾರತದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗಳು' (ಮೈಕ್ರೊಲಿತಿಕ್ ಇಂಡಸ್ಟ್ರೀಸ್ ಆಫ್ ಇಂಡಿಯ) ಎಂಬೆರಡು ಭಾಷಣಗಳನ್ನು ನೀಡಿದ್ದರು. ಇವಿನ್ನೂ ಅಪ್ರಕಟಿತ. ಇವರ ವಿದ್ವತ್ ಪ್ರೌಢಿಮೆಯನ್ನು ಗೌರವಿ

ಸುವ ಸಲುವಾಗಿ ಗ್ರೇಟ್ ಬ್ರಿಟನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿಯವರು ಇವರನ್ನು ತಮ್ಮ ಸಂಸ್ಥೆಯ ಆಜೀವ ಸದಸ್ಯರನ್ನಾಗಿ ಮಾಡಿಕೊಂಡಿದ್ದರು. ದೇಶದ ಒಳಗೂ ಹೊರಗೂ ಇವರನ್ನು ಗೌರವಿಸುತ್ತಿದ್ದ ಪುರಾತತ್ವಜ್ಞರು ಅಸಂಖ್ಯಾತ ರಾಗಿದ್ದರು. ಅಮೆರಿಕ, ಬ್ರಿಟನ್, ಫ್ರಾನ್ಸ್, ಆಫ್ರಿಕ ಮೊದಲಾದ ದೇಶಗಳ ವಿದ್ವಾಂಸರು ಇವರೊಡನೆ ಭಾರತದ ಇತಿಹಾಸಪೂರ್ವದ ಸಮಸ್ಯೆಗಳನ್ನು ಕುರಿತು ಆಗಾಗ್ಯೆ ವಿಚಾರ ವಿನಿಮಯ ನಡೆಸುತ್ತಿದ್ದುದು ಇವರ ಪಾಂಡಿತ್ಯಕ್ಕೊಂದು ನಿದರ್ಶನ. ಪಾಕಿಸ್ತಾನದ ಪ್ರಪ್ರಥಮ ಪುರಾತತ್ವಜ್ಞರಲ್ಲೊಬ್ಬರೂ 'ಪೂರ್ವ ಭಾರತದ ಪ್ರಾಗಿತಿಹಾಸ' ಮತ್ತು 'ಭಾರತದ ಲಿಪಿಶಾಸ್ತ್ರ' ಎಂಬ ಗ್ರಂಥಗಳ ಕರ್ತೃಗಳೂ ಆದ ಡಾ. ಎ. ಎಚ್. ದಾನಿ ಒಮ್ಮೆ ಇವರನ್ನು 'ಭಾರತ ಪ್ರಾಗಿತಿಹಾಸದ ವೃದ್ಧಪಿತಾಮಹ (ಗ್ರ್ಯಾಂಡ್ ಓಲ್ಡ್ ಮ್ಯಾನ್ ಆಫ್ ಇಂಡಿಯನ್ ಪ್ರೀಹಿಸ್ಟೊರಿ) ಎಂದು ವರ್ಣಿಸಿದ್ದಾರೆ. ೧೯೫೮ರಲ್ಲಿ ಹೈದರಾಬಾದಿನಲ್ಲಿ ಭಾರತಾದ್ಯಂತದ ಪುರಾತತ್ವಜ್ಞರೆಲ್ಲರೂ ಸೇರಿದ್ದ ಸಭೆಯೊಂದರಲ್ಲಿ ಪ್ರಾಗಿತಿಹಾಸಕ್ಕೆ ಸಂಬಂಧಿಸಿದ ಒಂದು ಕ್ಲಿಷ್ಟ ಸಮಸ್ಯೆಯ ಚರ್ಚೆ ನಡೆದಿತ್ತು. ಸರ್ವಸಮ್ಮತವಾದ ಅಭಿಪ್ರಾಯವನ್ನು ತಲುಪಲು ಸಾಧ್ಯವಾಗದೆ ಹೋದಾಗ ಸಭಾಧ್ಯಕ್ಷರಾದ ಡಾ. ನಿಹಾರ್ ರಂಜನ್ ರೇ ಅವರು 'ಈ ವಿಷಯವಾಗಿ ನಿರ್ಣಾಯಕ ಅಭಿಪ್ರಾಯವನ್ನು ಕೊಡಲು ಕೃಷ್ಣಸ್ವಾಮಿಯವರೊಬ್ಬರೇ ಅರ್ಹ' ರೆಂದು ಅವರನ್ನು ಆಹ್ವಾನಿಸಿದರು. ಹೊರಗಿನಿಂದ ಆಗ ತಾನೇ ಪ್ರವೇಶಿಸುತ್ತಿದ್ದ ಅವರ ತೀರ್ಮಾನವನ್ನು ಸಭೆ ಒಮ್ಮತದಿಂದ ಒಪ್ಪಿಕೊಂಡಿತು. ವಿದ್ವಾಂಸರು ಅವರ ನೆರವನ್ನು ಯಾಚಿಸುತ್ತಿದ್ದುದಕ್ಕೂ ಅವರನ್ನು ಎಷ್ಟು ಗೌರವದೃಷ್ಟಿಯಿಂದ ಕಾಣುತ್ತಿದ್ದರೆಂಬುದಕ್ಕೂ ಇಂಥ ಹಲವಾರು ನಿದರ್ಶನಗಳಿವೆ.

ಬಿ. ನಾಗಪ್ಪ

ಗ್ರಂಥಾಲಯಗಳ ಅಭಿವೃದ್ಧಿಯಲ್ಲಿ ಯುನೆಸ್ಕೋ* ಪಾತ್ರ

ವಿಶ್ವಸಂಸ್ಥೆಯ ೧೪ ವಿಶಿಷ್ಟ ಅಂಗಗಳಲ್ಲಿ ಯುನೆಸ್ಕೋವೂ ಒಂದು. ಈ ಎಲ್ಲ ೧೪ ಅಂಗಗಳು ಒಂದಲ್ಲ ಒಂದು ರೀತಿ ವಿಶ್ವದ ಜನತೆಗೆ ಶಾಂತಿ, ಸಂಪತ್ತು, ನ್ಯಾಯ ಮತ್ತು ಸಮಾನತೆಗಳನ್ನು ಒದಗಿಸುವುದರಲ್ಲಿ ತೊಡಗಿವೆ ಎಂಬುದು ಸರ್ವವಿದಿತ. ವಿಶ್ವಸಂಸ್ಥೆಯ ಪ್ರತಿಯೊಂದು ಅಂಗಸಂಸ್ಥೆಯೂ ತನ್ನದೇ ಆದ ಕಾರ್ಯಕ್ಷೇತ್ರ ಹೊಂದಿದೆ. ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿಗಳ ಬೆಳವಣಿಗೆ ಮತ್ತು ಪ್ರಸಾರದಲ್ಲಿ ನೆರವಾಗಲು ಯುನೆಸ್ಕೋವನ್ನು ರೂಪಿಸಲಾಯಿತು. ೧೯೪೬ರ ನವೆಂಬರ್ ೪ರಂದು ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ತನ್ನ ಸಂವಿಧಾನದಲ್ಲೇ ಹೇಳಿಕೊಂಡಿರುವಂತೆ "ಪರಸ್ಪರ ಅರಿವು ಮತ್ತು ಜ್ಞಾನಪ್ರಸಾರದ ಕಾರ್ಯವನ್ನು ಅಂತರರಾಷ್ಟ್ರೀಯ ಸಹಕಾರದಿಂದ" ನೆರವೇರಿಸುತ್ತಾ ಬಂದಿದೆ. ಈ ಸಹಕಾರ ಪ್ರಪಂಚದ ನಾನಾ ರಾಷ್ಟ್ರಗಳಿಗೆ ನಾನಾ ಭಾಷೆಗಳ ಮಾಧ್ಯಮದಲ್ಲಿ ನಡೆಯಬೇಕಾಗಿದೆ. ಪರಸ್ಪರ ಅರಿವು ಮತ್ತು ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಸಾಕ್ಷರತೆ ಅತ್ಯವಶ್ಯವೆಂಬುದನ್ನು ಈ ಸಂಸ್ಥೆ ಅಸ್ತಿತ್ವಕ್ಕೆ ಬಂದಾಗಲೇ ತಿಳಿದುಕೊಂಡಿತ್ತು. ಸಾಕ್ಷರತಾ ಚಳವಳಿಯಲ್ಲಿ ಗ್ರಂಥ ಹಾಗೂ ಗ್ರಂಥಾಲಯಗಳ ಪಾತ್ರ ಹಿರಿದೆಂದೂ ಮನಗಂಡಿತ್ತು. ಅಂತೆಯೇ ಇದು ಗ್ರಂಥಾಲಯಗಳ ಅಭಿವೃದ್ಧಿಯ ವಿಷಯದಲ್ಲಿ ವಿಶೇಷಗಮನ ನೀಡುತ್ತ ಬಂದಿದೆ.

ಯುನೆಸ್ಕೋದ ಕಾರ್ಯಚಟುವಟಿಕೆಗಳು ಮೂರು ಮುಖ್ಯ ವಿಧಾನಗಳಲ್ಲಿ ಕಾರ್ಯರೂಪಕ್ಕೆ ಇಳಿಯುತ್ತಿವೆ: ೧ ಗ್ರಂಥ ಮತ್ತು ನಿಯತಕಾಲಿಕೆಗಳ ಪ್ರಕಾಶನದ ರೂಪದಲ್ಲಿ ಅಂತರರಾಷ್ಟ್ರೀಯ ಅರಿವು ಮತ್ತು ಮಾಹಿತಿಗಳ ಪ್ರಸಾರ

Unesco : The United Nations Educational, Scientific and Cultural Organisation (ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘ)

ಮಾಡುವುದು, ತಾನೇ ನೇರವಾಗಿ ಮಾಹಿತಿ ಮತ್ತು ಪ್ರಲೇಖನಗಳನ್ನು ಸಂಗ್ರಹಿಸುವುದು ಮತ್ತು ಅವನ್ನು ತನ್ನ ಪ್ರಧಾನ ವಿತರಣ ಕೇಂದ್ರ ಮತ್ತು ಪ್ರಾದೇಶಿಕ ಕಚೇರಿಗಳ ಮೂಲಕ ವಿತರಣೆ ಮಾಡುವುದು; ೨ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಿಗೆ ನೆರವಾಗುವುದು, ಅವುಗಳ ಸಂಘಟನೆಯನ್ನು ನೆರವೇರಿಸುವುದು, ವಿಶೇಷಜ್ಞ ಸಂಸ್ಥೆಗಳಿಗೆ ಧನಸಹಾಯವನ್ನೂ ತಜ್ಞರ ನೆರವನ್ನೂ ನೀಡುವುದು ಮತ್ತು ೩ ಸರ್ವಮಾನ್ಯ ನೀತಿನಿಯಮಗಳಿಗೆ ಸದಸ್ಯ ರಾಷ್ಟ್ರಗಳು ಮತ್ತು ಸಂಘ ಸಂಸ್ಥೆಗಳು ಬದ್ಧವಾಗಿರುವಂತೆ ನಿಯಂತ್ರಿಸುವುದು.

ಹಲವಾರು ಗುರುತರ ಜವಾಬ್ದಾರಿ ಮತ್ತು ನಿಯಮಿತ ಕಾರ್ಯಕ್ರಮಗಳ ಜೊತೆಗೆ ಯುನೆಸ್ಕೋ ಒಂದು ಅತಿ ದೊಡ್ಡ ಪ್ರಕಾಶಕ ಸಂಸ್ಥೆಯಾಗಿ ಬೆಳೆಯುತ್ತಿದೆ. ಈ ವರೆಗೆ ಪ್ರಕಟಿಸಿರುವ ಗ್ರಂಥಗಳ ಪಟ್ಟಿಯನ್ನು ನೋಡಿದರೆ ಇದು ಸತ್ಯವೆಂದು ಕಂಡೀತು.[1] ಹಲವಾರು ಗ್ರಂಥಗಳನ್ನು ಮತ್ತು ನಿಯತಕಾಲಿಕಗಳನ್ನು ಪ್ರಕಟಿಸುವುದರ ಜೊತೆಗೆ ವಿವಿಧ ಸಂಘಸಂಸ್ಥೆಗಳಿಗೆ ಇಂತಹ ಪ್ರಕಟನ ಕಾರ್ಯದಲ್ಲಿ ನೆರವನ್ನಿತ್ತಿದೆ. ಈ ಗ್ರಂಥಗಳ ಪಟ್ಟಿ ಈ ವರೆಗೆ ಯುನೆಸ್ಕೋ ಹೊರತಂದಿರುವ ಗ್ರಂಥಗಳ ಬೃಹತ್ ಸಂಖ್ಯೆಯನ್ನಷ್ಟೇ ಅಲ್ಲ, ಅವು ಎಂತಹ ಅಮೂಲ್ಯ ಜ್ಞಾನ ಸಂಪತ್ತು, ಎಷ್ಟು ವೈವಿಧ್ಯಮಯ ಎಂಬುದನ್ನು ತೋರಿಸುತ್ತದೆ. ಇದರ ಹಲವಾರು ಗ್ರಂಥಗಳು ಅನೇಕ ಭಾಷೆಗಳಿಗೆ ತರ್ಜುಮೆಗೊಂಡಿವೆ.

ಗ್ರಂಥಗಳ ಅಂತರರಾಷ್ಟ್ರೀಯ ವಿನಿಮಯ

ಗ್ರಂಥಾಲಯ ಕ್ಷೇತ್ರದಲ್ಲಿ ಯುನೆಸ್ಕೋದ ಕಾರ್ಯತತ್ಪರತೆ, ಸಾಧನೆ, ಅದು ಅನುಸರಿಸಿದ ನೀತಿನಿಯಮಗಳು ಮತ್ತು ಅನುಷ್ಠಾನ ಮಾದರಿಯನ್ನು ಮೂರು ನಿಟ್ಟುಗಳಲ್ಲಿ ಗುರುತಿಸಬಹುದು : ೧ ಗ್ರಂಥಾಲಯಗಳ ಅಂತರರಾಷ್ಟ್ರೀಯ ಸಂಘಗಳ ಸಂಘಟನೆ ಮತ್ತು ಅವುಗಳ ಪ್ರಕಟನೆಗಳ ವಿನಿಮಯದಲ್ಲಿ ನೆರವಾಗುವುದು; ೨ ಸಾರ್ವಜನಿಕ, ವಿಶ್ವವಿದ್ಯಾನಿಲಯ ಮತ್ತು ರಾಷ್ಟ್ರೀಯ ಗ್ರಂಥಾಲಯಗಳ ಅಭಿವೃದ್ಧಿಗೆ ಸಹಾಯ ಮಾಡುವುದು ಮತ್ತು ೩ ಗ್ರಂಥವಾಹಿತಿ ಸೂಚೀಕರಣ ಮತ್ತು ಪ್ರಲೇಖನ ಕಾರ್ಯಗಳಲ್ಲಿ ನೆರವಾಗುವುದು. ಈ ಮೂರು ಬಗೆಯ ಕಾರ್ಯಗಳು ಒಂದಕ್ಕೊಂದು ಪೂರಕವೂ ಸಹಾಯಕವೂ ಆಗಿವೆ.

ಯುದ್ಧಾನಂತರದ ದಿನಗಳಲ್ಲಿ ಯುನೆಸ್ಕೋ ಬಹು ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು. ಯುದ್ಧದ ನೇರ ಪೆಟ್ಟಿನಿಂದ ಘಾಸಿಗೊಂಡ ಅನೇಕ ಪ್ರಮುಖ ಗ್ರಂಥಾಲಯಗಳು ತಮ್ಮ ಪುನರುಜ್ಜೀವನಕ್ಕೆ ದಾರಿಗಾಣದ ಪರಿಸ್ಥಿತಿಯಲ್ಲಿದ್ದುವು. ಈ ಸಮಸ್ಯೆಯ ನಿವಾರಣೆಗೆ ಯುನೆಸ್ಕೋ ನೀಡಿದ ಪರಿಹಾರ

[1] Unesco : *Catalogue of Publications*; Paris, Unesco, 1971

ಸ್ತುತ್ಯಾರ್ಹವಾದದ್ದು. ಹಲವಾರು ಗ್ರಂಥಗಳ ಹೆಚ್ಚುವರಿ ಪ್ರತಿಗಳನ್ನು ಇಂಥ ಗ್ರಂಥಾಲಯಗಳಿಗೆ ಉಚಿತವಾಗಿ ಕೊಡಬೇಕೆಂದು ಯುನೆಸ್ಕೋ ಮಾಡಿಕೊಂಡ ಮನವಿಯನ್ನು ಮನ್ನಿಸಿ ಅನೇಕ ಗ್ರಂಥಾಲಯಗಳು ತಮ್ಮ ಆವಶ್ಯಕತೆಗಿಂತ ಹೆಚ್ಚಾದ ಪ್ರತಿಗಳನ್ನು ಉಡುಗೊರೆಯಾಗಿ ನೀಡಿದುವು; ಇಲ್ಲವೆ ಬೇರೆ ಬೇರೆ ಗ್ರಂಥಗಳಿಗೆ ವಿನಿಮಯ ಮಾಡಿಕೊಂಡುವು. ವಿವಿಧ ರಾಷ್ಟ್ರಗಳು ತಮ್ಮ ಅಧಿಕೃತ ಪ್ರಕಟನೆಗಳನ್ನು ಬೇರೆಯವುಗಳೊಡನೆ ವಿನಿಮಯ ಮಾಡಿಕೊಳ್ಳುವ ಯೋಜನೆಯೂ ಜಾರಿಗೆ ಬಂದಿತು. ಈ ಕಾರ್ಯವನ್ನು ಮತ್ತಷ್ಟು ಸುಗಮಗೊಳಿಸುವ ಸಲುವಾಗಿ ಯುನೆಸ್ಕೋ ಈಗಲೂ ಪ್ರಯತ್ನ ನಡೆಸುತ್ತಿದೆ. ಪ್ರಕಟನೆಗಳ ಅಂತರರಾಷ್ಟ್ರೀಯ ವಿನಿಮಯ ಕೈಪಿಡಿ[2] ಎಂಬ ಗ್ರಂಥವನ್ನೇ ಈ ಸಂಸ್ಥೆ ಪ್ರಕಟಿಸಿ, ಅದನ್ನು ಕಾಲ ಕಾಲಕ್ಕೆ ಪರಿಷ್ಕರಿಸುತ್ತಿದೆ. ಇಂಥ ವಿನಿಮಯ ಕಾರ್ಯದಲ್ಲಿ ಸಂಭವಿಸಬಹುದಾದ ಅನೇಕ ಕುಂದುಕೊರತೆಗಳನ್ನು ನಿವಾರಿಸಿ ಅದನ್ನು ಸುಗಮಗೊಳಿಸುವ ವಿಧಾನಗಳನ್ನು ಕಂಡುಹಿಡಿಯಲು ಅನೇಕ ವಿಚಾರ ಸಂಕಿರಣಗಳನ್ನು ಯುನೆಸ್ಕೋ ಏರ್ಪಡಿಸಿದೆ.[3] 'ಯುನೆಸ್ಕೋದ ಗ್ರಂಥಾಲಯಗಳ ಪತ್ರಿಕೆ' ಸತತವಾಗಿ ಈ ವಿಷಯದ ಬಗ್ಗೆ ಮಾಹಿತಿ ಪ್ರಕಟಿಸುತ್ತಿದೆ.

ತಾಂತ್ರಿಕ ನೆರವು ಮತ್ತು ತಜ್ಞರ ಬೆಂಬಲ

'ಅಂತರರಾಷ್ಟ್ರೀಯ ಪ್ರಲೇಖನ ಸಂಘ' ಮತ್ತು 'ಅಂತರರಾಷ್ಟ್ರೀಯ ಗ್ರಂಥಾಲಯ ಸಂಘ'ಗಳಿಗೆ ವಿಶೇಷ ಆರ್ಥಿಕ ಸಹಾಯ ನೀಡಿ ಅವು ಹೆಚ್ಚು ಬಲಯುತ ಹಾಗೂ ಪ್ರಭಾವಶಾಲಿಗಳಾಗುವಂತೆ ಮಾಡುವುದರಲ್ಲಿ ಯುನೆಸ್ಕೋದ ಪಾತ್ರ ಹಿರಿದು. ಯುನೆಸ್ಕೋದ ನೆರವಿಗೆ ಕಾರಣವನ್ನು ಹೀಗೆ ಕೊಡಬಹುದು. ತಾನು ವಿಶ್ವದ ಅನೇಕ ಗ್ರಂಥಾಲಯಗಳಿಗೆ ಮತ್ತು ಪ್ರಲೇಖನ ಕೇಂದ್ರಗಳಿಗೆ ನೀಡುತ್ತಿದ್ದ ಸಹಾಯದಲ್ಲಿ ಅದಕ್ಕೆ ತಜ್ಞರ ಸಲಹೆ ಮತ್ತು ಮಾರ್ಗದರ್ಶನ ಅವಶ್ಯವಾಗಿ ಬೇಕಾಗಿತ್ತು. ಮೇಲೆ ಹೇಳಿದ ಈ ಎರಡು ಮಹಾ ಸಂಸ್ಥೆಗಳು ಯುನೆಸ್ಕೋದ ಗ್ರಂಥಾಲಯ ಕಾರ್ಯಕ್ರಮಗಳಲ್ಲಿ ಸಲಹಾ ಸಂಸ್ಥೆಗಳಾಗಿ ಕೆಲಸಮಾಡುತ್ತಿವೆ.

ಗ್ರಂಥಾಲಯ ಅಭಿವೃದ್ಧಿ ಯೋಜನೆಗಳು ಪ್ರಾರಂಭದಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ಮಾತ್ರ ಸೀಮಿತವಾಗಿದ್ದುವು. ಅವು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ವ್ಯಾಪಕಗೊಂಡು ಎಲ್ಲ ಬಗೆಯ ಗ್ರಂಥಾಲಯಗಳನ್ನೂ ಒಳಗೊಂಡಿವೆ.

---

[2] Unesco: *Handbook on the International Exchange of Publications*, Ed. 3, Revised, 1964

[3] Wearsegger, C. De.: Multilateral conventions concerning the international exchange of publications, *Unesco Bulletin for Libraries*, Vol. 17, No. 2, 1963; pp. 53–62

ಇಂಥ ಯೋಜನೆಗಳಲ್ಲಿ ಯುನೆಸ್ಕೋ ಸಂಸ್ಥೆ ಅನೇಕ ಪರಿಣತರನ್ನು ನೇಮಿಸಿ ಕೊಂಡು ಅವರ ಸೇವೆಯನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೊಸ ಗ್ರಂಥಾಲಯಗಳನ್ನು ನಿರ್ಮಿಸುವುದಕ್ಕೂ ಆಗಲೇ ಅಸ್ತಿತ್ವದಲ್ಲಿದ್ದ ಗ್ರಂಥಾಲಯಗಳ ಜೀರ್ಣೋದ್ಧಾರಕ್ಕೂ ಉಪಯೋಗಿಸಿಕೊಳ್ಳುತ್ತಿದೆ. ಈ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳು ವಿಶೇಷವಾಗಿ ಲ್ಯಾಟಿನ್ ಅಮೆರಿಕ, ಏಷ್ಯ ಮತ್ತು ಆಫ್ರಿಕ ರಾಷ್ಟ್ರಗಳಲ್ಲಿ ನಡೆಯುತ್ತಿವೆ.[4]

ಗ್ರಂಥಾಲಯಗಳಿಗೆ ಯುನೆಸ್ಕೋ ನೀಡುತ್ತಿರುವ ತಾಂತ್ರಿಕ ಸಹಾಯ ಮತ್ತು ತಜ್ಞ ಸಲಹೆಗಳು ಬಹುಮಟ್ಟಿಗೆ "ಪ್ಯಾರಿಸಿನಲ್ಲಿ ಜರುಗಿದ ೧೯೫೫ ಮತ್ತು ೧೯೫೮ರ ಎರಡು ಅಂತರರಾಷ್ಟ್ರೀಯ ಸಮ್ಮೇಳನ"ಗಳಲ್ಲಿ ಕೈಗೊಂಡ ನಿರ್ಣಯಗಳಿಗೆ ಅನುಸಾರ ವಾಗಿವೆ. ಯುನೆಸ್ಕೋದ ಪ್ರಧಾನ ನಿರ್ದೇಶಕರಿಗೆ ಈ ವಿಷಯದಲ್ಲಿ ಕಾಲಕಾಲಕ್ಕೆ ಸಲಹೆಗಳನ್ನು ನೀಡಲು ತಜ್ಞರ ವಿಶೇಷ ಸಮಿತಿಗಳನ್ನು (ಈ ನಿರ್ಣಯಗಳಿಗೆ ಅನುಸಾರವಾಗಿಯೇ) ನೇಮಿಸಲಾಯಿತು.

ಸೂಚೀಕರಣ ನಿಯಮಗಳ ಸುಧಾರಣೆ

ಸೂಚೀಕರಣ, ಪ್ರಲೇಖನ ಹಾಗೂ ಪರಿಭಾಷೆಯನ್ನು (ಪದಪ್ರಯೋಗ) ಕುರಿತು ಅಧ್ಯಯನ ನಡೆಸಲು ಯುನೆಸ್ಕೋ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿ ೧೯೬೧ರಲ್ಲಿ ಅಸ್ತಿತ್ವಕ್ಕೆ ಬಂತು; ಇದರಲ್ಲಿ ೧೨ ನಾಮಕರಣಗೊಂಡ ಸದಸ್ಯರು ಮತ್ತು ಹಲವಾರು ಅಂತರರಾಷ್ಟ್ರೀಯ ಸಂಘಸಂಸ್ಥೆಗಳ ಪ್ರತಿನಿಧಿಗಳು ಕೆಲಸಮಾಡುತ್ತಿದ್ದಾರೆ. ಯುನೆಸ್ಕೋದ ಸಿಬ್ಬಂದಿಯಂತೆ ಕೆಲಸ ನಿರ್ವಹಿಸುತ್ತಿರುವ ಈ ಸದಸ್ಯರು ತಮ್ಮ ತಮ್ಮ ರಾಷ್ಟ್ರಗಳಲ್ಲಿ ಗ್ರಂಥಾಲಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಯುನೆಸ್ಕೋ ಗಮನಕ್ಕೆ ತಂದು ಅವುಗಳ ಪರಿಹಾರದಲ್ಲಿ ನೆರವಾಗು ತ್ತಾರೆ.

'ಅಂತರರಾಷ್ಟ್ರೀಯ ಗ್ರಂಥಾಲಯಗಳ ಸಂಘ' ಯುನೆಸ್ಕೋದಿಂದ ಧನ ಸಹಾಯವನ್ನು ಪಡೆದು ಗ್ರಂಥಾಲಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಅಧ್ಯಯನ ನಡೆಸುತ್ತಿರುವ ವಿಷಯವನ್ನು ಈ ಹಿಂದೆಯೇ ಪ್ರಸ್ತಾಪಿಸಲಾಗಿದೆ. ಇಂಥ ಸಮಸ್ಯೆಗಳಲ್ಲಿ ಸೂಚೀಕರಣವೂ ಒಂದು. ಹಲವಾರು ಪೂರ್ವಭಾವೀ ಅಧ್ಯಯನಗಳ ಅನಂತರ ಸೂಚೀಕರಣ ತತ್ತ್ವಗಳನ್ನು ಕುರಿತು ಚರ್ಚೆನಡೆಸಿ

---

[4] Coblans, Herbert: Contribution of Unesco to libraries and documentation, *Five years' work in Librarianship, 1961–65*; Ed. by P. H. Sewell, London; Library Association, 1968; p. 592

ನಿರ್ಧಾರಗಳನ್ನು ಕೈಗೊಳ್ಳಲು ಅಂತರರಾಷ್ಟ್ರೀಯ ಸಮ್ಮೇಳನವೊಂದನ್ನು ಈ ಸಂಘ ಏರ್ಪಡಿಸಿತ್ತು. ಇದು ೧೯೬೧ರ ಅಕ್ಟೋಬರಿನಲ್ಲಿ ಪ್ಯಾರಿಸ್ ನಗರದಲ್ಲಿರುವ ಯುನೆಸ್ಕೋ ಭವನದಲ್ಲಿ ಜರುಗಿತು. ಸಮ್ಮೇಳನದ ನಡವಳಿಕೆ ಹಾಗೂ ತೀರ್ಮಾನಗಳ ದಾಖಲೆಗಳು ಸೂಚೀಕರಣದ ಮೂಲತತ್ತ್ವಗಳ ಬಗ್ಗೆ ಸಾಕಷ್ಟು ಒಮ್ಮತವಿದ್ದಿತೆಂಬುದನ್ನು ತೋರಿಸುತ್ತವೆ. ಇಲ್ಲಿ ನಡೆದ ವಿಚಾರವಿನಿಮಯ ಮತ್ತು ಚರ್ಚೆಗಳು ಎಷ್ಟು ಫಲಪ್ರದವಾಗಿದ್ದುವೆಂದರೆ, ಅನೇಕ ಐರೋಪ್ಯ ರಾಷ್ಟ್ರಗಳು 'ಸಂಸ್ಥಾಗ್ರಂಥಕರ್ತೃತ್ವ'ದ ಬಗ್ಗೆ ಪುನರ್ವಿಮರ್ಶೆ ನಡೆಸುತ್ತಿವೆ.[5] ಈ ಸಮ್ಮೇಳನ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಫಲ ನೀಡಿದೆ. ಸೂಚೀಕರಣ ನಿಯಮಗಳನ್ನು ಬಹುಮಟ್ಟಿಗೆ ಸರ್ವಮಾನ್ಯವಾಗುವಂತೆ ಮಾಡುವುದರಲ್ಲಿ ಈ ಸಮ್ಮೇಳನ ಯಶಸ್ವಿಯಾಗಿದೆ. ೧೯೬೭ರಲ್ಲಿ ಪ್ರಕಟವಾದ ಗ್ರಂಥವಾದ ಆಂಗ್ಲೋ–ಅಮೆರಿಕನ್ ಸೂಚೀಕರಣ ನಿಯಮಗಳು ಈ ಸಮ್ಮೇಳನದ ಫಲಶ್ರುತಿಯನ್ನು ನೀಡುತ್ತಿವೆ.

ಗ್ರಂಥಸೂಚಿಗಳನ್ನು ತಯಾರಿಸುವಾಗ, ಅದರಲ್ಲೂ ಮಾಹಿತಿಸೂಚಿಗಳನ್ನು ತಯಾರಿಸುವಾಗ, ಸೂಚೀಕಾರ ಸರ್ವಮಾನ್ಯ ಪದಗಳನ್ನು ಉಪಯೋಗಿಸಬೇಕಾಗುತ್ತದೆ. ಒಂದೇ ವಸ್ತು ಅಥವಾ ಒಂದೇ ವಿಷಯದ ಬಗ್ಗೆ ಹಲವಾರು ಪದಗಳು ಬಳಕೆಯಲ್ಲಿರಬಹುದು. ಇಂಥ ಸಂದರ್ಭಗಳಲ್ಲಿ ಸೂಚೀಕರಣದ ಕೆಲಸ ಮತ್ತಷ್ಟು ಕಷ್ಟದಾಯಕವಾಗುತ್ತದೆ. ವಿಜ್ಞಾನದಲ್ಲಿ ಬಳಕೆಯಾಗುತ್ತಿರುವ ಪದಗಳು ಸರ್ವಮಾನ್ಯವಾಗಿರುವುದು ಇನ್ನೂ ಆವಶ್ಯಕ. ಯುನೆಸ್ಕೋ ಸಂಸ್ಥೆ ಈ ದಿಶೆಯಲ್ಲಿಯೂ ಶ್ಲಾಘನೀಯ ಕೆಲಸಮಾಡಿದೆ. ಸೂಚಿಗಳಲ್ಲಿ ಬಳಸಲಾಗುವ ಪದಗಳ ಗುಣಮಟ್ಟ ಮತ್ತು ಏಕರೂಪತೆಗಳನ್ನು ಕಾಪಾಡಿಕೊಂಡು ಬರಲು ಸಹಾಯಕವಾಗುವಂತೆ ವೊಕ್ಯಾಬುಲೇರಿಯಂ ಬಿಬ್ಲಿಯೊಥಿಕರೈ ಎಂಬ ಸೂಚೀ ಪದಗಳ ವಿವರಣ ಪಟ್ಟಿಯನ್ನು ಪ್ರಕಟಿಸಿದೆ.

ಗ್ರಂಥಸೂಚಿಯ ವಿಷಯದಲ್ಲಿ ಯುನೆಸ್ಕೋದ ಕೊಡುಗೆ ಅದ್ವಿತೀಯವೆಂದು ತೋರಿಸಲು ಮತ್ತೊಂದು ಉದಾಹರಣೆ ನೀಡಬಹುದು. ಅದು ಪ್ರಕಟಿಸುತ್ತಿರುವ ಭಾಷಾಂತರಸೂಚಿ ಇಂಡೆಕ್ಸ್ ಟ್ರಾನ್ಸ್‌ಸ್ಲೇಷನಂ ಒಂದು ವಾರ್ಷಿಕ ಗ್ರಂಥ. ೧೯೬೪ರಲ್ಲಿ ಪ್ರಕಟವಾದ ೧೭ನೆಯ ಸಂಪುಟ ೩೭,೦೦೦ಕ್ಕೂ ಹೆಚ್ಚಿನ ಭಾಷಾಂತರಗಳನ್ನು ದಾಖಲು ಮಾಡಿಕೊಂಡಿದೆ. ಈ ಬೃಹತ್ ಸೂಚಿ ೬೩ ರಾಷ್ಟ್ರಗಳಲ್ಲಿ ಪ್ರಕಟವಾದ ಭಾಷಾಂತರಗಳನ್ನು ಸೂಚಿಸುತ್ತದೆ. ೧೯೬೯ರ ವರೆಗೆ ಇದರ ೨೨ ಸಂಪುಟಗಳು ಹೊರಬಂದಿವೆ.

---

[5] Chaplin, A. H. and Anderson, Dorothy (Ed.): *International Conference on cataloguing principles, Paris, 9–18 October, 1961: Report*; London, Ifla., 1963; p. 293

ಸೂಕ್ಷ್ಮ ಛಾಯಾಚಿತ್ರಗಳು

ಭಾವೀಜನಾಂಗದ ಉಪಯೋಗಕ್ಕಾಗಿ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಮೌಲ್ಯವುಳ್ಳ ಕೆಲವು ಅಪರೂಪ ಗ್ರಂಥಗಳನ್ನು ಪ್ರತಿಯೊಂದು ಗ್ರಂಥಾಲಯವೂ ರಕ್ಷಿಸಿ ಇಡಬೇಕಾಗುತ್ತದೆ. ಏಕೆಂದರೆ ಗ್ರಂಥಗಳು ಕಾಲಕ್ರಮೇಣ ನಶಿಸಿಹೋಗಬಹುದು ಅಥವಾ ಕ್ರಿಮಿಕೀಟಗಳಿಗೆ ಆಹಾರವಾಗಿ ಹಾಳಾಗಿ ಹೋಗಬಹುದು. ಬೆಂಕಿ ಆಕಸ್ಮಿಕಗಳಲ್ಲಿ, ಯುದ್ಧದ ಸೇನಾ ಕಾರ್ಯಾಚರಣೆಗಳಲ್ಲಿ ಧ್ವಸ್ತವಾಗುವ ಗ್ರಂಥಗಳೂ ಗ್ರಂಥಾಲಯಗಳೂ ಅಸಂಖ್ಯಾತ. ಭೂಕಂಪನಗಳಿಂದಲೂ ಗ್ರಂಥಾಲಯಗಳು ನಾಶಹೊಂದುತ್ತವೆ. ಇಂಥ ನಿರೀಕ್ಷಿತ ಹಾಗೂ ಅನಿರೀಕ್ಷಿತ ವಿನಾಶಗಳನ್ನು ತಡೆಗಟ್ಟುವ ಬಗ್ಗೆ ವಿಶ್ವದ ಅನೇಕ ತಜ್ಞರು ಮತ್ತು ಗ್ರಂಥಪಾಲರು ಸುದೀರ್ಘವಾಗಿ ವಿಚಾರಮಾಡಿದ್ದಾರೆ. ಕ್ಷೀಣಿಸುತ್ತಿರುವ ಅಪೂರ್ವ ಮತ್ತು ವಿರಳ ಗ್ರಂಥಗಳ ಹಲವು ಪ್ರತಿಗಳನ್ನು ತಯಾರಿಸಿ ಬೇರೆ ಬೇರೆ ಪ್ರಮುಖ ಗ್ರಂಥಾಲಯಗಳಲ್ಲಿ ಸಂರಕ್ಷಿಸುವ ಬಗ್ಗೆ ಅನೇಕರಲ್ಲಿ ಒಮ್ಮತವಿದೆ. ಇಂತಹ ಕಜ್ಜ ಕಡಿಮೆ ದರದಲ್ಲಿ ಮತ್ತು ಶೀಘ್ರಗತಿಯಲ್ಲಿ ನಡೆಯಬೇಕು. ಸೂಕ್ಷ್ಮಛಾಯಾಚಿತ್ರಗಳನ್ನು ತಯಾರಿಸುವುದೇ ಈ ಸುಲಭ ಮಾರ್ಗವೆಂದು ಅನುಭವದಿಂದ ವ್ಯಕ್ತವಾಗಿದೆ. ಯುನೆಸ್ಕೋ ಸಂಸ್ಥೆ ಈ ಕೆಲಸವನ್ನು ನೆರವೇರಿಸಲು ೧೯೫೫ರಲ್ಲಿ ಒಂದು ಸಂಚಾರೀ ಸೂಕ್ಷ್ಮಛಾಯಾಗ್ರಾಹಕ ಯಂತ್ರವನ್ನು ಬಳಸಲು ಪ್ರಾರಂಭಿಸಿತು. ಐದು ವರ್ಷಗಳ ಅವಧಿಯಲ್ಲಿ ಈ ಯಂತ್ರ ಲ್ಯಾಟಿನ್ ಅಮೇರಿಕದ ಎಂಟು ದೇಶಗಳಲ್ಲಿ ಕೆಲಸಮಾಡಿ ಎರಡು ದಶಲಕ್ಷ ಪುಟಗಳ ಛಾಯಾಗ್ರಹಣ ಮಾಡಿತು.[6] ೧೯೬೦ರಿಂದೀಚೆಗೆ ಈ ಯಂತ್ರ ಅರಬ್ ರಾಷ್ಟ್ರಗಳಲ್ಲಿ ಕೆಲಸಮಾಡುತ್ತಿದೆ. ಈಗ ಲಭ್ಯವಿರುವ ಮಾಹಿತಿಯ ಪ್ರಕಾರ ಇದು ಇಲ್ಲಿ ಒಂದು ದಶಲಕ್ಷ ಪುಟಗಳಿಗೂ ಮೀರಿ ಛಾಯಾಗ್ರಹಣ ಮಾಡಿಕೊಂಡಿದೆ. ೧೯೬೪ರಲ್ಲಿ ಇನ್ನೊಂದು ಯಂತ್ರ ಏಷ್ಯದ ಇತರ ಭಾಗಗಳಲ್ಲಿ ಕೆಲಸಮಾಡಲು ಪ್ರಾರಂಭಿಸಿತು. ಹೀಗೆ ತಯಾರಿಸಿದ ಛಾಯಾಚಿತ್ರಗಳ ಮೂಲ ಪ್ರತಿಗಳನ್ನು ಆಯಾ ಗ್ರಂಥಾಲಯಗಳಿಗೇ ಕೊಡುವ ವ್ಯವಸ್ಥೆಯನ್ನು ಯುನೆಸ್ಕೋ ಮಾಡಿದೆ.

ಗ್ರಂಥಪಾಲರ ತರಬೇತಿ

ತರಬೇತಿ ಪಡೆದ ಗ್ರಂಥಪಾಲರ ಅಭಾವ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿಯೂ ಕಾಣಬರುತ್ತಿದೆ. ಗ್ರಂಥಾಲಯಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಇದೊಂದು

---

[6] Coblans, Herbert: Contribution of Unesco to Libraries and Documentation: *Five years' work in librarianship, 1951–65*, Ed. by P. H. Sewell; London, Library Association, 1968; p. 596

ದೊಡ್ಡ ತೊಂದರೆಯೆನಿಸಿದೆ. ಇಂಥ ಕೊರತೆಯನ್ನು ನಿವಾರಿಸಲು ಯುನೆಸ್ಕೋ ಸಂಸ್ಥೆ ಅನೇಕ ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಗಳು ಬಹುಮಟ್ಟಿಗೆ ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರಗಳಲ್ಲಿ ಕಾರ್ಯರೂಪಕ್ಕೆ ಬಂದಿವೆ. ಆಫ್ರಿಕಾ ಖಂಡದಲ್ಲಿ ಎರಡು ಪ್ರಾದೇಶಿಕ ಗ್ರಂಥಾಲಯಶಾಸ್ತ್ರ ತರಬೇತಿ ಕೇಂದ್ರಗಳ ಸ್ಥಾಪನೆಗೆ ಯುನೆಸ್ಕೋ ನೆರವು ನೀಡಿದೆ. ಇಂಗ್ಲಿಷ್ ಭಾಷೆಯನ್ನಾಡುವ ದೇಶಗಳಿಗಾಗಿ ಉಗಾಂಡದಲ್ಲಿ ಒಂದು ಕೇಂದ್ರವನ್ನೂ, ಫ್ರೆಂಚ್ ಭಾಷೆಯನ್ನಾಡುವ ದೇಶಗಳಿಗಾಗಿ ಸೆನಗಾಲ್‌ನಲ್ಲಿ ಮತ್ತೊಂದು ಕೇಂದ್ರವನ್ನೂ ಸ್ಥಾಪಿಸಿದೆ. ಅರ್ಜೆಂಟೀನ ಸರ್ಕಾರದ ಸಹಕಾರದೊಂದಿಗೆ ಬ್ಯೂನಸ್ ಏರಿಸ್ ವಿಶ್ವವಿದ್ಯಾನಿಲಯದಲ್ಲಿ ಗ್ರಂಥಾಲಯಶಾಸ್ತ್ರ ಸಂಶೋಧನ ಕೇಂದ್ರವೊಂದನ್ನು ಯುನೆಸ್ಕೋ ಸ್ಥಾಪಿಸಿದೆ. ಈ ಕೇಂದ್ರ ಗ್ರಂಥಾಲಯಶಾಸ್ತ್ರವನ್ನು ಕುರಿತ ಅನೇಕ ಉಪನ್ಯಾಸಗಳನ್ನು ಧ್ವನಿಮುದ್ರಿಸಿಕೊಂಡು ತರಬೇತಿ ಕೇಂದ್ರಗಳಿಲ್ಲದ ಪ್ರದೇಶಗಳಲ್ಲಿ ಗ್ರಂಥಪಾಲರನ್ನು ತರಬೇತಿಗೊಳಿಸುವ ಕಾರ್ಯಕ್ರಮಗಳಲ್ಲಿ ಅವನ್ನು ಉಪಯೋಗಿಸುತ್ತಿದೆ. ಇಂಥ ಉಪನ್ಯಾಸಗಳಿಗೆ ಪೂರಕವಾಗಿ ನೂರಾರು ಬಣ್ಣದ ಸ್ಲೈಡುಗಳನ್ನೂ ಚಲನಚಿತ್ರಗಳನ್ನೂ ಉಪಯೋಗಿಸುವ ವ್ಯವಸ್ಥೆ ಇದೆ. "ಗ್ರಂಥಾಲಯಶಾಸ್ತ್ರ ಶಿಕ್ಷಣ ಕೈಪಿಡಿ"ಯನ್ನು (ಜೆ. ಇ. ಸೇಬರ್ ಅವರ ಕೃತಿ) ಹಲವು ಭಾಷೆಗಳಲ್ಲಿ ಪ್ರಕಟಿಸುವ ವ್ಯವಸ್ಥೆಯನ್ನೂ ಯುನೆಸ್ಕೋ ಕೈಗೊಂಡಿದೆ.

ಈ ರೀತಿ ನೀಡುತ್ತಿರುವ ತರಬೇತಿಯ ಗುಣಮಟ್ಟವನ್ನು ಸುಸ್ಥಿತಿಯಲ್ಲಿಡುವ ಸಲುವಾಗಿ ಬ್ಯೂನಸ್ ಏರಿಸ್‌ನಲ್ಲಿರುವ ಗ್ರಂಥಾಲಯ ಸಂಶೋಧನ ಕೇಂದ್ರ ಆಗಾಗ್ಗೆ ಸಮೀಕ್ಷೆಗಳನ್ನೂ ಸಂಶೋಧನೆಗಳನ್ನೂ ನಡೆಸುತ್ತದೆ. ಇಂಥ ಸಮೀಕ್ಷೆಗಳ ವ್ಯಾಪ್ತಿಗೆ ಅರ್ಜೆಂಟೀನ, ಬ್ರಜಿಲ್, ಚಿಲಿ, ಪೆರು ಮತ್ತು ಉರುಗ್ವೇ ಪ್ರದೇಶಗಳು ಒಳಪಡುತ್ತವೆ. ಬದಲಾಗುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿಗಳಿಗನುಗುಣವಾಗಿ ಗ್ರಂಥಾಲಯಗಳ ಸೇವೆಯೂ ಪರಿವರ್ತನೆ ಹೊಂದಲು ಇಂಥ ಸಮೀಕ್ಷೆ ಮತ್ತು ಸಂಶೋಧನೆಗಳು ಸಹಾಯಕವಾಗುತ್ತವೆ. ಈ ಎಲ್ಲ ಯೋಜನೆಗಳನ್ನು, ಅವುಗಳ ಅನುಷ್ಠಾನದಲ್ಲಿ ಒದಗುವ ಪ್ರಾದೇಶಿಕ ಸಮಸ್ಯೆಗಳನ್ನು ಮತ್ತು ಗ್ರಂಥಾಲಯಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳನ್ನು "ಯುನೆಸ್ಕೋ ಗ್ರಂಥಾಲಯಗಳ ಪತ್ರಿಕೆ" ಎಂಬ ದ್ವೈಮಾಸಿಕದಲ್ಲಿ ಪ್ರಕಟಿಸಲಾಗುತ್ತಿದೆ.

ಸಾಕ್ಷರತಾ ಚಳವಳಿ

ತಾನು ಕೈಗೊಳ್ಳುವ ಪ್ರತಿಯೊಂದು ಯೋಜನೆಯನ್ನೂ ನೇರವಾಗಿ ಯಾವುದೇ ರಾಷ್ಟ್ರದ ಜನತೆಗೆ ಯುನೆಸ್ಕೋ ನೀಡುವುದಿಲ್ಲ. ಆಯಾ ದೇಶಗಳಿಂದ ನಿಯೋಜಿತವಾದ ಅಧಿಕೃತ "ರಾಷ್ಟ್ರೀಯ ಯುನೆಸ್ಕೋ ಆಯೋಗ"ಗಳ ಮುಖಾಂತರವೇ ಅವನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಇಂಥ ರಾಷ್ಟ್ರೀಯ ಆಯೋಗಗಳು

ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಯುನೆಸ್ಕೋ ಯೋಜನೆಗಳ ಅನುಷ್ಠಾನಕ್ಕೆ ಸಹಾಯ ಮಾಡುತ್ತವೆ. ನಿರಕ್ಷರತೆಯನ್ನು ತೊಡೆದುಹಾಕುವ ಬಗ್ಗೆ ಯುನೆಸ್ಕೋ ಕೈಗೊಂಡ ಚಳವಳಿಯ ಯಶಸ್ಸಿಗೆ ವಿವಿಧ ರಾಷ್ಟ್ರೀಯ ಆಯೋಗಗಳ ಪಾತ್ರ ಹಿರಿದಾಗಿದೆ. ಈ ಚಳವಳಿ ಫಲಪ್ರದವಾಗಲು ಗ್ರಂಥಾಲಯಗಳೂ ಅಪೂರ್ವ ಸೇವೆ ಸಲ್ಲಿಸುತ್ತಿವೆ. ಯುನೆಸ್ಕೋ ಸಂಸ್ಥೆ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆಗೆ ನೀಡುತ್ತಿರುವ ಸಹಾಯ ಸಾಕ್ಷರತಾ ಚಳವಳಿ ಯಶಸ್ವಿಯಾಗುವಂತೆ ಮಾಡುವುದರಲ್ಲಿ ಬಹಳ ಉಪಯುಕ್ತವಾಗಿದೆ.

ಸಾರ್ವಜನಿಕ ಗ್ರಂಥಾಲಯಗಳು

ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ಮತ್ತು ಅಭಿವೃದ್ಧಿಗಳಿಗೆ ಯುನೆಸ್ಕೋ ನೀಡಿದ ಸಹಾಯಸೌಲಭ್ಯಗಳು ಸಾಕ್ಷರತಾ ಚಳವಳಿ ಮತ್ತು ವಯಸ್ಕರ ಶಿಕ್ಷಣ ಕ್ಷೇತ್ರಗಳಲ್ಲಿ ತುಂಬಾ ಸಮಯೋಚಿತವಾಗಿವೆ. ಸಮಾಜದ ಮೂಲಭೂತ ಸಮಸ್ಯೆಗಳಲ್ಲಿ ನಿರಕ್ಷರತೆಯೂ ಒಂದು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ರಾಷ್ಟ್ರದ ಸರ್ವತೋಮುಖ ಬೆಳೆವಣಿಗೆಯಲ್ಲಿ ಶಿಕ್ಷಣಕ್ಷೇತ್ರದ ಆವಶ್ಯಕತೆಯನ್ನು ಉಪೇಕ್ಷಿಸಲಿಕ್ಕಾಗದು. ಆದ್ದರಿಂದಲೇ ಯುನೆಸ್ಕೋ ಈ ಸಮಸ್ಯೆಗಳಿಗೆ ಆದ್ಯ ಗಮನವನ್ನೀಯುತ್ತಾ ಬಂದಿದೆ. ಯುನೆಸ್ಕೋದ ಈ ಯೋಜನೆಗಳು ಸಮಾಜದ ಮೂಲಭೂತ ಸಮಸ್ಯೆಗಳ ಪರಿಹಾರದಲ್ಲಿ ಅದು ಹೊಂದಿರುವ ದೃಷ್ಟಿಕೋನವನ್ನು ಎತ್ತಿ ತೋರಿಸುತ್ತಿವೆ.

ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ಮತ್ತು ಅಭಿವೃದ್ಧಿಯ ವಿಷಯಗಳಲ್ಲಿ ಯುನೆಸ್ಕೋ ೧೯೪೮ರಲ್ಲಿಯೇ ಆಸಕ್ತಿ ತಳೆಯಲಾರಂಭಿಸಿತು. ಈ ಮಹತ್ತರ ಅಭಿಲಾಷೆ ಹೊರಹೊಮ್ಮಿದ್ದು ೧೯೫೧ರಲ್ಲಿ. ಯುನೆಸ್ಕೋ ಮತ್ತು ಭಾರತ ಸರ್ಕಾರ—ಇವುಗಳ ಪರಸ್ಪರ ಸಹಕಾರದಿಂದ, ಏಷ್ಯ ಖಂಡದ ಪ್ರಪ್ರಥಮ ಸುವ್ಯವಸ್ಥಿತ ಸಾರ್ವಜನಿಕ ಗ್ರಂಥಾಲಯವಾಗಿ ದೆಹಲಿಯ ಸಾರ್ವಜನಿಕ ಗ್ರಂಥಾಲಯ ಆ ವರ್ಷ ಜನ್ಮತಳೆಯಿತು. ಇದರ ಸ್ಥಾಪನೆಗೆ ಯುನೆಸ್ಕೋ ಸಂಸ್ಥೆ ೬೦,೦೦೦ ಡಾಲರುಗಳ ಧನಸಹಾಯದ ಜೊತೆಗೆ ವಿದೇಶೀ ತಜ್ಞರ ನೆರವನ್ನೂ ಒದಗಿಸಿಕೊಟ್ಟಿತು. ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸೇವೆಯನ್ನು ಉತ್ತಮಗೊಳಿಸುವ ಸಲುವಾಗಿ ಇಲ್ಲಿಯ ಗ್ರಂಥಪಾಲರನ್ನು ವಿದೇಶಗಳಿಗೆ ಕಳುಹಿಸಿ ಅಲ್ಲಿಯ ಸಾರ್ವಜನಿಕ ಗ್ರಂಥಾಲಯಗಳು ಸಲ್ಲಿಸುತ್ತಿರುವ ಸೇವೆಯನ್ನು ಅವರು ಸ್ವತಃ ಅಭ್ಯಸಿಸಿ ಅರಿತುಕೊಂಡು ಬರುವಂತೆ ಮಾಡಿದೆ. ಹಾಗೆಯೇ ಅನೇಕ ನೆರೆ ರಾಷ್ಟ್ರಗಳಿಂದ ಹಲವಾರು ಗ್ರಂಥಪಾಲರನ್ನು ದೆಹಲಿ ಸಾರ್ವಜನಿಕ ಗ್ರಂಥಾಲಯದಲ್ಲಿ ಕೆಲಸಮಾಡುವಂತೆ ಆಹ್ವಾನಿಸಿ ಸಾರ್ವಜನಿಕ ಗ್ರಂಥಾಲಯಗಳು ಪರಿಣಾಮಕಾರಿ ರೀತಿಯಲ್ಲಿ ಕೆಲಸಮಾಡುವುದನ್ನು ಈ ಗ್ರಂಥಪಾಲರು ಅರಿಯುವಂತೆ ಮಾಡಿದೆ.

ಅಬಡಾನ್, ಅಕ್ರಾ, ಅಂಕಾರಾ, ಬಾಂಗ್‌ಕಾಕ್, ಕೈರೋ, ಕೊಲಂಬೋ, ಢಾಕಾ, ಫ್ರೀಟೌನ್, ಕಾಬೂಲ್, ಕರಾಚಿ, ಖಟಮಂಡು, ಕೌಲಾಲಂಪೂರ್, ರಂಗೂನ್, ಸೈಗಾನ್, ಸಿಯೋಲ್, ಸಿಂಗಪುರ, ಟೆಹರಾನ್ ಮತ್ತು ಟೋಕಿಯೋ ನಗರಗಳಿಂದ ಗ್ರಂಥಪಾಲರು ದೆಹಲಿಯ ಸಾರ್ವಜನಿಕ ಗ್ರಂಥಾಲಯವನ್ನು ವೀಕ್ಷಿಸಲು ಮತ್ತು ಅಲ್ಲಿ ತರಬೇತಿ ಪಡೆಯಲು ಬಂದಿದ್ದರು.[7]

ಕೊಲಂಬಿಯಾದಲ್ಲಿರುವ 'ಮೆಡಲಿನ್ ಸಾರ್ವಜನಿಕ ಗ್ರಂಥಾಲಯ', ನೈಜೀರಿಯದ 'ಎನಗು ಪ್ರಾದೇಶಿಕ ಗ್ರಂಥಾಲಯ' ಮತ್ತು ಐವರಿ ತೀರ ಪ್ರದೇಶದ 'ಅಬಿಡ್ಜನ್ ಕೇಂದ್ರ ಗ್ರಂಥಾಲಯ' ಇವು ಯುನೆಸ್ಕೋ ಸಂಸ್ಥೆಗೆ ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ ಇರುವ ಆಸಕ್ತಿ ಎಷ್ಟು ಎಂಬುದನ್ನು ತೋರಿಸುತ್ತವೆ. ಇವೆಲ್ಲಾ ಯುನೆಸ್ಕೋದ ಧನ ಮತ್ತು ತಾಂತ್ರಿಕ ಸಹಾಯದಿಂದ ನಿರ್ಮಾಣ ಗೊಂಡವು.

ವಿಜ್ಞಾನ, ಶಿಕ್ಷಣ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ವಿಷಯಗಳಲ್ಲಿ ಯುನೆಸ್ಕೋ ನಿರ್ವಹಿಸುತ್ತಿರುವ ಪಾತ್ರ ಹಿರಿದೆಂದು ಆಗಲೇ ಹೇಳಿದೆ. ಹಾಗೆಯೇ ಅದು ಅಷ್ಟೇ ಸೂಕ್ಷ್ಮವಾದುದು. ಆಯಾ ರಾಷ್ಟ್ರಗಳು ಕೈಗೊಳ್ಳುವ ಇಂಥ ಅಭಿವೃದ್ಧಿ ಕಾರ್ಯಗಳಲ್ಲಿ ಅದು ಕೇವಲ ಒಂದು ಪ್ರಚೋದಕ ಮಾಧ್ಯಮದಂತೆ ವರ್ತಿಸುತ್ತಿದೆ. ತಾನು ನೀಡುತ್ತಿರುವ ಸಹಾಯಸೌಲಭ್ಯಗಳ ವಿಷಯದಲ್ಲಿ ಯುನೆಸ್ಕೋ ಮೂಲ ಗುರಿಯೊಂದನ್ನು ಇಟ್ಟುಕೊಂಡಿದೆ. ಆಯಾ ಜನತೆಯ ದೃಷ್ಟಿಕೋನವನ್ನು ಅಭಿವೃದ್ಧಿ ಹಾಗೂ ನಾವೀನ್ಯದ ಕಡೆಗೆ ತಿರುಗಿಸುವುದೇ ಆ ಮೂಲ ಉದ್ದೇಶ. ಇದು ಫಲಿಸಿದರೆ ಸಾಕು; ಇದರ ಪರಿಣಾಮಗಳು ಕಲ್ಪನಾತೀತ. ದೆಹಲಿಯ ಸಾರ್ವಜನಿಕ ಗ್ರಂಥಾಲಯವನ್ನೇ ಉದಾಹರಣೆಗೆ ತೆಗೆದು ಕೊಳ್ಳೋಣ. ಇದರ ಪ್ರಭಾವ ಏಷ್ಯದ ಗಡಿಗಳನ್ನು ದಾಟಿ ದಕ್ಷಿಣ ಅಮೆರಿಕದ ವರೆಗೆ ವ್ಯಾಪಿಸಿದೆ. ಈ ಯೋಜನೆಯ ಯಶಸ್ಸು ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ ಯುನೆಸ್ಕೋ ತೋರಿಸುತ್ತಿರುವ ಆಸಕ್ತಿಗೆ ಮತ್ತಷ್ಟು ಉತ್ತೇಜನ ಕೊಟ್ಟಿದೆ. ಒಮ್ಮೆ ಸಾಮಾನ್ಯ ಪ್ರಜೆಗಳಿಗೆ ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಿ ಅವರಿಗೆ ಜ್ಞಾನಾರ್ಜನೆಯ ಸುಲಭದಾರಿಯನ್ನು ತೋರಿಸಿದರೆ ಸಾಕು. ಹೆಚ್ಚುಹೆಚ್ಚಾಗಿ ಓದಿ ತಮ್ಮ ಜ್ಞಾನದಾಹವನ್ನು ನೀಗಿಸಿಕೊಳ್ಳುವ ಮಾರ್ಗಗಳನ್ನು ತಮಗೆ ತಾವೇ ಹುಡುಕಿಕೊಳ್ಳುತ್ತಾರೆ. ಗ್ರಂಥಾಲಯಗಳಲ್ಲಿ ಬಾಲಕರಿಗೆ ಮತ್ತು ವಯಸ್ಕರಿಗೆ ಮುಕ್ತಪ್ರವೇಶದ ಬಗ್ಗೆ ಪ್ರಯೋಗ ನಡೆಸಲು ದೆಹಲಿಯ ಸಾರ್ವಜನಿಕ ಗ್ರಂಥಾಲಯ ಒಂದು ಪ್ರಯೋಗಶಾಲೆಯಾಗಿದೆ. "ಇಲ್ಲಿ ದೊರಕಿದ ಅನುಭವದ ಮೇಲೆ

[7] Kesavan, B. S. : Unesco's Work in Asia, 1946-66. *Unesco Bulletin for Libraries*; Vol. 20, No. 5, 1966; p. 237

ಹೇಳುವುದಾದರೆ ಪ್ರಪಂಚದ ಯಾವ ಭಾಗದಲ್ಲಿಯೇ ಆಗಲಿ ಗ್ರಂಥಾಲಯಗಳಲ್ಲಿ ಎಲ್ಲ ವಯಸ್ಸಿನವರಿಗೂ ಮುಕ್ತಪ್ರವೇಶವನ್ನು ಯಾವ ಭಯ ಸಂಶಯಗಳಿಲ್ಲದೆ ನೀಡಬಹುದು" ಎಂದು ಪದ್ಮಶ್ರೀ ಬಿ. ಎಸ್. ಕೇಶವನ್ ಹೇಳುತ್ತಾರೆ.

ದೆಹಲಿ ಸಾರ್ವಜನಿಕ ಗ್ರಂಥಾಲಯ ಸ್ಥಾಪನೆಗೊಂಡ ಐದು ವರ್ಷಗಳ ಅನಂತರ ಅದರ ಸ್ಥಿತಿಗತಿಗಳನ್ನು ವಿಶ್ಲೇಷಿಸಿ ವರದಿ ಮಾಡಲು ಯುನೆಸ್ಕೋ ಸಂಸ್ಥೆ ೧೯೫೭ರಲ್ಲಿ ಫ್ರ್ಯಾಂಕ್ ಗಾರ್ಡ್ನರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿ ತಯಾರಿಸಿದ ವರದಿ ಇಡೀ ಏಷ್ಯ ಖಂಡದಲ್ಲಿ ಸಾರ್ವಜನಿಕಗ್ರಂಥಾಲಯವನ್ನು ಕುರಿತ ಏಕೈಕ ತೌಲನಿಕ ವರದಿಯಾಗಿದೆ. ಇದರಲ್ಲಿ ಉಲ್ಲೇಖವಾಗಿರುವ ಸಂಗತಿಗಳು ಯಾವ ಗ್ರಂಥಪಾಲನನ್ನಾದರೂ ಪುಳಕಿತಗೊಳಿಸದೆ ಬಿಡವು. ಈ ವರದಿಯ ಮುಖ್ಯ ಸಂಗತಿಗಳ ಸಾರಾಂಶ ಈ ರೀತಿ ಇದೆ: 'ಇಡೀ ಏಷ್ಯ ಖಂಡದಲ್ಲೇ ಇದು ಅತ್ಯಂತ ಜನಪ್ರಿಯ ಸಾರ್ವಜನಿಕ ಗ್ರಂಥಾಲಯ. ಇದು ಪ್ರತಿವರ್ಷ ಸರಾಸರಿ ಒಂದು ಲಕ್ಷ ಓದುಗರಿಗೆ ಹದಿನೈದು ಲಕ್ಷಕ್ಕೂ ಮೀರಿದ ಸಂಖ್ಯೆಯಲ್ಲಿ ಗ್ರಂಥಗಳನ್ನು ಒದಗಿಸುತ್ತದೆ. ಇಲ್ಲಿಯ ಓದುಗರ ಅಭಿರುಚಿ ಕೇವಲ ಕತೆ ಕಾದಂಬರಿಗಳಿಗಷ್ಟೇ ಸೀಮಿತವಾಗಿಲ್ಲ. ಸಾಮಾನ್ಯವಾಗಿ ಎಲ್ಲ ವಿಷಯಗಳ ಗ್ರಂಥಗಳಿಗೂ ಇಲ್ಲಿ ಬೇಡಿಕೆ ಇದೆ.'

ಶಾಲಾ ಗ್ರಂಥಾಲಯಗಳು

ವಿದ್ಯಾರ್ಥಿಗಳ ವ್ಯಾಸಂಗದಲ್ಲಿ ಶಾಲಾ ಗ್ರಂಥಾಲಯಗಳು ತೌಲನಿಕ ಹಾಗೂ ಸಾಮಾನ್ಯ ಅರಿವಿಗೆ ಸಾಹಿತ್ಯವನ್ನು ಒದಗಿಸುತ್ತವೆ. ಅವು ವಿಶೇಷವಾಗಿ ವಿದ್ಯಾರ್ಥಿಗಳ ಓದಿನಲ್ಲಿ ಸುಧಾರಣೆಯನ್ನೂ ವ್ಯಾಸಂಗ ನೈಪುಣ್ಯವನ್ನೂ ಮತ್ತು ವಿಷಯಗ್ರಾಹ್ಯ ಶಕ್ತಿಯನ್ನೂ ಉತ್ತಮಪಡಿಸುವುದರಲ್ಲಿ ಸಹಾಯ ಮಾಡುತ್ತವೆ.[8] ಶಾಲಾ ಗ್ರಂಥಾಲಯಗಳು ಮಕ್ಕಳ ವ್ಯಾಸಂಗದಲ್ಲಿ ಅವರಿಗೆ ಪುಸ್ತಕ ಹಾಗೂ ಪುಸ್ತಕಾಲಯಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುವ ಅನುಭವವನ್ನು ಪಡೆಯಲು ಅವರಿಗೆ ಚಿಕ್ಕಂದಿನಿಂದಲೇ ಅವಕಾಶಗಳನ್ನು ಒದಗಿಸುತ್ತವೆ. ಮಕ್ಕಳಿಗಿಂತ ಅತ್ಯಾವಶ್ಯಕವಾಗಿ ಪುಸ್ತಕ ಮತ್ತು ಪುಸ್ತಕಾಲಯಗಳ ಪರಿಣಾಮಕಾರಿಯಾದ ಉಪಯೋಗ ಶಿಕ್ಷಕರಿಗೆ ತಿಳಿದಿರಬೇಕು. ಇದನ್ನರಿತ ಯುನಸ್ಕೋ ಸಂಸ್ಥೆ ತನ್ನ ಯೋಜನೆಗಳ ಅನುಷ್ಠಾನದಲ್ಲಿ ಗ್ರಂಥಾಲಯ, ಗ್ರಂಥಪಾಲ, ಕಟ್ಟಡ, ಸಲಕರಣೆ, ಗ್ರಂಥಸಂಗ್ರಹಣೆ—ಇವೇ ಮೊದಲಾದವುಗಳಿಗೆ ವಿಶೇಷ ಗಮನ ಕೊಡುತ್ತದೆ.

---

[8] Bonny, H. V.: Unesco's role in school library development in Nigeria; *Unesco Bulletin for Libraries*, Vol. 20, No. 2. 1966; p. 75

ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ ಅವರಿಗೆ ಗ್ರಂಥಾಲಯಗಳ ಮಹತ್ತ್ವ, ಆವಶ್ಯಕತೆ, ಉಪಯೋಗಿಸುವ ವಿಧಾನ ಇವುಗಳನ್ನು ಕುರಿತು ಉಪನ್ಯಾಸಗಳನ್ನು ನೀಡಲು ಗ್ರಂಥಪಾಲರ ನೆರವನ್ನು ಯುನೆಸ್ಕೋ ಒದಗಿಸುತ್ತದೆ.

ವಿಶ್ವವಿದ್ಯಾಲಯ ಗ್ರಂಥಾಲಯಗಳು

ಉಚ್ಚಶಿಕ್ಷಣವನ್ನು ಪರಿಣಾಮಕಾರಿಯಾಗಿ ಮಾಡುವುದರಲ್ಲಿ ಗ್ರಂಥಾಲಯಗಳು ಗುರುತರ ಜವಾಬ್ದಾರಿ ಹೊಂದಿವೆ. ಭಾರತದ ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ ಇದರ ಸಂಪೂರ್ಣ ಅರಿವು ಇರುವುದರಿಂದಲೇ ಅದು ಗ್ರಂಥಾಲಯಗಳ ಬೆಳವಣಿಗೆಗೆ ಹೇರಳ ಧನಸಹಾಯವನ್ನು ಮಾಡುತ್ತಿದೆ. ಕಟ್ಟಡ, ಸಲಕರಣೆ, ಗ್ರಂಥಸಂಗ್ರಹಣೆ ಮತ್ತು ಸಿಬ್ಬಂದಿಯ ವಿಷಯಗಳಲ್ಲಿ ದನಸಹಾಯ ಆಯೋಗ ಆಸ್ಥೆವಹಿಸಿದೆ.

ವಿಶ್ವವಿದ್ಯಾಲಯ ಗ್ರಂಥಾಲಯಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ನಿವಾರಣೆಯನ್ನು ಕುರಿತು ಚರ್ಚೆ ನಡೆಸಲು ಯುನೆಸ್ಕೋ ಒಂದು ಸಮ್ಮೇಳನವನ್ನು ೧೯೬೨ರಲ್ಲಿ ಆರ್ಜೆಂಟೀನದ ಮೆಂಡೋಜದಲ್ಲಿ ಏರ್ಪಡಿಸಿತ್ತು. ಇದರಲ್ಲಿ ಲ್ಯಾಟಿನ್ ಅಮೆರಿಕದ ೧೯ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಇದೊಂದು ಪ್ರಾದೇಶಿಕ ಸಮ್ಮೇಳನವಾದರರೂ ಇದರಲ್ಲಿ ಚರ್ಚಿಸಿದ ವಿಷಯಗಳೂ ಮಾಡಿದ ಶಿಫಾರಸುಗಳೂ ಮಹತ್ತ್ವಪೂರ್ಣವಾಗಿವೆ. ಪ್ರತಿಯೊಂದು ವಿಶ್ವವಿದ್ಯಾಲಯವೂ ತನ್ನ ಒಟ್ಟು ವೆಚ್ಚದಲ್ಲಿ ಶೇಕಡ ಐದಕ್ಕೆ (೫%) ಕಡಿಮೆಯಿಲ್ಲದಂತೆ ಹಣವನ್ನು ಗ್ರಂಥಾಲಯದ ಸಲುವಾಗಿ ನಿಗದಿ ಮಾಡಬೇಕೆಂಬ ಒಮ್ಮತದ ಹಾಗೂ ಅತಿ ಮಹತ್ತ್ವದ ಸಲಹೆಯನ್ನು ಈ ಸಮ್ಮೇಳನ ಮಾಡಿದೆ. ಉಳಿದ ಸಲಹೆಗಳು ಈ ರೀತಿ ಇವೆ: ೧ ಪ್ರತಿಯೊಂದು ವಿಶ್ವವಿದ್ಯಾಲಯ ಗ್ರಂಥಾಲಯವೂ ಕೇಂದ್ರೀಕೃತ ಗ್ರಂಥ ಸಂಗ್ರಹಣೆ ಹೊಂದಿರಬೇಕು; ೨ ಸಹಕಾರೀ ಹಾಗೂ ಕೇಂದ್ರೀಕೃತ ಸೂಚೀಕರಣ ವ್ಯವಸ್ಥೆ ಒಂದು ದೇಶದ ಎಲ್ಲ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೆ ವ್ಯಾಪಿಸಿರಬೇಕು; ೩ ರಾಷ್ಟ್ರೀಯ ಗ್ರಂಥಪಾಲರ ಸಂಘಸಂಸ್ಥೆಗಳಲ್ಲಿ ವಿಶ್ವವಿದ್ಯಾಲಯಗಳಿಗೆ ತಕ್ಕ ಪ್ರಾತಿನಿಧ್ಯಗಳೂ ವಿಭಾಗಗಳೂ ಇರಬೇಕು; ಮತ್ತು ೪ ದ್ವಿಪ್ರತಿಗಳ (ಡೂಪ್ಲಿಕೇಟ್ಸ್) ಮತ್ತು ಪ್ರೌಢ ಪ್ರಬಂಧಗಳ (ಥೀಸಿಸ್), ಪ್ರಕಟನೆಗಳನ್ನು ವಿವಿಧ ವಿಶ್ವವಿದ್ಯಾಲಯ ಗ್ರಂಥಾಲಯಗಳೊಂದಿಗೆ ಎರವಲು ಮತ್ತು ವಿನಿಮಯ ಮಾಡಿಕೊಳ್ಳುವ ವ್ಯವಸ್ಥೆಯ ಪ್ರಾಯೋಗಿಕ ಕೇಂದ್ರ ಸ್ಥಾಪನೆಗೆ ಯುನೆಸ್ಕೋ ನೆರವುನೀಢಬೇಕು.

ರಾಷ್ಟ್ರೀಯ ಗ್ರಂಥಾಲಯಗಳು

ರಾಷ್ಟ್ರೀಯ ಗ್ರಂಥಾಲಯಗಳ ಸ್ಥಿತಿಗಳಲ್ಲಿ—ಅವುಗಳ ಇತಿಹಾಸ, ಬೆಳವಣಿಗೆ,

ಕಾರ್ಯವ್ಯಾಪ್ತಿ ಇತ್ಯಾದಿ ವಿಷಯಗಳಲ್ಲಿ—ವೈವಿಧ್ಯಗಳಿದ್ದರೂ ಅವು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಸಾಮ್ಯ ಇದೆ. ಏಷ್ಯ ಮತ್ತು ಪೆಸಿಫಿಕ್ ವಲಯದ ಗ್ರಂಥಾಲಯಗಳ ಅಭಿವೃದ್ಧಿಯ ಬಗ್ಗೆ ಮನಿಲದಲ್ಲಿ ಫೆಬ್ರುವರಿ ೧೯೬೪ರಲ್ಲಿ ನಡೆದ ವಲಯ ಸಮ್ಮೇಳನದಲ್ಲಿ ಇದು ಸ್ಪಷ್ಟವಾಯಿತು.[9] ಇದರಲ್ಲಿ ೨೪ ಪ್ರತಿನಿಧಿಗಳು ಏಷ್ಯ ಮತ್ತು ಪೆಸಿಫಿಕ್ ವಲಯದ ರಾಷ್ಟ್ರಗಳಿಂದ ಬಂದಿದ್ದರು.

ಇಂಥದೇ ಒಂದು ಸಮ್ಮೇಳನ ೧೯೫೮ರಲ್ಲಿ ವಿಯನ್ನದಲ್ಲಿ ಜರುಗಿತ್ತು. ಇದು ಯೂರೋಪಿನ ರಾಷ್ಟ್ರೀಯ ಗ್ರಂಥಾಲಯಗಳನ್ನು ಕುರಿತು ನಡೆದಿತ್ತು.[10] ಈ ಎರಡು ಸಮ್ಮೇಳನಗಳು ರಾಷ್ಟ್ರೀಯ ಗ್ರಂಥಾಲಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ, ಅವುಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸಿವೆ. ವಿವಿಧ ರಾಷ್ಟ್ರೀಯ ಗ್ರಂಥಾಲಯಗಳ ಪಾಲರು ಮತ್ತು ನಿರ್ದೇಶಕರನ್ನು ಒಂದೆಡೆ ಸೇರಿಸಿ ಗ್ರಂಥಗಳ ಅಂತರರಾಷ್ಟ್ರೀಯ ಎರವಲು ಮತ್ತು ವಿನಿಮಯಗಳನ್ನು ಕುರಿತು ಚರ್ಚಿಸುವುದು ಮತ್ತು ಈ ವಲಯಗಳಲ್ಲಿ ರಾಷ್ಟ್ರೀಯ ಗ್ರಂಥಾಲಯಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು—ಇವು ಈ ಸಮ್ಮೇಳನದ ಉದ್ದೇಶಗಳಾಗಿದ್ದುವು. ಗ್ರಂಥಸಂಗ್ರಹಣೆ, ಗ್ರಂಥಸೂಚಿ, ಪರಾಮರ್ಶನಸೇವೆ, ಪ್ರಲೇಖನವಿಧಾನ, ಗ್ರಂಥಸ್ವಾಮ್ಯ, ಗ್ರಂಥಾಲಯ ಸಹಕಾರ, ಗ್ರಂಥಪಾಲರ ತರಬೇತಿ, ಗ್ರಂಥಾಲಯದ ಕಟ್ಟಡ, ಗ್ರಂಥ ಸಂರಕ್ಷಣೆ ಮತ್ತು ಗ್ರಂಥಪಾಲರ ಸಂಘಸಂಸ್ಥೆಗಳು—ಇವುಗಳನ್ನು ಕುರಿತು ಮನಿಲದಲ್ಲಿ ನಡೆದ ಸಮ್ಮೇಳನದಲ್ಲಿ ಚರ್ಚಿಸಲಾಯಿತು.

ಮನಿಲ ಸಮ್ಮೇಳನಕ್ಕೆ ಮೊದಲು ನಡೆಸಿದ ಸಮೀಕ್ಷೆಯಿಂದ ಈ ಕೆಳಗಿನ ಅಂಶಗಳು ಬೆಳಕಿಗೆ ಬಂದುವು: ೧ ಕೇವಲ ೨೦ ರಾಷ್ಟ್ರೀಯ ಗ್ರಂಥಾಲಯಗಳು ರಾಷ್ಟ್ರೀಯ ಗ್ರಂಥಸೂಚಿಗಳನ್ನು ಪ್ರಕಟಿಸುತ್ತಿವೆ; ೨ ಬಹು ಸಂಖ್ಯಾತ ರಾಷ್ಟ್ರೀಯ ಗ್ರಂಥಾಲಯಗಳು ಸಾರ್ವಜನಿಕ ಗ್ರಂಥಾಲಯಗಳ ಮಾದರಿಯಲ್ಲಿ ಸೇವೆ ಸಲ್ಲಿಸುತ್ತಿವೆ; ೩ ಶೇಕಡ ೬೧ರಷ್ಟು ಗ್ರಂಥಾಲಯಗಳು ಮಾತ್ರ ಅಂತರರಾಷ್ಟ್ರೀಯ ಗ್ರಂಥ ವಿನಿಮಯ ಕಾರ್ಯದಲ್ಲಿ ಭಾಗವಹಿಸುತ್ತಿವೆ; ೪ ಕೇವಲ ೫೦ ರಾಷ್ಟ್ರೀಯ ಗ್ರಂಥಾಲಯಗಳು ತಮ್ಮ ತಮ್ಮ ವಲಯಗಳಲ್ಲಿ ಗ್ರಂಥಗಳ ಎರವಲು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ.

---

[9] Regional Seminar on the Development of National Libraries in Asia and the Pacific Area ; *Unesco Bulletin for Libraries*, Vol. 18, No. 4, 1964 ; pp. 149–64

[10] Symposium on National Libraries in Europe ; *Unesco Bulletin for Libraries* ; Vol. 13, No. 1, 1959, pp.1–4

ಪ್ರಲೇಖನ (ಡಾಕ್ಯುಮೆಂಟೇಷನ್) ಕಾರ್ಯ

ವೈಜ್ಞಾನಿಕ, ಆರ್ಥಿಕ ಹಾಗೂ ಕೈಗಾರಿಕೆ ಅಭಿವೃದ್ಧಿಯ ವೇಗವನ್ನು ಹೆಚ್ಚಿಸು ವುದಕ್ಕೆ ಸಹಾಯಮಾಡುವುದೇ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಲೇಖನದ ಗುರಿ. ಇದನ್ನು ಸಂಪೂರ್ಣವಾಗಿ ಅರಿತುಕೊಂಡಿರುವ ಯುನೆಸ್ಕೋ ಸಂಸ್ಥೆ ಅನೇಕ ರಾಷ್ಟ್ರ ಗಳಲ್ಲಿ ಪ್ರಲೇಖನ ಕೇಂದ್ರಗಳ ಸ್ಥಾಪನೆಗೆ ನೆರವು ನೀಡಿದೆ. ತನ್ನ ಕಾರ್ಯಕ್ರಮಗಳ ಪಟ್ಟಿಯಲ್ಲಿ ಅದು ಸದಸ್ಯರಾಷ್ಟ್ರಗಳಿಗೆ ಮಾಡಿರುವ ಮನವಿಯಲ್ಲಿ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪ್ರಲೇಖನ ಸೇವಾವ್ಯವಸ್ಥೆಯನ್ನು ನೆರವೇರಿಸುವದು, ಈ ಸೇವಾ ವಿಭಾಗ ಗಳ ಸಂಘಟನೆಯನ್ನು ವ್ಯವಸ್ಥೆಗೊಳಿಸುವದು. ಮತ್ತು ಗ್ರಂಥಗಳ ಮಾಹಿತಿಯ ಹಾಗೂ ಇತರ ವಿಷಯಗಳ ಅಂತರರಾಷ್ಟ್ರೀಯ ವಿನಿಮಯದಲ್ಲಿ ಪಾಲ್ಗೊಳ್ಳುವುದು —ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ಕೇಳಿಕೊಂಡಿದೆ.

ಪ್ರಲೇಖನ ಕೇಂದ್ರಗಳ ಸ್ಥಾಪನೆಗೆ ನೆರವು ನೀಡುವುದನ್ನು ಯುನೆಸ್ಕೋ ೧೯೫೫ರಲ್ಲಿ ಪ್ರಾರಂಭಿಸಿತು. ಅಲ್ಲಿಂದೀಚೆಗೆ ೧೨ ಕೇಂದ್ರಗಳ ಸ್ಥಾಪನೆಗೆ ಆಯಾ ರಾಷ್ಟ್ರಗಳೊಡನೆ ಸಹಕರಿಸಿದೆ. ಅಂತಹ ಇನ್ನೂ ೯ ಕೇಂದ್ರಗಳು ವಿವಿಧ ಹಂತಗಳಲ್ಲಿ ರೂಪುಗೊಳ್ಳುತ್ತಿವೆ.[11] ಇಂಥ ಕೇಂದ್ರಗಳಲ್ಲಿ 'ಭಾರತ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರ (ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್) ಒಂದು. ಇದು ದೆಹಲಿಯಲ್ಲಿ ೧೯೫೨ರಲ್ಲಿ, ಅಸ್ತಿತ್ವಕ್ಕೆ ಬಂತು. ಯುನೆಸ್ಕೋ ಮತ್ತು ಭಾರತ ಸರ್ಕಾರದಿಂದ ರೂಪುಗೊಂಡ ಮಹಾನ್ ಸಂಸ್ಥೆಯಾಗಿ ಇದು ಬೆಳೆದು ನಿಂತಿದೆ. ಭಾರತದಲ್ಲಿರುವ ರಾಷ್ಟ್ರೀಯ ಪ್ರಯೋಗಶಾಲೆಗಳು, ವೈಜ್ಞಾನಿಕ ಸಂಶೋಧನ ಕೇಂದ್ರಗಳು, ತಾಂತ್ರಿಕ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕೈಗಾರಿಕಾಕೇಂದ್ರಗಳು-ಇವೇ ಮುಂತಾದವುಗಳಿಗೆ ಗ್ರಂಥಗಳನ್ನು, ಮಾಹಿತಿಗಳನ್ನು ಮತ್ತು ಪ್ರಬಂಧಗಳ ನಕಲುಗಳನ್ನು ಒದಗಿಸುವದರ ಮೂಲಕ ಸೇವೆ ಸಲ್ಲಿಸುತ್ತಿದೆ.

ಯುನೆಸ್ಕೋದ ಪ್ರಾದೇಶಿಕ ವಿಜ್ಞಾನ ಸಹಕಾರ ಕಚೇರಿಗಳು ಆಯಾ ವಲಯಗಳಲ್ಲಿ ವೈಜ್ಞಾನಿಕ ಮಾಹಿತಿ ಕೇಂದ್ರಗಳಾಗಿ ಕೆಲಸ ಮಾಡುತ್ತಿವೆ. ಬ್ಯಾಂಗ್‌ಕಾಕ್, ಕೈರೋ, ಮಾಂಟಿವಿಡಿಯೋ, ನವದೆಹಲಿ ಮತ್ತು ನೈರೋಬಿಗಳಲ್ಲಿ ಸ್ಥಾಪಿತವಾಗಿರುವ ಕೇಂದ್ರಗಳು ಕ್ರಮವಾಗಿ ಆಗ್ನೇಯ ಏಷ್ಯ, ಮಧ್ಯಪ್ರಾಚ್ಯ, ಲ್ಯಾಟಿನ್ ಅಮೆರಿಕ, ದಕ್ಷಿಣ ಏಷ್ಯ ಮತ್ತು ಪೂರ್ವ ಆಫ್ರಿಕ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. "ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಲೇಖನ ಕೇಂದ್ರಗಳು; ಅವುಗಳ ಅಭಿವೃದ್ಧಿಗೆ ಯುನೆಸ್ಕೋದ ನೆರವು" ಎಂಬ ಪುಸ್ತಕ ೧೯೬೫ರಲ್ಲಿ ಪ್ರಕಟ

---

[11] Wilson, Leslie : Organizations in Special Library Field; *Handbook of Special Librarianship and Informations Work*. Ed. 3, by Wilfred Ashworth; London, Aslib, 1967; p. 582

ವಾಗಿದೆ. ಅದರಲ್ಲಿ ಈ ಎಲ್ಲ ಕಾರ್ಯಕ್ರಮಗಳ ವಿವರವಾದ ಪರಿಶೀಲನೆ ಮಾಡಲಾಗಿದೆ.

ಗ್ರಂಥ ಮತ್ತು ಇತರ ವೈಜ್ಞಾನಿಕ ಸಲಕರಣೆಗಳ ಮೇಲಿನ ಸುಂಕ ಮತ್ತು ಅಂಚೆ ರಿಯಾಯಿತಿ

ಯುದ್ಧಾನಂತರದ ದಿನಗಳಲ್ಲಿ ಸಾಮಾನ್ಯವಾಗಿ ಎಲ್ಲ ಗ್ರಂಥಾಲಯಗಳೂ ಎದುರಿಸುತ್ತಿದ್ದ ಬಹು ದೊಡ್ಡ ಸಮಸ್ಯೆಯೆಂದರೆ ವಿದೇಶಗಳಿಂದ ತರಿಸಿದ ಗ್ರಂಥಗಳ ಮೇಲೆ ತೆರಬೇಕಾಗಿದ್ದ ಸುಂಕ. ಈ ಸಮಸ್ಯೆಯನ್ನು ನಿವಾರಿಸಲು ಯುನೆಸ್ಕೋ ತನ್ನ ತೀವ್ರ ಗಮನವನ್ನು ಇತ್ತ ತಿರುಗಿಸಿತು. ವಿಜ್ಞಾನ, ಸಂಸ್ಕೃತಿ, ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯಾವಶ್ಯಕವಾದ ಸಲಕರಣೆಗಳ ಮೇಲೆ ವಿಧಿಸಲಾಗುತ್ತಿದ್ದ ಸುಂಕ ವಿನಾಯಿತಿಯ ಬಗ್ಗೆ ಒಂದು ಅಂತರರಾಷ್ಟ್ರೀಯ ಒಡಂಬಡಿಕೆ ಏರ್ಪಡಿಸಿತು. ಈ ಒಡಂಬಡಿಕೆಗೆ ಮೇ ೨೧, ೧೯೫೦ರಲ್ಲಿ ಒಟ್ಟು ೪೫ ರಾಷ್ಟ್ರಗಳು ಸಹಿ ಹಾಕಿದುವು. ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು, ಪ್ರಯೋಗಶಾಲೆಗಳು, ಮತ್ತು ವಿದ್ಯಾಸಂಸ್ಥೆಗಳು ತಮಗೆ ಬೇಕಾದ ಸಲಕರಣೆಗಳನ್ನು ವಿದೇಶಗಳಿಂದ ತರಿಸಿಕೊಂಡಾಗ ಅವುಗಳ ಮೇಲೆ ಆಮದು ಸುಂಕವನ್ನು ಮೊದಲಿನಂತೆ ತೆರಬೇಕಾಗಿಲ್ಲ. ಕೆಲವಕ್ಕೆ ರಿಯಾಯಿತಿ ದೊರೆತರೆ ಮತ್ತೆ ಕೆಲವು ಸಂಪೂರ್ಣ ಸುಂಕ ವಿಮೋಚನೆ ಪಡೆಯುತ್ತವೆ.

ಯುನೆಸ್ಕೋದ ಸಲಹೆಯನ್ನು ಪುರಸ್ಕರಿಸಿ 'ವಿಶ್ವ ಅಂಚೆ ಸಂಸ್ಥೆ' ೧೯೫೭ರಲ್ಲಿ ಆಟ್ವಾವದಲ್ಲಿ ನಡೆದ ೧೪ನೆಯ ಸಮ್ಮೇಳನದಲ್ಲಿ ಅನೇಕ ಹೊಸ ರಿಯಾಯಿತಿಗಳನ್ನು ಪ್ರಕಟಿಸಿತು. ಅದರ ಪ್ರಕಾರ ಗ್ರಂಥಗಳು, ವರ್ತಮಾನ ಪತ್ರಿಕೆಗಳು ಇಲ್ಲವೆ ಮತ್ತಾವುದೇ ಮುದ್ರಿತವಾದ ವಾಚನಸಾಮಗ್ರಿಗಳ ಮೇಲೆ ತೆರಬೇಕಾಗಿದ್ದ ಅಂಚೆ ವೆಚ್ಚ ಬಹಳ ಮಟ್ಟಿಗೆ ತಗ್ಗಿದೆ. ಈ ಹೊಸ ಸೌಲಭ್ಯಗಳು ೧೯೫೮ರಲ್ಲಿ ಜಾರಿಗೆ ಬಂದು ವಿಶ್ವದ ಮೂಲೆಮೂಲೆಗೂ ಯಾವ ಅಡೆತಡೆಯೂ ಇಲ್ಲದಂತೆ ಜ್ಞಾನ ಪ್ರವಹಿಸಲು ಸಾಧ್ಯವಾಗಿದೆ.

ಯುನೆಸ್ಕೋ ಪುಸ್ತಕ ಕೂಪನ್ನುಗಳು

೧೯೪೮ರಲ್ಲಿ ಜಾರಿಗೆ ಬಂದ ಈ ವ್ಯವಸ್ಥೆ ಯುನೆಸ್ಕೋವಿಗೆ ಗ್ರಂಥಾಲಯಗಳು ಚಿರಋಣಿಗಳಾಗಿರುವಂತೆ ಮಾಡಿದೆ. ವಿದೇಶಗಳಿಂದ ನೇರವಾಗಿ ಗ್ರಂಥಗಳನ್ನು ಕೊಳ್ಳುವಾಗ ಇದ್ದ ವಿದೇಶೀ ವಿನಿಮಯದ ಆರ್ಥಿಕ ಸಮಸ್ಯೆಗಳನ್ನು ಈ ವ್ಯವಸ್ಥೆ ನಿವಾರಿಸುತ್ತದೆ. ಅಂತರರಾಷ್ಟ್ರೀಯ ಮೌಲ್ಯವುಳ್ಳ ಈ ಕೂಪನ್ನುಗಳನ್ನು ಗ್ರಂಥಾಲಯಗಳು ತಮ್ಮ ರಾಷ್ಟ್ರೀಯ ನಾಣ್ಯಗಳಿಗೇ ವಿನಿಮಯ ಮಾಡಿಕೊಂಡು ಅವನ್ನು ವಿದೇಶಗಳಲ್ಲಿ ಪ್ರಕಟವಾದ ಗ್ರಂಥಗಳನ್ನು ಕೊಳ್ಳಲು ಉಪಯೋಗಿಸಬಹುದು.

ಪ್ರಾರಂಭದಲ್ಲಿ ಗ್ರಂಥಗಳನ್ನು ಮಾತ್ರ ಕೊಳ್ಳಲು ಉಪಯೋಗಿಸಬೇಕಾಗಿದ್ದ ಈ ವ್ಯವಸ್ಥೆಯ ವ್ಯಾಪ್ತಿಯನ್ನು ಕ್ರಮೇಣ ವಿಸ್ತರಿಸಿ ಇತ್ತೀಚೆಗೆ ಮೈಕ್ರೋಫಿಲ್ಮ್, ವೈಜ್ಞಾನಿಕ ಸಲಕರಣೆ ಹಾಗೂ ಇತರ ಶೈಕ್ಷಣಿಕ ವಸ್ತುಗಳನ್ನು ಆಮದು ಮಾಡಿಕೊಳ್ಳುವಾಗಲೂ ಉಪಯೋಗಿಸಲು ಯುನೆಸ್ಕೋ ಅನುಮತಿ ನೀಡಿದೆ.

ನಿಯತಕಾಲಿಕೆಗಳು

ಯುನೆಸ್ಕೋ ಗ್ರಂಥಾಲಯಗಳ ಪತ್ರಿಕೆ: ೧೯೪೭ರಲ್ಲಿ ಜನ್ಮ ತಳೆದ ಈ ದ್ವೈಮಾಸಿಕ ಇಂಗ್ಲಿಷ್, ಫ್ರೆಂಚ್, ರಷ್ಯನ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಇದರ ವಿಷಯವ್ಯಾಪ್ತಿ ವಿಸ್ತಾರಗೊಂಡಿದೆ. ವಿಶ್ವದ ಗ್ರಂಥಸೂಚಿ ವರದಿಗಳಿಗೆ ಮೀಸಲಾಗಿದ್ದ ಈ ಪತ್ರಿಕೆ ಈಗ ಗ್ರಂಥಪಾಲನೆ ಮತ್ತು ಪ್ರಲೇಖನ ಕ್ಷೇತ್ರಗಳಿಗೆ ಸಂಬಂಧಿಸಿದ ಸಾರ್ವತ್ರಿಕ ಅಭಿಪ್ರಾಯಗಳ ಕೈಗನ್ನಡಿಯಾಗಿದೆ. ಇದರ ಪ್ರಸಾರ ೧೯೬೫ರಲ್ಲಿ ೧೩,೦೦೦ದಷ್ಟಿತ್ತು. ೧೯೪೭ ರಿಂದ ೧೯೬೧ರ ವರೆಗೆ ಇದರಲ್ಲಿ ಪ್ರಕಟವಾದ ಲೇಖನಗಳ ಮತ್ತು ಅವುಗಳ ಲೇಖಕರ ಸಂಚಿತ ಸೂಚಿಯನ್ನು ಪ್ರಕಟಿಸಲಾಗಿದೆ.

ಯುನೆಸ್ಕೋದಿಂದ ನಿಯೋಜಿತವಾದ ಸಮಿತಿಗಳ ವರದಿಗಳನ್ನೂ ಸಮೀಕ್ಷೆಗಳನ್ನೂ ಮೊದಲು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಅನಂತರ ಅವುಗಳನ್ನು ಪ್ರತ್ಯೇಕವಾಗಿ ಪುನರ್ಮುದ್ರಿಸಿ ಹಂಚಲಾಗುವುದು. ಸಾಮಾನ್ಯವಾಗಿ ಇವುಗಳಿಗೆ ಪ್ರಪಂಚದಾದ್ಯಂತ ಬೇಡಿಕೆ ಇದೆ.

ಗ್ರಂಥಸೂಚಿ, ಪ್ರಲೇಖನ, ಪರಿಭಾಷೆ (ಬಿಬ್ಲಿಯಾಗ್ರಫಿ, ಡಾಕ್ಯುಮೆಂಟೇಷನ್, ಟರ್ಮಿನಾಲಜಿ): ಇದು ಕೂಡ ಒಂದು ದ್ವೈಮಾಸಿಕ. ನಾಲ್ಕು ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. 'ಯುನೆಸ್ಕೋ ಗ್ರಂಥಾಲಯಗಳ ಪತ್ರಿಕೆ'ಗಿಂತ ಇದರ ಪ್ರಸಾರ ಕಡಿಮೆ. ಮೇಲಾಗಿ ಇದನ್ನು ಗ್ರಂಥಾಲಯಗಳಿಗೆ ಉಚಿತವಾಗಿ ಹಂಚಲಾಗುತ್ತಿದೆ. ೧೯೬೧ರಲ್ಲಿ ಬೆಳಕಿಗೆ ಬಂದ ಈ ಪತ್ರಿಕೆ ಯುನೆಸ್ಕೋದ 'ಅಂತರರಾಷ್ಟ್ರೀಯ ಸಲಹಾ ಸಮಿತಿ' ಮತ್ತು ಇತರ ತಾಂತ್ರಿಕ ಸಮಿತಿಗಳ ಸಹಕಾರದಿಂದ ಪ್ರಕಟವಾಗುತ್ತಿದೆ. ಈ ಪತ್ರಿಕೆಯಲ್ಲಿ ೧ ಯುನೆಸ್ಕೋ ವಾರ್ತೆ, ೨ ಮಾನವೀಯ, ಸಾಮಾಜಿಕ ಹಾಗೂ ಸಾಮಾನ್ಯ ಸಂಗತಿ ಮತ್ತು ೩ ವಿಜ್ಞಾನ ಎಂಬ ಮೂರು ವಿಭಾಗಗಳಿರುತ್ತವೆ.

ಉಪಸಂಹಾರ

ಯುನೆಸ್ಕೋದಿಂದ ಗ್ರಂಥಾಲಯಗಳಿಗೆ ಆಗಿರುವ ಸಹಾಯದ ಕೆಲವು ಅಂಶಗಳನ್ನು ಮಾತ್ರ ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಅದರ ಈ ವರೆಗಿನ ಎಲ್ಲ ಚಟುವಟಿಕೆಗಳನ್ನೂ ಸಮಗ್ರವಾಗಿ ಸಂಪಾದಿಸಿ ಬರೆದರೆ ಅದು ಒಂದು ಉದ್ಗ್ರಂಥ

ವಾದೀತು. ಈ ಲೇಖನದಲ್ಲಿ ಉಲ್ಲೇಖಿಸಿರುವ ಯುನೆಸ್ಕೋದ ಕಾರ್ಯಕ್ರಮಗಳು ಹೆಚ್ಚಾಗಿ ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗಿವೆ. ವಾಸ್ತವ ಸಂಗತಿಯೆಂದರೆ--ಮುಂದುವರಿದ ರಾಷ್ಟ್ರಗಳ ಗ್ರಂಥಾಲಯಗಳ ಮತ್ತು ಪ್ರಲೇಖನ ಕೇಂದ್ರಗಳ ಮೇಲೆ ಇದರ ಪ್ರಭಾವ ಕಡಿಮೆ. ಇದು ಪೂರ್ವಯೋಜಿತವಾದದ್ದು. ಮುಂದುವರಿದ ರಾಷ್ಟ್ರಗಳಲ್ಲಿರುವ ಗ್ರಂಥಾಲಯಗಳಿಗೆ ಇದರ ಸಹಾಯದ ಆವಶ್ಯಕತೆ ಇಲ್ಲದೆ ಇರಬಹುದು.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಗ್ರಂಥಾಲಯಗಳ ಅಭಿವೃದ್ಧಿಯ ವಿಷಯದಲ್ಲಿ ಯುನೆಸ್ಕೋ ನೀಡಿದ ತಾಂತ್ರಿಕ ಹಾಗೂ ಧನಸಹಾಯ ಅಪಾರ. ಈ ಸಂಸ್ಥೆ ತನ್ನ ಸಹಕಾರ ಮತ್ತು ಸಹಾಯವನ್ನು ನೀಡದೆ ಹೋಗಿದ್ದರೆ ಹಿಂದುಳಿದ ರಾಷ್ಟ್ರಗಳಲ್ಲಿಯ ಗ್ರಂಥಾಲಯಗಳು ಈಗಿನ ಸ್ಥಿತಿಯಲ್ಲಿರುತ್ತಿದ್ದುವೇ ಎಂಬುದು ಸಂಶಯದ ಸಂಗತಿ. ಈ ಸಹಾಯ ಮತ್ತು ಸಹಕಾರಕ್ಕೆ ಇಲ್ಲಿಯ ಗ್ರಂಥಾಲಯಗಳು ಮತ್ತು ಓದುಗರು ಯುನೆಸ್ಕೋಗೆ ಚಿರಋಣಿಗಳಾಗಿದ್ದಾರೆ.

ಡಿ. ಎಸ್. ಜಯಪ್ಪಗೌಡ

ಸೊಸೆವೂರು–ಇತಿಹಾಸದ ಒಂದು ನೋಟ

ದಕ್ಷಿಣ ಭಾರತದಲ್ಲಿ ಚೋಳರ ಮತ್ತು ಚಾಳುಕ್ಯರ ಪ್ರಾಬಲ್ಯ ಕುಂದುತ್ತಿದ್ದಾಗ ಹೊಯ್ಸಳರು ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶದಲ್ಲಿ ಉದಯವಾಗಿ ಹನ್ನೊಂದನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದ ವರೆಗೂ ಅದ್ವಿತೀಯ ಪಾತ್ರ ವಹಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಹೊಯ್ಸಳ ವಂಶದ ಮೂಲವನ್ನು ಇತಿಹಾಸಕಾರರು ವಿವಿಧ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಡಾ. ಲೂಯಿ ರೈಸ್‌ರವರ ಪ್ರಕಾರ ಹೊಯ್ಸಳರು ಮೈಸೂರಿನವರು ಹಾಗೂ ಸೊಸೆವೂರು ಅಥವಾ ಶಶಾಕಪುರದ ಮೂಲನಿವಾಸಿಗಳು. ಈ ಊರನ್ನು ಈಗಿನ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಮೂಡಿಗೆರೆ ತಾಲ್ಲೂಕಿನ ಅಂಗಡಿ ಗ್ರಾಮವೆಂದು ರೈಸ್‌ರವರು ಗುರುತಿಸಿದ್ದಾರೆ.[1] ಇವರ ಈ ವಾದಕ್ಕೆ ಹೊಯ್ಸಳರ ಕಾಲದ ಶಾಸನಗಳು, ಪ್ರಚಲಿತ ಕಥೆಗಳು ಮತ್ತು ಅಲ್ಲಿಯ ಸ್ಥಳದ ಗುರುತುಗಳು ಆಧಾರಗಳಾಗಿವೆ. ಇದನ್ನು ಅನೇಕ ಚರಿತ್ರಕಾರರು ಸಮರ್ಥಿಸಿದ್ದಾರೆ. ಈ ರೀತಿ ಹೊಯ್ಸಳ ಸಾಮ್ರಾಜ್ಯದ ಬೀಜಾಂಕುರಕ್ಕೆ ನಾಂದಿಯಾದ ಸೊಸೆವೂರಿನ ಐತಿಹ್ಯ ಹೊಯ್ಸಳರ ಮೂಲದ ಬಗ್ಗೆ ಬೆಳಕುಬೀರುತ್ತದೆ.

ಚಿಕ್ಕಮಗಳೂರು–ಮಂಗಳೂರು ರಸ್ತೆಯಲ್ಲಿ ೧೩° ೮' ಉ. ಅ. ೭೫° ೪೧' ಪೂ. ರೇ. ದಲ್ಲಿರುವ ಮೂಡಿಗೆರೆ ಪಟ್ಟಣಕ್ಕೆ ಆಗ್ನೇಯ ದಿಕ್ಕಿಗೆ ೮ ಮೈಲಿ ದೂರದಲ್ಲಿ ಮಂಗಳೂರು–ಬೇಲೂರು ರಸ್ತೆಗೆ ಕೇವಲ ಎರಡು ಮೈಲಿ ದೂರದಲ್ಲಿ ಅಂಗಡಿ ಗ್ರಾಮವಿದೆ. ಪೂರ್ವದಲ್ಲಿ ಇದಕ್ಕೆ ಸೊಸೆವೂರೆಂದು ಹೆಸರಿತ್ತು. ಇದು ವಿಜಯನಗರದ ಅರಸರ ಕಾಲದಲ್ಲೂ ಪ್ರಚಲಿತವಾಗಿತ್ತು.[2] ವಿಜಯನಗರದ ಅರಸರು ರಾಜಕೀಯ ಉದ್ದೇಶದಿಂದ ಇದರ ಹೆಸರನ್ನು ಬದಲಾಯಿಸಿರಬಹುದೆಂದು ತೋರುತ್ತದೆ. ಅಚ್ಯುತರಾಯನ ಕಾಲದಲ್ಲಿ ಇದನ್ನು ಅಂಗಡಿ ಗ್ರಾಮವೆಂದು

[1] *Epigraphia Carnatica, Vol. VI, Introduction*; Rice, B. Lewis

[2] *Ibid.*, Vol. VI, Mg 25, 1359 A.D.

ಕರೆಯಲಾಗಿದೆ.[3] ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿರುವ ಸೊಸೆವೂರಿನ ಪೂರ್ವಕ್ಕೆ ಹೇಮಾವತಿ ನದಿ ಇದ್ದು ಇದರ ಪಶ್ಚಿಮ, ದಕ್ಷಿಣ ಮತ್ತು ಉತ್ತರ ಭಾಗಗಳು ಗುಡ್ಡಬೆಟ್ಟಗಳಿಂದಾವೃತವಾಗಿವೆ. ಈಗ ಈ ಗ್ರಾಮ ಚಿಕ್ಕದಾಗಿದ್ದರೂ ಕೇವಲ ಎರಡು ಮೈಲಿ ಸುತ್ತಳತೆಯೊಳಗೆ ಅನೇಕ ಹಳ್ಳಿಗಳಿವೆ. ಸೊಸೆವೂರಿನ ಪಶ್ಚಿಮಕ್ಕೆ ಪಶ್ಚಿಮಘಟ್ಟದಲ್ಲಿರುವ ಸಿಸಲಕುಡಿ ಎಂಬ ಶಿಖರದ ಪಕ್ಕದಲ್ಲಿ ಒಂದು ಕಾಲುದಾರಿ ಹಾದುಹೋಗಿ ದಕ್ಷಿಣ ಕನ್ನಡ ಜಿಲ್ಲೆಯೊಡನೆ ಹಿಂದಿನಿಂದಲೂ ಸಂಪರ್ಕ ಬೆಳಸಿದೆ. ಈ ಮಾರ್ಗ ಮತ್ತು ಚಾರ್ಮಾಡಿ ಘಾಟಿನ ಮಾರ್ಗಗಳ ಮೂಲಕ ಮಂಗಳೂರಿನೊಡನೆ ವ್ಯಾಪಾರ ಸಂಬಂಧ ಏರ್ಪಟ್ಟಿತ್ತು.

ಅಂಗಡಿಗ್ರಾಮದ ಮಧ್ಯಭಾಗದ ಎತ್ತರವಾದ ಪ್ರದೇಶದಲ್ಲಿ ಪೂರ್ವಾಭಿಮುಖವಾಗಿ ವಾಸಂತಿಕಾ ದೇವಾಲಯವೂ ಇದರ ಸುತ್ತಲೂ ಅರಣ್ಯವೂ ಇವೆ. ಈಗಿರುವ ದೇವಾಲಯವನ್ನು ಸುಮಾರು ಒಂದು ಶತಮಾನದ ಹಿಂದೆ ಜೀರ್ಣೋದ್ಧಾರ ಮಾಡಲಾಯಿತು. ಈ ದೇವಾಲಯ ಹೊಯ್ಸಳರ ಕಾಲಕ್ಕಿಂತಲೂ ಹಿಂದೆಯೇ ಸ್ಥಾಪನೆಯಾದದ್ದೆಂದು ತಿಳಿದುಬರುತ್ತದೆ. ಸಪ್ತಮಾತೃಕೆಯರಾದ ಬ್ರಹ್ಮಾಣಿ, ಮಾಹೇಶ್ವರಿ, ವೈಷ್ಣವಿ, ವರಾಹಿ, ಕುಮಾರಿ, ಇಂದ್ರಾಣಿ, ವಸಂತ ಪರಮೇಶ್ವರಿ ಅಥವಾ ಚಾಮುಂಡೇಶ್ವರಿಯರು ಇಲ್ಲಿ ನೆಲಸಿದರೆಂಬುದು ಪ್ರತೀತಿ. ಇಲ್ಲಿ ಅವರ ಮೂರ್ತಿಗಳಿವೆ. ಈ ದೇವತೆಗಳಿಗೆ ಪ್ರತಿವರ್ಷವೂ ಸುಗ್ಗಿಯಲ್ಲಿ ಉತ್ಸವ ನಡೆಸಲಾಗುತ್ತದೆ.

ಇಲ್ಲಿಯ ಸ್ಥಳಪುರಾಣದ ಪ್ರಕಾರ ವರ್ಧಮಾನನೆಂಬ ಜೈನಮುನಿ ವಾಸಂತಿಕಾ ದೇವಾಲಯದಲ್ಲಿ ತನ್ನ ಶಿಷ್ಯರಿಗೆ ಬೋಧಿಸುತ್ತಿದ್ದಾಗ ಹುಲಿಯೊಂದು ಪಕ್ಕದ ಅರಣ್ಯದಿಂದ ಹೊರಬಂದು ಮೇಲೆರಗಲು ಪ್ರಯತ್ನಿಸುತ್ತಿತ್ತು. ಆಗ ಆ ಮುನಿ ತನ್ನ ಶಿಷ್ಯರಲ್ಲೊಬ್ಬನಾದ 'ಸಳ'ನೆಂಬವನಿಗೆ "ಅದಂ ಪೊಯ್ಸಳ" ಎಂದು ಆಜ್ಞಾಪಿಸಿ ತನ್ನ ಕೈಯಲ್ಲಿದ್ದ ಸೆಳೆಯನ್ನು ಕೊಡಲು ಸಳ ಆ ಹುಲಿಯನ್ನು ಕೊಂದುಹಾಕಿದ. ಇದರಿಂದ ಸುಪ್ರೀತನಾದ ಮುನಿ ಮತ್ತು ಪುರಜನರ ಬೆಂಬಲದಿಂದ ಮುಂದೆ ಸಳ ರಾಜನಾಗಿ, ಆ ಮುನಿಯಿಂದ ಉಕ್ತವಾದ "ಪೊಯ್ಸಳ" ವೆಂಬ ನುಡಿಯನ್ನೇ ತನ್ನ ಕುಲನಾಮವನ್ನಾಗಿಟ್ಟುಕೊಂಡನೆಂದು ತಿಳಿದುಬರುತ್ತದೆ.

ಈ ಸಂಗತಿಯನ್ನು ಹೊಯ್ಸಳರ ಅನೇಕ ಶಾಸನಗಳು ಸಾರುತ್ತವೆಯಾದರೂ ಇತಿಹಾಸಕಾರರಲ್ಲಿ ಈ ಘಟನೆಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಸಳ ಇತಿಹಾಸದ ವ್ಯಕ್ತಿಯೆಂಬುದನ್ನು ಅನೇಕ ಚರಿತ್ರಕಾರರು ಒಪ್ಪುವುದಿಲ್ಲ. ಡಾ. ಡೆರೆಟ್ಟರ ಅಭಿಪ್ರಾಯದಂತೆ "ಈ ವಿಲಕ್ಷಣ ಹೆಸರಿಗೆ ವಿವರಣೆ ಕೊಡಲು ವಿಷ್ಣುವರ್ಧನನ ಕಾಲದಲ್ಲಿ ರಚಿಸಿದ ಮನೋಹರವಾದ ಕಟ್ಟುಕತೆಗೆ ನಾವು ಒಂದು ವಿಷಾದಕರವಾದ

[3] *Ibid.*, Vol. V, P. I. Bl—197

ನಗೆ ಸೂಚಿಸಿ ಮುಂದುವರಿಯಬೇಕು."[4] ಡಾ. ಸಿ. ಹಯವದನರಾಯರ ಪ್ರಕಾರ ರೋಮನ್ನರಿಗೆ ರಾಮ್ಯುಲಸ್ ಇದ್ದಂತೆ ಹೊಯ್ಸಳರಿಗೆ ಸಳ ಕೇವಲ ಕಾಲ್ಪನಿಕ ವ್ಯಕ್ತಿ.[5] ಡಾ. ಫ್ಲೀಟ್ ಕೂಡ ಸಳ ಚಾರಿತ್ರಿಕ ವ್ಯಕ್ತಿಯೆಂಬುದನ್ನು ಅಲ್ಲಗಳೆಯುತ್ತಾರೆ.[6]

ಬಿ. ಆರ್. ಜೋಶಿಯವರು ತಮ್ಮ ಲೇಖನದಲ್ಲಿ ಸಳ ಕೇವಲ ಕಾಲ್ಪನಿಕ ವ್ಯಕ್ತಿ ಎಂದು ಹಲವು ವಾದಗಳಿಂದ ಸಮರ್ಥಿಸಿದ್ದಾರೆ.[7] ಆದರೆ ಡಾ. ಲೂಯಿ ರೈಸ್, ಡಾ. ಎಸ್. ಶ್ರೀಕಂಠಶಾಸ್ತ್ರಿ, ಹುಲ್ಲೂರು ಶ್ರೀನಿವಾಸ ಜೋಯಿಸ್ ಮುಂತಾದವರು ಸಳ ಕೇವಲ ಕಾಲ್ಪನಿಕ ವ್ಯಕ್ತಿಯಲ್ಲವೆಂದೂ ಅವನೇ ಹೊಯ್ಸಳ ವಂಶದ ಮೂಲಪುರುಷನೆಂದೂ ವಾದಿಸುತ್ತಾರೆ.

ಸೊಸೆವೂರು ಅಥವಾ ಶಶಾಕಪುರದಲ್ಲಿ ಪ್ರಚಲಿತವಾಗಿರುವ ದಂತಕಥೆ, ಅಲ್ಲಿಯ ಸ್ಥಳಾವಲೋಕನ ಮತ್ತು ಶಾಸನಗಳಲ್ಲಿ ತಿಳಿಸಿರುವ ವಿಷಯಗಳು— ಇವುಗಳಿಂದ ಇದೇ ಹೊಯ್ಸಳರ ಮೂಲಸ್ಥಳವೆಂಬುದು ಸುವೇದ್ಯವಾಗುತ್ತದೆ. ಒಂದನೆಯ ನರಸಿಂಹನ ಕಾಲದ ಬೆಳವೊಳ ಗ್ರಾಮದಲ್ಲಿರುವ ಶಾಸನದಲ್ಲಿ ಈ ಕೆಳಗಿನ ಕಥೆ ಬರುತ್ತದೆ:

"ವಿಳಸದ್ಯಾದವ ವಂಶದಲ್ಲಿ ಸಳನೆಂಬುರ್ವ್ವೀಶ್ವರಂ ಪುಟ್ಟಿ ಹೊಯ್ಸಳ ನೆಂಬಾ ಮುನಿವಾಕ್ಯದಿಂದೆ ಪುಲಿಯಂ ಪುಯ್ದಾ ಸಳಂ ಪೆತ್ತ ಪೊಯ್ಸಳ ನಾಮಂ ಕುಳನಾಮಮಾಗೆ ಸೆಗಳ್ದಾ ಸಾರ್ದ್ದೂಲ ಸಲ್ಲಾಂಛನಾಕಳಿತರ್ಕ್ಕಳ್ ಸೊಸೆವೂರೊಳಿಂನುಪಲರುಂ ರಾಜ್ಯಂಗೈಯುತ್ತಿರ್ಪ್ಪಿನಂ. . . .ಜನಿಯಿಸಿದಂ ವಿನಯಾಢ್ಯಂ ವಿನಯಾದಿತ್ಯಂ ಪ್ರತಾಪಿನೃಪ. . . .ರುವೆನೆತ್ತಿತ್ತಸೆಯ ನೆಜಿೞಯಂಗನಾತನ ತನುಜಂ ಸಮರಾತಿ ಜಿಷ್ಣು ವಿಷ್ಣು ಮಹೀಶಂ.[8]

ಹೊಯ್ಸಳರ ರಾಜಧಾನಿಯಾಗಿ ಅನೇಕ ಶತಮಾನಗಳ ಕಾಲ ಮೆರೆದ ದ್ವಾರಾವತಿ ಅಥವಾ ಈಗಿನ ಹಳೇಬೀಡಿನಲ್ಲಿರುವ ಕ್ರಿ.ಶ. ೧೨೨೦ರ ಬೇಲೂರಿನ ೧೧೨ನೆಯ ಶಾಸನ 'ಪೊಯ್ಸಳ' ಕಥೆಯನ್ನು ತಿಳಿಸುತ್ತದೆ.[9] ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನದ ದಕ್ಷಿಣದ್ವಾರದಲ್ಲಿರುವ ಒಂದು ಶಾಸನ ಈ ಘಟನೆಯನ್ನು ಸಮರ್ಥಿಸುತ್ತದೆ.[10]

---

4 J. D. M. Derret: *The Hoysalas*, p. 20

5 C. Hayavadana Rao: *Mysore Gazetteer*, Vol. 2, Part 2

6 William Coelho: *Hoysala Vamsa*

7 B. R. Joshi: '*A Study of the Dynastic name* '*Hoysala*' (1 H.Q. 1946)

8 *Epigraphia Carnatica* Vol. VI, Kd. 16, 1171 A.D.

9 *Ibid.*, Vol. V, Bl. 112, 1220 A.D.

10 *Ibid.*, Vol. V, Bl. 92

ಇದಲ್ಲದೆ ಸೊರಬದ ಒಂದು ಶಾಸನ ಚಿಕ್ಕಮಗಳೂರಿನ ೨೦ನೆಯ ಶಾಸನ ಮತ್ತು ೧೩೭ನೆಯ ಶಾಸನಗಳು, ಕಡೂರಿನ ೧೪೩ನೆಯ ಶಾಸನ ಮತ್ತು ಅರಸೀಕೆರೆಯ ೭೧ನೆಯ ಶಾಸನ ಮುಂತಾದವು ಈ ಘಟನೆಯನ್ನು ವಿವಿಧ ರೀತಿಯಲ್ಲಿ ಪ್ರತಿಪಾದಿಸುತ್ತವೆ.

ಅರಸೀಕೆರೆಯ ೧೦೮ನೆಯ ಶಾಸನ ಸಳ ಉಪಯೋಗಿಸಿದ ಆಯುಧವನ್ನು 'ಕುಂಚದ ಸಳೆ' ಎಂದೂ ಬೇಲೂರಿನ ೧೭೪ನೆಯ ಶಾಸನ ಇದನ್ನು 'ಸಲಾಕಿ' ಅಥವಾ ಕಬ್ಬಿಣದ ಸರಳೆಂದೂ ತಿಳಿಸುತ್ತವೆ. ಬೇಲೂರಿನ ೧೧೨ನೆಯ ಶಾಸನ ಇದನ್ನು 'ಚಿತ್ರದ ಸಳೆ' ಎಂದು ತಿಳಿಸುತ್ತದೆ. ಇದೇ ರೀತಿಯಲ್ಲಿ 'ಪೊಯ್ಸಳ' ಎಂಬ ಪದವನ್ನೂ ಎಲ್ಲಾ ಶಾಸನಗಳಲ್ಲೂ ಒಂದೇ ರೀತಿಯಾಗಿ ಪ್ರಯೋಗಿಸಿಲ್ಲ. ಪೊಯ್ಸನ, ಹೊಯ್ಸನ, ಹೊಯ್ಸಳ ಎಂದು ಕನ್ನಡದಲ್ಲಿ ಕಂಡುಬಂದರೆ ತಮಿಳಿನಲ್ಲಿ ಪೋಚಲ, ಹೊಯಿಚಳ, ಹಾಯಿಚಳ ಎಂದು ಮುಂತಾಗಿ ಉಲ್ಲೇಖಿತವಾಗಿದೆ. ಹಲವು ಶಾಸನಗಳಲ್ಲಿ ಆತನನ್ನು ರಾಜನೆಂದು ಸಂಬೋಧಿಸಿದ್ದರೆ ಇನ್ನು ಕೆಲವು ಗೊಲ್ಲನೆಂದೂ ಮತ್ತೆ ಅನೇಕ ಶಾಸನಗಳು ಹಳ್ಳಿಯ ನಾಯಕನೆಂದೂ ತಿಳಿಸುತ್ತವೆ.

ಸೊಸೆವೂರಿನ ಪಶ್ಚಿಮಕ್ಕೆ ಕೇವಲ ಎರಡು ಮೈಲಿ ದೂರದಲ್ಲಿರುವ ಕಣಚೂರು ಗ್ರಾಮದ ಒಂದು ಶಾಸನದಲ್ಲಿ ಅಗ್ರಹಾರಕ್ಕಾಗಿ ಕೊಟ್ಟ ಒಂದು ಭೂಮಿಯ ದಾನವನ್ನು ಉಲ್ಲೇಖಿಸಿದೆ. ಇದರಲ್ಲಿ ಈ ರೀತಿ ಬರೆಯಲಾಗಿದೆ:

" ಇಭೂಮಿಯುಂ
ಪೊಯ್ಸಳನದ್ಯಕ್ಷದಲ್ದಾರೆಯ
ನೆಱೆದಳ್ ಇಭೂಮಿನಳಿಹೆದಮ್
ಕವಿಲೆಯನಿಱಿದರ್ "[11]

ಇದು ಪೊಯ್ಸಳ ರಾಜನಾಗಿ ಆಳಿದನೆಂಬುದಕ್ಕೆ ಒಂದು ಆಧಾರವಾಗಿದೆ. ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಕೂಡ ಈ ಅಭಿಪ್ರಾಯವನ್ನು ಒಪ್ಪುತ್ತಾರೆ. ಇವರ ಅಭಿಪ್ರಾಯದಂತೆ ಅರಸೀಕೆರೆಯ ೧೬೭ನೆಯ ಕುರುಡೀಹಳ್ಳಿ ಶಾಸನ ಮತ್ತು ಬಿಂಡಿಗನವಲೆ ಗ್ರಾಮದಲ್ಲಿರುವ ವೀರಗಲ್ಲು ಈ ಅಂಶವನ್ನು ಸಮರ್ಥಿಸುತ್ತವೆ.

ಸೊಸೆವೂರಿನ ಸ್ಥಳಾವಲೋಕನವನ್ನು ಮಾಡಿದಾಗ ಇನ್ನೂ ಕೆಲವು ಅಂಶಗಳು ಅಲ್ಲಿಯ ರಾಜ್ಯಸ್ಥಾಪನೆಯ ಬಗ್ಗೆ ಪುಷ್ಟೀಕರಣ ನೀಡುತ್ತವೆ. ಸೊಸೆವೂರಿನ ವಾಸಂತಿಕಾ ದೇವಾಲಯಕ್ಕೆ ದಕ್ಷಿಣ ಭಾಗದಲ್ಲಿ ಊರ ಬಾಗಿಲಿದೆ. ಅಲ್ಲಿಂದ ಸುಮಾರು ಮೂರು ಫರ್ಲಾಂಗ್ ದೂರದಲ್ಲಿ ಹೇಮಾವತೀ ನದೀತೀರದ ಸಮೀಪಕ್ಕೆ

---

[11] *Ibid*, Vol. VI, Mg 21,1058 A.D. ?

ಸುಮಾರು ೫೦ ಎಕರೆ ವಿಸ್ತೀರ್ಣವುಳ್ಳ ಒಂದು ಎತ್ತರವಾದ ಭೂಪ್ರದೇಶವಿದೆ. ಅದಕ್ಕೆ 'ಕೋಟೆಹರ'ವೆಂದು ಹೆಸರು. ಹೊಯ್ಸಳನ ಕಾಲದಲ್ಲಿ ಇಲ್ಲಿ ಒಂದು ಕೋಟೆಯನ್ನು ಕಟ್ಟಲಾಯಿತೆಂದು ತಿಳಿದುಬರುತ್ತದೆ. ಈಗಲೂ ಗಿಡಮರಗಳಿಂದ ಮುಚ್ಚಿರುವ ಈ ಪ್ರದೇಶದಲ್ಲಿ ಕಂದಕಗಳಿದ್ದ ಗುರುತುಗಳು ಕಂಡುಬರುತ್ತವೆ. ಇಲ್ಲಿಂದ ನದಿಯ ಆಚೆಯ ಪ್ರದೇಶವನ್ನಲ್ಲದೆ ಸುತ್ತಮುತ್ತಲ ಪ್ರದೇಶವನ್ನೂ ವೀಕ್ಷಿಸಬಹುದಾಗಿದೆ. ಆದ್ದರಿಂದ ಇದು ಆಯಕಟ್ಟಿನ ಸ್ಥಳವೆಂದು ಕಂಡುಬರುತ್ತದೆ. ಪ್ರಥಮವಾಗಿ ಹೊಯ್ಸಳರು ಬೆಟ್ಟಪ್ರದೇಶದ ಜನರ ಒಡೆಯರಾಗಿ ರಾಜ್ಯ ಸ್ಥಾಪನೆ ಮಾಡಿದರೆಂಬ ಅಂಶವನ್ನು ಬಹುತೇಕ ಚರಿತ್ರಕಾರರು ಒಪ್ಪಿದ್ದಾರೆ. ಹಾಗೆ ಈ ಸ್ಥಳದಿಂದಲೇ ರಾಜ್ಯಸ್ಥಾಪನೆ ಮಾಡಿದರೆಂದೂ ಇದೇ ಮುಂದಿನ ಹೊಯ್ಸಳ ಮಹಾಸಾಮ್ರಾಜ್ಯಸ್ಥಾಪನೆಗೆ ಮೂಲವಾಯಿತೆಂದೂ ಇಲ್ಲಿಯ ಸ್ಥಳ ಸಂಗತಿಯಿಂದ ತಿಳಿದುಬರುತ್ತದೆ. ಈ 'ಕೋಟೆಹರ'ದಲ್ಲಿ ಈಗಲೂ ವರ್ಷಂಪ್ರತಿ ಕಾರ್ತಿಕಮಾಸದ ಹುಣ್ಣಿಮೆಯ ರಾತ್ರಿ ಉತ್ಸವ ನಡೆಯುತ್ತದೆ. ಈ ಪರಂಪರೆ ಹಿಂದಿನ ಯಾವುದೋ ಸಂಪ್ರದಾಯಕ್ಕೆ ಸಾಕ್ಷಿಯಾಗಿದೆ.

ಇದಲ್ಲದೆ ವಾಸಂತಿಕಾ ದೇವಾಲಯದ ಮುಂಭಾಗದಲ್ಲಿ ಎಡಭಾಗಕ್ಕೆ ಸುಮಾರು ಆರು ಅಡಿ ಎತ್ತರವಿರುವ ಒಂದು ಸ್ತಂಭವಿದೆ. ಇದನ್ನು 'ಬಲಿಕಲ್ಲೆಂದು' ಕರೆಯುತ್ತಾರೆ. ಇದು ಸಳ ಹುಲಿಯನ್ನು ಕೊಂದಿದ್ದರ ಸ್ಮರಣೆಗಾಗಿ ನೆಟ್ಟದ್ದೆಂದು ಅಲ್ಲಿಯ ಸ್ಥಳಪುರಾಣದ ಪ್ರಕಾರ ತಿಳಿದುಬರುತ್ತದೆ. ಇದರ ಮೇಲೆ ದಿನಂಪ್ರತಿ ಪೂಜೆಯ ಅನಂತರ ಪ್ರಸಾದವನ್ನು ಹಾಕಲಾಗುತ್ತದೆ. ಹಾಗೂ ದೇವಸ್ಥಾನದ ಕಲ್ಲಿನ ಮೆಟ್ಟಲಿನಲ್ಲಿ ಹುಲಿಯಾಕಾರದ ಚಿಹ್ನೆಯಿದೆ.

ಸಳ ಸೊಸೆವೂರು ಅಥವಾ ಶಶಾಕಪುರದಲ್ಲಿ ರಾಜ್ಯಸ್ಥಾನೆಯನ್ನು ಮಾಡಿದ ನೆಂಬ ಮಾತಿಗೆ ಮೆಕಂಜಿಯ ಹಸ್ತಪ್ರತಿಗಳು ಹೆಚ್ಚು ಪುಷ್ಟಿ ನೀಡುತ್ತವೆ. ಅವರ ಸಂಗ್ರಹದಲ್ಲಿರುವ ಹಸ್ತಪ್ರತಿಗಳಲ್ಲಿ ಉಲ್ಲೇಖವಾಗಿರುವ ಕಥೆಯಂತೆ, ಸಳನೆಂಬ ಯುವಕ ಹುಲಿಯನ್ನು ಕೊಂದು, ವಾಸಂತಿಕಾ ದೇವಾಲಯಕ್ಕೆ ಹೋಗಲಂಜುತ್ತಿದ್ದ ಪುರಜನರ ಭಯವನ್ನು ನೀಗಲಾಗಿ, ಅವರು ಪ್ರತಿ ಕುಟುಂಬವೂ ವರ್ಷಕ್ಕೆ ಒಂದು ಪಣವನ್ನು (೪ ಆಣೆ ೮ ಪೈ) ಸಳನಿಗೆ ಕೊಡಬೇಕೆಂದು ನಿರ್ಧರಿಸಿದರು. ಹೀಗೆ ಸಂಗ್ರಹಿಸಿದ ಹಣವನ್ನೆಲ್ಲಾ ಅವನು ಐದನೆಯ ವರ್ಷದಲ್ಲಿ ತನ್ನ ಗುರುವಿಗೆ ಅರ್ಪಿಸಿದಾಗ ಗುರು ಸಳನಿಗೆ ಒಂದು ಸೈನ್ಯವನ್ನು ಕೂಡಿಸಲು ಸೂಚಿಸಿದ. ಇದನ್ನು ದಕ್ಷತೆಯಿಂದ ನಿರ್ವಹಿಸಿದ ಸಳ ಹತ್ತನೆಯ ಶತಮಾನದ ಅಂತ್ಯದ ವೇಳೆಗೆ ಒಂದು ಚಿಕ್ಕ ರಾಜ್ಯ ಸ್ಥಾಪನೆಮಾಡಿದ. ಈ ಕಥೆಯನ್ನೂ ಲೂಯಿ ರೈಸ್, ಶ್ರೀನಿವಾಸ ಜೋಯಿಸ್ ಮತ್ತು ಶ್ರೀಕಂಠಯ್ಯನವರು ಒಪ್ಪುತ್ತಾರೆ.

ಹೊಯ್ಸಳರ ಮೂಲದ ಬಗ್ಗೆ ಇರುವ ಇನ್ನೊಂದು ಪ್ರಮುಖವಾದವೆಂದರೆ ಅವರು ಉತ್ತರದ ಯದುವಂಶಕ್ಕೆ ಸೇರಿದವರೆಂಬುದು. ಇದನ್ನು ಒಂದು ಶಾಸನ

ದಲ್ಲೂ ಉಲ್ಲೇಖಿಸಲಾಗಿದೆ.[12] ಆದರೆ ಹೊಯ್ಸಳರ ಭಾಷೆ ಹಳಗನ್ನಡ. ಅಲ್ಲದೆ ವಿಷ್ಣುವರ್ಧನನಿಗಿಂತ ಮೊದಲು ಆಳಿದ ಹೊಯ್ಸಳ ರಾಜರು ತಮ್ಮ ಶಾಸನಗಳಲ್ಲಿ ತಾವು ಯದುವಂಶದವರೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ಈ ಪರಂಪರೆಯನ್ನು ಪ್ರೊ. ವಿಲಿಯಂ ಕೊಹೆಲ್ಬ್ರೊರವರು ಸಂಪೂರ್ಣವಾಗಿ ವಿರೋಧಿಸುತ್ತಾರೆ. ಇದಲ್ಲದೆ ಹತ್ತು ಹಾಗೂ ಹನ್ನೊಂದನೆಯ ಶತಮಾನಗಳ ದಕ್ಷಿಣದ ರಾಜಮನೆತನಗಳು ಪೌರಾಣಿಕ ಅಥವಾ ಯದುವಂಶದ ಹಿನ್ನೆಲೆಗಳಿಂದಲೇ ತಮ್ಮ ಮೂಲವನ್ನು ಹೇಳಿಕೊಂಡಿವೆ. ಆದ್ದರಿಂದ ಈ ಯದುವಂಶ ಮೂಲ ಕೇವಲ ಭವ್ಯತೆಯ ಸಂಕೇತವೇ ಹೊರತು ಚಾರಿತ್ರಿಕ ಸತ್ಯವಲ್ಲ.

ಚಿಕ್ಕಮಗಳೂರಿನ ೨೦ನೆಯ ಶಾಸನ ಮತ್ತು ಇತರ ಶಾಸನಗಳು ವಿನಯಾದಿತ್ಯನೇ ಸಳನ ಮಗನೆಂದು ತಿಳಿಸುತ್ತವೆ. ಇವುಗಳ ಪ್ರಕಾರ ಸಳನ ಅನಂತರ ಅಂದರೆ ಕ್ರಿ.ಶ. ೧೦೦೬ರಿಂದ ೧೦೨೨ರ ವರೆಗೆ ಒಂದನೆಯ ವಿನಯಾದಿತ್ಯ ಆಳಿದನೆಂದು ತಿಳಿದುಬರುತ್ತದೆ.[13] ಅನಂತರ ಕ್ರಿ.ಶ. ೧೦೨೨ರಿಂದ ಕ್ರಿ.ಶ. ೧೦೪೭ರ ವರೆಗೆ ನೃಪಕಾಮ ಅಥವಾ ಕಾಮಪೊಯ್ಸಳ ಆಳಿದನೆಂದು ಭಾವಿಸಬಹುದಾಗಿದೆ. ಇವನನ್ನು ಕೆಲವು ಶಾಸನಗಳಲ್ಲಿ ಮಾರಸೆಂದು ಕರೆಯಲಾಗಿದೆ.[14] ಹೊಯ್ಸಳ ವಿನಯಾದಿತ್ಯ ಸೊಸೆವೂರಿನಲ್ಲಿ ರಾಜ್ಯವಾಳಿದನೆಂಬುದಕ್ಕೆ ಚಿಕ್ಕಮಗಳೂರಿನ ೧೬೦ನೆಯ ಶಾಸನ ಮತ್ತು ಮೂಡಿಗೆರೆಯ ೯ನೆಯ ಶಾಸನಗಳು ಆಧಾರವಾಗಿವೆ.[15] ಎರಡನೆಯ ವಿನಯಾದಿತ್ಯನ ಕಾಲಕ್ಕೆ ಹೊಯ್ಸಳರ ರಾಜ್ಯ ಒಂದು ಸ್ಥಿರವಾದ ರೂಪ ಪಡೆಯಿತು. ವಿನಯಾದಿತ್ಯನ ಕಾಲಕ್ಕೆ ಹೊಯ್ಸಳರು "ದ್ವಾರಾವತೀ ಪುರಾವರಾಧೀಶ್ವರರು" ಎಂಬ ಬಿರುದು ಪಡೆದಿರುವುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಆದ್ದರಿಂದ ಸಳನ ಕಾಲದಿಂದ ರಾಜಧಾನಿಯಾಗಿದ್ದ ಸೊಸೆವೂರು ವಿನಯಾದಿತ್ಯನ ಕಾಲಕ್ಕೆ ಬೇಲೂರಿಗೂ[16] ಅನಂತರ ದ್ವಾರಾವತಿಗೂ ಸ್ಥಳಾಂತರವಾದುದು ವೇದ್ಯವಾಗುತ್ತದೆ. ಬೇಲೂರಿನ ಒಂದು ಶಾಸನದಲ್ಲಿ ಒಂದನೆಯ ಬಲ್ಲಾಳ ಹೊಯ್ಸಳರ ಜನ್ಮಸ್ಥಳವಾದ ಸೊಸೆವೂರಿಗೆ ಭೇಟಿಕೊಟ್ಟಿದ್ದನೆಂದು ತಿಳಿಸಲಾಗಿದೆ.[17]

---

[12] *Ibid.*, Vol. V, p. 1, Bl. 171

[13] J.D.M. Derrett: *The Hoysalas*, p. 18

[14] E.C., Vol. VI, K p. 1, 2, 3, 10.

[15] E.C., Vol. VI, Con. 160, 1103 A.D. ?, Mg. 9, 1054 A.D. ?

[16] E.C. Vol. VI, Kd. 142, 1096 A.D.

ಈ ಶಾಸನದಲ್ಲಿ ಈ ರೀತಿ ತಿಳಿಸಲಾಗಿದೆ: "ಶ್ರಿಮ್ ಮಹಾಮಂಡಳೇಶ್ವರಂ ತ್ರಿಭುವನಮಲ್ಲ ಪೊಯ್ಸಳ ದೇವರು ಬೇಲ್ಹೂರು ಬೀಡಿನೊಳ್ಸುಖ ಸಂಕಥಾ ವಿನೋದದಿಂ ರಾಜ್ಯಂ ಗೆಯುತ್ತಿರೆ ಎಱೆಯಂಗ ದೇವರು ಯುವರಾಜ್ಯಪದವಿಯೊಳಿರೆ."

[17] E.C., Vol. V, p. 2, Bl. 199, 1101 A.D.

ಈ ರೀತಿ ಹೊಯ್ಸಳರು ಸೊಸೆವೂರಿನಲ್ಲಿ ರಾಜ್ಯಸ್ಥಾಪನೆ ಮಾಡಿ ಅನಂತರ ರಾಜ್ಯ ವಿಸ್ತರಿಸಿದಂತೆ, ಸಂಪರ್ಕಸಾಧನೆಯ ಆವಶ್ಯಕತೆಯಿಂದಲೂ ಪ್ರಕೃತಿಯ ವಿಕೋಪದಿಂದ ರಕ್ಷಣೆ ಪಡೆಯಲೂ ಗುಡ್ಡಗಾಡಿನಿಂದ ಬಯಲುಗಾಡಿಗೆ ಬಂದರು. ಅವರ 'ತೊರೆವರಮಾರಿ', 'ಮಲೆವರವಾರಿ', 'ಮಲೆಪರೊಳ್ ಗಂಡ' ಇತ್ಯಾದಿ ಬಿರುದುಗಳು ಪೊಯ್ಸಳರು ಅಥವಾ ಹೊಯ್ಸಳರು ಆರಂಭದಲ್ಲಿ ಗುಡ್ಡಗಾಡಿನ ನಾಯಕರಾಗಿದ್ದರೆಂಬುದನ್ನೂ ಸಾರುತ್ತವೆ. ಈಗಲೂ ಸೊಸೆವೂರಿನಲ್ಲಿ ಭಗ್ನಾವಶೇಷಗಳಾಗಿ ನಿಂತಿರುವ ಚನ್ನಕೇಶವ ಗುಡಿ, ಪಾತಾಳ ವೀರಭದ್ರನ ಗುಡಿ ಮತ್ತು ಮಲ್ಲಿಕಾರ್ಜುನ ದೇವಾಲಯಗಳೂ ಅನೇಕ ಬಸದಿಗಳೂ ಅಲ್ಲಿ ಒಂದು ಕಾಲದಲ್ಲಿ ಆಗಿದ್ದ ಪುರೋಭಿವೃದ್ಧಿಗೆ ಮೂಕಸಾಕ್ಷಿಗಳಾಗಿವೆ. ಸೊಸೆವೂರು ವ್ಯಾಪಾರ ಕೇಂದ್ರವೂ ಆಗಿತ್ತೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ.[18] ಇತಿಹಾಸ ಗರ್ಭದಲ್ಲಿ ಜ್ವಾಜ್ವಲ್ಯಮಾನವಾಗಿ ಬೆಳಗಿದ ಹೊಯ್ಸಳ ಸಾಮ್ರಾಜ್ಯಕ್ಕೆ ಮೂಲ ಸ್ಥಾನವಾದ ಹೆಮ್ಮೆ ಸೊಸೆವೂರು ಅಥವಾ ಶಶಾಕಪುರದ್ದು ಎಂದರೆ ಅದು ಈಗಿನ ಅಂಗಡಿ ಗ್ರಾಮಕ್ಕೆ ಸಲ್ಲುತ್ತದೆ.

[18] E.C., Vol. VI, Mg. 15C. 1164, A.D., Mg. 16, 1060 A.D. ?

ಸೇವುಣ-ಹೊಯ್ಸಳ-ಸಳ-ಕಾಮ

ಸೇವುಣರಂತೆ ಹೊಯ್ಸಳರೂ ತಾವು ಯದುವಂಶದವರೆಂದು ಹೇಳಿಕೊಂಡು ತಮ್ಮನ್ನು ಯಾದವರೆಂದು ಕರೆದುಕೊಳ್ಳುತ್ತಾರೆ. ಯಾದವನಾರಾಯಣ, ದ್ವಾರಾವತೀ ಪುರವರಾಧೀಶ್ವರ ಎಂಬ ಸಾಂಪ್ರದಾಯಿಕ ಬಿರುದುಗಳು ಸೇವುಣ ಹೊಯ್ಸಳ ರಿಬ್ಬರಿಗೂ ಸಾಮಾನ್ಯವಾಗಿವೆ. ಈ ಎರಡೂ ಮನೆತನಗಳ ಆದ್ಯಪ್ರವರ್ತಕರು ಸಾಮಂತನಾಯಕರಾಗಿದ್ದರು. ಇವರಿಬ್ಬರ ಆಕಾಂಕ್ಷೆಯೂ ಒಂದೇ—ಸಂದು ಹೋದ ಚಾಳುಕ್ಯರಿಗೆ ಸೇರಿದ್ದ ಪ್ರದೇಶದ ಮೇಲೆ ಒಡೆತನ. ಸೇವುಣರ ವಾಸ್ತವ್ಯ ತುಂಗಭದ್ರೆಯ ಉತ್ತರದ ಬಯಲುನೆಲವಾದರೆ, ಹೊಯ್ಸಳರ ತಾಯಿನಾಡು ಆ ನದಿಯ ದಕ್ಷಿಣದ ಸಹ್ಯಾದ್ರಿ ಪ್ರದೇಶ. ಹೊಯ್ಸಳ ಮನೆತನದ ಪೂರ್ವಿಕರು ಸೊಸೆವೂರು ಎಂಬ—ಶಶಕಪುರವೆಂದು ಸಂಸ್ಕೃತೀಕರಣವಾದ—ಹಳ್ಳಿಯವರು. ಇದು ಚಿಕ್ಕಮಗಳೂರು ಜಿಲ್ಲೆಯ ಅಂಗಡಿ ಎಂದು ಗುರುತಿಸಲಾಗಿದೆ........

ಸಳನೂ ಅನಂತರಕಾಲದ ಹೊಯ್ಸಳ ಶಾಸನಗಳಲ್ಲಿಯ ವಂಶಾವಳಿಯಲ್ಲಿ ಉಲ್ಲೇಖಿತನಾಗಿರುವ ನೃಪ ಕಾಮನೂ ಒಬ್ಬನೇ ಎಂಬುದು ಕೆಲವು ವಿದ್ವಾಂಸರ ಮತ. ಆದರೆ ಇದನ್ನು ಒಪ್ಪುವುದು ಕಷ್ಟ. ಏಕೆಂದರೆ ಈ ವಿಚಾರವಾಗಿ ಶಾಸನಗಳು ವಿಶ್ವಾಸಾರ್ಹವಾದ ಮಾಹಿತಿಯನ್ನೇನೂ ಒದಗಿಸಲಾರವು. ಸಳನ ಗುರುತು ಐತಿಹ್ಯಗಳ ನಡುವೆ ಅಡಗಿಹೋಗಿರುವಂತೆಯೇ ಕಾಮನಿಗೂ ಕೆಲವು ಐತಿಹಾಸಿಕ ಘಟನೆಗಳಿಗೂ ಸಂಬಂಧ ಕಲ್ಪಿಸುವುದು ಸಾಧ್ಯ. ಆದ್ದರಿಂದ ಈ ಕಾಮನೂ ಸಳನೂ ಒಂದೇ ಕಾಲದವರಲ್ಲವೆಂದು ಊಹಿಸಬಹುದಾಗಿದೆ. ೧೦ನೆಯ ಶತಮಾನದ ಮಧ್ಯಕಾಲದ ಸುಮಾರಿನಲ್ಲಿ ಬದುಕಿದ್ದ ನೊಳಂಬ ನಾಯಕನೊಬ್ಬನಿಗೆ 'ಪೊಯ್ಸಳ' ನೆಂಬ ವಿಶೇಷಣ ಬಳಸಿರುವುದು ಈ ಸಂದರ್ಭದಲ್ಲಿ ಕುತೂಹಲ ಹುಟ್ಟಿಸುವುದಾಗಿದೆ.[1]

[1] Desai, Dr. P. B. (Ed.): *A History of Karnataka*: Kannada Research Institute, Karnatak University, Dharwar, 1970; pp. 250-251

ತಾರಾನಾಥ ಭಟ್ಟ

ಗ್ರಾಮಪ್ರದೇಶದಲ್ಲಿ ಬ್ಯಾಂಕ್ ಶಾಖಾ ವಿಸ್ತರಣೆ

ವ್ಯವಸಾಯವೇ ಪ್ರಧಾನವಾಗಿರುವ ಭಾರತದ ಬೇಸಾಯದಲ್ಲಿ ಬದಲಾವಣೆ ಬಹಳ ಅಗತ್ಯ. ಅಂತೆಯೇ ಇಂದು ಬೇಸಾಯದಲ್ಲಿ ಹಸಿರುಕ್ರಾಂತಿಯ ಪ್ರಾರಂಭವಾಗಿದೆ. ನವೀನ ಕೃಷಿವಿಧಾನಗಳು ಜಾರಿಗೆ ಬರುತ್ತಿವೆ. ಕೃಷಿಗೆ ಸಂಬಂಧಿಸಿದ ಉದ್ಯಮಗಳೂ ಅಷ್ಟೇ ತ್ವರಿತಗತಿಯಿಂದ ಮುಂದುವರಿಯುವುದು ಅವಶ್ಯ. ಪ್ರಗತಿದಾಯಕವಾಗಿ ಕೃಷಿರಂಗ ಬೆಳೆಯುತ್ತಿರುವಾಗ ಅದಕ್ಕೆ ಅವಶ್ಯವಿರುವ ಸಾಲವನ್ನು ಪೂರೈಸಲೇ ಬೇಕು. ಈ ಸಾಲವನ್ನು ಪೂರೈಸಲು ಗ್ರಾಮಪ್ರದೇಶದಲ್ಲಿ ಉಳಿತಾಯವನ್ನು ಕಲೆಹಾಕುವುದು ಮತ್ತು ಹೆಚ್ಚಿಸುವುದು ಸಹ ಅಷ್ಟೇ ಆವಶ್ಯಕ. ಗ್ರಾಮೀಣ ಪ್ರದೇಶದಲ್ಲಿ ಸಾಲದ ಆವಶ್ಯಕತೆ ಹೆಚ್ಚಾಗುತ್ತಿದೆ. ಇದನ್ನು ಪೂರೈಸುವುದು ಕೃಷಿರಂಗದ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಮಹತ್ವದ ಹೆಜ್ಜೆ. ಈ ಸಮಸ್ಯೆಯನ್ನು ಎದುರಿಸಲು ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿ ಗ್ರಾಮ ಅಭಿವೃದ್ಧಿಗೆ ಪುಷ್ಟಿಕೊಡುವುದು ಬಹಳ ಆವಶ್ಯಕವಾದ ಕಾರ್ಯಕ್ರಮವೆಂದೇ ಅನ್ನಬೇಕು. ವಾಣಿಜ್ಯಬ್ಯಾಂಕುಗಳು ಈ ದಿಸೆಯಲ್ಲಿ ಗಮನಕೊಡಬೇಕೆಂದು ಈ ಹಿಂದೆ ೧೯೫೦ರ 'ಗ್ರಾಮೀಣ ಬ್ಯಾಂಕ್ ವಿಚಾರಣಾ ಸಮಿತಿ' ತನ್ನ ವರದಿಯಲ್ಲಿ ತಿಳಿಸಿತ್ತು. ಅದೇ ವಿಚಾರವನ್ನು ಇತ್ತೀಚಿನ ಬಿ. ವೆಂಕಟಪ್ಪಯ್ಯ ಸಮಿತಿ ಕೂಡ ಸಮರ್ಥಿಸಿದೆ. ಈ ಎರಡೂ ಸಮಿತಿಗಳು ತಮ್ಮ ವರದಿಯಲ್ಲಿ ಗ್ರಾಮಪ್ರದೇಶದ ಸಾಲದ ಆವಶ್ಯಕತೆಯ ಗಾತ್ರವನ್ನು ಅಳೆಯಲು ಪ್ರಯತ್ನಿಸಿವೆ. ವಾಣಿಜ್ಯ ಬ್ಯಾಂಕುಗಳು ಕೃಷಿರಂಗದ ಸಾಲದ ಬೇಡಿಕೆಯನ್ನು ಪೂರೈಸಲು ಅಣಿಯಾಗುವುದು ಅತ್ಯಂತ ಮಹತ್ವವಾದ ಕೆಲಸವೆಂದು ಅವು ಹೇಳಿವೆ.

ಹಿಂದಿನ ಪರಂಪರೆ

ಈ ಹಿಂದೆ ಬ್ಯಾಂಕ್ ಸಂಸ್ಥೆಗಳು ದೊಡ್ಡ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದುವು. ಗ್ರಾಮಾಂತರ ಪ್ರದೇಶವನ್ನು ವಾಣಿಜ್ಯ ಬ್ಯಾಂಕುಗಳು ತಲುಪುತ್ತಿರಲಿಲ್ಲ. ದೊಡ್ಡ ಪಟ್ಟಣಗಳಲ್ಲಿ ಮಾತ್ರ ಬ್ಯಾಂಕು ಸಾಲ ನೀಡುವ ಮತ್ತು ಠೇವಣಿ ಸ್ವೀಕರಿಸುವ

ಕಾರ್ಯವನ್ನು ಕೈಗೊಳ್ಳುತ್ತಿತ್ತು. ವಾಣಿಜ್ಯ ಬ್ಯಾಂಕು ತನ್ನ ಒಟ್ಟು ಸಾಲ ನೀಡಿಕೆಯಲ್ಲಿ ವ್ಯಾಪಾರಕ್ಕೆ ಹೆಚ್ಚು ಭಾಗವನ್ನು ಮೀಸಲಿಡುತ್ತಿತ್ತು. ೧೯೫೧ರಲ್ಲಿ ವಾಣಿಜ್ಯ ಬ್ಯಾಂಕು ತನ್ನ ಒಟ್ಟು ಸಾಲ ನೀಡಿಕೆಯಲ್ಲಿ ಶೇಕಡ ೩೬ರಷ್ಟನ್ನು ವ್ಯಾಪಾರಕ್ಕೂ, ಶೇಕಡ ೩೪ರಷ್ಟನ್ನು ಔದ್ಯೋಗಿಕ ರಂಗಕ್ಕೂ ನೀಡಿತ್ತು. ಆದರೆ ೧೯೬೯ರಲ್ಲಿ ಔದ್ಯೋಗಿಕ ರಂಗದ ಪಾಲು ಶೇಕಡ ೬೪.೩ಕ್ಕೆ ಏರಿತು, ಮತ್ತು ವ್ಯಾಪಾರದ ಪಾಲು ಶೇಕಡ ೧೯.೪ಕ್ಕೆ ಇಳಿಯಿತು.

೧೯೫೧ರ ಕೊನೆಗೆ ವಾಣಿಜ್ಯ ಬ್ಯಾಂಕುಗಳ ಒಟ್ಟು ಕಚೇರಿಗಳ ಪೈಕಿ ಶೇಕಡ ೩೬.೮ರಷ್ಟು ಕಚೇರಿಗಳು ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯಿರುವ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದುವು. ಶೇಕಡ ೧೬.೧ರಷ್ಟು ಕಚೇರಿಗಳು ಮಾತ್ರ ೧೦ ಸಾವಿರಕ್ಕೂ ಕಡಿಮೆ ಜನಸಂಖ್ಯೆಯಿರುವ ಪಟ್ಟಣಗಳಲ್ಲಿ ಇದ್ದುವು. ಅಲ್ಲದೆ ಸಾಲ ಒದಗಿಸುವ ಕಾರ್ಯವೂ ಬಹಳ ಸೀಮಿತವಾಗಿತ್ತು. ಠೇವಣಿಯನ್ನು ಹೆಚ್ಚಿಸುವ ಬಗ್ಗೆ ವಾಣಿಜ್ಯ ಬ್ಯಾಂಕು ಆ ದಿನಗಳಲ್ಲಿ ಹೆಚ್ಚು ಆಸಕ್ತಿ ಹೊಂದಿರಲಿಲ್ಲ. ಎಲ್ಲ ವಾಣಿಜ್ಯ ಬ್ಯಾಂಕುಗಳ ವ್ಯವಹಾರವೂ ಇಂಗ್ಲಿಷಿನಲ್ಲಿ ನಡೆಯುತ್ತಿದ್ದುದರಿಂದ ದೇಶದ ಹೆಚ್ಚಿನ ಜನ ಈ ವ್ಯವಹಾರ ನಡೆಸಲು ಅಸಮರ್ಥರಾಗಿದ್ದರು. ಅಲ್ಲದೆ ಈ ಜನರಿಗೆ ಬ್ಯಾಂಕ್ ಉದ್ಯಮದ ಸರಿಯಾದ ಕಲ್ಪನೆ ಸಹ ಇರಲಿಲ್ಲ.

ಸಹಕಾರಿ ರಂಗ

ಸಹಕಾರಿ ಸಾಲಗಳು ಹೆಚ್ಚಿನ ಪ್ರಮಾಣದಲ್ಲಿ ಗ್ರಾಮಪ್ರದೇಶದಲ್ಲಿಯೇ ಅಭಿವೃದ್ಧಿಗೊಂಡಿವೆ. ಗ್ರಾಮಪ್ರದೇಶ ಸಹಕಾರಿ ರಂಗದಿಂದಲೇ ತನ್ನ ಹೆಚ್ಚಿನ ಪ್ರಮಾಣದ ಸಾಲ ಪಡೆಯುತ್ತಿದೆ. ಸಹಕಾರಿ ಬ್ಯಾಂಕುಗಳ ಸಂಯೋಜನೆಯನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು : ರಾಜ್ಯ ಮಟ್ಟದಲ್ಲಿ ಅಪೆಕ್ಸ್ ಸಹಕಾರ ಬ್ಯಾಂಕುಗಳು, ಜಿಲ್ಲಾಮಟ್ಟದಲ್ಲಿ ಜಿಲ್ಲಾ ಕೇಂದ್ರೀಯ ಬ್ಯಾಂಕುಗಳು ಮತ್ತು ತಳದಲ್ಲಿ ಪ್ರಾಥಮಿಕ ಸಹಕಾರಿ ಸಂಘಗಳು. ಠೇವಣಿ ಶೇಖರಿಸುವ ಕಾರ್ಯವನ್ನು ರಾಜ್ಯ ಮಟ್ಟದ ಅಪೆಕ್ಸ್ ಬ್ಯಾಂಕು ಮತ್ತು ಜಿಲ್ಲಾಮಟ್ಟದ ಜಿಲ್ಲಾ ಕೇಂದ್ರೀಯ ಬ್ಯಾಂಕು ಕೈಗೊಳ್ಳುವುದು. ಈ ರೀತಿ ಶೇಖರಿಸಿದ ಠೇವಣಿಯನ್ನು ಪ್ರಾಥಮಿಕ ಸಂಸ್ಥೆಗಳ ಮೂಲಕ ಸಾಲವಾಗಿ ಗ್ರಾಮಪ್ರದೇಶದ ಆವಶ್ಯಕತೆಯನ್ನು ಪೂರೈಸಲಾಗುತ್ತದೆ. ಪ್ರಾಥಮಿಕ ಸಹಕಾರ ಸಂಘ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ಮಾತ್ರ ಕೃಷಿರಂಗಕ್ಕೆ ಪೂರೈಸುವುದು. ಜಮೀನು ಅಭಿವೃದ್ಧಿ ಬ್ಯಾಂಕು ಷೇರು ಮತ್ತು ಠೇವುಗಳನ್ನು ಮಾರಿ ದೀರ್ಘಾವಧಿಯ ಸಾಲ ಪೂರೈಸುವುದು.

ಗ್ರಾಮಪ್ರದೇಶದ ದೃಷ್ಟಿಯಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಪಾತ್ರ ಮಹತ್ತ್ವದ್ದು. ೧೯೬೮ರ ಕೊನೆಯಲ್ಲಿ ಈ ಪ್ರದೇಶದಲ್ಲಿ ೧,೭೧,೮೦೪ ಪ್ರಾಥಮಿಕ ವ್ಯವಸಾಯ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದುವು. ಅವುಗಳಲ್ಲಿ ೧,೪೯,೦೯೦

ಸಂಘಗಳು ಸಚೇತನವಾಗಿವೆ. ಅಂದರೆ ಶೇಕಡ ೮೬ರಷ್ಟು ಸಹಕಾರಿ ಪ್ರಾಥಮಿಕ ಸಂಘಗಳು ಸಚೇತನವಾಗಿವೆ ಎಂದಂತಾಯಿತು. ಈ ಸಂಸ್ಥೆಗಳು ೫.೫ ಲಕ್ಷ ಹಳ್ಳಿಗಳಿಗೆ ಅಂದರೆ ೨೮೧ ಲಕ್ಷ ಸದಸ್ಯರುಗಳಿಗೆ ಸೇವೆಯನ್ನು ಸಲ್ಲಿಸುತ್ತಲಿವೆ. ಶೇಕಡ ೩೨ ಗ್ರಾಮೀಣ ಕುಟುಂಬಗಳು ಈ ಸಂಸ್ಥೆಯ ನೆರಳಿನಲ್ಲಿ ಬರುತ್ತವೆ. ಆದರೆ ವಾಣಿಜ್ಯಬ್ಯಾಂಕು ಕೇವಲ ೫,೦೦೦ ಹಳ್ಳಿಗಳಿಗೆ ಮಾತ್ರ ಸೇವೆಸಲ್ಲಿಸುತ್ತಿದೆ. ಇದು ಒಟ್ಟು ಗ್ರಾಮೀಣ ಕುಟುಂಬಗಳ ಶೇಕಡ ಒಂದು ಮಾತ್ರ ಆಗುವುದು. ೧೯೬೭-೬೮ರಲ್ಲಿ ಸಹಕಾರಿ ಸಂಸ್ಥೆಗಳು ಗ್ರಾಮೀಣ ಪ್ರದೇಶದ ೧/೩ ಭಾಗದಷ್ಟು ಸಾಲವನ್ನು ಪೂರೈಸಿವೆ.

ಸರ್ಕಾರದ ಸಹಾಯ ಮತ್ತು ಪ್ರೋತ್ಸಾಹವಿದ್ದರೂ ಸಹಕಾರಿ ಸಂಘಗಳ ಪ್ರಗತಿಯ ಬಗ್ಗೆ ಸಮಾಧಾನಕರವಾದ ವರದಿ ದೊರೆಯುತ್ತಿಲ್ಲ. ಇದಕ್ಕೆ ಕಾರಣವೆಂದರೆ ಈ ಚಳವಳಿಯಲ್ಲಿಯ ಲೋಪದೋಷಗಳೇ. ಕೆಲವು ಮಹತ್ತ್ವವಾದ ಲೋಪದೋಷಗಳೆಂದರೆ—ಅವಧಿ ಮೀರಿದ ಸಾಲದ ಸಮಸ್ಯೆ, ಆಡಳಿತ ಅವ್ಯವಸ್ಥೆ, ಸಂಘಸಂಸ್ಥೆಗಳು ಕೆಲವೇ ಜನರ ಸ್ವತ್ತಾಗಿರುವುದು, ಪತ್ತಿನ ಕೊರತೆ, ಅಸಮರ್ಪಕವಾದ ಠೇವಣಿ ಶೇಖರಣೆ, ಸಾಲದ ಮೇಲಿನ ಅವಲಂಬನೆ ಮತ್ತು ತರಬೇತಿ ಇಲ್ಲದ ಆಡಳಿತ ವರ್ಗಗಳು—ಇವೇ ಮುಂತಾದವು. ಸಹಕಾರಿ ಚಳವಳಿ ದೇಶದ ಎಲ್ಲ ಭಾಗಗಳಲ್ಲಿಯೂ ಸಮರ್ಪಕವಾಗಿಲ್ಲ. ಪ್ರಗತಿಯ ದಿಶೆಯಲ್ಲಿ ಏರಿಳಿತ ಬಹಳ. ಮಹಾರಾಷ್ಟ್ರ, ಪಂಜಾಬ್, ಗುಜರಾತ್ ಮತ್ತು ಮೈಸೂರು ರಾಜ್ಯಗಳಲ್ಲಿ ಸಹಕಾರಿ ಚಳವಳಿಯ ಪ್ರಗತಿ ಸಮಾಧಾನಕರವಾಗಿದೆ. ಅಸ್ಸಾಂ, ಬಿಹಾರ, ರಾಜಸ್ಥಾನ, ಒರಿಸ್ಸ, ಮತ್ತು ಜಮ್ಮು-ಕಾಶ್ಮೀರ ರಾಜ್ಯಗಳಲ್ಲಿ ಪ್ರಗತಿ ಅತ್ಯಂತ ಕುಂಠಿತವಾಗಿದೆ. ಇಂದು ಸಹಕಾರಿ ರಂಗಕ್ಕೆ ದಕ್ಷ ಮತ್ತು ಪ್ರಾಮಾಣಿಕ ಸಾಮಾಜಿಕ ಕಾರ್ಯಕರ್ತರ ನೆರವು ತೀರಾ ಅವಶ್ಯವಾಗಿದೆ. ಈ ಆವಶ್ಯಕತೆಯನ್ನು ಪೂರೈಸಿದಲ್ಲಿ ಮಾತ್ರ ಸಹಕಾರಿವೃಕ್ಷ ಈ ದೇಶದಲ್ಲಿ ಬೇರೂರಿ ಬೆಳೆಯಲು ಸಾಧ್ಯ.

ಸರ್ಕಾರದ ಪ್ರೋತ್ಸಾಹ ನೀತಿ

ಹಿಂದೆ ವಾಣಿಜ್ಯ ಬ್ಯಾಂಕು ದೊಡ್ಡ ಪಟ್ಟಣಗಳಿಗಷ್ಟೇ ಸೀಮಿತವಾಗಿತ್ತು. ಆದರೆ ಇಂದು ಗ್ರಾಮಪ್ರದೇಶದಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖೆಗಳನ್ನು ತೆರೆಯುವುದು ತೀರಾ ಆವಶ್ಯಕವಾಗಿದೆ. ಈ ದಿಶೆಯಲ್ಲಿ ಅತಿ ದೊಡ್ಡ ಹೆಜ್ಜೆಯೆಂದರೆ ಸರ್ಕಾರ ೧೯೫೫ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯವನ್ನು ಸ್ಥಾಪಿಸಿದ್ದು. ಅನಂತರ, 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ಅದರ ಉಪಬ್ಯಾಂಕುಗಳು ಗ್ರಾಮಪ್ರದೇಶದಲ್ಲಿ ೧೯೫೯ ಮತ್ತು ೧೯೬೦ರಲ್ಲಿ ತಮ್ಮ ಶಾಖೆಗಳನ್ನು ತ್ವರಿತಗತಿಯಿಂದ ವಿಸ್ತರಿಸಿದವು. ೧೯೫೯ ರಿಂದ ೧೯೬೭ರ ಅವಧಿಯೊಳಗೆ ಈ ಬ್ಯಾಂಕುಗಳು ೧೭೩೭ ಶಾಖೆಗಳನ್ನು ಹೊಸದಾಗಿ ಪ್ರಾರಂಭಿಸಿದುವು. ಇವುಗಳಲ್ಲಿ

೭೦೪ (೪೦.೫%) ಶಾಖೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ (೧೦,೦೦೦ಕ್ಕಿಂತಲೂ ಕಡಿಮೆ ಜನವಸತಿಯಿರುವ ಸ್ಥಳಗಳಲ್ಲಿ) ಸ್ಥಾಪಿಸಲಾಯಿತು. ೧೯೫೫ರಿಂದ ೧೯೬೪ರ ವರೆಗೆ ಉಳಿದ ವಾಣಿಜ್ಯ ಬ್ಯಾಂಕುಗಳು ೨,೯೩೯ ಶಾಖೆಗಳನ್ನು ಸ್ಥಾಪಿಸಿದುವು. ಇವುಗಳಲ್ಲಿ ಗ್ರಾಮಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟ ಶಾಖೆಗಳ ಸಂಖ್ಯೆ ೬೦೩ ಮಾತ್ರ (೨೦.೫%). ೧೯೬೦ಕ್ಕಿಂತ ಮೊದಲು ವಾಣಿಜ್ಯ ಬ್ಯಾಂಕುಗಳು ಗ್ರಾಮಾಂತರ ಪ್ರದೇಶದಲ್ಲಿ ಶಾಖೆಗಳನ್ನು ತೆರೆದಿದ್ದು ಬಹಳ ಕಡಿಮೆ. ೧೯೬೨ರ ಅನಂತರ ರಿಸರ್ವ್ ಬ್ಯಾಂಕು ವಾಣಿಜ್ಯ ಬ್ಯಾಂಕುಗಳಿಗೆ, ಬ್ಯಾಂಕುಗಳಿಲ್ಲದ ಪ್ರದೇಶದಲ್ಲಿ ಅವುಗಳ ಶಾಖೆಗಳನ್ನು ತೆರೆಯಲು ಮಾರ್ಗದರ್ಶನ ಮಾಡುತ್ತಿದೆ. ಆದ್ದರಿಂದಲೇ ಅವು ಶಾಖೆಗಳನ್ನು ಆರಂಭಿಸುವ ಬಗ್ಗೆ ತಮ್ಮ ನೀತಿಯನ್ನು ಸಡಿಲಗೊಳಿಸಿವೆ; ಶಾಖೆಗಳು ತ್ವರಿತಗತಿಯಿಂದ ಗ್ರಾಮಾಂತರ ಪ್ರದೇಶಗಳಿಗೆ ಪಸರಿಸತೊಡಗಿವೆ. ೧೯೬೧ ರಿಂದ ೧೯೬೪ರ ವರೆಗೆ ವಾಣಿಜ್ಯ ಬ್ಯಾಂಕುಗಳು ಒಟ್ಟು ೧,೨೩೨ ಶಾಖೆಗಳನ್ನು ಬ್ಯಾಂಕುಗಳಿಲ್ಲದ ಪ್ರದೇಶಗಳಲ್ಲಿ ಸ್ಥಾಪಿಸಿದುವು. ರಾಷ್ಟ್ರೀಕರಣದ ಅನಂತರ ಈ ಕಾರ್ಯದಲ್ಲಿ ಹೆಚ್ಚಿನ ಪ್ರಗತಿಯನ್ನು ನಾವು ವೀಕ್ಷಿಸಬಹುದು.

ವಾಣಿಜ್ಯ ಬ್ಯಾಂಕುಗಳ ಸದ್ಯದ ನೀತಿ

ಈಗ ಸೇಕಡ ೧೮ರಷ್ಟು ವಾಣಿಜ್ಯ ಬ್ಯಾಂಕ್ ಶಾಖೆಗಳು ಗ್ರಾಮಾಂತರ ಪ್ರದೇಶದಲ್ಲಿವೆ (೧೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳು). ಅಲ್ಲದೆ, ಈ ಪ್ರದೇಶಗಳಿಂದ ಸಂಪತ್ತು ಪೇಟೆ ಪಟ್ಟಣಗಳಿಗೆ ಹರಿಯುತ್ತಿದೆ. ಇದಕ್ಕೆ ವಾಣಿಜ್ಯ ಬ್ಯಾಂಕುಗಳ ಯೋಜನೆಯೇ ಕಾರಣವೆನ್ನಬಹುದು. ೧೯೬೬ರ ಜನಸಂಖ್ಯೆಯ ಪ್ರಕಾರ ಠೇವಣಿ ಮತ್ತು ಸಾಲದ ಬಗ್ಗೆ ಅಂಕಿ–ಅಂಶಗಳು ದೊರೆಯುತ್ತವೆ. ಗ್ರಾಮಾಂತರ ಪ್ರದೇಶಕ್ಕೆ (೧೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ) ಠೇವಣಿ ೧೦೦ರಲ್ಲಿ ಸಾಲದ ಪ್ರಮಾಣ ೪೧. ಜನಸಂಖ್ಯೆ ೫೦,೦೦೦ಕ್ಕಿಂತ ಹೆಚ್ಚು ಇದ್ದ ಪ್ರದೇಶಕ್ಕೆ ಠೇವಣಿ ೧೦೦ಕ್ಕೆ ಸಾಲದ ಪ್ರಮಾಣ ೭೫.೨. ವಾಣಿಜ್ಯ ಬ್ಯಾಂಕುಗಳ ಒಟ್ಟು ಠೇವಣಿಯಲ್ಲಿ ಗ್ರಾಮೀಣ ಪ್ರದೇಶದ ಕೊಡುಗೆ ಸೇಕಡ ೩.೬. ಸಾಲದಲ್ಲಿ ಅವುಗಳ ಪಾಲು ಕೇವಲ ಸೇಕಡ ೨.೧. ಠೇವಣಿಯಲ್ಲಿ ಸಣ್ಣ ಪಟ್ಟಣಗಳ ಕೊಡುಗೆ ಸೇಕಡ ೧೫.೪. ಸಾಲದಲ್ಲಿ ಅವುಗಳ ಪಾಲು ಸೇಕಡ ೧೦.

ಗ್ರಾಮಪ್ರದೇಶದಲ್ಲಿ ವಾಣಿಜ್ಯ ಬ್ಯಾಂಕುಗಳು ಸಂಪತ್ತನ್ನು ಶೇಖರಿಸಿದ್ದಲ್ಲದೆ ಅದನ್ನು ನಗರಪ್ರದೇಶಗಳಿಗೆ ಸಾಗಿಸಿದುವು. ಪ್ರಾದೇಶಿಕ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳೊಡನೆ ವಿಲೀನೀಕರಣವಾದಮೇಲೆ ಈ ಕಾರ್ಯ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನಡೆಯಿತು. ಈ ವಿಲೀನೀಕರಣ ಪ್ರಾದೇಶಿಕ ಬ್ಯಾಂಕುಗಳ ಭದ್ರತೆಯನ್ನು ಹೆಚ್ಚಿಸಿ ಗ್ರಾಮಪ್ರದೇಶದ ಸಮಸ್ಯೆಯನ್ನು ಇನ್ನೂ ಜಟಿಲಗೊಳಿಸಿತು. ಗ್ರಾಮಪ್ರದೇಶದಿಂದ ನಗರಪ್ರದೇಶಕ್ಕೆ ಹರಿದ ಸಂಪತ್ತು ವಾಣಿಜ್ಯ ಬ್ಯಾಂಕುಗಳ

ಸಾಲ-ನೀತಿಯ ಮೇಲೆ ಮಹತ್ತ್ವದ ಪರಿಣಾಮವನ್ನುಂಟುಮಾಡಿದೆ. ನಗರ ಪ್ರದೇಶದ ಎಲ್ಲ ಉದ್ಯಮಗಳೂ ವಾಣಿಜ್ಯ ಬ್ಯಾಂಕಿನಿಂದ ಸಾಲ ಪಡೆದು ಅಭಿವೃದ್ಧಿ ಸಾಧಿಸಿದುವು. ನಗರಪ್ರದೇಶದಲ್ಲಿಯ ಈ ಸಂಪತ್ತುಕ್ರೋಡೀಕರಣ ಕ್ರಮಶಃ ಸರ್ಕಾರದ ಗಮನವನ್ನು ಸೆಳೆಯಿತು. ಸರ್ಕಾರ ವಾಣಿಜ್ಯ ಬ್ಯಾಂಕುಗಳಿಗೆ ಗ್ರಾಮೀಣ ಪ್ರದೇಶದಲ್ಲಿಯ ಉದ್ಯಮಗಳಾದ ವ್ಯವಸಾಯ, ಚಿಲ್ಲರೆ ವ್ಯಾಪಾರ, ಚಿಕ್ಕ ಉದ್ಯಮ ಮತ್ತು ಸಾಗಾಟ–ಸಾಧನೆಗಳಿಗೆ ಸಾಲವ್ಯವಸ್ಥೆ ಮಾಡಲು ಆದೇಶ ನೀಡಿತು.

೧೯೬೯ರ ಜುಲೈ ೧೯ರಂದು ಸರ್ಕಾರ ೫೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಠೇವಣಿಯನ್ನು ಹೊಂದಿದ್ದ ೧೪ ಮುಖ್ಯ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿತು. ಇದರಿಂದ ಸರ್ಕಾರ ೨,೭೪೧.೬೩ ಕೋಟಿ ರೂಪಾಯಿಗಳ ಠೇವಣಿಯನ್ನು ತನ್ನ ವಶಕ್ಕೆ ತೆಗೆದುಕೊಂಡಂತಾಯಿತು. ಈ ೧೪ ವಾಣಿಜ್ಯ ಬ್ಯಾಂಕುಗಳ ಠೇವಣಿ ಒಟ್ಟು ದೇಶದಲ್ಲಿಯ ಸೇಕಡ ೮೭ರಷ್ಟು ಆಗುತ್ತದೆ. ಅಲ್ಲದೆ ಸೇಕಡ ೮೦ರಷ್ಟು ವಾಣಿಜ್ಯ ಬ್ಯಾಂಕುಗಳ ಶಾಖೆಯನ್ನು ತನ್ನ ವಶಕ್ಕೆ ತೆಗೆದುಕೊಂಡಂತಾಯಿತು.

ರಾಷ್ಟ್ರೀಕರಣದಿಂದ ಬ್ಯಾಂಕ್ ಉದ್ಯಮ ಗ್ರಾಮಪ್ರದೇಶವನ್ನು ಇನ್ನೂ ತ್ವರಿತಗತಿಯಿಂದ ಪ್ರವೇಶಿಸಲು ಸಾಧ್ಯ. ಇದರ ಮೊದಲ ಹೆಜ್ಜೆಯಾಗಿ ೧೯೭೦ರ ಮೊದಲ ಭಾಗದಲ್ಲಿ ಸರ್ಕಾರ ೬೦೦ ಹೊಸ ಬ್ಯಾಂಕ್ ಶಾಖೆಗಳನ್ನು ತೆರೆಯಲು ಉದ್ದೇಶಿಸಿತ್ತು. ೧೯೬೯ರಲ್ಲಿ ೯೭೪ ಶಾಖೆಗಳನ್ನು ಪ್ರಾರಂಭಿಸಲಾಯಿತು. ಮುಂಬರುವ ವರ್ಷಗಳಲ್ಲಿ ಹೊಸ ಶಾಖೆಗಳನ್ನು ಪ್ರಾರಂಭಿಸುವ ಉದ್ದೇಶ ದ್ವಿಗುಣಗೊಳ್ಳುವ ನಿರೀಕ್ಷೆ ಇದೆ. ವಾಣಿಜ್ಯ ಬ್ಯಾಂಕು ೫.೫ ಲಕ್ಷ ಗ್ರಾಮೀಣ ಜನತೆಯ ಸಾಲದ ಆವಶ್ಯಕತೆಯನ್ನು ಪೂರೈಸುವುದೆಂದು ನಂಬಬಹುದು. ಎಲ್ಲ ಹಳ್ಳಿಗಳಲ್ಲಿಯೂ ಬ್ಯಾಂಕ್ ಶಾಖೆಯನ್ನು ತೆರೆಯುವುದು ಸಾಧ್ಯವಾಗಲಾರದು. ಏಕೆಂದರೆ ಸೇಕಡ ೮೩ರಷ್ಟು ಹಳ್ಳಿಗಳ ಜನಸಂಖ್ಯೆ ೧೦೦೦ಕ್ಕಿಂತ ಕಡಿಮೆ. ಎಲ್ಲ ಹಳ್ಳಿಗಳಲ್ಲಿಯೂ ಶಾಖೆಗಳನ್ನು ತೆರೆಯುವ ಆವಶ್ಯಕತೆಯೂ ಇಲ್ಲ. ಮಧ್ಯವರ್ತಿ ಮಹತ್ತ್ವದ ಗ್ರಾಮದಲ್ಲಿ ಶಾಖೆಯನ್ನು ಪ್ರಾರಂಭಿಸಿದರೆ ಅದು ನೆರೆಹೊರೆ ಹಳ್ಳಿಗಳ ಆವಶ್ಯಕತೆಯನ್ನೂ ಸುಲಭವಾಗಿ ಪೂರೈಸಬಹುದು. ಈ ಆವಶ್ಯಕತೆಯನ್ನು ಪೂರೈಸಲಾದರೂ ಇನ್ನು ಕೆಲವೇ ವರ್ಷಗಳಲ್ಲಿ ಹೆಚ್ಚು ಹೆಚ್ಚು ವಾಣಿಜ್ಯ ಬ್ಯಾಂಕುಗಳ ಶಾಖೆಗಳನ್ನು ತೆರೆಯುವುದು ತೀರಾ ಆವಶ್ಯಕ. ಆಗ ರಾಷ್ಟ್ರೀಯ ಉಳಿತಾಯದ ಪ್ರಮಾಣ ಹೆಚ್ಚುವುದು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸಾಲ ಸುಲಭದಲ್ಲಿ ದೊರೆಯುವುದು.

ಇಲ್ಲಿಯ ವರೆಗೆ ಗ್ರಾಮಪ್ರದೇಶದಲ್ಲಿ ವಾಣಿಜ್ಯಬ್ಯಾಂಕುಗಳ ಬೆಳವಣಿಗೆ ಮತ್ತು ಸ್ಥಿತಿಗತಿಗಳನ್ನು ಪರಿಶೀಲಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕ್ ಉದ್ಯಮ

ವನ್ನು ಪಸರಿಸಲು ಯಾವ ಯಾವ ತೊಂದರೆಗಳಿವೆ ಎನ್ನುವುದನ್ನು ವಿವೇಚಿಸುವುದು ಅಗತ್ಯ. ಈ ಸಮಸ್ಯೆಗಳನ್ನು ಮುಖ್ಯವಾಗಿ ಈ ರೀತಿ ವಿಂಗಡಿಸಬಹುದು :

೧ ಸಂಘಟನೆಯ ಸಮಸ್ಯೆಗಳು
೨ ಸಾರಿಗೆ-ಸಂಪರ್ಕ ಮತ್ತು ನಿಯಂತ್ರಣ ಸಮಸ್ಯೆ
೩ ನಿರ್ವಹಣೆಯ ವೆಚ್ಚ, ಲಾಭದಾಯಕತೆ

ಸಂಘಟನೆಯ ಸಮಸ್ಯೆಗಳು

(i) ಸ್ಥಳಸೌಕರ್ಯ

ಹಳ್ಳಿಗಳಲ್ಲಿಯ ಬ್ಯಾಂಕ್ ಶಾಖೆ ಪಟ್ಟಣದವುಗಳಿಗಿಂತ ಹಲವು ರೀತಿಗಳಲ್ಲಿ ಭಿನ್ನವಾಗಿರುತ್ತದೆ. ಅವುಗಳಲ್ಲಿ ಸ್ಥಳಾವಕಾಶ, ಕೆಲಸದ ವೇಳೆ, ವ್ಯವಹಾರದ ಪದ್ಧತಿ ಹಾಗೂ ವ್ಯವಹಾರ ಭಾಷೆಗಳು ಮುಖ್ಯವಾದವುಗಳು. ಮೊದಲನೆಯದಾಗಿ ಸ್ಥಳ ಸೌಕರ್ಯವನ್ನು ವಿಚಾರಿಸಿದಾಗ ಇದು ಪಟ್ಟಣದಲ್ಲಿಗಿಂತ ತೀರ ಭಿನ್ನವಾಗಿರುತ್ತದೆ. ಪಟ್ಟಣದಲ್ಲಿ ಬ್ಯಾಂಕ್ ಎಂದೊಡನೆ ಎಲ್ಲ ತರದ ವ್ಯವಹಾರಗಳನ್ನು ನಡೆಸಲು ಅಗತ್ಯವಾದ ಭವನ, ಶಾಖಾವ್ಯವಸ್ಥಾಪಕರಿಗೆ ಹತ್ತಿರವೇ ಬೇಕಾಗುವ ಕೋಣೆ, ಹಣವನ್ನು ಭದ್ರವಾಗಿಡಲು ಅವಶ್ಯವಾದ ಕೊಠಡಿ, ಸಿಬ್ಬಂದಿ ಕೆಲಸಮಾಡುವ ಕೋಣೆ—ಇವು ನಮ್ಮ ಕಣ್ಣೆದುರಿಗೆ ನಿಲ್ಲುವುವು. ಆದರೆ ಗ್ರಾಮೀಣ ಶಾಖೆಗಳಲ್ಲಿ ಈ ವ್ಯವಸ್ಥೆಗಳು ಅವಶ್ಯವಿಲ್ಲ. ಈ ಸಮಸ್ಯೆ ಅಷ್ಟೇನೂ ದೊಡ್ಡದಲ್ಲ.

ಗ್ರಾಮಪ್ರದೇಶದಲ್ಲಿ ಬ್ಯಾಂಕ್ ಶಾಖೆಯೊಂದನ್ನು ತೆರೆಯಲು ಸ್ಥಳ ದೊರಕುವ ಕಟ್ಟಡಗಳು ಕಡಿಮೆ, ನಿಜ. ಇದನ್ನು ಹೊಂದಿರುವವರು ಪರಿಸ್ಥಿತಿಯ ದುರುಪಯೋಗಪಡಿಸಿಕೊಳ್ಳಲು ಹೆಚ್ಚು ಬಾಡಿಗೆ ಕೇಳಬಹುದು. ಬ್ಯಾಂಕು ತನ್ನದೇ ಆದ ಕಟ್ಟಡ ಕಟ್ಟಿಸಿಕೊಳ್ಳಬಹುದಾದರೂ ಅದು ತನ್ನ ಬಂಡವಾಳವನ್ನು ಇವುಗಳ ಮೇಲೆ ಆರಂಭದಲ್ಲೇ ತೊಡಗಿಸುವುದು ಲಾಭಕರವಲ್ಲ.

ಈ ಸಮಸ್ಯೆಯನ್ನು ಸರ್ಕಾರದ ಲೋಕಸೇವಾ ಇಲಾಖೆ ಪರಿಹರಿಸಬಲ್ಲುದು. ವಾಣಿಜ್ಯಬ್ಯಾಂಕುಗಳ ಆವಶ್ಯಕತೆಗೆ ತಕ್ಕಂತೆ ಸರ್ಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿ ಬಾಡಿಗೆಗೆ ಕೊಡಬಹುದು. ಅಲ್ಲದೆ ಜೀವವಿಮಾ ಕಾರ್ಪೊರೇಷನ್ ಮತ್ತು ಸಹಕಾರಿ ಗೃಹನಿರ್ಮಾಣ ಸಂಸ್ಥೆಗಳು ತಮ್ಮ ಹೆಚ್ಚಿನ ಹಣವನ್ನು ದೀರ್ಘಾವಧಿಯ ಬಂಡವಾಳವನ್ನಾಗಿ ಮಾರ್ಪಡಿಸಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಕಟ್ಟಡ ಕಟ್ಟಿ ವಾಣಿಜ್ಯಬ್ಯಾಂಕುಗಳಿಗೆ ಬಾಡಿಗೆಗೆ ಕೊಡುವುದು ಸೂಕ್ತ. ಅಲ್ಲದೆ ಈ ದೀರ್ಘಾವಧಿ ಬಂಡವಾಳ ಹೂಡುವಿಕೆ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಈ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ಗ್ರಾಮೀಣ ಪ್ರದೇಶಗಳಿಗೆ ವಾಣಿಜ್ಯೋದ್ಯಮ ಹರಡುವಂತೆ ಮಾಡಬಹುದು.

(ii) ಭದ್ರತೆ

ಗ್ರಾಮೀಣ ಬ್ಯಾಂಕ್ ಶಾಖೆಗೆ ಭದ್ರತೆ ಒದಗಿಸುವುದು ಅತಿದೊಡ್ಡ ಸಮಸ್ಯೆ. ಹೆಚ್ಚಿನ ಗ್ರಾಮೀಣ ಪ್ರದೇಶಗಳಿಗೆ ಪೋಲಿಸ್ ರಕ್ಷಣೆಯಿರುವುದಿಲ್ಲ. ಆದ್ದರಿಂದ ಬ್ಯಾಂಕು ತನ್ನ ಭದ್ರತೆಯನ್ನು ತಾನೇ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ ಸಶಸ್ತ್ರರಕ್ಷಕರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಇದರಿಂದ ಆಡಳಿತ ವೆಚ್ಚ ಹೆಚ್ಚಾಗುತ್ತದೆ. ಹಣವನ್ನು ಹಳ್ಳಿಯಿಂದ ಹಳ್ಳಿಗೆ ಅಥವಾ ಪಟ್ಟಣಕ್ಕೆ ಸಾಗಿಸುವುದು ತೀರ ದುಸ್ತರವಾದ ಕೆಲಸ.

(iii) ಸಿಬ್ಬಂದಿ

ಈ ಶಾಖೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಗ್ರಾಮಪ್ರದೇಶದ ಸಂಸ್ಕಾರ ಅವಶ್ಯ. ಭಿನ್ನವಾದ ದೃಷ್ಟಿ, ಒಳ್ಳೆಯ ತರಬೇತಿ ಮತ್ತು ಕೆಲಸ ಮಾಡುವ ಉತ್ಸಾಹ ಬೇಕೇ ಬೇಕು. ಗ್ರಾಮಪ್ರದೇಶದ ಹಿನ್ನೆಲೆಯಿರುವ ಸ್ಥಳೀಯರೇ ಈ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸಬಲ್ಲರು. ಹಳ್ಳಿಗಳ ಆರ್ಥಿಕ ಸ್ಥಿತಿಗತಿ ಮತ್ತು ಈ ಜನರ ಆರ್ಥಿಕ ಜ್ಞಾನವನ್ನು ಸ್ಥಳಿಕರೇ ಸರಿಯಾಗಿ ತಿಳಿದಿರುತ್ತಾರೆ. ಬ್ಯಾಂಕ್ ವ್ಯವಹಾರದ ದೃಷ್ಟಿಯಿಂದ ಇದು ಅತ್ಯಂತ ಅವಶ್ಯ. ಆಡಳಿತ ಸಿಬ್ಬಂದಿಯ ಸಂಖ್ಯೆ ಕಡಿಮೆಯಿರುವುದರಿಂದ ಸಿಬ್ಬಂದಿಯವರು ಎಲ್ಲ ಕೆಲಸಗಳನ್ನೂ ಕಲಿತಿರಬೇಕು. ಒಂದೇ ಕೆಲಸದಲ್ಲಿ ಪ್ರಾವೀಣ್ಯಗಳಿಸುವ ಆವಶ್ಯಕತೆ ಇರುವುದಿಲ್ಲ. ಅಲ್ಲದೆ ಅನಕ್ಷರಸ್ಥ ಗ್ರಾಹಕರು ಹೆಚ್ಚು ಹೆಚ್ಚು ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ. ಇದು ಆಡಳಿತ ಸಿಬ್ಬಂದಿಯ ಹೊಣೆಗಾರಿಕೆಯನ್ನು ಇನ್ನೂ ಹೆಚ್ಚಿಸುತ್ತದೆ. ಗಿರಾಕಿಗಳನ್ನು ಗುರುತಿಸುವುದಕ್ಕೆ ಅನುಕೂಲವಾಗುವಂತೆ ಛಾಯಾಚಿತ್ರ ಅಂಟಿಸಿದ ಪಾಸ್ ಪುಸ್ತಕಗಳನ್ನು ಹಂಚಿ ಅವರು ಹಣ ಪಡೆಯುವಾಗ ಮತ್ತು ಹಣ ತುಂಬುವಾಗ ಅದನ್ನು ತರುವಂತೆ ಸೂಚಿಸಬೇಕು. ಅನಕ್ಷರಸ್ಥ ಗಿರಾಕಿಗಳನ್ನು ಮೋಸಗಾರರಿಂದ ರಕ್ಷಿಸಲು ಬ್ಯಾಂಕ್ ಸಿಬ್ಬಂದಿ ಯಾವಾಗಲೂ ಎಚ್ಚರವಾಗಿರಬೇಕು.

(iv) ಸಿಬ್ಬಂದಿಯ ನೇಮಕ

ಸ್ಥಳೀಯ ಉಮೇದುವಾರರಿಗೆ ಪ್ರಾಶಸ್ತ್ಯ ಕೊಡಲು ಅನುಕೂಲವಾಗುವಂತೆ ಬ್ಯಾಂಕುಗಳು ತಮ್ಮ ನೇಮಕ ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಈಗ ಭಾರತೀಯ ಬ್ಯಾಂಕುಗಳು ನೇಮಕ ಮಾಡಿಕೊಳ್ಳಬೇಕಾದರೆ ಅಭ್ಯರ್ಥಿಗಳಿಗೆ ತಮ್ಮದೇ ಆದ ಪರೀಕ್ಷೆ ಮತ್ತು ಸಂದರ್ಶನಗಳನ್ನು ಏರ್ಪಡಿಸುತ್ತಾರೆ. ಸ್ವಾಭಾವಿಕವಾಗಿ ಈ ನೀತಿಯಲ್ಲಿ ಪಟ್ಟಣದ ಅಭ್ಯರ್ಥಿಗಳು ಗ್ರಾಮೀಣ ಅಭ್ಯರ್ಥಿಗಳಿಗಿಂತ ಹೆಚ್ಚು ಅರ್ಹತೆ ತೋರಿ ಆಯ್ಕೆಯಾಗುತ್ತಾರೆ. ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡಲು ಅವರು ನಿರಾಸಕ್ತರಾಗಿರುತ್ತಾರೆ. ಒಮ್ಮೆ ಪರಿಸ್ಥಿತಿಯ ಒತ್ತಡದಿಂದ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ಪ್ರಸಂಗ ಬಂದರೂ ಅವರು

ಗ್ರಾಮೀಣ ಜನ ಮತ್ತು ಸಮಸ್ಯೆಗಳೊಂದಿಗೆ ಸಾಮಾನ್ಯವಾಗಿ ಒಂದಾಗಲಾರರು. ಇವರಿಂದ ಬ್ಯಾಂಕ್ ಕೆಲಸದಲ್ಲಿ ದಕ್ಷತೆ ಹೆಚ್ಚಬಹುದಾದರೂ ಅಭಿವೃದ್ಧಿಗೆ ನೆರವಾಗದೆಹೋಗಬಹುದು. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು, ನೇಮಕ ಮಾಡುವಾಗ ಪ್ರತಿಭಾನ್ವಿತ ಗ್ರಾಮೀಣ ಅಭ್ಯರ್ಥಿಗಳನ್ನು ಆರಿಸಲು ಅವಕಾಶವಾಗುವಂಥ ನೀತಿಯನ್ನೇ ಪಾಲಿಸುವುದು ಬ್ಯಾಂಕ್ ಉದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಸಮಂಜಸವಾದದ್ದು. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಹೊಸ ವಾತಾವರಣ ನಿರ್ಮಿಸಲು ಸಾಧ್ಯ.

(v) ತರಬೇತಿ

ತ್ವರಿತಗತಿಯಿಂದ ಗ್ರಾಮೀಣ ಬ್ಯಾಂಕ್ ಶಾಖೆಯನ್ನು ಪ್ರಾರಂಭಿಸುವ ಉದ್ದೇಶ ಹೊಂದಿದಾಗ ಸಿಬ್ಬಂದಿಗೆ ಆವಶ್ಯಕವಾದ ತರಬೇತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲೇಬೇಕು. ಗ್ರಾಮೀಣ ಆಡಳಿತ ಸಿಬ್ಬಂದಿಗೆ ದಿನನಿತ್ಯದ ಎಲ್ಲ ಕೆಲಸಗಳೂ ಗೊತ್ತಿರುವುದು ಅವಶ್ಯ. ಈ ಕಾರಣದಿಂದ ಅವರಿಗೆ ಶಾಖೆ ತೆರೆಯುವ ಮೊದಲೇ ತರಬೇತಿ ಕೊಟ್ಟು ಅಣಿಗೊಳಿಸಿಕೊಳ್ಳುವುದು ಉಚಿತ. ದೇಶದಲ್ಲಿ ಅನೇಕ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಬೇಕು. ಅಲ್ಲದೆ ಅವಶ್ಯವಾದ ಎಲ್ಲ ಮಾಹಿತಿಗಳನ್ನು ಪೂರೈಸಬೇಕು. ಇನ್ನೂ ಒಳ್ಳೆಯ ಪದ್ಧತಿಯೆಂದರೆ ಸಿಬ್ಬಂದಿಯನ್ನು ಕೆಲಸದ ಮೂಲಕವೇ ತರಬೇತಿಗೊಳಿಸುವುದು. ಅಂದರೆ ದೊಡ್ಡ ಮತ್ತು ಮಧ್ಯಮತರದ ಬ್ಯಾಂಕುಗಳಲ್ಲಿ ಈ ಅಭ್ಯರ್ಥಿಗಳನ್ನು ಕೆಲಸಕ್ಕೆ ತೊಡಗಿಸಿ, ಅಲ್ಲಿ ಅವರಿಗೆ ವಿವಿಧ ಕೆಲಸಗಳ ಮಾಹಿತಿ ಮಾಡಿಕೊಡುವುದು ; ಅವರ ಮೇಲ್ವಿಚಾರಣೆಮಾಡಲು ಮತ್ತು ಸೂಕ್ತ ಸಲಹೆ ಕೊಡಲು ನುರಿತ ಬ್ಯಾಂಕ್ ಕೆಲಸಗಾರರನ್ನು ನೇಮಿಸುವುದು. ಈ ತರಬೇತಿ ಅಭ್ಯರ್ಥಿಗಳು ದಿನದ ವೇಳೆಯಲ್ಲಿ ಬ್ಯಾಂಕಿನಲ್ಲಿ ಕೆಲಸಮಾಡಬೇಕು ಮತ್ತು ಕಚೇರಿಯ ಕೆಲಸದ ಅವಧಿಯ ಅನಂತರ ತರಬೇತಿ ಪಾಠಗಳನ್ನು ಪರಿಣತರಿಂದ ಪಡೆಯುವ ವ್ಯವಸ್ಥೆ ಇರಬೇಕು. ತರಿಬೇತಿ ಅಭ್ಯರ್ಥಿಗಳು ಕೆಲಸ ಮಾಡುವಾಗ ಮೇಲ್ವಿಚಾರಕ ಅವರನ್ನು ಕಾಳಜಿಪೂರ್ವಕ ಗಮನಿಸಿ ಅವರನ್ನು ಕೆಲಸಕ್ಕೆ ಅಗತ್ಯವಾಗುವಂತೆ ಮಾರ್ಪಡಿಸಬೇಕು. ಅಲ್ಲದೆ ಅವರಿಗೆ ಎಲ್ಲ ವ್ಯವಹಾರದಲ್ಲೂ ಸೂಕ್ತ ಮಾರ್ಗದರ್ಶನ ನೀಡಬೇಕು.

ಸಾರಿಗೆ–ಸಂಪರ್ಕ ಮತ್ತು ನಿಯಂತ್ರಣ

ಬ್ಯಾಂಕ್ ಶಾಖೆಗಳನ್ನು ದೂರದ ಗ್ರಾಮಪ್ರದೇಶಗಳಿಗೆ ವಿಸ್ತರಿಸುವಾಗ ಸಂಪರ್ಕದ್ದೊಂದು ದೊಡ್ಡ ಸಮಸ್ಯೆ. ಬ್ಯಾಂಕ್ ಆಡಳಿತ ಮಂಡಳಿ ರೂಪಿಸಿದ ನೀತಿಯನ್ನು ಬ್ಯಾಂಕ್ ಸಿಬ್ಬಂದಿ ವರ್ಗ ಕೂಡಲೆ ಆಚರಣೆಯಲ್ಲಿ ತರಬೇಕಾಗುತ್ತದೆ. ಈ ನೀತಿ

ಗಳನ್ನು ಶಾಖಾ ಸಿಬ್ಬಂದಿಗೆ ಕೂಡಲೇ ತಿಳಿಸಬೇಕಾಗುತ್ತದೆ. ಎಷ್ಟೋ ಸಲ ಈ ನೀತಿನಿರೂಪಣೆ ಮಾಡಬೇಕಾದರೆ ಶಾಖಾ ಸಿಬ್ಬಂದಿಯೊಡನೆ ಚರ್ಚಿಸಬೇಕಾಗುತ್ತದೆ. ಇಲ್ಲವೆ ಲಿಖಿತ ಮೂಲಕವಾಗಿ ತಿಳಿಸಬೇಕಾಗುವುದು. ಆಗ ದೂರದ, ಸಂಪರ್ಕವಿಲ್ಲದ ಶಾಖೆ ತೊಂದರೆ ಅನುಭವಿಸಬೇಕಾಗುತ್ತದೆ.

ಇಲ್ಲಿಯ ವರೆಗೆ ಈ ದೇಶದಲ್ಲಿ ವಾಣಿಜ್ಯ ಬ್ಯಾಂಕುಗಳು ನೇರವಾಗಿ ತಮ್ಮ ಎಲ್ಲ ಶಾಖೆಗಳನ್ನು ವೀಕ್ಷಿಸುತ್ತಿದ್ದುವು. ಶಾಖೆಗಳ ಆಡಳಿತಗಾರನಿಗೆ ನಿಯಮಿತವಾದ ಅಧಿಕಾರ ಮಾತ್ರವಿತ್ತು. ಎಲ್ಲ ಮಹತ್ತ್ವದ ವಿಚಾರಗಳನ್ನೂ ಅವನು ತನ್ನ ಕೇಂದ್ರ ಕಚೇರಿಗೆ ಬಿಡಬೇಕಾಗಿತ್ತು. ನಿರ್ಣಯ ತೆಗೆದುಕೊಳ್ಳುವುದು ಕೇಂದ್ರದ ಹೊಣೆ. ಕೆಲವು ವಾಣಿಜ್ಯ ಬ್ಯಾಂಕುಗಳು ಪ್ರಾದೇಶಿಕ ಹತೋಟಿ ಕೇಂದ್ರಗಳನ್ನು ನಿಯಮಿಸಿವೆ. ಇವು ಆಡಳಿತ ಹೊಣೆಗಾರಿಕೆಯಲ್ಲಿ ಇನ್ನೊಂದು ಮಾಧ್ಯಮಿಕ ಸಂಸ್ಥೆ. ಕೆಲವು ಅತಿಮಹತ್ತ್ವದ ವಿಷಯಗಳನ್ನು ಈ ಕೇಂದ್ರ ಸಹ ಮುಖ್ಯ ಕಚೇರಿಗೇ ಬಿಡಬೇಕಾಗುವುದು. ಆದರೆ ಕೆಲವು ಸೀಮಿತ ವಿಷಯಗಳಲ್ಲಿ ಈ ಪ್ರಾದೇಶಿಕ ಶಾಖೆಗಳಿಗೆ ಹೆಚ್ಚಿನ ಅಧಿಕಾರವಿದೆ. ಈ ವ್ಯವಸ್ಥೆ ತುಂಬ ಚೆನ್ನಾಗಿ ಕೆಲಸ ಮಾಡಿದೆ. ಅಲ್ಲದೆ ಬ್ಯಾಂಕಿನ ವ್ಯವಹಾರ ಸೀಮಿತ ಪ್ರದೇಶದಲ್ಲಿ ಸಾಲ ಪೂರೈಸುತ್ತದೆ. ಈ ವ್ಯವಹಾರದ ಪರಿಣಾಮವೂ ತುಂಬ ಕಡಿಮೆಯಿರುವುದರಿಂದ ಈ ಪ್ರಾದೇಶಿಕ ಕೇಂದ್ರಗಳು ದಕ್ಷತೆಯಿಂದ ಕೆಲಸಮಾಡಲು ಅನುಕೂಲವಾಯಿತು. ಆಗ ಶಾಖಾ ಬ್ಯಾಂಕುಗಳು ವಿಕೇಂದ್ರೀಕೃತ ಉದ್ಯೋಗಗಳಾದ ವ್ಯವಸಾಯ, ಸಣ್ಣಕೈಗಾರಿಕೆ, ಸಣ್ಣ ವ್ಯಾಪಾರೋದ್ಯಮಗಳಿಗೆ ಹಣ ಪೂರೈಸಲು ಪ್ರಾರಂಭಿಸಿದುವು. ಅಧಿಕಾರ ವಿಕೇಂದ್ರೀಕರಣಗೊಳಿಸುವುದು ಈ ದಿಶೆಯಲ್ಲಿ ಅತ್ಯಂತ ಅವಶ್ಯವಾದ ಹೆಜ್ಜೆ ಎಂದೆನಿಸುವುದು. ಇದರಿಂದ ಶಾಖಾ ಬ್ಯಾಂಕುಗಳ ವ್ಯವಹಾರವನ್ನು ಅತ್ಯಂತ ಸಮೀಪದಿಂದ ಮತ್ತು ಜಾಗರೂಕತೆಯಿಂದ ಪರಿಶೀಲಿಸಲು ಸಾಧ್ಯ. ಅಲ್ಲದೆ ಈ ದಿಶೆಯಲ್ಲಿ ಬ್ಯಾಂಕು ಸರಿಯಾದ ಯೋಜನೆಗಳನ್ನು ಸಹ ರೂಪಿಸಿಕೊಳ್ಳಬಲ್ಲುದು. ಈ ಪ್ರಾದೇಶಿಕ ಕೇಂದ್ರ ಬಹಳ ಉಪಯುಕ್ತವೂ ಆಗಬಲ್ಲುದು. ಆಗ ಈ ಕೇಂದ್ರಗಳು ಆಡಳಿತ ಮತ್ತು ಯೋಜನೆಯ ದೃಷ್ಟಿಯಿಂದ ಮಹತ್ತ್ವದ ಘಟಕಗಳಾಗಬಲ್ಲುವು. ಈ ಪ್ರಾದೇಶಿಕ ಕೇಂದ್ರಗಳನ್ನು ಜಿಲ್ಲೆಗೊಂದರಂತೆ ಪ್ರಾರಂಭಿಸುವುದು ಉಚಿತ ಜಿಲ್ಲಾವ್ಯವಸ್ಥಾಪಕನನ್ನು ನೇಮಿಸಿ ಅವನಿಗೆ ನಿರ್ಣಯ ತೆಗೆದುಕೊಳ್ಳುವ ಅಧಿಕಾರ, ಮಾರ್ಗದರ್ಶನ ಮತ್ತು ಶಾಖೆಗಳನ್ನು ಹತೋಟಿಯಲ್ಲಿಡುವ ಅಧಿಕಾರವನ್ನು ಒಪ್ಪಿಸಬಹುದು. ಜಿಲ್ಲಾವ್ಯವಸ್ಥಾಪಕ ಜಿಲ್ಲೆಯ ಆರ್ಥಿಕ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡು ಎಲ್ಲ ರಂಗಗಳಿಗೂ ಅವುಗಳ ಆವಶ್ಯಕತೆಗೆ ತಕ್ಕಂತೆ ಸಾಲ ದೊರೆಯುವಂತೆ ಮಾಡುವುದು ಆವಶ್ಯಕ. ಜಿಲ್ಲೆಯ ಅಭಿವೃದ್ಧಿಗೆ ಸಾಧ್ಯವಾದಷ್ಟು ಸಹಾಯ ಮತ್ತು ಪ್ರೋತ್ಸಾಹ ದೊರೆಯುವಂತೆ ಮಾಡಬೇಕು.

ಅಧಿಕಾರ ವಿಕೇಂದ್ರೀಕರಣದಿಂದ ಹಲವು ಸಮಸ್ಯೆಗಳು ಉದ್ಭವಿಸುತ್ತವೆ.

ಬ್ಯಾಂಕು ತನ್ನ ಏಕರೂಪವಾದ ನೀತಿಯನ್ನು ತ್ಯಾಗಮಾಡಬೇಕಾಗುವುದು. ಏಕೆಂದರೆ ನೀತಿ ರೂಪಿಸುವುದು ಒಂದು ವ್ಯಕ್ತಿಯಿಂದ ಇನ್ನೊಂದು ವ್ಯಕ್ತಿಗೆ ಬದಲಾಗುವುದು. ಈ ವ್ಯತ್ಯಾಸವನ್ನು ಜಿಲ್ಲಾವ್ಯವಸ್ಥಾಪಕರು ತಮ್ಮ ವಿಚಾರ ಮತ್ತು ಅನುಭವಗಳನ್ನು ಚರ್ಚಿಸಿಕೊಂಡಾಗ ಕೆಲಮಟ್ಟಿಗೆ ತಡೆಗಟ್ಟಬಹುದು. ಅಧಿಕಾರದ ವಿಕೇಂದ್ರೀಕರಣ ಮತ್ತು ಪ್ರತಿನಿಯೋಜನೆಗಳು (ಡೆಲಿಗೇಷನ್) ಈ ದಿಶೆಯಲ್ಲಿ ಹೆಚ್ಚಿನ ಯಶಸ್ಸನ್ನು ತರುವುವೆಂಬುದರಲ್ಲಿ ಸಂಶಯವಿಲ್ಲ. ಬ್ಯಾಂಕಿನ ಮೇಲ್ಮಟ್ಟದ ವ್ಯವಸ್ಥಾಪಕರು ಎಲ್ಲ ವಿಷಯಗಳಲ್ಲಿ ಒಂದು ಸ್ಥೂಲನೀತಿಯನ್ನು ರೂಪಿಸಬಹುದು. ಅಲ್ಲದೆ ಈ ನೀತಿ ಪ್ರತ್ಯಕ್ಷ ಅನುಭವದಿಂದ ರೂಪಿಸಲ್ಪಡುವುದರಿಂದ ಇದನ್ನು ಜಾರಿಯಲ್ಲಿ ತರುವುದು ತೀರಾ ಸುಲಭ.

ಬ್ಯಾಂಕ್ ಶಾಖೆಗಳನ್ನು ಹರಡುವಾಗ ಅನೇಕ ಸಮಸ್ಯೆಗಳು ಏಳುವುವು. ಅತ್ಯಂತ ಗಂಭೀರ ಮತ್ತು ಅತ್ಯವಸರವಾದ ಸಮಸ್ಯೆಗಳನ್ನು ಶಾಖೆ–ಶಾಖೆಗಳ ನಡುವಣ ವ್ಯವಹಾರದಿಂದ ಸುಲಭಗೊಳಿಸಬಹುದು. ಆಡಳಿತ ಮತ್ತು ಕೆಲಸದಲ್ಲಿ ಹೆಚ್ಚು ಹೊರೆಯಾಗುವುದು ಸ್ವಾಭಾವಿಕ. ಗಣಕೀಕರಣ (ಕಂಪ್ಯೂಟರೈಸೇಷನ್) ಈ ಸಮಸ್ಯೆಯನ್ನು ಬೇಗ ಪರಿಹರಿಸಬಲ್ಲುದು. ಭಾರತದಂಥ ದೇಶದಲ್ಲಿ ಸಂಪರ್ಕ ಮತ್ತು ಸಾರಿಗೆ ಬಹಳ ಅಸಮರ್ಪಕವಾಗಿರುವುದರಿಂದ ಗಣಕೀಕರಣ ಹೆಚ್ಚು ಫಲ ನೀಡಬಲ್ಲುದು. ಸಮರ್ಥವಾದ ತಂತಿವ್ಯವಸ್ಥೆ ಇಲ್ಲದಿರುವುದರಿಂದ ಸಮಸ್ಯೆ ಸಮಯಕ್ಕೆ ಸರಿಯಾಗಿ ಗಣಕಕೇಂದ್ರಕ್ಕೆ ದೊರೆಯುವುದಿಲ್ಲ. ಭಾರತದ ಗಾತ್ರದ ದೃಷ್ಟಿಯಿಂದ ಬಹಳಷ್ಟು ಗಣಕೀಕರಣ ಕೇಂದ್ರಗಳು ಸ್ಥಾಪಿಸಲ್ಪಡುವುದು ಅವಶ್ಯ. ಅವು ಶಾಖೆಗಳ ಸಮನ್ವಯ ಸಮಸ್ಯೆಗಳನ್ನು ಸರಿಯಾಗಿ ಪರಿಹರಿಸಬಲ್ಲುವು. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಹರಡಿದ ಶಾಖೆಗಳು ಕೆಲಮಟ್ಟಿಗೆ ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಬಲ್ಲವು. ಇನ್ನು ಗಣಕಯಂತ್ರ ಮತ್ತು ಅದಕ್ಕೆ ಸಂಬಂಧಿಸಿದ ಸಲಕರಣೆಗಳ ದರ ಬಹಳ ವೆಚ್ಚದ್ದು. ಇದು ಒಂದು ಶಾಖೆಯ ಆರ್ಥಿಕಸ್ಥಿತಿಗೆ ಸಿಲುಕದಿದ್ದಲ್ಲಿ ಈ ಖರ್ಚುಗಳನ್ನು ಉಳಿದ ಶಾಖೆಗಳೊಡನೆ ಪಾಲುಮಾಡಿಕೊಳ್ಳುವುದು ತೀರಾ ಅವಶ್ಯ. ಈಗ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣದ ಅನಂತರ ಇದೊಂದು ದೊಡ್ಡ ಸಮಸ್ಯೆ ಎನಿಸಲಾರದು.

ನಿರ್ವಹಣೆಯ ವೆಚ್ಚ ಮತ್ತು ಲಾಭದಾಯಕತೆ

ಗ್ರಾಮೀಣ ಪ್ರದೇಶದ ಶಾಖೆಯಲ್ಲಿ ದೊರಕುವ ಲಾಭ ಅತ್ಯಂತ ಕಡಿಮೆ; ಅದರ ಸಿಬ್ಬಂದಿವೆಚ್ಚ ಹೆಚ್ಚು. ಬ್ಯಾಂಕ್ ಉದ್ಯಮ ಹೆಚ್ಚಿನ ಪ್ರಮಾಣದಲ್ಲಿ ರಾಷ್ಟ್ರೀಕರಣವಾದುದರಿಂದ ಶಾಖೆಯನ್ನು ಪ್ರಾರಂಭಿಸಬೇಕಾದರೆ ಲಾಭವನ್ನು ಅತಿಯಾಗಿ ಗಣನೆಗೆ ತೆಗೆದುಕೊಳ್ಳಬೇಕಾದ ಅವಶ್ಯಕತೆಯಿಲ್ಲ. ಬ್ಯಾಂಕ್ ಶಾಖೆಯನ್ನು ತೆರೆಯುವ ವಿಷಯವನ್ನು ರಾಷ್ಟ್ರಹಿತದೃಷ್ಟಿಯಿಂದ ಪರಿಶೀಲಿಸಬೇಕು ನಿಜ. ಆದರೆ

ವೆಚ್ಚವನ್ನು ಕಡಿಮೆಗೊಳಿಸುವ ಪ್ರಶ್ನೆಯನ್ನು ಗಣನೆಗೆ ತೆಗೆದುಕೊಳ್ಳಲೇಬೇಕು. ಹೆಚ್ಚು ಠೇವಣಿಯನ್ನು ಸ್ವೀಕರಿಸುವುದರಿಂದ ಬ್ಯಾಂಕು ಹೆಚ್ಚು ಸಾಲವನ್ನು ಕೊಡಬಹುದಲ್ಲದೆ ತನ್ನ ಆದಾಯವನ್ನು ಸಹ ಹೆಚ್ಚಿಸಿಕೊಳ್ಳಬಲ್ಲದು. ಹೆಚ್ಚು ಶಾಖೆ ತೆರೆಯುವುದರಿಂದ ಮಾತ್ರವೇ ಸರ್ಕಾರಿ ವಲಯದಲ್ಲಿ ಬ್ಯಾಂಕ್ ಉದ್ಯಮ ಯಶಸ್ವಿಯಾಯಿತೆಂದು ಹೇಳುವುದು ಅಸಮಂಜಸ. ಈ ಉದ್ಯಮವನ್ನು ವ್ಯಾಪಾರದ ರೀತಿಯಲ್ಲಿ ಆದಷ್ಟು ಲಾಭದಾಯಕವಾಗಿ ನಡೆಸುವುದು ಮುಖ್ಯ.

ವಾಣಿಜ್ಯ ಬ್ಯಾಂಕುಗಳ ಇಲ್ಲಿಯ ವರೆಗಿನ ಅನುಭವವೆಂದರೆ, ಅರೆ ನಗರ (ಸೆಮಿ-ಅರ್ಬನ್) ಶಾಖೆಗಳ ಸರಾಸರಿ ಠೇವಣಿ ಮತ್ತು ಸಾಲದ ಮೊತ್ತ ಅನುಕ್ರಮವಾಗಿ ೧೯ ಲಕ್ಷ ಮತ್ತು ೯ ಲಕ್ಷ. ಗ್ರಾಮೀಣ ಪ್ರದೇಶದಲ್ಲಿನ ಶಾಖೆಗಳ ಠೇವಣಿ ಮತ್ತು ಸಾಲದ ಮೊತ್ತದ ಪರಿಮಾಣ ಸರಾಸರಿ ಅನುಕ್ರಮವಾಗಿ ೧೦ ಲಕ್ಷ ಮತ್ತು ೪ ಲಕ್ಷ. ಇದು ಬ್ಯಾಂಕ್ ಶಾಖೆಯ ಖರ್ಚನ್ನು ಪೂರೈಸಿಕೊಡಲು ಅತಿಕಡಿಮೆ ವ್ಯವಹಾರವೇ ಆಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಕ್ಕೆ ಆಡಳಿತ ಮತ್ತು ಇತರ ವೆಚ್ಚವನ್ನು ಪೂರೈಸಿಕೊಂಡು ಹೋಗಲು ಠೇವಣಿ ಮತ್ತು ಸಾಲದಿಂದ ೨೫ ರಿಂದ ೩೦ ಲಕ್ಷದ ವರೆಗಿನ ವ್ಯವಹಾರ ತೀರಾ ಅಗತ್ಯ. ೧೯೬೫ರ ಅಂಕಿಗಳು ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕ್ ಉದ್ಯಮವನ್ನು ಹರಡುವುದು ಸದ್ಯಕ್ಕಂತೂ ಲಾಭದಾಯಕವಾದ ಅಂಶವಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ಠೇವಣಿ ಶೇಖರಣೆಯ ಪ್ರಗತಿ ತೀರಾ ನಿಧಾನ. ಕೃಷಿ, ಸಣ್ಣ ಕೈಗಾರಿಕೆ ಮತ್ತು ಸಣ್ಣ ವ್ಯಾಪಾರಗಳ ಹಣಕಾಸಿನ ಆವಶ್ಯಕತೆಗಳನ್ನು ಗ್ರಾಮೀಣ ಬ್ಯಾಂಕ್ ಕೂಡಲೇ ಬಗೆಹರಿಸಲಾರದು. ಆದರೆ ಇಂದು ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಬದಲಾಗುವ ಸೂಚನೆಗಳಿವೆ. ಅಲ್ಲಿಯ ಶಾಖೆಗಳು ನಷ್ಟಕಾರಿಗಳಾಗಿ ಉಳಿದಿಲ್ಲ. ಬ್ಯಾಂಕಿನ ಸಿಬ್ಬಂದಿ ಸರಿಯಾದ ಆಸಕ್ತಿ ತಳೆದು ಕೆಲಸ ಮಾಡಿದರೆ ಗ್ರಾಮೀಣ ಶಾಖೆಗಳು ಲಾಭ ಗಳಿಸಬಲ್ಲವು.

ಠೇವಣಿ ಶೇಖರಣೆ ಮತ್ತು ಉಳಿತಾಯದ ಪ್ರೋತ್ಸಾಹ

ಗ್ರಾಮೀಣ ಪ್ರದೇಶದಲ್ಲಿಯ ದಾರಿದ್ರ್ಯ, ಅಜ್ಞಾನ ಮತ್ತು ಅನಕ್ಷರತೆಯ ನಡುವೆ ಠೇವಣಿಯನ್ನು ಶೇಖರಿಸುವುದೆಂದರೆ ಠೇವಣಿಗಾಗಿ ಮಾರುಕಟ್ಟೆಯನ್ನು ನಿರ್ಮಿಸುವುದು. ಭಾರತದಂಥ ಬಡದೇಶದಲ್ಲಿ ಬಹಳ ಸ್ವಲ್ಪ ಪ್ರಮಾಣದ ಜನ ತಮ್ಮ ಹೆಚ್ಚಿನ ನಿಧಿಯನ್ನು ಹಣರೂಪದಲ್ಲಿ ತಮ್ಮ ಕೈಯಲ್ಲಿಟ್ಟುಕೊಳ್ಳಲು ಸಮರ್ಥರು. ಸ್ವಲ್ಪ ಅನುಕೂಲಸ್ಥರಾದಂಥ ಜನ ತಮ್ಮ ಹಣ ಇಲ್ಲವೆ ಬೆಲೆಯುಳ್ಳ ವಸ್ತುಗಳನ್ನು ಹುಗಿದು ಅಥವಾ ಅಡಗಿಸಿ ಇಡುತ್ತಾರೆ. ಯಾರಿಗಾಗಲಿ ಇವನ್ನು ಕೊಡಲು ಅವರು ಇಚ್ಛಿಸುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಗ್ರಾಮೀಣ ಬ್ಯಾಂಕು ಅವರ ಹಣದ ಸುರಕ್ಷತೆ ಮತ್ತು ಅದನ್ನು ವಾಪಸ್ಸು ತೆಗೆದುಕೊಳ್ಳುವ ನಿಯಮ

ವನ್ನು ಸರಿಯಾಗಿ ವಿವರಿಸಿ ಅವರನ್ನು ನಂಬಿಸಿದರೆ ಮಾತ್ರ ತಮ್ಮ ನಿಧಿಯನ್ನು ಬ್ಯಾಂಕಿನಲ್ಲಿಡಬಹುದು. ಠೇವಣಿ ಶೇಖರಣೆಗೆ ಗ್ರಾಮೀಣ ಪ್ರದೇಶ ಉತ್ತಮ ಮಾರುಕಟ್ಟೆಯಾಗುವುದು. ಆದರೆ ಇದನ್ನು ಅತ್ಯಂತ ಎಚ್ಚರಿಕೆ ಮತ್ತು ಜಾಣತನ ದಿಂದ ಅಭಿವೃದ್ಧಿಪಡಿಸಬೇಕು.

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಬಂಡವಾಳ ನಿಯೋಜನೆಯೆಂದರೆ ಜಮೀನು ಕೊಳ್ಳುವುದು, ಚಿನ್ನಬೆಳ್ಳಿ ಕೊಳ್ಳುವುದು. ಧಾರ್ಮಿಕ, ಸಾಮಾಜಿಕ ವಿಧಿಗಳಿಗಾಗಿ ಅನೇಕರು ಹೆಚ್ಚಾಗಿ ಖರ್ಚುಮಾಡುವುದುಂಟು ಈ ರೀತಿಯ ದುಂದುವೆಚ್ಚ ನಿರುಪಯುಕ್ತವೆಂಬುದನ್ನು ಬ್ಯಾಂಕು ಹಳ್ಳಿಗರಿಗೆ ಸರಿಯಾಗಿ ಮನವರಿಕೆ ಮಾಡಿ ಕೊಡಬೇಕು: ಮತ್ತು ಸಾಧ್ಯವಾದಾಗಲೆಲ್ಲಾ ಅವನ್ನು ತಿದ್ದಲು ಪ್ರಯತ್ನಿಸ ಬೇಕು. ಆದರೆ ಯಾವುದೇ ಉತ್ಪಾದಕ ಆಸ್ತಿಯನ್ನು ಕೊಳ್ಳುವುದು ಇಲ್ಲವೇ ಒಕ್ಕಲುತನಕ್ಕೆ ಹಣವನ್ನು ಉಪಯೋಗಿಸುವುದು ಹಣವನ್ನು ಉಳಿಸಿದಂತೆಯೇ ಸರಿ. ಉಳಿತಾಯದ ಅವಶ್ಯಕತೆ ಮತ್ತು ಬಂಡವಾಳ ಹೂಡುವಿಕೆಯ ಬಗ್ಗೆ ಬ್ಯಾಂಕು ಅವರಿಗೆ ಸರಿಯಾಗಿ ಮಾರ್ಗದರ್ಶನ ಮಾಡಬೇಕು. ಅವರಿಗೆ ಅನುಕೂಲ ವಾಗುವ ನೀತಿಯನ್ನು ರೂಪಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಠೇವಣಿ ಶೇಖರಣೆಯ ಕಾರ್ಯ ಎರಡು ಮಹತ್ತ್ವದ ಗುರಿ ಹೊಂದಿದೆ:

(i) ಸಣ್ಣ ಮಧ್ಯಮತರಗತಿಯ ವ್ಯವಸಾಯಗಾರರ ಸಣ್ಣ ಉಳಿತಾಯವನ್ನು ರಕ್ಷಿಸುವುದು.

(ii) ಶ್ರೀಮಂತ ರೈತನ ಹೆಚ್ಚಿನ ಹಣವನ್ನು ಆಕರ್ಷಿಸುವುದು. ಇಂದು ಈ ಹಣವನ್ನು ಅವರು ಹೆಚ್ಚಿನ ಬಡ್ಡಿಯ ದರದಲ್ಲಿ ಅವಶ್ಯವಿದ್ದ ಒಕ್ಕಲಿಗರಿಗೆ ಸಾಲ ಕೊಡುತ್ತಿದ್ದಾರೆ.

ಮೊದಲನೆಯ ವರ್ಗದ ವ್ಯವಸಾಯಗಾರರಿಗೆ ಬಡ್ಡಿಯ ದರವೇನೂ ಆಕರ್ಷಕವಾದ ವಿಷಯವಲ್ಲ. ಏಕೆಂದರೆ ಅವರ ಉಳಿತಾಯ ತೀರ ಚಿಕ್ಕದು. ಆದ್ದರಿಂದ ಅವರಿಗೆ ಬಡ್ಡಿ ಕಡಿಮೆ ದೊರೆಯುವುದು: ಅಲ್ಲದೆ ಅವರ ಆದಾಯದ ಮೇಲೆ ಇದು ಯಾವುದೇ ಹೆಚ್ಚಿನ ಪರಿಣಾಮವನ್ನು ಮಾಡುವುದಿಲ್ಲ. ಆದುದರಿಂದ ಈ ವರ್ಗಕ್ಕೆ ಒಪ್ಪುವಂಥ ಠೇವಣಿ ಶೇಖರಣೆಮಾಡುವ ಯೋಜನೆಯನ್ನು ಪ್ರಾರಂಭಿ ಸುವುದು ಅವಶ್ಯ. ಉದಾಹರಣೆಗೆ, ಸುಗ್ಗಿ ಮುಗಿದ ಕೂಡಲೇ ವ್ಯವಸಾಯಗಾರರು ಸ್ವಲ್ಪ ಹಣವನ್ನು ತಮ್ಮ ಕೈಯಲ್ಲಿಟ್ಟುಕೊಂಡಿರುತ್ತಾರೆ. ಆಗ ಬ್ಯಾಂಕು ಯಾವುದೇ ಒಂದು ನಿರ್ದಿಷ್ಟವಾದ ಬಂಡವಾಳ ನಿಯೋಜನೆಯ ಬಗ್ಗೆ ಅವರಿಂದ ಠೇವಣಿಯನ್ನು ಕೂಡಿಸಬೇಕು. ಈ ನಿಯೋಜನೆ ಕಾಲುವೆಯನ್ನೋ ಬಾವಿಯನ್ನೋ ತೋಡುವುದಕ್ಕಾಗಿರಬಹುದು ಅಥವಾ ಭೂಮಿಯನ್ನು ಅಭಿವೃದ್ಧಿಪಡಿಸುವ ಯಾವುದೇ ಕೆಲಸಕ್ಕೆ ಮೀಸಲಾಗಿರಬಹುದು. ಈ ಯೋಜನೆಯ ಪ್ರಕಾರ ಕೂಡಿಸಿದ ಠೇವಣಿಯನ್ನು ವ್ಯವಸಾಯಗಾರನಿಗೆ ನಿರ್ದಿಷ್ಟ ಅವಧಿಯಲ್ಲಿ ಬ್ಯಾಂಕು

ಬಡ್ಡಿಸಹಿತ ಮತ್ತೆ ಪಾವತಿ ಮಾಡಬೇಕು. ಇದರಿಂದ ವ್ಯವಸಾಯಸಮಾಜದಲ್ಲಿ ಬಂಡವಾಳ ಹೂಡುವಿಕೆಯ ಬಗ್ಗೆ ಒಂದು ನಿರ್ದಿಷ್ಟ ಯೋಜನೆಯೇ ಪ್ರಾರಂಭ ವಾದಂತೆ ಆಗುತ್ತದೆ. ಇದು ಭೂ-ಅಭಿವೃದ್ಧಿಯಲ್ಲಿ ಒಂದು ಮಹತ್ತ್ವದ ಹೆಜ್ಜೆ ಯಾಗುವುದರಲ್ಲಿ ಸಂಶಯವಿಲ್ಲ.

ಸಿರಿವಂತ ರೈತರು ಬಡ್ಡಿ ವಿಷಯದಲ್ಲಿ ಹೆಚ್ಚು ಆಕರ್ಷಿತರಾಗುತ್ತಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಬಡ್ಡಿದರ ತೀರಾ ಹೆಚ್ಚು. ಯಾವುದೇ ವಾಣಿಜ್ಯ ಬ್ಯಾಂಕು ಈ ಬಡ್ಡಿದರ ಕೊಡಲಾರದು. ಬ್ಯಾಂಕು ಈ ಪ್ರದೇಶದಲ್ಲಿ ಸ್ವಲ್ಪ ಹೆಚ್ಚು ದರ ನೀಡ ಬಹುದು. ಬ್ಯಾಂಕು ಈ ಪ್ರದೇಶದಲ್ಲಿ ಹೆಚ್ಚಿನ ಬಡ್ಡಿಯ ದರದಲ್ಲಿ ಠೇವಣಿಯನ್ನು ಸ್ವೀಕರಿಸಿ ಹೆಚ್ಚಿನ ದರದಲ್ಲೇ ಸಾಲ ಕೊಡಬೇಕೆಂದು ಕೆಲವರು ಹೇಳುತ್ತಾರೆ. ಆದರೆ ಈ ನೀತಿಯಿಂದ ಪಟ್ಟಣ ಮತ್ತು ಗ್ರಾಮೀಣ ಮಾರುಕಟ್ಟೆಗಳಲ್ಲಿ ಬಡ್ಡಿದರ ಅಸಮಾನವಾಗಿ ನಗರಪ್ರದೇಶದ ಉಳಿತಾಯ ಠೇವಣಿ ರೂಪದಲ್ಲಿ ಗ್ರಾಮೀಣ ಪ್ರದೇಶಕ್ಕೆ ಹರಿಯಬಹುದು. ಇದರಿಂದ ಇಡೀ ದೇಶದಲ್ಲೇ ಠೇವಣಿ ದರ ಹೆಚ್ಚಾಗಿ ಹೆಚ್ಚು ಠೇವಣಿಯನ್ನು ಸಂಗ್ರಹಿಸಬಹುದಾದರೂ ಇದರಿಂದ ಬ್ಯಾಂಕಿನ ಮೂಲ ಭೂತ ಉದ್ದೇಶ ಸಾಧನೆಯಾಗಲಾರದು.

ಠೇವಣಿಯ ಮೇಲಿನ ಬಡ್ಡಿ ದರ ಗ್ರಾಮೀಣ ಪ್ರದೇಶದಲ್ಲಿ ನಗರಪ್ರದೇಶಕ್ಕಿಂತ ಯಾವಾಗಲೂ ಹೆಚ್ಚಾಗಿರುತ್ತದೆ. ಬಡ್ಡಿರಹಿತ ಠೇವಣಿ ಗ್ರಾಮೀಣ ಪ್ರದೇಶ ದಲ್ಲಿ ನಗರಪ್ರದೇಶಕ್ಕಿಂತ ಕಡಿಮೆ. ಗ್ರಾಮೀಣ ಪ್ರದೇಶದಲ್ಲಿಯ ಉಳಿತಾಯ ಯಾವಾಗಲೂ ಬಡ್ಡಿಗೆ ಹೊಂದಿಕೊಂಡು ಇರುತ್ತದೆ. ಅಲ್ಲದೆ ಠೇವಣಿ ಮುದ್ದತಿ ಯಲ್ಲಿರುತ್ತದೆ. ೧೯೬೬ರಲ್ಲಿ ಗ್ರಾಮಪ್ರದೇಶದಲ್ಲಿ ಒಟ್ಟು ಠೇವಣಿಯ ಸೇಕಡ ೧೮.೨ ರಷ್ಟು ಚಾಲ್ತಿ ಠೇವಣಿಯಾಗಿತ್ತು; ಆದರೆ ನಗರಪ್ರದೇಶದಲ್ಲಿ ಇದರ ಪ್ರಮಾಣ ಸೇಕಡ ೩೦.೩.

ಬಡರೈತರೇ ಹೆಚ್ಚಿರುವ ಈ ದೇಶದಲ್ಲಿ ಸಾಗುವಳಿದಾರ ಮೊದಲು ಹಣವನ್ನು ಉಳಿಸಬೇಕು. ಅನಂತರ ಈ ಉಳಿತಾಯವನ್ನು ಭೂಮಿಯ ಅಭಿವೃದ್ಧಿಗೆ ಸಹಾಯಕ ವಾದ ಪಂಪ್‌ಸೆಟ್ ಕೊಳ್ಳುವಿಕೆ, ಬಾವಿ ತೋಡಿಸುವುದು ಮತ್ತು ನೀರಾವರಿಯ ಆವಶ್ಯಕತೆ ಹೆಚ್ಚಿಸಿಕೊಳ್ಳುವುದು ಮೊದಲಾದವುಗಳಿಗೆ ಉಪಯೋಗಿಸಬೇಕು ಎನ್ನು ವುದು ಕೇವಲ ಆದರ್ಶವೆಂದೇ ತೋರುವುದು. ಸೈಜವಾದ ರೀತಿಯೆಂದರೆ ಮೊದಲು ಅವನಿಗೆ ಸಾಲ ಕೊಟ್ಟು, ಅದನ್ನು ಅವನು ಉತ್ಪಾದನೆಗೆ ಉಪಯೋಗಿಸುವಂತೆ ಮಾಡಿ, ಅವನ ಆದಾಯವನ್ನು ಹೆಚ್ಚಿಸಿ ಸಾಲ ಮರುಪಾವತಿ ಮಾಡಿಸಿಕೊಂಡು, ಠೇವಣಿಯನ್ನು ಶೇಖರಿಸುವುದು ಉತ್ತಮವಾದ ಹೆಜ್ಜೆ. ಈ ರೀತಿ ಬಂಡವಾಳ ನಿಯೋಜನೆಯಿಂದ ಗ್ರಾಮಪ್ರದೇಶದ ಆದಾಯ ಹೆಚ್ಚಾಗಿ ವ್ಯವಸಾಯಗಾರನ ಉಳಿತಾಯಶಕ್ತಿ ಹೆಚ್ಚಾಗುವುದಲ್ಲದೆ, ಬ್ಯಾಂಕು ಕೂಡ ಹೆಚ್ಚಿನ ಪ್ರಮಾಣದಲ್ಲಿ ಠೇವಣಿ ಶೇಖರಿಸಬಹುದು.

ಈ ಸಾಲಪದ್ಧತಿ ಬ್ಯಾಂಕಿನ ಠೇವಣಿಯನ್ನು ಹೆಚ್ಚಿಸುವುದಲ್ಲದೆ, ಬ್ಯಾಂಕು ತನ್ನ ಆಪ್ತಮಿತ್ರ, ತನ್ನ ಸುಖ ದುಃಖಗಳಲ್ಲಿ ಭಾಗಿಯಾಗುವಂಥ ಸಂಸ್ಥೆ ಎಂಬ ಕಲ್ಪನೆ ತಾನಾಗಿಯೇ ಬರುವುದು. ಈ ಬಗೆಯ ಭಾವನೆ ಒಮ್ಮೆ ರೈತನಲ್ಲಿ ಮೂಡಿದರೆ ಅವನು ಬ್ಯಾಂಕಿನ ಎಲ್ಲ ಕಾರ್ಯಗಳಲ್ಲೂ ಭಾಗಿಯಾಗುತ್ತಾನೆ. ಬ್ಯಾಂಕಿನ ಸಾಲವ್ಯವಹಾರ ರೈತರ ಆದಾಯವನ್ನು ಹೆಚ್ಚಿಸುವುದಲ್ಲದೆ, ಅವರ ಹೆಚ್ಚಿನ ಸಾಲದ ಬೇಡಿಕೆಯನ್ನೂ ಪೂರೈಸುವುದು. ಇದರಿಂದ ಗ್ರಾಮೀಣ ಪ್ರದೇಶದಲ್ಲಿರುವ ಬಡ್ಡಿಯ ದರ ಇಳಿಯುವುದಲ್ಲದೆ ಬ್ಯಾಂಕು ಈ ಪ್ರದೇಶದ ಹೆಚ್ಚಿನ ಹಣವನ್ನು ಠೇವಣಿಯನ್ನಾಗಿ ಪಡೆಯಬಹುದು. ಹಣವನ್ನು ಸಾಲವಾಗಿ ಕೊಡುವುದು ಶ್ರೀಮಂತ ರೈತರಿಗೆ ಆಗ ಲಾಭದಾಯಕವಾಗುವುದಿಲ್ಲ; ಅವರ ಹಣವೂ ಠೇವಣಿಯಾಗಿ ಬ್ಯಾಂಕನ್ನು ಪ್ರವೇಶಿಸುವುದು.

ಮುಂಗಡ ವ್ಯವಹಾರ

ವಾಣಿಜ್ಯ ಬ್ಯಾಂಕುಗಳ ಗ್ರಾಮೀಣಶಾಖೆ ಒಕ್ಕಲುತನ ಮತ್ತು ಸಣ್ಣ ವ್ಯಾಪಾರಕ್ಕೆ ದೊಡ್ಡ ಘಟಕಸಂಸ್ಥೆಯಾಗಿ ಹಣವನ್ನು ಪೂರೈಸಿ ಲಾಭಗಳಿಸಬಹುದು. ಆದರೆ ಈ ಕಾರ್ಯದಲ್ಲಿ ಲೋಪದೋಷ ಮತ್ತು ಗಂಡಾಂತರಗಳು ಇಲ್ಲವೆಂದಲ್ಲ. ಹೆಚ್ಚಿನ ಪ್ರಮಾಣದಲ್ಲಿ ಚಿಕ್ಕ ಬೇಸಾಯಗಾರರಿಗೆ ಮತ್ತು ಚಿಲ್ಲರೆ ವ್ಯಾಪಾರಸ್ಥರಿಗೆ ಹಣ ಪೂರೈಸುವುದರಿಂದ ಸೇವೆಯ ವೆಚ್ಚ ಹೆಚ್ಚಾಗುತ್ತದೆ. ಅಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮ ಪ್ರದೇಶದ ಜನ ಸಾಲಕ್ಕೆ ಸಾಕಷ್ಟು ಆಧಾರಗಳನ್ನು ಕೊಡಲು ಅಸಮರ್ಥರು. ಆಗ ಬ್ಯಾಂಕು ಅವರ ವ್ಯಕ್ತಿಗತ ನಂಬಿಕೆಯ ಮೇಲೆಯೇ ಸಾಲ ಕೊಡಬೇಕಾಗುತ್ತದೆ. ಆದ್ದರಿಂದ ಬ್ಯಾಂಕು ಅವರ ವೈಯಕ್ತಿಕ ಜೀವನದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದಿರಬೇಕು.

ಇಷ್ಟಲ್ಲದೆ ಭಾರತದಲ್ಲಿ ಬೇಸಾಯಕ್ಕೆ ಹಲವಾರು ತೊಂದರೆಗಳಿವೆ. ಮುಖ್ಯವಾದವೆಂದರೆ ಮುಂಗಾರುಮಳೆಯ ಪ್ರತಿಕೂಲತೆ, ಭೂಮಿಯ ಹಕ್ಕು, ಸಾಲಪತ್ರದ ಮೇಲಿನ ಭಾರವಾದ ನೋಂದಣಿ (ರಿಜಿಸ್ಟ್ರೇಷನ್) ಶುಲ್ಕ ಮೊದಲಾದವು. ಭೂ-ಹಿಡುವಳಿಯ ಪ್ರಮಾಣವೂ ಬಲು ಕಡಿಮೆ (ಸರಾಸರಿಯಲ್ಲಿ ೨.೭ ಹೆಕ್ಟೇರ್). ಅಲ್ಲದೆ ಸೇಕಡ ೩೯ ಬೇಸಾಯಗಾರರ ಹಿಡುವಳಿ ಒಂದು ಹೆಕ್ಟೇರಿಗಿಂತ ಕಡಿಮೆ. ವ್ಯವಸಾಯ ಪದ್ಧತಿ ಅತಿ ಹಿಂದುಳಿದದ್ದು. ಭೂಮಿಯ ಹಕ್ಕಿನ ಬಗ್ಗೆ ಯಾವುದೇ ರಾಜ್ಯದಲ್ಲಿಯೂ ಸರಿಯಾದ ಮಾಹಿತಿಯೇ ದೊರೆಯುವುದಿಲ್ಲ. ದಾಖಲೆಗಳೂ ಅಸ್ಪಷ್ಟ. ಇವೆಲ್ಲ ಅಂಶಗಳು ಬೇಸಾಯಗಾರನ ಸಾಲದ ಆವಶ್ಯಕತೆಗಳನ್ನು ಪೂರೈಸಲು ಬರುವ ದೊಡ್ಡ ಸಮಸ್ಯೆಗಳೇ ಆಗಿವೆ.

ಸಾಲನೀಡಿಕೆ ಮತ್ತು ಒಕ್ಕಲುತನಸಾಲವನ್ನು ಮೇಲ್ವಿಚಾರಣೆ ಮಾಡುವುದು ದೊಡ್ಡ ಸಮಸ್ಯೆಯೇ ಆಗಿದೆ. ಏಕೆಂದರೆ ಸಾಲ ಪಡೆದ ರೈತರು ಬೇರೆ ಬೇರೆ ಹಳ್ಳಿ

ಗಳಲ್ಲಿರುವವರು. ವಾಣಿಜ್ಯ ಬ್ಯಾಂಕಿನವರು ಬೇಸಾಯಕ್ಕೆ ಹಣವನ್ನು ಪೂರೈಸ ಬೇಕಾದರೆ ಅವರಿಗೆ ಭೂಮಿಯ ಬಗ್ಗೆ ಸರಿಯಾದ ದಾಖಲೆ ಮತ್ತು ತಿಳಿವಳಿಕೆ ಅವಶ್ಯ. ಆಗ ಬ್ಯಾಂಕಿಗೆ ರೈತನ ವೈಯಕ್ತಿಕ ಪತ್ತಿನ ತಿಳಿವಳಿಕೆ ಬರುವುದು.

ಸಾಲಮರುಪಾವತಿ ಮಾಡಿಸಿಕೊಳ್ಳುವ ಬಗ್ಗೆ ಸಹಕಾರಿ ಸಂಘಗಳಿಗೆ ಸರ್ಕಾರ ಕೊಟ್ಟ ಸವಲತ್ತನ್ನೇ ವಾಣಿಜ್ಯ ಬ್ಯಾಂಕುಗಳಿಗೆ ಸಹ ಕೊಡಬೇಕು. ಇದು ಸ್ವಾಭಾವಿಕವಾಗಿ ಸಾಗುವಳಿದಾರನಿಗೆ ಲಾಭದಾಯಕವಾಗಿದ್ದೇ ಇರುತ್ತದೆ. ಈ ರೀತಿಯ ಸವಲತ್ತನ್ನು ಬೇಸಾಯಕ್ಕೆ ಹಣ ಒದಗಿಸುವ ಯಾವುದೇ ಸಂಸ್ಥೆಗಳಿಗೆ ಕೊಡುವಲ್ಲಿ ಯಾವ ತೊಂದರೆಯೂ ಇಲ್ಲ. ಈ ವಿಷಯವನ್ನು ಈಗ ರಿಸರ್ವ್ ಬ್ಯಾಂಕಿನಿಂದ ನೇಮಿಸಲ್ಪಟ್ಟ ಪರಿಣತರ ತಂಡ ಪರೀಕ್ಷಿಸಿದೆ.

ಗ್ರಾಮೀಣ ಉದ್ಯಮಕ್ಕೆ ಸಾಲ ಪೂರೈಸುವಲ್ಲೂ ಇದೇ ಬಗೆ ತೊಂದರೆ ಎದುರಾಗುತ್ತದೆ. ಆದರೆ ಇವುಗಳ ವ್ಯವಹಾರ ತೀರಾ ಸಣ್ಣದು. ತಾಂತ್ರಿಕ ಕುಶಲತೆ ಹಳೆಯದಲ್ಲದೆ ಉತ್ಪಾದನೆಯೂ ಚಿಕ್ಕ ಪ್ರಮಾಣದಲ್ಲಿಯೇ ಇರುವುದು. ಈ ಕ್ಷೇತ್ರದಲ್ಲಿ ಉತ್ಪಾದಕತೆಯನ್ನು ಸುಧಾರಿಸುವುದು ಅತ್ಯಂತ ಅವಶ್ಯ. ಈ ಉದ್ಯಮಕ್ಕೆ ಬೇಕಾದ ಕಚ್ಚಾಸಾಮಗ್ರಿಯನ್ನು ಒದಗಿಸುವ ಮತ್ತು ಅದು ತಯಾರಿಸಿದ ಪದಾರ್ಥಗಳನ್ನು ಮಾರುವ ಸಂಸ್ಥೆಯನ್ನು ಸ್ಥಾಪಿಸಬೇಕು. ಇದಿಲ್ಲದೆ ಬ್ಯಾಂಕ್ ಸಾಲ ಮಾತ್ರದಿಂದಲೇ ಇಂಥ ಉದ್ಯಮಗಳನ್ನು ಪುನರುಜ್ಜೀವನಗೊಳಿಸುವುದು ಸಾಧ್ಯವಿಲ್ಲ.

ಗ್ರಾಮಪ್ರದೇಶದಲ್ಲಿ ಸಣ್ಣ ವ್ಯಾಪಾರಗಳಿಗೆ ಸಾಲ ಒದಗಿಸುವ ಕಾರ್ಯವೂ ಇಂಥದೇ ಸಮಸ್ಯೆಯನ್ನು ಎದುರಿಸಬೇಕಾಗುವುದು. ಗ್ರಾಮೀಣ ಪ್ರದೇಶದಲ್ಲಿಯ ವ್ಯಾಪಾರದ ಗಾತ್ರ ಕಿರಿದು. ಇದರಿಂದ ದೊರಕುವ ಆದಾಯವೂ ಸೀಮಿತವಾದದ್ದು. ಗ್ರಾಹಕರಿಗೆ ಉದ್ದರಿ ನೀಡದಿದ್ದರೆ ವ್ಯಾಪಾರ ನಡೆಯುವುದಿಲ್ಲ. ಸುಗ್ಗಿಯ ಸಮಯದಲ್ಲಿ ಹಣ ವಸೂಲು ಮಾಡಿಕೊಳ್ಳಬೇಕಾಗುವುದು. ಆದ್ದರಿಂದ ಚಿಲ್ಲರೆ ವ್ಯಾಪಾರಕ್ಕೆ ಹಣ ಪೂರೈಸುವುದು ದೊಡ್ಡ ಸಮಸ್ಯೆಯೇ ಎನ್ನಬಹುದು.

ಸಿಬ್ಬಂದಿ ವೆಚ್ಚ

ಗ್ರಾಮಪ್ರದೇಶದಲ್ಲಿ ಬ್ಯಾಂಕ್ ವ್ಯವಹಾರವನ್ನು ಲಾಭಪ್ರದವಾಗಿ ಮಾಡಲು ಸಿಬ್ಬಂದಿ ವೆಚ್ಚವನ್ನು ಅತ್ಯಂತ ಕಡಿಮೆ ಮಟ್ಟದಲ್ಲಿಡುವುದು ತೀರಾ ಅವಶ್ಯ. ಇದನ್ನು ಎರಡು ರೀತಿಯಿಂದ ಸಾಧಿಸಬಹುದು: (i) ಶಾಖೆಗಳಲ್ಲಿ ನೌಕರರ ಸಂಖ್ಯೆಯನ್ನು ಕಡಿಮೆ ಮಾಡುವುದು. (ii) ನೌಕರರಿಗೆ ಬೇರೆ ವೇತನ ಶ್ರೇಣಿಯ ನಿಗದಿಮಾಡುವುದು.

ಗ್ರಾಮೀಣ ಶಾಖೆಯಲ್ಲಿ ಸಿಬ್ಬಂದಿ ಎಲ್ಲ ತರಹದ ಕೆಲಸವನ್ನೂ ಮಾಡಬೇಕಾಗುತ್ತದೆ. ಆಡಳಿತ ವೆಚ್ಚವನ್ನು ಕಡಿಮೆ ಮಾಡುವುದು ಮುಖ್ಯವಾದ

ಅಂಶ. ಅತ್ಯಂತ ಕಡಿಮೆ ಸಂಖ್ಯೆಯ ನೌಕರರನ್ನು ಇಟ್ಟುಕೊಳ್ಳಬೇಕು. ಶಾಖೆಯ ನೌಕರರ ಸಂಖ್ಯೆ ೩–೪ಕ್ಕಿಂತ ಹೆಚ್ಚಿಗೆ ಇರಬಾರದು.

ಆಡಳಿತ ವೆಚ್ಚವನ್ನು ತಗ್ಗಿಸುವ ಇನ್ನೊಂದು ವಿಧಾನವೆಂದರೆ ಗ್ರಾಮೀಣ ಶಾಖೆಯಲ್ಲಿ ಕೆಲಸಮಾಡುವ ನೌಕರರಿಗೆ ಪ್ರತ್ಯೇಕ ವೇತನಶ್ರೇಣಿಯ ರಚನೆ. ಈಗ ವಾಣಿಜ್ಯ ಬ್ಯಾಂಕುಗಳು ತಮ್ಮ ನೌಕರರಿಗೆ ಪಟ್ಟಣದಲ್ಲಿ ಮಧ್ಯಮವರ್ಗಕ್ಕೆ ಬೇಕಾಗುವಷ್ಟು ಸಂಬಳವನ್ನು ಕೊಡುತ್ತಿವೆ. ಈ ವಿಧಾನ ಗ್ರಾಮ ಪ್ರದೇಶದ ಸ್ಥಿತಿಗತಿಗೆ ಹೊಂದಾಣಿಕೆಯಾಗುವುದಿಲ್ಲ. ನಗರಪ್ರದೇಶದ ಸಂಬಳವನ್ನೇ ಗ್ರಾಮ ಪ್ರದೇಶಕ್ಕೂ ಅನ್ವಯಿಸಿದರೆ ಗ್ರಾಮಪ್ರದೇಶದ ನೌಕರರ ಜೀವನಮಟ್ಟವನ್ನು ತೀರಾ ಹೆಚ್ಚಿಸಿದಂತೆ ಆಗುವುದು. ಆದುದರಿಂದ ಅವರಿಗೆ ಪ್ರತ್ಯೇಕವಾದ ವೇತನ ಶ್ರೇಣಿಯನ್ನು ರೂಪಿಸುವುದೇ ಒಳ್ಳೆಯದು. ಒಂದು ವೇಳೆ ಸ್ಥಳೀಯ ಅಭ್ಯರ್ಥಿಗಳನ್ನು ನೌಕರಿಗೆ ನೇಮಿಸಿಕೊಂಡರೆ ಅವರಿಗೆ ಅದೇ ಕೇಂದ್ರದಲ್ಲಿ ಬೇರೆ ಕೆಲಸಕ್ಕೆ ಸೇರಿದ್ದರೆ ಎಷ್ಟು ಸಂಬಳ ದೊರೆಯುತ್ತದೆ ಎಂಬುದನ್ನು ತಿಳಿದು ಆ ಸಂಬಳವನ್ನೇ ಕೊಡಬೇಕು. ಈ ರೀತಿಯ ನೂತನ ವೇತನಶ್ರೇಣಿಯನ್ನು ಒಪ್ಪಲು ಬ್ಯಾಂಕು ತಮ್ಮ ನೌಕರರ ಸಂಘವನ್ನು ಒತ್ತಾಯಿಸಬೇಕು. ದೇಶ ಮತ್ತು ಬ್ಯಾಂಕ್ ಉದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಬ್ಯಾಂಕ್ ನೌಕರರ ಸಂಘ ಇದನ್ನು ಒಪ್ಪಬಹುದು.

ಇತರ ಸಮಸ್ಯೆಗಳು

ಜಿಲ್ಲೆಯ ಅಥವಾ ಗ್ರಾಮೀಣ ಶಾಖೆಯ ಉಪಶಾಖೆಗಳನ್ನು ಬೇರೆ ಬೇರೆ ಹಳ್ಳಿಗಳಲ್ಲಿ ಪ್ರಾರಂಭಿಸಬೇಕೆಂಬ ಸೂಚನೆ ಕೂಡ ಇದೆ. ಇದು ಬ್ಯಾಂಕಿನ ಆಯೋಗದ ವಿಚಾರಕ್ಕೆ ಬಿಟ್ಟ ವಿಷಯವಾಗಿದೆ. ಗ್ರಾಮಪ್ರದೇಶದಲ್ಲಿಯ ಶಾಖೆಗಳ ಮೇಲ್ವಿಚಾರಣೆ ಮಾಡಲು ವಾಣಿಜ್ಯ ಬ್ಯಾಂಕು ವಿಚಾರಣಾಶಾಖೆಗಳನ್ನು ತೆರೆಯಬೇಕೆಂಬ ಸೂಚನೆಯೂ ಇದೆ. ಆದರೆ ಈ ರೀತಿ ಶಾಖೆಗಳನ್ನು ತೆರೆಯುವ ಅವಶ್ಯಕತೆಯಿಲ್ಲ. ಗ್ರಾಮಶಾಖೆಗಳ ಹತೋಟಿ ಮತ್ತು ಆಡಳಿತ ಸಮಸ್ಯೆ ತೀರ ಜಟಿಲವಾಗಿರುವುದಿಲ್ಲ. ಅಲ್ಲದೆ ಹಣಕಾಸಿನ ಸಾಮರ್ಥ್ಯವೂ ಹೆಚ್ಚಿರುವುದಿಲ್ಲ. ಗ್ರಾಮಪ್ರದೇಶದ ವ್ಯವಹಾರ ಹೆಚ್ಚು ಅಪಾಯಕಾರಿಯಾಗಿರುತ್ತದೆ. ಏಕೆಂದರೆ ವ್ಯಕ್ತಿಗಳು ಸಾಲವನ್ನು ಮರುಪಾವತಿಮಾಡುವಲ್ಲಿ ಅವಧಿಯನ್ನು ತಪ್ಪಿರುತ್ತಾರೆ. ಅಲ್ಲದೇ ಎಷ್ಟೋ ಸಲ ಅವರಿಗೆ ಮರುಪಾವತಿಮಾಡುವ ಸಾಮರ್ಥ್ಯವೂ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಗ್ರಾಮೀಣ ಶಾಖೆಗೆ ಆಂತರಿಕ ಶಕ್ತಿ ಮತ್ತು ಕಾದಿಟ್ಟ ಹಣ ಹೆಚ್ಚಾಗಿರುವುದು ತೀರ ಆವಶ್ಯಕ. ಆದರೆ ಇದು ದೊಡ್ಡ ಸಂಸ್ಥೆಗಳಿಗೆ ಮಾತ್ರ ಸಾಧ್ಯ. ಸ್ಥಳೀಯ ಬ್ಯಾಂಕುಗಳಿಗೆ ಹತೋಟಿ ಮತ್ತು ಆಡಳಿತ ದೃಷ್ಟಿಯಿಂದ ಕೆಲವು ಅನುಕೂಲತೆಗಳಿದ್ದರೂ ಹಣಕಾಸಿನ ವಿಷಯದಲ್ಲಿ ಅವು ಕಠಿಣ ಸಮಯದಲ್ಲಿ ಪರಿಸ್ಥಿತಿಯನ್ನು ಸರಿಯಾಗಿ ಎದುರಿಸಲಾರವು. ವಿಕೇಂದ್ರೀಕೃತವಾಗಿ ನಿರ್ಣಯವನ್ನು ಕೈಗೊಳ್ಳುವಂಥ

ದೊಡ್ಡ ವಾಣಿಜ್ಯ ಸಂಸ್ಥೆಗಳು ಮಾತ್ರ ಗ್ರಾಮೀಣ ಬ್ಯಾಂಕ್ ಸಮಸ್ಯೆಯನ್ನು ಸರಿಯಾಗಿ ಪರಿಹರಿಸಬಲ್ಲುವು.

ಗ್ರಾಮಪ್ರದೇಶದ ಆರ್ಥಿಕ ರಂಗದಲ್ಲಿಯ ಹಣದ ಕೊರತೆಯನ್ನು ತುಂಬುವ ದೊಡ್ಡ ಜವಾಬ್ದಾರಿಯನ್ನು ವಾಣಿಜ್ಯ ಬ್ಯಾಂಕುಗಳು ನಿರ್ವಹಿಸಬೇಕಾಗಿದೆ. ಗ್ರಾಮಪ್ರದೇಶದ ಆರ್ಥಿಕ ಜೀವನ ಪುನಃ ಚೇತರಿಸುವಂತಾಗಲು ಬಂಡವಾಳ ಹೂಡುವಿಕೆಯ ಪ್ರಮಾಣ ಮತ್ತು ಉಳಿತಾಯದ ಪ್ರಮಾಣವನ್ನು ಹೆಚ್ಚಿಸಬೇಕು. ಈ ಹೊಸ ಹೊಣೆಯನ್ನು ನಿರ್ವಹಿಸಲು ವಾಣಿಜ್ಯ ಬ್ಯಾಂಕು ಭರದಿಂದ ತನ್ನ ಶಾಖೆಗಳನ್ನು ಹೆಚ್ಚಿಸಬೇಕು. ಆಗ ಮಾತ್ರ ಗ್ರಾಮಪ್ರದೇಶದಲ್ಲಿ ಪ್ರಗತಿ, ಸುಖ, ಶಾಂತಿ ಹೆಚ್ಚುವುವು. ಈ ಕಾರ್ಯ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಅತಿ ಮಹತ್ತ್ವದ್ದು.

ಈ ದೇಶದ ಏಳಿಗೆ ಅದರ ಬೇಸಾಯಗಾರರ ಏಳಿಗೆಯನ್ನು ಅವಲಂಬಿಸಿದೆಯೆಂಬುದನ್ನು ಅರಿತುಕೊಳ್ಳುವುದು ಅತ್ಯಂತ ಮುಖ್ಯ. ಇತ್ತೀಚಿನ ದಿನಗಳಲ್ಲಿ ಕೂಡ ಫಸಲು ಬಾರದಾಗಲೆಲ್ಲ ಈ ಅಂಶ ಸಿದ್ಧಪಟ್ಟಿದೆ. ಅಂಥ ಸಮಯದಲ್ಲೆಲ್ಲ ಅನೇಕ ಅನುಭೋಗವಸ್ತು ಕೈಗಾರಿಕೆಗಳಿಗೆ ಬೇಡಿಕೆ ತಗ್ಗಿರುವುದು ವ್ಯಕ್ತಪಟ್ಟಿದೆ. ನಗರ ಬ್ಯಾಂಕರುಗಳು ಗ್ರಾಮೀಣ ಹಣಕಾಸು ವ್ಯವಹಾರವನ್ನು ತ್ಯಾಜ್ಯವೆಂದೇ ಭಾವಿಸುತ್ತ ಬಂದಿದ್ದಾರೆ. ಕಡಿಮೆ ವರಮಾನದಾಯಕವಾದ ಗ್ರಾಮಪ್ರದೇಶಕ್ಕೆ ಅವರು ಹೋಗಲು ಬಯಸುವುದಿಲ್ಲ. ಆದ್ದರಿಂದ ಕೃಷಿರಂಗದ ಅಗತ್ಯಗಳನ್ನು ಪೂರೈಸಲು ವಾಣಿಜ್ಯ ಬಾಂಕುಗಳು ಅತ್ಯಂತ ಅಯಶಸ್ವಿಗಳಾಗಿವೆಯೆಂದೇ ಹೇಳಬಹುದು.

ವ್ಯವಸಾಯ ಹಣಕಾಸು ರಾಷ್ಟ್ರೀಕೃತ ಬ್ಯಾಂಕುಗಳು ಅಧಿಕಾಧಿಕವಾಗಿ ಅಭಿವೃದ್ಧಿಗೊಳಿಸಬೇಕಾದ ಆಯಕಟ್ಟಿನ ಕ್ಷೇತ್ರ. ಸಹಕಾರ ಸಂಘಗಳು ಸರ್ವವ್ಯಾಪಿಯಾಗಿರುವುದರಿಂದ ಇದುವರೆಗೂ ವ್ಯವಸಾಯ ಹಣಕಾಸು ಅವುಗಳ ವಿಶಿಷ್ಟ ಕ್ಷೇತ್ರವಾಗಿತ್ತು. ಆದರೆ ಈಗ ವಾಣಿಜ್ಯ ಬ್ಯಾಂಕುಗಳ ಶಾಖೆಗಳು ಕೂಡ ದೇಶಾದ್ಯಂತ ವಿಸ್ತರಿಸಿರುವುದರಿಂದ ಸರ್ಕಾರದ ನಿರ್ದೇಶನಕ್ಕನುಗುಣವಾಗಿ ಈ ಬ್ಯಾಂಕುಗಳು ಬೇಸಾಯಗಾರನ ಅಗತ್ಯಗಳನ್ನು ಹೆಚ್ಚಾಗಿ ಪೂರೈಸಲು ಸಾಧ್ಯವಾಗಬೇಕು. ವ್ಯವಸಾಯದ ಜೊತೆಗೆ ಇನ್ನೂ ಅನೇಕ ಉತ್ಪಾದಕ ಕ್ಷೇತ್ರಗಳಿವೆ. ಸಮಾಜದ ಸಮಗ್ರ ಆರ್ಥಿಕ ಕಲ್ಯಾಣಕ್ಕೆ ಈ ಕ್ಷೇತ್ರಗಳ ಕಾಣಿಕೆಯೂ ಅಗಾಧವಾದದ್ದು. ಸಣ್ಣಗಾತ್ರದ ಕೈಗಾರಿಕೆಗಳ, ಗುಡಿಸಿಲ ಕೈಗಾರಿಕೆಗಳ, ಹಳ್ಳಿಯ ಬಡಗಿಯಂಥ ಸ್ವಯಂ ಉದ್ಯೋಗಕಾರಕರ, ವೈದ್ಯರ ಮತ್ತು ಎಂಜಿನಿಯರುಗಳಂಥ ವೃತ್ತಿನಿರತರ ಕ್ಷೇತ್ರಗಳಿಗೂ ಹಣಕಾಸಿನ ಸೌಲಭ್ಯ ಒದಗಿಸುವುದು ಅತ್ಯಂತ ಫಲಪ್ರದವೆನಿಸಬಲ್ಲುದು.[1]

—ಟಿ. ಎ. ಪೈ.

[1] T. A. Pai: Operational and Organisational Tasks, *Nationalisation of Banks, A Symposium*; Publications Division, Ministry of Information and Broadcasting, Government of India; p. 20

ಪುಟ್ಟಣ್ಣ ಚಿಕ್ಕಬಿದರೆ

ಮೊಗಲರ ಕಾಲದಲ್ಲಿ ನ್ಯಾಯ

ಆಧುನಿಕ ಭಾರತೀಯ ನ್ಯಾಯಶಾಸ್ತ್ರದ ಇತಿಹಾಸದಲ್ಲಿ ಮೊಗಲರ ಕಾಲ ಒಂದು ಮುಖ್ಯವಾದ ಘಟ್ಟ. ಭಾರತಕ್ಕೆ ಮುಸ್ಲಿಮರು ಬರುವ ಮೊದಲು ಅನೇಕ ಚಿಕ್ಕ ಪುಟ್ಟ ರಾಜ್ಯಗಳಿದ್ದರೂ ಅನೇಕ ಅಂಶಗಳಲ್ಲಿ ಅವುಗಳ ಆಡಳಿತ ವ್ಯವಸ್ಥೆ ಏಕರೂಪದ್ದಾಗಿತ್ತು. ಸಾಮಾನ್ಯವಾಗಿ ಹಿಂದೂ ಶಾಸ್ತ್ರಗ್ರಂಥಗಳು ಅದಕ್ಕೆ ಬೆನ್ನೆಲುಬಾಗಿ ಆಡಳಿತ, ನ್ಯಾಯ ಮುಂತಾದ ವಿಷಯಗಳ ಸಮಸ್ಯೆಗಳ ಮೇಲೆ ಬೆಳಕು ಬೀರಿ ಸಲಹೆ ನೀಡುತ್ತಿದ್ದುವು. ಹಲವಾರು ಶತಮಾನಗಳಿಂದ ಬೆಳೆದುಬಂದ ಸಾಮಾಜಿಕ ರೀತಿನೀತಿಗಳು, ಕಟ್ಟುಪಾಡುಗಳು, ನಂಬಿಕೆ ಅಪನಂಬಿಕೆಗಳು ಬದಲಾಗುವುದು ಅಷ್ಟು ಸುಲಭವಲ್ಲ. ಮುಸ್ಲಿಮರ ಆಕ್ರಮಣಗಳು ಭಾರತೀಯ ಸಮಾಜದ ಮೇಲೆ ಸಾಕಷ್ಟು ಪ್ರಭಾವ ಬೀರಿದುವು. ಭಾರತದಲ್ಲಿ ಮುಸ್ಲಿಮರ ಆಡಳಿತ ಸ್ಥಿರಗೊಂಡಂತೆ ಭಾರತೀಯ ಸಮಾಜದ ಮೇಲೆ ಅದರ ಪ್ರಭಾವದ ಮುದ್ರೆ ಬೀಳಲಾರಂಭವಾಯಿತು.

ಆಡಳಿತ ಮತ್ತು ನ್ಯಾಯವಿಷಯಗಳಲ್ಲಿ ಕಟ್ಟುನಿಟ್ಟಿನ ಆಚರಣೆಯನ್ನು ತಂದು ಅವನ್ನು ವ್ಯವಸ್ಥಿತ ರೂಪಕ್ಕೆ ತಂದ ಮೊದಲಿಗರಲ್ಲಿ ಮುಸ್ಲಿಮರೂ ಸೇರಿದ್ದಾರೆ. ನ್ಯಾಯವ್ಯವಸ್ಥೆಯಲ್ಲಂತೂ ಅವರಿಗೆ ವಿಶೇಷ ಸ್ಥಾನ. ಬಾಗ್ದಾದಿನ ಕಲೀಫರ ನಿಷ್ಪಕ್ಷಪಾತ ನ್ಯಾಯದಾನ ಯಾರಿಗೆ ತಾನೇ ಗೊತ್ತಿಲ್ಲ? ಮುಸ್ಲಿಮರ ಸಾಮ್ರಾಜ್ಯ ಪೂರ್ವಕ್ಕೆ ವಿಸ್ತರಿಸಿದಂತೆ ಇಸ್ಲಾಮೀ ಆಡಳಿತ ಮತ್ತು ನ್ಯಾಯವ್ಯವಸ್ಥೆಗಳೂ ಅದರ ಜೊತೆಯಲ್ಲೇ ಬಂದುವು. ಮುಸ್ಲಿಂ ಆಕ್ರಮಣಕ್ಕೆ ಒಳಗಾದ ಇತರ ಅನೇಕ ದೇಶಗಳಲ್ಲಾದರೋ ಅಲ್ಲಿಯ ಮತ, ನಂಬಿಕೆ, ಧರ್ಮಗಳು ಅಳಿದು ಅಲ್ಲಿ ಇಸ್ಲಾಮೀ ಸಂಸ್ಕೃತಿಯೇ ಬೇರುಬಿಟ್ಟಿತು. ಆದರೆ ಭಾರತದ ಸನಾತನ ಸಾಮಾಜಿಕ ವ್ಯವಸ್ಥೆ ಬದಲಾಗುವುಧು ಅಷ್ಟು ಸುಲಭವಲ್ಲ. ಇಸ್ಲಾಮೀ ನ್ಯಾಯವ್ಯವಸ್ಥೆ ಭಾರತೀಯ ನ್ಯಾಯವ್ಯವಸ್ಥೆಯ ಮೇಲೆ ಸಾಕಷ್ಟು ಪ್ರಭಾವ ಬೀರಿದಂತೆ ತಾನೂ ಅನೇಕ ಬದಲಾವಣೆಗಳಿಗೆ ಒಳಗಾಯಿತು. ಇಂದಿನ ಭಾರತೀಯ ನ್ಯಾಯವ್ಯವಸ್ಥೆಯ ಅನೇಕ ಹಂತಗಳು ಸ್ಪಷ್ಟವಾಗಿ ರೂಪಗೊಂಡಿದ್ದು ಮೊಗಲ್

ಸಾಮ್ರಾಜ್ಯದ ಕಾಲದಲ್ಲಿ. ಆ ಕಾಲದ ನ್ಯಾಯವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ವಿವೇಚಿಸುವುದು ಈ ಲೇಖನದ ಉದ್ದೇಶ. ಮೊಗಲರ ಕಾಲದ ನ್ಯಾಯವ್ಯವಸ್ಥೆಯು ಬಹುಭಾಗ ಇಸ್ಲಾಮೀ ನ್ಯಾಯವ್ಯವಸ್ಥೆಯಾದ್ದರಿಂದ ಇಸ್ಲಾಮೀ ನ್ಯಾಯವನ್ನು ಮೊದಲು ತಿಳಿದುಕೊಳ್ಳುವುದು ಅವಶ್ಯ.

ಮಹಮ್ಮದ್ ಪೈಗಂಬರ್ ಮತ್ತು ಮುಂಚಿನ ಕಲೀಫರು ನ್ಯಾಯವನ್ನು ವೈಯಕ್ತಿಕವಾಗಿ ತೀರ್ಮಾನ ಮಾಡುತ್ತಿದ್ದರು. ಆದರೆ ಇಸ್ಲಾಮೀ ಚಕ್ರಾಧಿಪತ್ಯದ ಬೆಳವಣಿಗೆಯಾಗದಂತೆ ಈ ಪ್ರಾಚೀನ ಪದ್ಧತಿ ಬದಲಾವಣೆಗೆ ಒಳಗಾಯಿತು. ಭಾರತದಲ್ಲಿ ಮೊಗಲರ ಮತ್ತು ಗುಲಾಮೀ ಮತ್ತು ಖಿಲ್ಜಿ ಸಂತತಿಯವರ ಆಡಳಿತದ ಕಾಲದಲ್ಲಿ ಇಸ್ಲಾಮೀ ನ್ಯಾಯಶಾಸ್ತ್ರ ಬಹಳಷ್ಟು ಬದಲಾವಣೆಗೆ ಒಳಗಾಯಿತು. ಅದು ವ್ಯವಸ್ಥಿತ ರೂಪಕ್ಕೆ ಬಂದದ್ದು ಮೊಗಲರ ಕಾಲದಲ್ಲಿ.

ಮೊದಮೊದಲು ದೆಹಲಿಯ ಸುಲ್ತಾನರು ಇದನ್ನು ಮುಸ್ಲಿಮೇತರರ ಮೇಲೆ ಹೇರಲು ಪ್ರಯತ್ನಿಸಿದರು. ಆದರೆ ಇದು ಅಸಾಧ್ಯ ಎಂದು ತಿಳಿಯಲು ಅವರಿಗೆ ಹೆಚ್ಚು ಕಾಲ ಬೇಕಾಗಲಿಲ್ಲ. ಗುಲಾಮೀ ಸಂತತಿಯ ರಾಜನಾದ ಬಾಲ್‌ಬನ್ ಸಹ ಈ ರೀತಿ ಇಸ್ಲಾಮೀ ನ್ಯಾಯಶಾಸ್ತ್ರವನ್ನು ಏಕಪಕ್ಷೀಯವಾಗಿ ಆಚರಣೆಗೆ ತರುವಲ್ಲಿ ವಿಫಲನಾದ. ಇಸ್ಲಾಮೀ ಧರ್ಮ ತನ್ನ ಪ್ರಜೆಗಳನ್ನು ಮುಸ್ಲಿಮರು ಮತ್ತು ಮುಸ್ಲಿಮೇತರರು ಎಂದು ಎರಡು ಭಾಗವಾಗಿ ಮಾಡುತ್ತದೆ. ಇಸ್ಲಾಂ ರಾಜ್ಯದ ಮುಸ್ಲಿಂ ಚಕ್ರವರ್ತಿ ಕುರಾನಿನ ನ್ಯಾಯದ ಪ್ರಕಾರ ರಾಜ್ಯವಾಳಬೇಕಿತ್ತು. ಮುಸ್ಲಿಮೇತರರು ಮುಸ್ಲಿಮರ ಜೊತೆ ಸರಿಸಮಾನವಾದ ಹಕ್ಕು ಪಡೆಯದಿದ್ದರೂ ತಮ್ಮದೇ ಆದ ಸಂಪ್ರದಾಯ ಮತ್ತು ರೂಢಿಗಳನ್ನು ಅನುಸರಿಸಲು ಅವಕಾಶ ಪಡೆದಿದ್ದರು. ಮುಸ್ಲಿಮರು ಮತ್ತು ಮುಸ್ಲಿಮೇತರರು ನ್ಯಾಯದ ದೃಷ್ಟಿಯಿಂದ ಸರಿಸಮಾನರೆಂದು ಪರಿಗಣಿಸದಿದ್ದರೂ ಅಂತಿಮವಾಗಿ ಮುಸ್ಲಿಮನಿಗೇ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುತ್ತಿತ್ತು. ಮುಸ್ಲಿಂ ನ್ಯಾಯಪಂಡಿತರಿಂದ ತಯಾರಿಸಲ್ಪಟ್ಟ ನ್ಯಾಯಪದ್ಧತಿಯನ್ನೇ ಅನಂತರ ಬಂದ ದೆಹಲಿ ಸುಲ್ತಾನರು ಮತ್ತು ಮೊಗಲರು ಅನುಸರಿಸಿದರು. ಇಸ್ಲಾಮೀ ನ್ಯಾಯಶಾಸ್ತ್ರವನ್ನು ಪ್ರಾಮಾಣಿಕವಾಗಿ ಅನುಸರಿಸುವುದು ಸಾಧ್ಯವಿಲ್ಲವೆಂದು ಅನೇಕ ಮೊಗಲ್ ದೊರೆಗಳಿಗೆ ಅರಿವಾಯಿತು. ಮುಸ್ಲಿಮೇತರರು ತಮ್ಮವೇ ಆದ ಸಂಪ್ರದಾಯಗಳನ್ನು ಅನುಸರಿಸಲು ಅಕ್ಬರ್ ಅವಕಾಶ ಕೊಟ್ಟ. ಆದರೆ ಕಠಿಣ ಹಾಗೂ ಸಂಪ್ರದಾಯಸ್ಥ ದೊರೆಯಾದ ಔರಂಗ್‌ಜೇಬ್ ಇಸ್ಲಾಮೀ ನ್ಯಾಯವನ್ನು ಯಾವ ಭೇದವಿಲ್ಲದೆ ತನ್ನ ಎಲ್ಲ ಪ್ರಜೆಗಳ ಮೇಲೆ ಹೇರಲು ಪ್ರಯತ್ನಿಸಿದ.

೧೭ನೆಯ ಶತಮಾನದ ಎಲ್ಲ ಮೊಗಲ್ ರಾಜರಲ್ಲಿ ಅನೇಕರು ನಿರಂಕುಶ ಪ್ರಭುಗಳಾಗಿದ್ದರು. ಇದರಿಂದ ಅವರು ಅನೇಕ ಸಾರಿ ತಮ್ಮ ಇಚ್ಛಾನುಸಾರವಾಗಿ ಮತ್ತು ಕೆಲವು ಸಂದರ್ಭಗಳಲ್ಲಿ ಕ್ಷಿಪ್ರರೀತಿಯಲ್ಲಿ ನ್ಯಾಯಾಡಳಿತ ನಡೆಸಿದ್ದಾರೆ.

ಈ ಆಧಾರದ ಮೇಲೆ ಮೊಗಲರು ಅನುಸರಿಸಿದ ನ್ಯಾಯಪದ್ಧತಿಯನ್ನೇ ಖಂಡಿಸಲು ಸಾಧ್ಯವಿಲ್ಲ. ಅಲ್ಲದೆ ಅದೇ ಶತಮಾನದಲ್ಲಿ ಭಾರತಕ್ಕೆ ಭೇಟಿಕೊಟ್ಟ ವಿದೇಶೀಯರು ಇಸ್ಲಾಮೀ ನ್ಯಾಯಪದ್ಧತಿಯ ಬಗ್ಗೆ ವಿವರಣೆಗಳನ್ನು ಕೊಟ್ಟಿದ್ದಾರೆ. ಆದರೆ ಇವರು ಮೆಗಾಸ್ತನೀಸ್ ಅಥವಾ ಫಾಹಿಯಾನ್ ರೀತಿಯ ಬರಹಗಾರರಾಗಿಲ್ಲದ್ದರಿಂದ ಮತ್ತು ಅವರ ಮುಖ್ಯ ಉದ್ದೇಶ ವ್ಯಾಪಾರವಾಗಿದ್ದುದರಿಂದ ಅವರ ಹೇಳಿಕೆಗಳನ್ನು ಸಂಪೂರ್ಣವಾಗಿ ನಂಬಲು ಸಾಧ್ಯವಿಲ್ಲ. ಕೆಲವು ಮುಸ್ಲಿಂ ಬರಹಗಾರರ ಕೃತಿಗಳನ್ನು ವಿವರವಾಗಿ ನೋಡುವುದರಿಂದ ಅಂದಿನ ನ್ಯಾಯ ಬಹಳ ನಿಷ್ಪಕ್ಷಪಾತ ಹಾಗೂ ಪ್ರಾಮಾಣಿಕವಾದದ್ದು ಎಂದು ತಿಳಿಯುತ್ತದೆ. ಮೊಗಲರು ಪರಿಪಾಲಿಸಿದಂಥ ನ್ಯಾಯ ಪಕ್ಷಪಾತವಿಲ್ಲದ್ದೂ ಚುರುಕಿನದೂ ಕಡಿಮೆ ವೆಚ್ಚದ್ದೂ ಎಂದು ಹೇಳಬಹುದು. ಇಂದಿನ ಪದ್ಧತಿ ವಿಸ್ತಾರವಾದ ಮತ್ತು ಜಟಿಲವಾದ ನ್ಯಾಯವಾದುದರಿಂದ ಎಷ್ಟೋ ಸಂದರ್ಭಗಳಲ್ಲಿ ತಾಂತ್ರಿಕ ಕಾರಣಗಳ ಆಧಾರದ ಮೇಲೆ ನ್ಯಾಯವನ್ನು ತಿರಸ್ಕರಿಸಲಾಗುತ್ತದೆ. ಆದರೆ ಅಂದು ಹಾಗೆ ನ್ಯಾಯವನ್ನು ತಿರಸ್ಕರಿಸುವಂತಿರಲಿಲ್ಲ. ಆಪಾದಿತ ತನ್ನ ತಪ್ಪು ಒಪ್ಪುವಂತೆ ಮಾಡಲು ಮತ್ತು ಸತ್ಯವನ್ನು ಕಂಡುಹಿಡಿಯಲು ಎಲ್ಲ ರೀತಿಯ ಗೂಢಚರ್ಯೆ, ವಿಚಾರಣೆ, ನಿಯೋಗ ಮತ್ತು ಪ್ರಜ್ಞಾವಂತ ತಂತ್ರಗಳನ್ನು ಅಂದಿನ ನ್ಯಾಯಾಧೀಶರು ಉಪಯೋಗಿಸುತ್ತಿದ್ದರು. ಇಂದು ಇದು ಸಲ್ಲದು.

ಇಸ್ಲಾಮೀ ನ್ಯಾಯಶಾಸ್ತ್ರದ ಮೂಲಾಧಾರಗಳು ನಾಲ್ಕು: ಅವು ಕುರಾನ್, ಹದೀಸ್, ಕಿಯಾಸ್, ಮತ್ತು ಇಜ್ಮ (ಸರ್ವಸಮ್ಮತಿ). ಇಸ್ಲಾಮೀ ನ್ಯಾಯ ಪವಿತ್ರ ನ್ಯಾಯಗಳ ಶ್ರೇಣಿಗೆ ಸೇರಿದೆ, ಇದರಲ್ಲಿ ಬರುವ ನ್ಯಾಯಕಲ್ಪನೆ ಇಂದಿನದಕ್ಕಿಂತ ಭಿನ್ನವಾಗಿದೆ, ಇದು ಮಾನವನಿಂದ ಕಲ್ಪಿತವಾದುದಲ್ಲ, ದೇವರಿಂದ ಮಹಮದನ ಮುಖಾಂತರ ಬಂದುದ್ದು, ಇದು ದೈವಸಂಕಲ್ಪ ಮತ್ತು ಈ ನ್ಯಾಯ ಬದಲಾಗದು —ಇದು ಇಸ್ಲಾಮೀ ನ್ಯಾಯದ ಮೂಲತತ್ತ್ವ. ಇಸ್ಲಾಮೀ ನ್ಯಾಯದ ಹೆಸರು ಷರಿಯತ್. ಫಿಕಾ ಅಥವಾ ನ್ಯಾಯಶಾಸ್ತ್ರ ಇದರಲ್ಲಿ ಅಂತರ್ಗತವಾಗಿದೆ. ಈ ನ್ಯಾಯ ಎಲ್ಲ ಮತಭೇದಗಳಿಗೂ ಅನ್ವಯವಾಗುವಂತೆ ಏಕಸ್ವರೂಪದ್ದಲ್ಲ.[1] ಯಾವ ಮುಸ್ಲಿಂ ರಾಜನೂ ಧಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟ ಇಸ್ಲಾಮೀ ನ್ಯಾಯವನ್ನು ಬದಲಾಯಿಸುವಂತಿಲ್ಲ. ಮೇಲಿನ ನಾಲ್ಕು ಆಧಾರಗಳ ಜೊತೆಗೆ ಮತೀಯ ನ್ಯಾಯಾಲಯಗಳ ಪೂರ್ವನಿದರ್ಶನಗಳು, ನ್ಯಾಯಪಂಡಿತರ ಅಭಿಪ್ರಾಯಗಳು ಪೂರಕವಾಗಿದ್ದವು. ಇವು ಕುರಾನಿನ ಅರ್ಥವನ್ನು ಕೂಲಂಕಷವಾಗಿ ತಿಳಿಸುತ್ತವೆಯೇ ವಿನಾ ಇದಕ್ಕೆ ಯಾವ ಹೊಸ ತತ್ತ್ವವನ್ನಾಗಲೀ ನಿಯಮವನ್ನಾಗಲೀ ಸೇರಿಸುವುದಿಲ್ಲ.

---

[1] ಎಲ್. ಎಸ್. ಜಹಗೀರ್‌ದಾರ್: 'ಇಸ್ಲಾಮೀ ನ್ಯಾಯ', ಕನ್ನಡ ವಿಶ್ವಕೋಶ, ಸಂ. 2, ಪು. 450

ನ್ಯಾಯಾಲಯದ ಅಧಿಕಾರವ್ಯಾಪ್ತಿ ಕಾಜಿಯ ಅಧಿಕಾರವನ್ನು ಅವಲಂಬಿಸಿರುತ್ತಿತ್ತು. ವಾದಿಯ ಅರ್ಜಿಯನ್ನು ನ್ಯಾಯಾಲಯ ವಿಚಾರಣೆಗೆ ತೆಗೆದುಕೊಳ್ಳುತ್ತಿತ್ತು. ನ್ಯಾಯಾಲಯ ತನ್ನ ಅಧಿಕಾರವ್ಯಾಪ್ತಿಯಲ್ಲೇ ವಾಸಿಸುವ ಪಕ್ಷಗಳಿಂದ ಅರ್ಜಿಗಳನ್ನು ಸ್ವೀಕರಿಸಬಹುದಾಗಿತ್ತು. ಅರ್ಜಿಯಲ್ಲಿ ನಮೂದಿಸಿರುವ ವಿಷಯ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಡದಿದ್ದರೂ ಅದನ್ನು ವಿಚಾರಣೆ ಮಾಡಬಹುದಿತ್ತು. ಆದರೆ ಅರ್ಜಿದಾರರ ವಾಸಸ್ಥಾನ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಡದಿದ್ದರೆ ಮಾತ್ರ ಅರ್ಜಿಯನ್ನು ಸ್ವೀಕರಿಸುತ್ತಿರಲಿಲ್ಲ. ಒಟ್ಟಾರೆ ಮಹತ್ತ್ವವಿದ್ದದ್ದು ಅರ್ಜಿದಾರನ ಸ್ಥಾನಕ್ಕೆ.

ಅರ್ಜಿದಾರನನ್ನು 'ಮುದ್ದೈ' ಎಂದೂ ಪ್ರತಿವಾದಿಯನ್ನು 'ಮುದ್ದಲೈ' ಎಂದೂ ಕರೆಯಲಾಗುತ್ತಿತ್ತು. ಅರ್ಜಿಗಳು ಲಿಖಿತ ರೂಪದಲ್ಲಿಯಾಗಲಿ ಮುಖತಃವಾಗಲಿ ಕೊಡಬಹುದಿತ್ತು. ಬಾಯಿ ಹೇಳಿಕೆಗಳನ್ನು ನ್ಯಾಯಾಲಯದ ಸಹಾಯಕ (ಕಾತಿಬ್) ಬರೆದುಕೊಳ್ಳುತ್ತಿದ್ದ. ಈ ಅರ್ಜಿಯಲ್ಲಿ ವಾದಿಯ ಹೆಸರು, ಅವನ ತಂದೆಯ ಹೆಸರು ಮತ್ತು ಅವನ ವಿಳಾಸ ಇವನ್ನು ಬರೆಯಲಾಗುತ್ತಿತ್ತು. ಇದೇ ವಿಧಾನವನ್ನೇ ಸಾಕ್ಷಿದಾರನ ಬಗ್ಗೆಯೂ ಅನುಸರಿಸಲಾಗುತ್ತಿತ್ತು. ಸ್ಥಿರ ಆಸ್ತಿಯ ಬಗ್ಗೆ ವ್ಯಾಜ್ಯವೇನಾದರೂ ಆಗಿದ್ದರೆ ಆಗ ಆ ಆಸ್ತಿಯ ನಾಲ್ಕು ಕಡೆಯ ಚಕ್ಕುಬಂದಿ, ಅದು ಇರುವ ಸ್ಥಳ ಮುಂತಾದವುಗಳನ್ನು ತಿಳಿಸಬೇಕು. ಅದೇನಾದರೂ ಚರ ಆಸ್ತಿಯಾಗಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಿತ್ತು. ಅರ್ಜಿಯ ವಿಚಾರಣೆಯ ಸಮಯದಲ್ಲಿ ಎರಡು ಪಕ್ಷಗಳವರೂ ಹಾಜರಿರಬೇಕಾಗಿದ್ದದ್ದು ಕಡ್ಡಾಯ. ಹನಫಿ ನ್ಯಾಯದ ಪ್ರಕಾರ ಕಾಜಿ ಏಕಪಕ್ಷೀಯ ತೀರ್ಪು ಕೊಡುವ ಹಾಗಿರಲಿಲ್ಲ. ಪ್ರತಿವಾದಿ ಸ್ವತಃ ನ್ಯಾಯಾಲಯಕ್ಕೆ ಬರಲು ಅಥವಾ ತನ್ನ ಪ್ರತಿನಿಧಿಯನ್ನು ಕಳಿಸಲು ನಿರಾಕರಿಸಿದಲ್ಲಿ, ನ್ಯಾಯಾಲಯ ಅವನಿಗೆ ಮೂರು ಸಲ ನೋಟೀಸು ಕೊಟ್ಟು ತಾನೇ ಅವನ ಪ್ರತಿನಿಧಿಯನ್ನು ನೇಮಿಸಿ ಅನಂತರ ತೀರ್ಪು ಕೊಡಬಹುದಿತ್ತು. ನ್ಯಾಯಾಲಯದ ಆಜ್ಞೆಯನ್ನು ಪುಸ್ತಕಗಳಲ್ಲಿ ದಾಖಲು ಮಾಡಿಕೊಳ್ಳಲಾಗುತ್ತಿತ್ತು.

ಸಾಕ್ಷ್ಯದ ಬಗ್ಗೆ ಅನುಸರಿಸಲಾಗುತ್ತಿದ್ದ ನಿಯಮಗಳು ಕಟ್ಟುನಿಟ್ಟಾಗಿದ್ದುವು. ಪ್ರಾಮಾಣಿಕವಾದ ಸಾಕ್ಷ್ಯಕ್ಕೆ ಮಾತ್ರ ಅವಕಾಶಕೊಟ್ಟು ಅದರ ಆಧಾರದ ಮೇಲೆ ತೀರ್ಮಾನ ಕೊಡಲಾಗುತ್ತಿತ್ತು. ಸುಳ್ಳು ಮತ್ತು ಅಪ್ರಾಮಾಣಿಕವೆಂದು ಗೊತ್ತಾದ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಒಂದುಪಕ್ಷ ಸಾಕ್ಷಿದಾರ ಕೊಟ್ಟ ಪ್ರಮಾಣದ ಬಗ್ಗೆ ಅನುಮಾನ ಬಂದರೆ ಖಾಸಗಿಯಾಗಿ ತನಿಖೆ ನಡೆಸುವಂತೆ ನ್ಯಾಯಾಧೀಶನೇ ಗುಟ್ಟಾಗಿ ಮೂಸಕೀಗೆ (ಸಾಕ್ಷಿದಾರರ ಸಾಕ್ಷ್ಯದ ಬಗ್ಗೆ ಗುಟ್ಟಾಗಿ ತನಿಖೆ ನಡೆಸುವಾತ) ತಿಳಿಸುತ್ತಿದ್ದ. ಹೇಳಿಕೆಯ ಸಾಕ್ಷ್ಯಕ್ಕಿಂತ ಕಣ್ಣಾರೆ ಕಂಡ ಸಾಕ್ಷ್ಯಕ್ಕೇ ಹೆಚ್ಚಿನ ಪ್ರಾಶಸ್ತ್ಯ. ಹೇಳಿಕೆಯ ಸಾಕ್ಷ್ಯಗಳನ್ನು ಹೆಚ್ಚಾಗಿ ಗಣಿಸಲಾಗುತ್ತಿದ್ದದ್ದು ಔರಸತ್ವ, ವಿವಾಹ, ಪಿತೃತ್ವ ಮುಂತಾದವುಗಳ ತೀರ್ಮಾನದಲ್ಲಿ.

ಸಾಕ್ಷ್ಯ ಹೇಳಲು ಎಲ್ಲರೂ ಅರ್ಹರಾಗಿರಲಿಲ್ಲ. ಅರ್ಹತೆಯ ಬಗ್ಗೆ ಒಂದು ನಿಬಂಧನೆಯನ್ನು ಹಾಕಲಾಗಿತ್ತು. ಕುರುಡ, ಕಿವುಡ, ಹುಚ್ಚ, ಅನ್ಯಾಯಿ—ಇವರು ಸಾಕ್ಷಿದಾರರಾಗಲು ಅರ್ಹರಾಗಿರಲಿಲ್ಲ. ಸಾಕ್ಷಿದಾರ ಸಾಕ್ಷ್ಯವನ್ನು ಕೊಟ್ಟ ಅನಂತರ ತನ್ನ ಅರ್ಹತೆ ಕಳೆದುಕೊಂಡರೆ ಉದಾ. ಕುರುಡನಾದರೆ, ಕಿವುಡನಾದರೆ ಇತ್ಯಾದಿ, ಆ ಸಾಕ್ಷ್ಯದ ಆಧಾರದ ಮೇಲೆ ತೀರ್ಪನ್ನು ಕೊಡುತ್ತಿರಲಿಲ್ಲ. ಹೀಗೆಯೇ ಚಾಡಿ ಕೋರನೂ ಸಾಕ್ಷಿಯಾಗಲು ಅರ್ಹನಾಗಿರಲಿಲ್ಲ. ಆದರೆ ಅವನು ಮುಸ್ಲಿಮನಾಗಿ ಪರಿವರ್ತನೆ ಹೊಂದಿದರೆ ಈ ಅರ್ಹತೆ ಪಡೆಯುತ್ತಿದ್ದ. ಗುಲಾಮನೂ ಸಾಕ್ಷಿ ಹೇಳಲು ಅರ್ಹನಲ್ಲ. ಇವರೇ ಅಲ್ಲದೆ ಸಾರ್ವಜನಿಕ ಸಂತಾಪದಾರರು, ಸಂಗೀತ ವೃತ್ತಿಯವರು, ಕುಡುಕರು, ಜೂಜುಗಾರರು, ಸುಳ್ಳು ಹೇಳುವ ಹವ್ಯಾಸದವರು, ತಿಳಿಗೇಡಿಗಳು ಮತ್ತು 'ಸ್ವತಂತ್ರವಾಗಿ ಆಲೋಚಿಸುವವರು' (ಮಹಮ್ಮದನ ಹಿಂಬಾಲಕರನ್ನು ನಿಂದಿಸುವವರು) ಸಾಕ್ಷಿ ಹೇಳಲು ಅರ್ಹರಾಗಿರಲಿಲ್ಲ. ಕಾಜಿಯ ನ್ಯಾಯಾಲಯದಲ್ಲಿ ಮುಸ್ಲಿಮನಿಗೆ ವಿರುದ್ಧವಾದ ಮುಸ್ಲಿಮೇತರನ ಸಾಕ್ಷ್ಯಕ್ಕೆ ಅವಕಾಶವಿರಲಿಲ್ಲ. ಒಬ್ಬ ಮುಸ್ಲಿಮೇತರ ಇನ್ನೊಬ್ಬ ಮುಸ್ಲಿಮೇತರನ ವಿರುದ್ಧ ಸಾಕ್ಷ್ಯ ಹೇಳಬಹುದಿತ್ತೇ ಎಂಬ ವಿಷಯದಲ್ಲಿ ಪಂಡಿತರಲ್ಲಿ ಭಿನ್ನಾಭಿಪ್ರಾಯವಿದೆ. ಯಾವುದೇ ವ್ಯಕ್ತಿ ತನ್ನ ಮಗನ ಪರವಾಗಿ, ತಂದೆಯ ಪರವಾಗಿ ಇಲ್ಲವೆ ತಾತನ ಪರವಾಗಿ ಸಾಕ್ಷ್ಯ ಹೇಳಲು ಅರ್ಹನಾಗಿರಲಿಲ್ಲ ಹೆಂಡತಿ ಗಂಡನ ಪರವಾಗಿಯೂ ಮಾಲೀಕ ಗುಲಾಮನ ಪರವಾಗಿಯೂ ಒಬ್ಬ ಪಾಲುದಾರ ಮತ್ತೊಬ್ಬ ಪಾಲು ದಾರನ ಪರವಾಗಿಯೂ ಸಾಕ್ಷ್ಯ ಹೇಳಲು ಅರ್ಹರಾಗಿರಲಿಲ್ಲ. ಆದರೆ ಒಬ್ಬ ತನ್ನ ಸೋದರನ ವಿರುದ್ಧ ಸಾಕ್ಷ್ಯ ಹೇಳಬಹುದಾಗಿತ್ತು.[2]

ಇಸ್ಲಾಮೀ ನ್ಯಾಯದಲ್ಲಿ ಕಾಜಿಗೆ ವಿಶೇಷ ಸ್ಥಾನಮಾನಗಳನ್ನು ಕೊಡಲಾ ಗಿತ್ತು. ಈತ ನ್ಯಾಯಾಧೀಶನಾಗಿದ್ದ. ಕಾಜಿಯನ್ನು ನೇಮಿಸುವಾಗ ಅವನ ಉನ್ನತ ಗುಣಗಳನ್ನು ಆಧಾರವಾಗಿ ಇಟ್ಟುಕೊಳ್ಳಲಾಗುತ್ತಿತ್ತು. ಚಕ್ರವರ್ತಿ, ಪ್ರಾಂತಾಧಿಕಾರಿ, ದಿವಾನ ಅಥವಾ ಉನ್ನತ ದರ್ಜೆಯ ಆಡಳಿತಾಧಿಕಾರಿ ಆತನನ್ನು ನೇಮಕಮಾಡಬಹುದಾಗಿತ್ತು. ಈ ರೀತಿ ನಿಯಮಿಸುವಾಗ ನೇಮಕಗೊಳ್ಳುವ ವ್ಯಕ್ತಿಯ ಒಪ್ಪಿಗೆ ಪಡೆಯುವುದು ತೀರ ಆವಶ್ಯಕವಾಗಿತ್ತು. ನೇಮಕ ಮಾಡಿದ ಅಧಿಕಾರಿಯೇ ಅವನನ್ನು ಕೆಲಸದಿಂದ ತೆಗೆದುಹಾಕಬಹುದಿತ್ತು. ಒಬ್ಬ ಕಾಜಿಯ ನೇಮಕವನ್ನಾಗಲೀ ವಜಾಮಾಡಿದ್ದನ್ನಾಗಲೀ ಪ್ರಕಟಣೆಯ ಮೂಲಕ ಸಾರ್ವ ಜನಿಕರ ಗಮನಕ್ಕೆ ತರಬೇಕಾಗಿತ್ತು. ಕ್ಲಿಷ್ಟಕರ ಸಮಸ್ಯೆಗಳು ಎದುರಾದಾಗ ಆತ ನ್ಯಾಯಶಾಸ್ತ್ರಪಂಡಿತರ ಮತ್ತು ಧರ್ಮಾಧಿಕಾರಿಗಳ ಸಲಹೆ ಪಡೆಯುತ್ತಿದ್ದ. ಕಾಜಿಯ ನ್ಯಾಯಾಲಯದಲ್ಲಿ ಸಾರ್ವಜನಿಕರಿಗೆ ಪ್ರವೇಶವಿತ್ತು. ಕಾಜಿಯ

2 ಹಿದಾಯಿ ಹ್ಯಾಮಿಲ್ಟನ್‌ನ ಭಾಷಾಂತರ, ಸಂ. ೨, ಪು. ೩೫೯, ೩೬೦, ೩೬೧, ೩೬೨

ಸಹಾಯಕನಾಗಿ ಸಾಕ್ಷಿದಾರರ, ಅರ್ಜಿದಾರರ ಹೇಳಿಕೆಗಳನ್ನು ದಾಖಲುಮಾಡಿಕೊಳ್ಳಲು 'ಕಾತಿಬ್' (ಸಹಾಯಕ) ಇರುತ್ತಿದ್ದ. ಪಕ್ಷಗಳು ಸಾಕ್ಷಿಗಳನ್ನು ಪರೀಕ್ಷಿಸಬೇಕೆಂದು ಕೇಳಿಕೊಂಡರೆ ಆಗ ಕಾಜಿ ವಿಚಾರಣೆಯ ದಿನವನ್ನು ಮುಂದಕ್ಕೆ ಹಾಕಿ ಅಂದು ಪರೀಕ್ಷಿಸಬಹುದಿತ್ತು.

ಇಸ್ಲಾಂ ಧರ್ಮಪಂಥವನ್ನು ಪ್ರತಿಪಾದಿಸಿದ ಹಜರತ್ ಉಮರ್ ದೇಶದಲ್ಲಿ ನ್ಯಾಯನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪರಿಪಾಲಿಸಲು ಹಾಗೂ ಸಾಮಾನ್ಯ ಪ್ರಜೆಗೆ ಕಾನೂನಿನ ಬಗ್ಗೆ ತಿಳಿವಳಿಕೆ ನೀಡಲು ಒಂದು ಸಲಹಾಮಂಡಳಿ ಸ್ಥಾಪಿಸಿದ. ಇದನ್ನು ಉಮರನ ವ್ಯವಸ್ಥೆ ಎಂದು ಕರೆಯಲಾಗಿದೆ. ಈ ಮಂಡಳಿಯ ಪರಿಣಾಮದಿಂದ 'ಮುಫ್ತಿ'ಗಳು ಹುಟ್ಟಿಕೊಂಡರು. ಇವರು ಕಾಜಿಗೆ ನ್ಯಾಯದ ಬಗ್ಗೆ ಸರಿಯಾದ ಸಲಹೆ ಕೊಡುತ್ತಿದ್ದರು. ಇವರು ಇಂದಿನ ಅಡ್ವೊಕೇಟ್-ಜನರಲನ ಕರ್ತವ್ಯಗಳನ್ನು ಪರಿಪಾಲಿಸುತ್ತಿದ್ದರು. ಇವರ ಜೊತೆಗೆ ಕಾಜಿಗೆ ನ್ಯಾಯಸಲಹೆ ನೀಡಲು ವಕೀಲರನ್ನೂ ನೇಮಿಸಲಾಗುತ್ತಿತ್ತು. ಇಂದಿನ ವ್ಯವಸ್ಥೆಯಂತೆಯೇ ಇಸ್ಲಾಮೀ ನ್ಯಾಯದಲ್ಲಿ ವಕೀಲರಿಗೆ ಸ್ಥಾನವಿತ್ತು. ದಂಡಾರ್ಹ ಅಪರಾಧಗಳು (ಕ್ರೈಮ್ಸ್) ಮತ್ತು ವೈಯಕ್ತಿಕ ಅಪರಾಧಗಳನ್ನು (ಟಾರ್ಟ್ಸ್) ಬಿಟ್ಟು ಉಳಿದೆಲ್ಲ ವಿವಾದಗಳ ವಿಷಯದಲ್ಲಿ ಇವರನ್ನು ನೇಮಿಸಲಾಗುತ್ತಿತ್ತು. ವಕೀಲನನ್ನು ನೇಮಿಸುವ ವ್ಯಕ್ತಿ ಸ್ವತಃ ಮೊಕದ್ದಮೆಯಲ್ಲಿ ಭಾಗವಹಿಸುವ ಅರ್ಹತೆ ಪಡೆದಿರಬೇಕಿತ್ತು.

ಮೊಗಲರ ವ್ಯವಸ್ಥೆ

ಮೊಗಲರು ತಮ್ಮ ಪ್ರಜೆಗಳನ್ನು ಇಸ್ಲಾಮೀ ನ್ಯಾಯದ ಪ್ರಕಾರ ಆಳಬೇಕಾಗಿದ್ದರೂ ಅನೇಕ ಸಂದರ್ಭಗಳಲ್ಲಿ ಅವರು ತಮ್ಮ ನ್ಯಾಯವನ್ನು ಬದಲಾವಣೆಗೆ ಒಳಪಡಿಸಬೇಕಾಯಿತು. ಮೊಗಲರ ಕಾಲದಲ್ಲಿ ಈ ನ್ಯಾಯ ಹೆಚ್ಚಾಗಿ ಲೌಕಿಕ ಹಾಗೂ ಅಪರಾಧಿಕಗಳಿಗೆ ಸಂಬಂಧಪಟ್ಟಂತೆ ಆಯಿತು. ಈ ನ್ಯಾಯವನ್ನು ಎರಡು ರೀತಿಯಲ್ಲಿ ವಿಂಗಡಿಸಲಾಯಿತು. ಒಂದು ಮುಸ್ಲಿಮರಿಗೆ ಅನ್ವಯಿಸುವಂಥದು, ಮತ್ತೊಂದು ಜಿಮ್ಮಿಗಳಿಗೆ (ಮುಸ್ಲಿಮೇತರರು) ಅನ್ವಯಿಸುವುದು. ಆದರೆ ವ್ಯಭಿಚಾರ ಮುಂತಾದ ಅನೈತಿಕ ಅಪರಾಧಗಳಿಗೆ ಈ ನ್ಯಾಯ ಏಕರೂಪದ್ದಾಗಿತ್ತು.[3] ಈ ನ್ಯಾಯವನ್ನು ಧಾರ್ಮಿಕ (ಶಿಶ್ರಯಿ) ಮತ್ತು ಲೌಕಿಕ (ಷಾಯಿಲ್ ಶಿಶ್ರಯಿ) ಎಂದು ಎರಡು ಭಾಗ ಮಾಡಲಾಗಿದೆ. ಧಾರ್ಮಿಕ ವಿಷಯದ ಬಗ್ಗೆ ಯಾವ ಬದಲಾವಣೆಯೂ ಆಗಲಿಲ್ಲ. ಲೌಕಿಕ ನ್ಯಾಯದ ಬಗ್ಗೆ ಹೆಚ್ಚಿನ ಬದಲಾವಣೆಗಳಾದ್ದವು. ಭೂಕಂದಾಯ ಪದ್ಧತಿ, ಮಾರಾಟ ವಸ್ತುಗಳ ಮೇಲೆ ತೆರಿಗೆ ವಿಧಿಸುವುದು, ಅಂತರ

[3] ಫತ್ವೆ ಇ ಆಲಮ್‌ಗಿರಿ, ಸಂ. ೨, ಪು. ೩೫೧

ರಾಷ್ಟ್ರೀಯ ಕಾನೂನುಗಳ ಸೂತ್ರೀಕರಣ ಮತ್ತು ಉನ್ನತದರ್ಜೆಯ ಅಧಿಕಾರಿಗಳ ನೇಮಕದ ಬಗ್ಗೆ ಬದಲಾವಣೆಗಳಾದುವು. ಮೊಗಲರು ಮುಸ್ಲಿಂ ನ್ಯಾಯಪಂಡಿತರಿಂದ ಸಂಕಲನವಾದ ಕೃತಿಗಳನ್ನಾಧರಿಸಿ ನ್ಯಾಯಪರಿಪಾಲನೆ ಮಾಡಿದರೆಂದು ಈ ಹಿಂದೆಯೇ ಹೇಳಿದೆ. ಹಾಗೆ ಆದ ಸಂಕಲನಗಳಲ್ಲಿ ಕಟ್ಟಕಡೆಯದೆಂದರೆ ಔರಂಗ್‌ಜೇಬನ ಕಾಲದಲ್ಲಿ ೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ತಯಾರಿಸಲಾದ ಫತ್ವ-ಇ-ಆಲಮ್‌ಗಿರಿ. ಮೊಗಲರು ಪರಿಪಾಲಿಸಿದ ಹೆಚ್ಚುಪಾಲು ನ್ಯಾಯ ಭಾರತದ ಹೊರಗಿನಿಂದ ಬಂದುದು. ಮೊಗಲರು ಯಾವ ಲಿಖಿತ ಕಾನೂನನ್ನೂ ಹೊಂದಿರಲಿಲ್ಲವೆಂದು ಅನೇಕ ವಿದೇಶೀಯರು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯ ಹುರುಳಿಲ್ಲದ್ದೆಂದು ಹೇಳಬಹುದು. ಏಕೆಂದರೆ ಕುರಾನ್, ಹದೀಸ್, ನ್ಯಾಯಾಲಯಗಳ ಪೂರ್ವನಿದರ್ಶನಗಳು ಹಾಗೂ ನ್ಯಾಯಪಂಡಿತರ ಅಭಿಪ್ರಾಯಗಳು ಇವೆಲ್ಲವೂ ಲಿಖಿತರೂಪದವು.

ಮೊಗಲರ ಕಾಲದಲ್ಲಿ ಪಟ್ಟಣಗಳಲ್ಲಿ ಬಿಟ್ಟರೆ ಉಳಿದ ಕಡೆಯೆಲ್ಲಾ ಮುಸ್ಲಿಮೇತರರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಹೀಗಾಗಿ ಮೊಗಲ್ ದೊರೆಗಳು ಪೂರ್ತಿಯಾಗಿ ಇಸ್ಲಾಮೀ ನ್ಯಾಯವನ್ನು ಎಲ್ಲರ ಮೇಲೂ ಬಲವಂತವಾಗಿ ಹೇರಲು ಸಾಧ್ಯವಾಗಲಿಲ್ಲ. ಮುಸ್ಲಿಂ ನ್ಯಾಯಶಾಸ್ತ್ರದ ಜೊತೆಗೆ ಹಿಂದೂ ನ್ಯಾಯಶಾಸ್ತ್ರವೂ ಬಳಕೆಯಲ್ಲಿತ್ತು. ಹಿಂದೂಗಳನ್ನು ಹಿಂದೂ ನ್ಯಾಯಶಾಸ್ತ್ರದ ರೀತಿ ಆಳಲಾಗುತ್ತಿತ್ತು. ಆದರೆ ಇದು ವಾಸ್ತವಿಕವಾಗಿ ಚಕ್ರವರ್ತಿಯ 'ಮತಸಹಿಷ್ಣುತೆ'ಯನ್ನು ಅವಲಂಬಿಸಿತ್ತು. ಈ ದಿಶೆಯಲ್ಲಿ ಅಕ್ಬರ್ ಹೆಚ್ಚಿನ ಸಹಿಷ್ಣುವಾಗಿದ್ದ. ಅಕ್ಬರನ ಕಾಲದಲ್ಲಿ ಅಬ್ದುಲ್ ಫಸಲ್ ಎಂಬಾತ ಬರೆದ ಹಿಂದೂ ನ್ಯಾಯಶಾಸ್ತ್ರ ಇಂದಿಗೂ ಒಂದು ಅಧಿಕಾರಗ್ರಂಥ, ಮನುವಿನ ಹಿಂದೂ ನ್ಯಾಯ ಕಾಯಿದೆಯನ್ನೂ ಅನೇಕ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿತ್ತು. ಮೊಕದ್ದಮೆಗೆ ಸಂಬಂಧಪಟ್ಟ ಪಕ್ಷಗಳು ಹಿಂದೂಗಳಾಗಿದ್ದರೆ ಅವರ ವಿಚಾರಣೆಗೆ ಹಿಂದೂ ನ್ಯಾಯಾಧೀಶನನ್ನು ನೇಮಿಸಲಾಗುತ್ತಿತ್ತು. ಅಲ್ಲದೆ ಹಿಂದೂಗಳ ಸಿವಿಲ್ ಮೊಕದ್ದಮೆಗಳನ್ನೂ ಹಿಂದೂ ನ್ಯಾಯಾಲಯದಲ್ಲೇ ತೀರ್ಮಾನಿಸಲಾಗುತ್ತಿತ್ತು. ಇಸ್ಲಾಮೀ ನ್ಯಾಯದಂತೆಯೇ ವಿವಾಹ, ಆನುವಂಶಿಕತೆ ಮುಂತಾದ ವಿಷಯಗಳಲ್ಲಿ ಹಿಂದೂ ನ್ಯಾಯಶಾಸ್ತ್ರದಲ್ಲೂ ಯಾವ ಬದಲಾವಣೆಗಳೂ ಆಗಲಿಲ್ಲ. ಹಿಂದೂಗಳ ಮತೀಯ ಮತ್ತು ಧಾರ್ಮಿಕ ವಿವಾದಗಳನ್ನು ಮನೆಯ ಹಾಗೂ ಧಾರ್ಮಿಕ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಗುರಿಮಾಡಲಾಗುತ್ತಿತ್ತು. ಹಳ್ಳಿಗಳಲ್ಲಿ ಮುಕ್ಕಾಲು ಭಾಗ ಹಿಂದೂಗಳೇ ಇದ್ದುದರಿಂದ ಅವರಲ್ಲಿಯ ವ್ಯಾಜ್ಯಗಳನ್ನು ಹಿಂದೂ ನ್ಯಾಯಶಾಸ್ತ್ರದ ಪ್ರಕಾರ ತೀರ್ಮಾನಿಸಲಾಗುತ್ತಿತ್ತು. ಮೊಗಲರ ಕಾಲದಲ್ಲಿ ಇಸ್ಲಾಮೀ ಮತ್ತು ಹಿಂದೂ ನ್ಯಾಯಗಳ ಜೊತೆಯಲ್ಲಿಯೇ ಸಾಂಪ್ರದಾಯಿಕ ನ್ಯಾಯವನ್ನು ಕೆಲವು ಸಂದರ್ಭಗಳಲ್ಲಿ ಅನುಸರಿಸಲಾಯಿತು.

ಸಾಂಪ್ರದಾಯಿಕ ನ್ಯಾಯವೆಂದರೆ ವಂಶಪಾರಂಪರ್ಯವಾಗಿ ಬೆಳೆದುಬಂದ ಪದ್ಧತಿ. ಇದು ಲಿಖಿತರೂಪದ ಕಾನೂನಲ್ಲ. ಅನೇಕ ವಿಷಯಗಳಲ್ಲಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ಇದು ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪ್ರಚಲಿತವಾಗಿತ್ತು. ಕೆಲವು ವಿಷಯಗಳಲ್ಲಿ ಹಿಂದೂ ಹಾಗೂ ಮುಸ್ಲಿಂ ಸಾಂಪ್ರದಾಯಿಕ ಪದ್ಧತಿಗಳು ತೀರ ಭಿನ್ನವಾಗಿವೆ. ಉದಾ: ಮುಸ್ಲಿಮರ ಪ್ರಕಾರ ಚಿಕ್ಕಪ್ಪನ ಮಗಳನ್ನು ವಿವಾಹವಾಗುವುದು ನಿಷೇಧವಲ್ಲ. ಆದರೆ ಹಿಂದೂ ಪದ್ಧತಿಯಲ್ಲಿ ಇದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಹಾಗೆಯೇ ಹಿಂದೂ ಪದ್ಧತಿಯ ಪ್ರಕಾರ ಅಕ್ಕನ ಮಗಳನ್ನು ವಿವಾಹವಾಗುವುದಕ್ಕೆ ಅವಕಾಶವಿದೆ. ಆದರೆ ಮುಸ್ಲಿಂ ಪದ್ಧತಿಯ ಪ್ರಕಾರ ಇದು ನಿಷಿದ್ಧ.

ಪ್ರಮಾಣಕ್ಕೆ ಸಂಬಂಧಪಟ್ಟ ನ್ಯಾಯವೂ ವ್ಯವಸ್ಥಿತ ರೂಪದಲ್ಲಿತ್ತು. ಇದನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಅವು ಸಾಕ್ಷಿಯ ಹೇಳಿಕೆಗಳು, ಪ್ರಮಾಣಗಳು ಹಾಗೂ ಲಿಖಿತಪತ್ರಗಳು. ಪ್ರಮಾಣವಚನವನ್ನು ಹಿಂದೂಗಳು ಗೋವಿನ ಹೆಸರಿನಲ್ಲೂ ಕ್ರೈಸ್ತರು ಕ್ರಿಸ್ತನ ಹೆಸರಿನಲ್ಲೂ ಮುಸ್ಲಿಮರು ಕುರಾನಿನ ಹೆಸರಿನಲ್ಲೂ ಸ್ವೀಕರಿಸುವ ಪದ್ಧತಿ ಇತ್ತು.[4] ಯಾಂತ್ರಿಕವಾಗಿ ಎಲ್ಲ ಸಾಕ್ಷ್ಯ ಮತ್ತು ಪ್ರಮಾಣವಚನಗಳನ್ನೂ ನಂಬುತ್ತಿರಲಿಲ್ಲ. ನ್ಯಾಯಾಧೀಶ ಸತ್ಯ ಕಂಡು ಹಿಡಿಯುವಲ್ಲಿ ತನ್ನ ಬುದ್ಧಿವಂತಿಕೆ ಹಾಗೂ ಚಾಣಾಕ್ಷತನವನ್ನು ಉಪಯೋಗಿಸ ಬೇಕಿತ್ತು. ನ್ಯಾಯಾಧೀಶ ಅವನ ಹೇಳಿಕೆಗಳನ್ನು ದಾಖಲುಮಾಡಿಕೊಳ್ಳಬೇಕಿತ್ತೇ ವಿನಾ ಅವನಿಗೆ ಯಾವ ರೀತಿಯಲ್ಲೂ ನಿರ್ದೇಶಿಸುವಹಾಗಿರಲಿಲ್ಲ. ಸಿವಿಲ್ ಮೊಕದ್ದಮೆಗಳಲ್ಲಿ ಲಿಖಿತಪತ್ರಗಳಿಗೆ ಹೆಚ್ಚಿನ ಪ್ರಾಮುಖ್ಯ ಕೊಡಲಾಗಿತ್ತು. ಕಣ್ಣಾರೆ ಕಂಡ ಸಾಕ್ಷ್ಯಗಳನ್ನು ಹೆಚ್ಚಾಗಿ ಪರಿಗಣಿಸಲಾಗುತ್ತಿತ್ತು. ಅಲ್ಲದೆ ಯಾವುದಾದರೊಂದು ಮೊಕದ್ದಮೆಯನ್ನು ಪ್ರತಿಪಾದಿಸಲು ಕನಿಷ್ಠಪಕ್ಷ ಇಬ್ಬರು ಅಂಥ ಸಾಕ್ಷಿದಾರರಿರಬೇಕಾಗಿತ್ತು. ಇಲ್ಲದಿದ್ದರೆ ಮೊಕದ್ದಮೆಯನ್ನು ತಿರಸ್ಕರಿಸಲಾಗುತ್ತಿತ್ತು.

ಆದರೆ ರಾಜನ ಉತ್ತರಾಧಿಕಾರದ ಬಗ್ಗೆ ಯಾವ ವ್ಯವಸ್ಥಿತ ನ್ಯಾಯವೂ ಇರಲಿಲ್ಲ. ರೆವೆನ್ಯು ವಿಷಯಗಳನ್ನು ರೆವೆನ್ಯು ನ್ಯಾಯಾಲಯಗಳಲ್ಲಿ ಸಾಂಪ್ರದಾಯಿಕ ನ್ಯಾಯದ ಪ್ರಕಾರ ತೀರ್ಮಾನಿಸಲಾಗುತ್ತಿತ್ತು. ವಿದೇಶೀ ವ್ಯಾಪಾರ ಮತ್ತು ಸುಂಕಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಲು ಪ್ರತ್ಯೇಕ ನ್ಯಾಯಾಲಯಗಳು ಇದ್ದವು. ವಿದೇಶೀ ವರ್ತಕರು ತಮ್ಮ ಸರಕುಗಳ ಮೇಲೆ ತೆರಿಗೆ ಕೊಡಲೇಬೇಕಾಗಿತ್ತು. ಒಂದುಪಕ್ಷ ಕೊಡಲು ವಿಫಲರಾದರೆ ಕೊಡಬೇಕಾಗಿದ್ದ ತೆರಿಗೆಯ ಎರಡರಷ್ಟು ದಂಡವನ್ನು ವಸೂಲು ಮಾಡಲಾಗುತ್ತಿತ್ತು.

ಅಪರಾಧಗಳು ಮತ್ತು ಶಿಕ್ಷೆಗಳು

ಅಪರಾಧನ್ಯಾಯ ಹಳ್ಳಿಗಳಿಗೆ ಅನ್ವಯವಾಗುತ್ತಿರಲಿಲ್ಲ. ಏಕೆಂದರೆ ಸಾಮಾನ್

[4] ಅಬ್ದುಲ್ ಫಸಲ್, ಅಕ್ಬರ್‌ನಾಮ, ಪು. ೨೫೧

ವಾಗಿ ಹಳ್ಳಿಗಳಲ್ಲಿ ಈ ಬಗ್ಗೆ ನ್ಯಾಯ ತೀರ್ಮಾನವಾಗುತ್ತಿದ್ದದ್ದು ಪಂಚಾಯಿತಿಯಿಂದ. ಅಪರಾಧನ್ಯಾಯವೂ ಮೊಗಲರ ಕಾಲದಲ್ಲಿ ಸಾಕಷ್ಟು ಬದಲಾವಣೆಗೆ ಒಳಗಾಯಿತೆನ್ನಬಹುದು. ಕೆಲವು ಮೊಗಲ್ ರಾಜರು ಲೌಕಿಕ ದೃಷ್ಟಿಯಿಂದ ಸಣ್ಣಪುಟ್ಟ ತಪ್ಪುಗಳನ್ನು ಅಪರಾಧವೆಂದು ಪರಿಗಣಿಸುತ್ತಿದ್ದರು. ಅಪರಾಧಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ: ೧ ದೇವರಿಗೆ ವಿರುದ್ಧವಾದ ಅಪರಾಧಗಳು; ೨ ದೇಶಕ್ಕೆ ವಿರುದ್ಧವಾದ ಅಪರಾಧಗಳು; ೩ ವ್ಯಕ್ತಿಗೆ ವಿರುದ್ಧವಾದ ಅಪರಾಧಗಳು. ಇವೆಲ್ಲ ಸಾಮಾಜಿಕ ಅಪರಾಧಗಳೆಂದು ತಿಳಿದಿರಲಿಲ್ಲ. ದೇವರಿಗೆ ವಿರುದ್ಧವಾದ ಅಪರಾಧಗಳನ್ನು ರಾಜಿಯು ಮುಖಾಂತರ ತೀರ್ಮಾನ ಮಾಡಿಕೊಳ್ಳುವಹಾಗಿರಲಿಲ್ಲ. ಆದರೆ ಔರಂಗ್‌ಜೇಬನ ಕಾಲದಲ್ಲಿ ಈ ಅಪರಾಧಕ್ಕೆ ಪ್ರಾಯಶ್ಚಿತ್ತವೆಂದರೆ ಇಸ್ಲಾಂ ಮತಾಂತರ. ದೇಶಕ್ಕೆ ಮತ್ತು ವ್ಯಕ್ತಿಗೆ ವಿರುದ್ಧವಾದ ಅಪರಾಧಗಳನ್ನು ರಾಜಿಮಾಡಿಕೊಳ್ಳುವುದರ ಮೂಲಕ ತೀರ್ಮಾನಿಸಬಹುದಾಗಿತ್ತು. ಆದರೆ ಇದು ಇಂದಿನ ಪದ್ಧತಿಗೆ ಸಂಪೂರ್ಣವಾಗಿ ಭಿನ್ನವಾಗಿದೆ. ಇಂದು ಎಲ್ಲ ದಂಡಾಪರಾಧಗಳನ್ನೂ ದೇಶಕ್ಕೆ ವಿರುದ್ಧವಾದ ಅಪರಾಧಗಳೆಂದು ಪರಿಗಣಿಸಲಾಗಿದೆ. ಅಂದು ಕೊಲೆಯಾದ ವ್ಯಕ್ತಿಯ ಸಮೀಪ ಸಂಬಂಧಿ ಕೊಲೆಗಾರನ ರಕ್ತವನ್ನೋ ರಕ್ತಕ್ಕೆ ಬದಲಾಗಿ ಹಣವನ್ನೋ ಪರಿಹಾರವಾಗಿ ಕೇಳಬಹುದಾಗಿತ್ತು. ಒಂದು ಪಕ್ಷ ಅವನು ಇದಕ್ಕೆ ಒಪ್ಪದಿದ್ದರೆ ಆಗ ಅಪರಾಧಿಗೆ ತಕ್ಕ ಶಿಕ್ಷೆ ವಿಧಿಸಲಾಗುತ್ತಿತ್ತು. ಕೊಲೆ ಕೇವಲ ಕುಟುಂಬಕ್ಕೆ ಆದ ನಷ್ಟವೆಂಬುದು ಆಗಿದ್ದ ಭಾವನೆ. ಅಪರಾಧಿಯನ್ನು ರಾಜನೂ ಸೇರಿದಂತೆ ಯಾವ ಅಧಿಕಾರಿಯೂ ಶಿಕ್ಷಿಸದೆ ಬಿಡುಗಡೆ ಮಾಡುವ ಹಾಗಿರಲಿಲ್ಲ.

ವ್ಯಭಿಚಾರ, ಅವಿವಾಹಿತರ ಸಂಭೋಗ, ವಿವಾಹಸ್ತ್ರೀಯ ಮೇಲೆ ಸುಳ್ಳು ದೋಷಾರೋಪ, ಸ್ವಧರ್ಮಪರಿತ್ಯಾಗ, ಮದ್ಯಪಾನ, ಕಳ್ಳತನ ಮತ್ತು ಹೆದ್ದಾರಿ ದರೋಡೆ ಇವೆಲ್ಲವನ್ನೂ ದೇವರಿಗೆ ವಿರುದ್ಧವಾದ ಅಪರಾಧಗಳೆಂದೂ ರಾಜದ್ರೋಹ, ದುರಾಡಳಿತ, ದಂಗೆಕೋರತನ, ನೈತಿಕ ದುರಾಚಾರ ಇವನ್ನು ದೇಶಕ್ಕೆ ವಿರುದ್ಧವಾದ ಅಪರಾಧಗಳೆಂದೂ, ಸಿವಿಲ್ ಹಾಗೂ ದಂಡಾರ್ಹ ಅಪರಾಧಗಳನ್ನು ವ್ಯಕ್ತಿಗೆ ವಿರುದ್ಧವಾದ ಅಪರಾಧಗಳೆಂದೂ ವರ್ಗೀಕರಿಸಲಾಗಿತ್ತು. ಸಣ್ಣಪುಟ್ಟ ತಪ್ಪುಗಳನ್ನೂ ಅಪರಾಧಗಳೆಂದು ತೀರ್ಮಾನಿಸಲಾಗುತ್ತಿತ್ತು. ಅವು ಯಾವುವೆಂದರೆ: ಖೋಟಾನಾಣ್ಯ ತಯಾರಿಕೆ, ಸಮಾಧಿಗಳಿಂದ ಹೆಣದ ಅಪಹಾರ, ಅನ್ಯರ ಗೃಹಗಳಿಗೆ ಅಗ್ನಿಸ್ಪರ್ಶ, ವಿಷಪ್ರಯೋಗ, ಜೂಜು—ಇವೇ ಮುಂತಾದವು. ಸ್ವಧರ್ಮಪರಿತ್ಯಾಗ ಮತ್ತು ಧಾರ್ಮಿಕ ಅಪರಾಧಗಳಿಗೆ ಮರಣದಂಡನೆ ವಿಧಿಸಲಾಗುತ್ತಿತ್ತು. ಈ ಅಪರಾಧಕ್ಕೆ ಗುರಿಯಾದ ಹೆಂಗಸನ್ನು ಸೆರೆಮನೆ ವಾಸಕ್ಕೆ ಗುರಿಪಡಿಸಬೇಕೆಂಬುದು ಹನಫಿ ನ್ಯಾಯದ ಮತ. 'ಜಿಜಿಯಾ' ತಲೆಗಂದಾಯ ಕೊಡದ ಮುಸ್ಲಿಮೇತರರನ್ನು ಯಾವ ಮುಸ್ಲಿಮನಾದರೂ ಕೊಲ್ಲಬಹುದಾಗಿತ್ತು.

ಈ ನ್ಯಾಯದ ಪ್ರಕಾರ ಅಪರಾಧಿಗಳಿಗೆ ನಾಲ್ಕು ಬಗೆಯ ಶಿಕ್ಷೆಗಳಿವೆ. ಅವು ಯಾವುವೆಂದರೆ: ೧ ಹದ್, ೨ ಟಜೀರ್ (ಸುಧಾರಣಾ ಶಿಕ್ಷೆ), ೩ ಖಿಸಾಸ್ (ಪ್ರತಿಕಾರ) ಮತ್ತು ೪. ಟಷಹಿರ್.

ಹದ್ : ಈ ಶಿಕ್ಷೆ ದೇವರಿಂದ ವಿಧಿಸಲ್ಪಟ್ಟುದರಿಂದ ಇದನ್ನು ಯಾವ ನ್ಯಾಯಾಧೀಶನೂ ಬದಲಾಯಿಸುವ ಹಾಗಿರಲಿಲ್ಲ. ಇದನ್ನು ಮತೀಯ ನ್ಯಾಯ ಶಾಸ್ತ್ರದಲ್ಲಿ ತಿಳಿಸಲಾಗಿದೆ. ಇದು ಹೆಚ್ಚುಕಡಿಮೆ ಭಯ ಹುಟ್ಟಿಸುವ ಶಿಕ್ಷೆ. ಸಾಮಾನ್ಯವಾಗಿ ಕಲ್ಲಿನಿಂದ ಮತ್ತು ಚಾಟಿಯಿಂದ ಹೊಡೆಯುವುದೇ ಈ ಶಿಕ್ಷೆ. ಬೇರೆಬೇರೆ ಅಪರಾಧಗಳಿಗೆ ಈ ಶಿಕ್ಷೆಯ ಪರಿಮಾಣ ಬೇರೆಬೇರೆಯಾಗಿರುತ್ತಿತ್ತು. ವ್ಯಭಿಚಾರಿಗೆ ಆ ವ್ಯಕ್ತಿ ಸಾಯುವಂತೆ ಕಲ್ಲಿನಿಂದ ಹೊಡೆಯುವ ಶಿಕ್ಷೆ. ಅವಿವಾಹಿತ ಸಂಭೋಗ, ಕುಲಸ್ತ್ರೀಯ ಮೇಲೆ ಸುಳ್ಳು ದೋಷಾರೋಪಣೆ, ಕುಡಿತ—ಇವಕ್ಕೆ ಚಾಟಿಯಿಂದ ೮೦ ರಿಂದ ೧೦೦ ಏಟುಗಳ ಹೊಡೆತ. ಸಾಧಾರಣವಾದ ಹೆದ್ದಾರಿ ದರೋಡೆಗೆ ಕೈಕಾಲು ಚೋತಾ. ಕ್ರೂರ ರೀತಿಯ ದರೋಡೆಗೆ ಮರಣದಂಡನೆ.

ಟಜೀರ್ (ಸುಧಾರಣೆ) : ಆಪಾದಿತ ಮುಂದೆ ತಪ್ಪನ್ನು ಮಾಡದೆ ಸುಧಾರಣೆ ಹೊಂದುವಂತೆ ಮಾಡುವುದು ಸಾಮಾನ್ಯವಾಗಿ ಈ ಶಿಕ್ಷೆಯ ಉದ್ದೇಶ. 'ಹದ್' ಶಿಕ್ಷೆ ವಿಧಿಸದೆ ಇದ್ದ ಅಪರಾಧಗಳಿಗೆ ಈ ಶಿಕ್ಷೆ ಅನ್ವಯವಾಗುತ್ತಿತ್ತು. ಇದನ್ನು ವಿಧಿಸಬೇಕಾದರೆ ಅಪರಾಧಿ ಮಾನಸಿಕವಾಗಿ ವಿವೇಕಿಯಾಗಿರಬೇಕು. 'ಹದ್' ಶಿಕ್ಷೆಗಿಂತ ಈ ಶಿಕ್ಷೆಯ ವಿಚಾರಣೆ ಹೆಚ್ಚು ಸರಳವಾಗಿದ್ದುದರಿಂದ ಅನೇಕ ಸಂದರ್ಭ ಗಳಲ್ಲಿ ಲಂಚ ಕೊಟ್ಟು ಶಿಕ್ಷೆಯಿಂದ ಪಾರಾಗುತ್ತಿದ್ದುದುಂಟು.

ಖಿಸಾಸ್ (ಪ್ರತಿಕಾರ) : ಕೊಲೆಗೆ ಸಂಬಂಧಪಟ್ಟ ಅಪರಾಧಗಳಿಗೆ ಸಾಮಾನ್ಯ ವಾಗಿ ಈ ಶಿಕ್ಷೆ ಕೊಡಲಾಗುತ್ತಿತ್ತು. ಹಿಂದೆಯೇ ಹೇಳಿದಂತೆ, ಕೊಲೆಯಾದ ವ್ಯಕ್ತಿಯ ಸಮೀಪಸಂಬಂಧಿ ಕೊಲೆಗಾರನಿಂದ ಪ್ರತೀಕಾರಕ್ಕೋಸ್ಕರ ಅವನ ರಕ್ತ ವನ್ನೇ ಪರಿಹಾರವಾಗಿ ಪಡೆಯಬಹುದಾಗಿತ್ತು. ಅಥವಾ ಅದಕ್ಕೆ ಬದಲಾಗಿ ಹಣ ಪಡೆಯಬಹುದಾಗಿತ್ತು. ಒಂದು ಪಕ್ಷ ಅವನು ಇದಕ್ಕೆ ಒಪ್ಪದಿದ್ದರೆ ಆಗ ಕೊಲೆ ಗಾರನಿಗೆ ತಕ್ಕ ಶಿಕ್ಷೆ ವಿಧಿಸಲಾಗುತ್ತಿತ್ತು.

ಟಷಹಿರ್ (ಖಂಡನೆ): ಆಪಾದಿತನಿಗೆ ಸಾರ್ವಜನಿಕವಾಗಿ ಅವಮಾನ ಮಾಡವುದು ಇದರ ವೈಶಿಷ್ಟ್ಯ. ಇದು ಮುಸ್ಲಿಂ ಜಗತ್ತಿನಲ್ಲೇ ಅಲ್ಲದೆ ಹಿಂದೂ ಭಾರತ ಹಾಗೂ ಮಧ್ಯಯುಗದ ಯೂರೋಪಿನಲ್ಲೂ ಪ್ರಚಲಿತವಾಗಿತ್ತು. ಸಾಮಾನ್ಯ ವಾಗಿ ಸಣ್ಣಪುಟ್ಟ ಅಪರಾಧಗಳಿಗೆ ವಿಧಿಸಲಾಗುತ್ತಿದ್ದದ್ದು ಈ ಬಗೆಯ ಶಿಕ್ಷೆ. ಅಪರಾಧಿಯ ತಲೆ ಬೋಳಿಸಿ ಮುಖಕ್ಕೆ ಕಪ್ಪು ಹಚ್ಚಿ ಕೊರಳಿಗೆ ಚಪ್ಪಲಿಸರ ಹಾಕಿ ಕತ್ತೆಯ ಮೇಲೆ ಬಾಲದ ಕಡೆ ಮುಖ ಮಾಡಿಸಿ ಕೂರಿಸಿ ಊರಿನಲ್ಲೆಲ್ಲ ಮೆರವಣಿಗೆ ಮಾಡಲಾಗುತ್ತಿತ್ತು.

ಮರಣದಂಡನೆಯ ಪ್ರಕಾರಗಳು ಹಲವಾರು: ಕಲ್ಲಿನಿಂದ ಹೊಡೆದೋ,

ಕತ್ತಿಯಿಂದ ಕತ್ತರಿಸಿಯೋ, ಆನೆಯಿಂದ ತುಳಿಸಿಯೋ, ನೇಣುಹಾಕಿಯೋ, ಶಿರಚ್ಛೇಧನ ಮಾಡಿಯೋ, ವಿಷ ಹಾಕಿಯೋ ಕೊಲ್ಲಲಾಗುತ್ತಿತ್ತು. ರಾಜದ್ರೋಹ, ಒಳಸಂಚು ಮುಂತಾದವುಗಳಿಗೂ ಮರಣದಂಡನೆ ವಿಧಿಸಲಾಗುತ್ತಿತ್ತು. ಇದನ್ನು ಕಾರ್ಯರೂಪಕ್ಕೆ ತರುವ ಮುಂಚೆ ಮೂರು ಸಾರಿ ಚಕ್ರವರ್ತಿಯ ಅಪ್ಪಣೆ ಪಡೆಯಬೇಕಾಗಿತ್ತು.

ಕಳ್ಳತನ ಮಾಡಿದ ವ್ಯಕ್ತಿ ಮಾಲಿನೊಂದಿಗೆ ಸಿಕ್ಕಿಬಿದ್ದರೆ ಆಗ ಅದನ್ನು ಕಳೆದುಕೊಂಡ ಮಾಲೀಕನಿಗೆ ಸರಿಯಾದ ಸಾಕ್ಷ್ಯಪುರಾವೆಗಳನ್ನು ಪಡೆದು ವಾಪಸು ಕೊಡಬಹುದಿತ್ತು. ಖೋಟಾ ನಾಣ್ಯ ತಯಾರಕರಿಗೆ ವಿಧಿಸಲಾಗುತ್ತಿದ್ದದ್ದು ಟಸೀರ್ ಅಥವಾ 'ಟಷಹಿರ್' ಶಿಕ್ಷೆ. ಬಲಾತ್ಕಾರವಾಗಿ ಇತರರ ಹೆಂಡತಿ ಅಥವಾ ಮಕ್ಕಳನ್ನು ಅಪಹರಿಸಿದ ಪಕ್ಷದಲ್ಲಿ ಅಪಹೃತ ವ್ಯಕ್ತಿಯನ್ನು ವಾಪಸು ಮಾಡುವ ವರೆಗೂ ಅವನನ್ನು ಬಂಧಿಸಿಡಲಾಗುತ್ತಿತ್ತು. ಒಂದುಪಕ್ಷ ಅಪಹೃತ ವಾಪಸಾಗುವುದರೊಳಗೆ ಮರಣಹೊಂದಿದರೆ ಆಗ ಅಪಹರಿಸಿದ ವ್ಯಕ್ತಿಗೆ ಕ್ರೂರ ಶಿಕ್ಷೆ ನೀಡಿ ಸೆರೆಮನೆಗೆ ಕಳಿಹಿಸಲಾಗುತ್ತಿತ್ತು. ಕೆಲವು ಅಪರಾಧಿಗಳನ್ನು ಸೆರೆಮನೆಯಲ್ಲಿಡಲಾಗುತ್ತಿತ್ತು. ಸೆರೆಮನೆವಾಸದ ಕಾಲಾವಧಿಯ ಬಗ್ಗೆ ನಿಗದಿಯಾದ ಯಾವ ಕಾನೂನೂ ಇಲ್ಲ. ಹೀಗಾಗಿ ಖೈದಿಗಳನ್ನು ಅವರು ಪಶ್ಚತ್ತಾಪ ವ್ಯಕ್ತಪಡಿಸುವ ವರೆಗೂ ಬಿಡುಗಡೆಮಾಡುತ್ತಿರಲಿಲ್ಲ. ಚಕ್ರವರ್ತಿ ಪ್ರವಾಸದಲ್ಲಿದ್ದಾಗ ಅಥವಾ ಅರಮನೆಯಲ್ಲಿ ಸಂತೋಷ ಸಮಾರಂಭಗಳಾದಾಗ ಖೈದಿಗಳ ಬಿಡುಗಡೆಯಾಗುವ ಸಾಧ್ಯತೆ ಇತ್ತು. ರಾಜನಿಗೆ ವಿರುದ್ಧವಾದ ಅಪರಾಧಿಗಳಿಗೆ ಪ್ರದೇಶ ನಿರ್ಬಂಧ ಶಿಕ್ಷೆ ವಿಧಿಸಲಾಗುತ್ತಿತ್ತು. ಈ ಶಿಕ್ಷೆಗಳ ಜೊತೆಗೆ ಸರಿಯಾಗಿ ನ್ಯಾಯಪರಿಪಾಲಿಸಿದ ಅಧಿಕಾರಿಗಳನ್ನು ಕೆಲವು ಸಂದರ್ಭಗಳಲ್ಲಿ ಮೇಲ್ದರ್ಜೆಯಿಂದ ಕೆಳದರ್ಜೆಗೆ ಇಳಿಸಲಾಗುತ್ತಿತ್ತು. ಗಡಿಪಾರು ಶಿಕ್ಷೆ ಮತ್ತು ಗುಲಾಮರ ಮಾರಾಟ ಬಳಕೆಯಲ್ಲಿದ್ದುವು.

ಹೀಗೆ ಅಪರಾಧಕ್ಕೆ ಸಂಬಂಧಪಟ್ಟಂತೆ ಮೊಗಲರು ವ್ಯವಸ್ಥಿತ ಕಾನೂನನ್ನೇ ಅನುಸರಿಸಿದರು. ಅಪರಾಧನ್ಯಾಯಶಾಸ್ತ್ರ ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಏಕರೂಪದ್ದಾಗಿತ್ತು.

ಮೊಗಲರ ನ್ಯಾಯಾಲಯಗಳು

ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳ ವಿಚಾರಣೆಗೆ ವಿವಿಧ ನ್ಯಾಯಾಲಯಗಳಿದ್ದುವು. ಆಗಿನ ಸಿವಿಲ್ ನ್ಯಾಯಾಲಯ ಮತೀಯ ನ್ಯಾಯಾಲಯದಲ್ಲೇ ಸೇರಿಹೋಗಿತ್ತು. ನ್ಯಾಯಾಲಯಗಳು ಸಾಮಾನ್ಯವಾಗಿ ಮೂರು ವಿಧ: ೧ ಧಾರ್ಮಿಕ ನ್ಯಾಯಾಲಯ, ೨ ಸಾಮಾನ್ಯ ನ್ಯಾಯಾಲಯ ಮತ್ತು ೩ ರಾಜಕೀಯ ನ್ಯಾಯಾಲಯ. ಕುಟುಂಬ ಅಥವಾ ಅನುವಂಶೀಯತೆಗೆ ಸಂಬಂಧ

ಪಟ್ಟ ಧಾರ್ಮಿಕ ವಿವಾದಗಳನ್ನು ತೀರ್ಮಾನಿಸುವುದು ಸಾಮಾನ್ಯವಾಗಿ ಧಾರ್ಮಿಕ ನ್ಯಾಯಾಲಯಗಳ ಹೊಣೆ. ಲೌಕಿಕ (ಸೆಕ್ಯುಲರ್) ನ್ಯಾಯಾಲಯಗಳು ಸಂಪ್ರದಾಯವನ್ನೂ ಸಾಮಾನ್ಯ ನ್ಯಾಯವನ್ನೂ ಆಚರಣೆಗೆ ತಂದುವು. ಇಂಥ ನ್ಯಾಯಾಲಯಗಳಲ್ಲಿ ಮುಸ್ಲಿಮೇತರರು ನ್ಯಾಯಾಧೀಶರಾಗಿರುತ್ತಿದ್ದರು. ಹಳ್ಳಿಗಳಲ್ಲಿ ನ್ಯಾಯಪರಿಪಾಲನೆಯಾಗುತ್ತಿದ್ದದ್ದು ಮತೀಯ ನ್ಯಾಯಾಲಯಗಳ ಮತ್ತು ಪಂಚಾಯಿತಿಗಳ ಮೂಲಕ. ಇಲ್ಲಿ ಹಿಂದೂಗಳೇ ಹೆಚ್ಚಾಗಿ ಇದ್ದುದರಿಂದ ಬ್ರಾಹ್ಮಣ ಪಂಡಿತರ ನ್ಯಾಯಾಲಯಗಳೂ ಇದ್ದುವು.

ಚಕ್ರವರ್ತಿಯೇ ಶ್ರೇಷ್ಠ ನ್ಯಾಯಾಧೀಶ. ಅವನದು ಶ್ರೇಷ್ಟ ನ್ಯಾಯಾಲಯ. ಈ ನ್ಯಾಯಾಲಯಕ್ಕೆ ಅಪೀಲು ಹೋಗಬಹುದಿತ್ತು ಅಥವಾ ನೇರವಾಗಿಯೇ ಅದನ್ನು ಪ್ರವೇಶಿಸಲು ನಿರ್ಬಂಧವಿರಲಿಲ್ಲ. ಇಂದಿನವಂತೆ ಅಂದಿನ ನ್ಯಾಯಾಲಯಗಳು ಅನುಕ್ರಮವಾಗಿ ಸ್ಥಾಪಿತವಾಗಿರಲಿಲ್ಲ. ಅಲ್ಲದೆ ನ್ಯಾಯಾಲಯಗಳಲ್ಲಿ ಕೂರುತ್ತಿದ್ದ ಅಧಿಕಾರಿಗಳಿಗೆ ಅನುಗುಣವಾಗಿ ಅವುಗಳ ದರ್ಜೆಯ ನಿರ್ಣಯವಾಗುತ್ತಿತ್ತು. ಒಂದು ನ್ಯಾಯಾಲಯದಿಂದ ಮತ್ತೊಂದು ನ್ಯಾಯಾಲಯಕ್ಕೆ ಅಪೀಲು ಹೋಗಬಹುದಿತ್ತು. ಇಂದಿನ ರೀತಿ ಆಗ ವ್ಯವಸ್ಥಿತ ಅಪಲೇಟ್ ನ್ಯಾಯಾಲಯಗಳು ಇರಲಿಲ್ಲ. ನ್ಯಾಯಾಲಯಗಳಿಗೆ ಪೂರ್ವನಿದರ್ಶನಗಳ ಆವಶ್ಯಕತೆಯೂ ಇರಲಿಲ್ಲ.

ನ್ಯಾಯವ್ಯವಸ್ಥೆ

ಚಕ್ರವರ್ತಿಗೆ ಸಹಾಯಕರಾಗಿ ರಾಜಧಾನಿಯಲ್ಲಿ ನ್ಯಾಯಪರಿಪಾಲನೆ ಮಾಡಲು ದಿವಾನ್ ಅಲಾ ಮತ್ತು ಮುಖ್ಯ ಕಾಜಿ (ಕಾಜಿ-ಉಲ್-ಕಾಸತ್) ಇರುತ್ತಿದ್ದರು. ಪ್ರಾಂತಗಳಲ್ಲಿದ್ದವರು ಪ್ರಾಂತಾಧಿಕಾರಿ, ದಿವಾನ್, ಸಾದರ್, ಕಾಜಿ ಮತ್ತು ಮೀರ್ ಅದಲ್. ಇದಕ್ಕಿಂತ ಕೆಳಗೆ ಸರ್ಕಾರಿನಲ್ಲಿ ಫೌಜ್‌ದಾರ್, ಕೊತ್ವಾಲ್, ಅಮೀನ್ ಮತ್ತು ಕಾಜಿ ಇರುತ್ತಿದ್ದರು. ಇವರಲ್ಲಿ ಫೌಜ್‌ದಾರ್ ಎಲ್ಲರಿಗಿಂತ ಮೇಲ್ಪಟ್ಟವ. ಕಾಜಿ ಧಾರ್ಮಿಕ ವಿಷಯಗಳ ವಿಚಾರಣೆ ಮಾಡಿದರೆ, ಲೌಕಿಕ ಮೊಕದ್ದಮೆ ವಿಚಾರಣೆ ಮಾಡುವುದು ಕೊತ್ವಾಲನ ಹೊಣೆ. ಪೋಲೀಸ್ ಕರ್ತವ್ಯದ ಜೊತೆಗೆ ಕೆಲವು ನ್ಯಾಯಾಧಿಕಾರಗಳೂ ಕೊತ್ವಾಲನಿಗಿದ್ದುವು. ಸರ್ಕಾರಿನ ಕೆಳಗಡೆ ಪರಗಣದಲ್ಲಿ ಶೇಖ್‌ದಾರ್, ಕಾಜಿ ಮತ್ತು ಅಮೀನ್ ಇರುತ್ತಿದ್ದರು. ಪೂರ್ತಿಯಾಗಿ ಧಾರ್ಮಿಕ ವಿಷಯಗಳ ವಿಚಾರಣೆಯನ್ನು ಶೇಖ್‌ದಾರ್ ಮಾಡುತ್ತಿದ್ದ. ಕಾಜಿ ಸಿವಿಲ್ ಅಪರಾಧಿಕ ಹಾಗೂ ಧಾರ್ಮಿಕ ನ್ಯಾಯ ವಿಚಾರಣೆ ನಡೆಸಬೇಕಿತ್ತು. ಪರಗಣಕ್ಕಿಂತ ಕೆಳಗಡೆ ಗ್ರಾಮಪಂಚಾಯಿತಿಗಳು ಮತ್ತು ಮತೀಯ ನ್ಯಾಯಾಲಯಗಳು ಇದ್ದುವು.

ಪ್ರಾಂತದಿಂದ ಹಿಡಿದು ಪರಗಣದ ವರೆಗೂ ಕಾಜಿಯನ್ನು ನೇಮಕ ಮಾಡ

ಲಾಗುತ್ತಿತ್ತು. ಕಾಜಿ ಶ್ರೇಣಿಯ ಅತ್ಯಂತ ಉನ್ನತ ಹುದ್ದೆಯೆಂದರೆ ಮುಖ್ಯ ಕಾಜಿಯದು (ಕಾಜಿ–ಉಲ್-ಕಾಸತ್). ರಾಜಧಾನಿಯಲ್ಲಿ ಈತನ ವಾಸ್ತವ್ಯ. ಮುಸ್ಲಿಮರು ಹೆಚ್ಚಾಗಿದ್ದ ಸ್ಥಳಗಳಿಗೆ ಮಾತ್ರ ಕಾಜಿಗಳನ್ನು ನೇಮಿಸಲಾಗುತ್ತಿತ್ತು. ಕಾಜಿ ಇಸ್ಲಾಂ ಧರ್ಮಕ್ಕೆ ಅನುಸಾರವಾಗಿ ನಡೆದುಕೊಳ್ಳಬೇಕಿತ್ತು. ಹೀಗಿದ್ದರೂ ಅನೇಕ ಕಾಜಿಗಳು ಅಪ್ರಾಮಾಣಿಕರಾಗಿ ವರ್ತಿಸಿದ ನಿದರ್ಶನಗಳಿವೆ. ಔರಂಗ್‌ಜೇಬನ ಮೊದಲ ಮುಖ್ಯ ಕಾಜಿಯಾದ ಅಬ್ದುಲ್ ವಹೀಬ ೧೬ ವರ್ಷಗಳ ಅವಧಿಯಲ್ಲಿ ೩೦ ಲಕ್ಷ ರೂಪಾಯಿಗಳಷ್ಟು ಹಣವನ್ನು ಲಂಚರೂಪವಾಗಿ ಗಳಿಸಿದ್ದ ನಂತೆ. ಆದರೆ ಇವನ ಮಗ ಶೇಖ್–ಉ–ಇಸ್ಲಾಮ್ ತನ್ನ ತಂದೆಯ ಉತ್ತರಾಧಿಕಾರಿಯಾದಾಗ ಯಾರಿಂದಲೂ ಹಣ ಪಡೆಯುತ್ತಿರಲಿಲ್ಲ ಹಾಗೂ ಮೋಸದಿಂದ ತನ್ನ ತಂದೆ ಸಂಪಾದಿಸಿದ ಹಣವನ್ನು ಆತ ದಾನಮಾಡಿದ. ಕಾಜಿಗಳಿಗೆ ಅವರ ಕರ್ತವ್ಯನಿರ್ವಹಣೆಗೆ ಪ್ರತಿಯಾಗಿ ಸಂಬಳ ಕೊಡಲಾಗುತ್ತಿತ್ತು. ಮೊಗಲ್ ಕಾಜಿಗಳು ಇಸ್ಲಾಮೀ ಶಾಸ್ತ್ರದಲ್ಲಿ ಉಲ್ಲೇಖಿತವಾಗಿರುವಂತೆ ಕರ್ತವ್ಯ, ಗುಣ, ನೇಮಕ ವಿಧಾನ ಇವನ್ನು ಹೊಂದಿದ್ದರು. ಆದರೆ ಮೊಗಲರ ಕಾಲದಲ್ಲಿ ಮುಸ್ಲಿಮೇತರರನ್ನು ಸಾಮಾನ್ಯ ನ್ಯಾಯಾಲಯಗಳಲ್ಲಿ ಕಾಜಿಗಳಾಗಿ ನೇಮಿಸಲಾಯಿತು. ಕಾಜಿಗೆ ಸಹಾಯಕನಾಗಿ 'ಮುಫ್ತಿ' ಇರುತ್ತಿದ್ದ. ಈ ಪದ್ಧತಿ ಇದ್ದದ್ದು ಭಾರತದಲ್ಲಿ ಮಾತ್ರ. ಮೊಗಲರ ಕಾಲದಲ್ಲಿದ್ದ 'ಮುಫ್ತಿ' ಪದ್ಧತಿಯನ್ನು ಬ್ರಿಟಿಷರು ಅನುಸರಿಸಿದರು. ಉದಾಹರಣೆಗೆ ಲಾರ್ಡ್ ಕಾರ್ನ್‌ವಾಲಿಸ್ ಕಾಜಿಗಳನ್ನು, ಮುಫ್ತಿಗಳನ್ನು, ಪಂಡಿತರನ್ನು ನ್ಯಾಯಾಧೀಶರಿಗೆ ಸಲಹೆ ನೀಡಲು ನೇಮಿಸಿದ್ದ.

ಸಾರ್ವಜನಿಕರಿಗೆ ನ್ಯಾಯಾಲಯವನ್ನು ಪ್ರವೇಶಿಸುವ ಅವಕಾಶವಿತ್ತು. ವಿಚಾರಣೆಯ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿ ಇಬ್ಬರೂ ಹಾಜರಿರಬೇಕಾಗಿದ್ದುದು ಕಡ್ಡಾಯ. ಆದರೆ ಪ್ರಮಾಣವಚನವನ್ನು ತೆಗೆದುಕೊಳ್ಳಬೇಕಾಗಿದ್ದವನು ವಾದಿ ಮಾತ್ರ. ಸಾಕ್ಷಿಯ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿತ್ತು. ಅಲ್ಲದೆ ಒಬ್ಬ ಸಾಕ್ಷಿದಾರನ ಎದುರಿಗೆ ಮತ್ತೊಬ್ಬ ಸಾಕ್ಷಿದಾರ ಸಾಕ್ಷ್ಯ ಹೇಳುವ ಹಾಗಿರಲಿಲ್ಲ. ಎರಡು ಪಕ್ಷಗಳವರನ್ನೂ ಸಮಾನ ದೃಷ್ಟಿಯಿಂದ ನೋಡಬೇಕಾಗಿತ್ತು. ಒಂದು ಪಕ್ಷ ಸರಿಯಾದ ನ್ಯಾಯ ದೊರೆಯದಿದ್ದರೆ ಅದರಿಂದ ನೊಂದ ವ್ಯಕ್ತಿ ಚಕ್ರವರ್ತಿಯ ಬಳಿಗೆ ಅಪೀಲು ಹೋಗಬಹುದಾಗಿತ್ತು. ಪ್ರಾಮಾಣಿಕವಾಗಿ ನ್ಯಾಯಪರಿಪಾಲನೆ ಮಾಡಲು ಎಲ್ಲ ಮೊಗಲ್ ಚಕ್ರವರ್ತಿಗಳೂ ಪ್ರಯತ್ನಿಸುತ್ತಿದ್ದರು. ಅವರು ಸಾಮಾನ್ಯವಾಗಿ 'ದರ್ಶನ್' ಕಿಟಕಿಯ ಹತ್ತಿರ ಕೂಡುತ್ತಿದ್ದುದುಂಟು. ಆಗ ಅರ್ಜಿದಾರ ತನ್ನ ಅರ್ಜಿಯನ್ನು ಸಲ್ಲಿಸಬಹುದಾಗಿತ್ತು. ಒಂದು ಪಕ್ಷ ಅರ್ಜಿಗೆ ಸಂಬಂಧಪಟ್ಟಂತೆ ಹೆಚ್ಚಿನ ಪ್ರಮಾಣಗಳೂ ತನಿಖೆಗಳೂ ಅಗತ್ಯವಿದ್ದರೆ ಅದನ್ನು ಸಂಬಂಧಪಟ್ಟ ಕಾಜಿಗೆ

ಕಳಿಹಿಸುತ್ತಿದ್ದರು. ಅವನು ಸೂಕ್ತ ತನಿಖೆ ನಡೆಸಿ ಅದನ್ನು ವಾಪಸ್ಸು ಕಳಿಸಿದ ಮೇಲೆ ಚಕ್ರವರ್ತಿಯೇ ತೀರ್ಪು ಕೊಡುತ್ತಿದ್ದ. ಬೆಳಗ್ಗೆ ಮಧ್ಯಾಹ್ನ ಎರಡು ಹೊತ್ತೂ ನ್ಯಾಯಪರಿಪಾಲನೆ ನಡೆಯುತ್ತಿತ್ತು. ರಾಜಧಾನಿಯಲ್ಲಿರಲಿ, ಪ್ರವಾಸದಲ್ಲಿರಲಿ, ಬೀಡುಬಿಟ್ಟಿರಲಿ ತಮ್ಮ ಕರ್ತವ್ಯವನ್ನು ಎಂದೂ ಮರೆಯುತ್ತಿರಲಿಲ್ಲ. ಜಹಾಂಗೀರ್ ನ್ಯಾಯವನ್ನು ಎಲ್ಲ ಪ್ರಜೆಗಳಿಗೂ ಒದಗಿಸುವ ದೃಷ್ಟಿಯಿಂದ ಬಂಗಾರದ ಸರಪಣಿ ಇದ್ದ ಗಂಟೆಯನ್ನು ತನ್ನ ಅರಮನೆಯ ಮುಂದೆ ಇಟ್ಟಿದ್ದ. ಯಾರಿಗಾದರೂ ನ್ಯಾಯ ಬೇಕಾದಲ್ಲಿ ಆ ಸರಪಣಿ ಎಳೆದರೆ ಸಾಕು, ಚಕ್ರವರ್ತಿ 'ದರ್ಶನ್' ಕಿಟಕಿಯ ಹತ್ತಿರ ಬರುತ್ತಿದ್ದ. ನ್ಯಾಯ ಯಾಚಿಸಿ ಬಂದವನು ಆಗ ತನಗಾದ ಅನ್ಯಾಯದ ಬಗ್ಗೆ ಚಕ್ರವರ್ತಿಗೆ ಹೇಳಿಕೆ ಕೊಡಬಹುದಾಗಿತ್ತು. ಹೀಗೆ ಮೊಗಲ್ ಚಕ್ರವರ್ತಿಗಳು ನ್ಯಾಯಪರಿಪಾಲನೆಯ ವಿಷಯದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಅವರು ನ್ಯಾಯಾಲಯಕ್ಕೆ ಬಂದಾಗ ನಗಾರಿ ಬಾರಿಸಲಾಗುತ್ತಿತ್ತು. ಎಲ್ಲ ನ್ಯಾಯಾಧಿಕಾರಿಗಳೂ ಅಲ್ಲಿ ಹಾಜರಿರುತ್ತಿದ್ದರು. ಚಕ್ರವರ್ತಿಯೇ ಆಗ ನ್ಯಾಯದ ಮೂಲಸ್ಥಾನ.

ಇಸ್ಲಾಂ ನ್ಯಾಯಪದ್ಧತಿಯ ಅವಲೋಕನ ಮಾಡುವುದರಿಂದ ಆಧುನಿಕ ನ್ಯಾಯಪದ್ಧತಿಯ ಮೇಲೆ ಅದರಿಂದಾದ ಪರಿಣಾಮವನ್ನು ಸೂಕ್ಷ್ಮವಾಗಿ ತಿಳಿಯಬಹುದು. ಇಂದಿನ ನ್ಯಾಯಪದ್ಧತಿಯ ಮೇಲೆ ಅದರಿಂದಾದ ಪರಿಣಾಮವನ್ನು ಸೂಕ್ಷ್ಮವಾಗಿ ತಿಳಿಯಬಹುದು. ಇಂದಿನ ನ್ಯಾಯಪದ್ಧತಿ ಹೆಚ್ಚು ಕಡಿಮೆ ಮೊಗಲರ ನ್ಯಾಯ ಪದ್ಧತಿಯ ಆಧಾರದ ಮೇಲೆಯೆ ಸೃಷ್ಟಿಗೊಂಡಿದೆ. ಮೊಗಲರ ಕಾಲದಲ್ಲಿ ಬಳಕೆಯಲ್ಲಿದ್ದ ಕೆಲವು ನ್ಯಾಯಾಲಯಗಳಿಗೆ ಸಂಬಂಧಪಟ್ಟ ಪದಗಳು ಇಂದೂ ಬಳಕೆಯಲ್ಲಿವೆ. ಉದಾ: ದಾವಾ, ಗಾವಾ (ಸಾಕ್ಷಿ), ಸಮನ್, ಮುದ್ದೈ (ವಾದಿ), ಮದ್ದಲ್ಲೈ (ಪ್ರತಿವಾದಿ), ವಕೀಲ, ಜಮಾನತ್ (ಜಾಮೀನು), ಅದಾಲತ್ (ನ್ಯಾಯಾಲಯ). ಇದೂ ಅಲ್ಲವೆ ಇಂದಿನ ಜಿಲ್ಲಾ ನ್ಯಾಯಾಧೀಶ ಧಾರ್ಮಿಕ ವತ್ತಿಗಳ ಹಾಗೂ ವಿವಾಹ ವಿಚ್ಛೇದನಗಳ ವಿಷಯದಲ್ಲಿ ಸಿವಿಲ್ ಪ್ರಕ್ರಿಯಾ ಕಾಯಿದೆಯ ೯೨ (೨)ನೆಯ ಕಲಂ ಪ್ರಕಾರ ಕಾಜಿಯ ಉತ್ತರಾಧಿಕಾರಿಯೆಂದು ಹೇಳಲಾಗಿದೆ. ಇದರ ಜೊತೆಗೆ ಇಂದಿನ ಶ್ರೇಷ್ಠ ನ್ಯಾಯಾಲಯ ಸಾದರ್ ದಿವಾನಿ ಅದಾಲತ್ ಹೊಂದಿದ್ದ ಎಲ್ಲ ಅಧಿಕಾರ ಮತ್ತು ಹಕ್ಕುಗಳನ್ನು ಹೊಂದಿದೆ.

ಟಿ. ಆರ್. ನಾಗಪ್ಪ

ನಿರಕ್ಷರತಾ ನಿರ್ಮೂಲ ಕಾರ್ಯದಲ್ಲಿ ವಿಶ್ವಪ್ರಗತಿ

ವಯಸ್ಕರ ನಿರಕ್ಷರತಾ ನಿವಾರಣೆ ಒಂದು ಬೃಹತ್ ಸಮಸ್ಯೆ. ಇಂದು ಇಡೀ ಪ್ರಪಂಚದಲ್ಲಿ ಎಂಬತ್ತೊಂದು ಕೋಟಿ ವಯಸ್ಕರು ನಿರಕ್ಷರಕುಕ್ಷಿಗಳು. ನಿರಕ್ಷರತೆ ದೇಶದ ಅಭಿವೃದ್ಧಿಗೆ ಮಾರಕ. ನಿರಕ್ಷರತೆಯೊಡನೆ ನಡೆಸುತ್ತಿರುವ ಹೋರಾಟ ಕಡಿಮೆಯೇನಿಲ್ಲ. ಅದನ್ನು ತೊಡೆದುಹಾಕಲು ನಿರಂತರ ಪ್ರಯತ್ನಗಳು ಸಾಗುತ್ತಿವೆ. ಸರ್ಕಾರಗಳು ಈ ಕಾರ್ಯದಲ್ಲಿ ತೊಡಗಿವೆ. ಖಾಸಗಿ ಸಂಸ್ಥೆಗಳು ಈ ದಿಸೆಯಲ್ಲಿ ಶ್ರಮಿಸುತ್ತಿವೆ. ಸೇವಾಮನೋಭಾವದ ವ್ಯಕ್ತಿಗಳೂ ತಮ್ಮ ಕೈಲಾದ ಕಾಣಿಕೆಯನ್ನು ಸಲ್ಲಿಸುತ್ತಿದ್ದಾರೆ. ಅಂತರರಾಷ್ಟ್ರೀಯ ಸಂಸ್ಥೆಗಳು ಈ ಕಾರ್ಯದಲ್ಲಿ ಹೆಚ್ಚಿನ ಪ್ರಯತ್ನ ನಡೆಸುತ್ತಿವೆ. ಸಮಸ್ಯೆಯ ಪ್ರಮಾಣ ಹಿರಿದು; ಪ್ರಯತ್ನದ ಪ್ರಮಾಣ ಕಿರಿದು ಎಂಬ ಅಂಶ ಭಾಸವಾಗದೆ ಇರದು.

ಇಡೀ ವಿಶ್ವದಲ್ಲಿ ವಯಸ್ಕರ ಸಾಕ್ಷರತಾಪ್ರಗತಿಯನ್ನು ತಿಳಿಯಲು ಯೂನೆಸ್ಕೋ ಪ್ರಯತ್ನ ನಡೆಸಿದೆ. ಈ ಬಗ್ಗೆ ಅದು ತನ್ನ ಸದಸ್ಯರಾಷ್ಟ್ರಗಳಿಗೆ ಒಂದು ಪ್ರಶ್ನಾವಳಿಯನ್ನು ಕಳುಹಿಸಿಕೊಟ್ಟಿತು. ಇದಕ್ಕೆ ದೊರೆತ ಉತ್ತರವನ್ನು ಕ್ರೋಢೀಕರಿಸಿತು. ಇದನ್ನು ಪರಿಶೀಲನೆ ಮಾಡಿದಲ್ಲಿ ಇಡೀ ವಿಶ್ವದ ಸಾಕ್ಷರತಾ ಪ್ರಗತಿಯ ಸ್ಪಷ್ಟ ಚಿತ್ರ ಮನವರಿಕೆ ಆಗುವುದು.

ಸುಮಾರು ೩೫ ದೇಶಗಳಲ್ಲಿ ಸಾಕ್ಷರತಾ ಪ್ರಚಾರ ತೀವ್ರಗೊಂಡಿದೆ. ವಿಶ್ವ ಸಾಕ್ಷರತಾ ಕಾರ್ಯಕ್ರಮದ ಅಂಗವಾಗಿ ೧೮ ದೇಶಗಳಲ್ಲಿ ದೊಡ್ಡ ಮತ್ತು ಸಣ್ಣ ಪ್ರಮಾಣದ ಪ್ರಯೋಗಗಳು ನಡೆಯುತ್ತಿವೆ. ಸಾಮೂಹಿಕ ಸಾಕ್ಷರತಾ ಕಾರ್ಯಕ್ರಮದೊಂದಿಗೆ ಕ್ರಿಯಾತ್ಮಕ ಸಾಕ್ಷರತಾ ಯೋಜನೆ ಜಾರಿಗೆ ಬಂದಿದೆ. ಆರ್ಥಿಕಾಭಿವೃದ್ಧಿ ದೃಷ್ಟಿಯಿಂದ ಕೈಗಾರಿಕಾ ಮತ್ತು ವ್ಯವಸಾಯ ಕ್ಷೇತ್ರಗಳಿಗೆ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನು ಸೀಮಿತಗೊಳಿಸಿದೆ. ಅಲ್ಲದೆ ನಿರ್ದಿಷ್ಟ ಕ್ಷೇತ್ರಗಳಲ್ಲಿ ತೀವ್ರಪ್ರಯತ್ನದ ತಂತ್ರವನ್ನೂ ಬಳಸಲಾಗಿದೆ.

ಸಾಮೂಹಿಕ ಕಾರ್ಯಕ್ರಮ

ಕೆಲವು ಪ್ರದೇಶಗಳಲ್ಲಿ ನಿರಕ್ಷರತೆ ನಿರ್ಮೂಲವಾಗಿರುವುದು ಸಂತೋಷದ ಸಂಗತಿ.

ಸೋವಿಯತ್ ದೇಶದಲ್ಲಿ ಕೇವಲ ೨೦ ವರ್ಷಗಳಲ್ಲಿ ಸಾಮೂಹಿಕ ನಿರಕ್ಷರತೆಯನ್ನು ನಿರ್ಮೂಲ ಮಾಡಲಾಯಿತು. ೧೯೫೯ರ ಜನಗಣತಿ ಪ್ರಕಾರ ಅಲ್ಲಿ ಸಾಕ್ಷರತೆ ಸೇಕಡ ೯೮.೫ ಇತ್ತು. ಕ್ಯೂಬದಲ್ಲಿ ನಿರಕ್ಷರತಾ ನಿರ್ಮೂಲ ಕಾರ್ಯ ಕೊನೆಯ ಹಂತ ಮುಟ್ಟಿದೆ. ಸೈಪ್ರಸಿನಲ್ಲಿ ನಿರಕ್ಷರತೆ ಸಮಸ್ಯೆಯಾಗಿ ಉಳಿದಿಲ್ಲ. ಇಟಲಿಯಲ್ಲಿ ಹೊಸದಾಗಿ ಅಕ್ಷರಸ್ಥರಾಗಿರುವವರ ಕೇಂದ್ರಗಳಲ್ಲಿ ಓದುವ ತರಗತಿಗಳು ಆರಂಭವಾಗಿವೆ. ಈ ಕೇಂದ್ರಗಳು ವಯಸ್ಕರು ಮತ್ತೆ ನಿರಕ್ಷರತೆಗೆ ಜಾರದಂತೆ ನೋಡಿಕೊಳ್ಳಲು ಈ ಕೇಂದ್ರಗಳು ಸಹಾಯಕ. ಹಂಗರಿಯಲ್ಲಿ ನಿರಕ್ಷರತೆ ಸೇಕಡ ೦.೬ಕ್ಕೆ ಇಳಿದಿದೆ. ಸ್ಪೇನಿನಲ್ಲಿ ಇನ್ನೆರಡು ವರ್ಷಗಳಲ್ಲಿ ನಿರಕ್ಷರತೆ ನಿರ್ಮೂಲವಾಗುವ ಸೂಚನೆಗಳು ಕಾಣುತ್ತಿವೆ.

ನಿರಕ್ಷರತಾ ನಿರ್ಮೂಲದ ಹೋರಾಟ ಕೆಲವು ದೇಶಗಳಲ್ಲಿ ಸಾಮೂಹಿಕ ರೂಪ ತಾಳಿದೆ. ೧೯೭೧ರ ಸೆಪ್ಟೆಂಬರ್ ೨೮ರ ವೇಳೆಗೆ ಸಾಮೂಹಿಕ ಸಾಕ್ಷರತಾ ಚಳವಳಿಯನ್ನು ಮುಕ್ತಾಯಮಾಡಲು ಗಿನಿ ದೇಶ ಕಂಕಣತೊಟ್ಟಿದೆ. ಅರಬ್ ಗಣರಾಜ್ಯಕ್ಕೆ ಸೇರಿದ ಜಾರ್ಡನ್, ಕುವೈತ್ ಮತ್ತು ಸಿರಿಯ ದೇಶಗಳು ನಿರಕ್ಷರತಾ ನಿವಾರಣೆಗೆ ರಾಷ್ಟ್ರೀಯ ಯೋಜನೆ ರಚಿಸಿವೆ. ಅರಬ್ ಪ್ರಾಂತೀಯ ಸಾಕ್ಷರತಾ ಮಂಡಳಿ ಈ ಯೋಜನೆಗಳಿಗೆ ಹಣಕಾಸಿನ ಮತ್ತು ತಾಂತ್ರಿಕ ನೆರವು ನೀಡಲು ಒಪ್ಪಿದೆ. ಸಿರಿಯದ್ದು ಆರು ವರ್ಷದ ಅಕ್ಷರ ಪ್ರಚಾರ ಯೋಜನೆ. ಗ್ವಾಟೆಮಾಲ ನಾಲ್ಕು ವರ್ಷಗಳಲ್ಲಿ ನಿರಕ್ಷರತೆಯನ್ನು ನಿರ್ಮೂಲ ಮಾಡಲು ಯೋಜನೆ ತಯಾರಿಸಿದೆ. ಕೊಲಂಬಿಯ ಸಹ ಈ ದಿಸೆಯಲ್ಲಿ ಹೆಜ್ಜೆ ಇಟ್ಟಿದೆ.

ಕೆಲವು ದೇಶಗಳು ಸಾಕ್ಷರತಾ ಪ್ರಚಾರವನ್ನು ಮುಂದುವರಿಸುತ್ತಿವೆ. ಇನ್ನೂ ಕೆಲವು ದೇಶಗಳು ತಮ್ಮ ಕಾರ್ಯವನ್ನು ವಿಸ್ತರಿಸಿವೆ. ಕಾಮರೂನಿನಲ್ಲಿ ಆಡಳಿತಪಕ್ಷ ತನ್ನ ೧,೪೮,೦೦೦ ಮಂದಿ ಸದಸ್ಯರನ್ನೂ ಸಾಕ್ಷರಸ್ಥರನ್ನಾಗಿ ಮಾಡಲು ಏರ್ಪಾಡು ಮಾಡಿದೆ. ಘಾನ, ಲೈಬೀರಿಯ, ಉಗಾಂಡ ಮತ್ತು ಕಾಂಗೋ ದೇಶಗಳು ಸಾಮೂಹಿಕ ಸಾಕ್ಷರತಾ ಕಾರ್ಯಕ್ರಮವನ್ನು ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ಐಕ್ಯಗೊಳಿಸಿವೆ. ಸವೂದಿ ಅರೇಬಿಯ ಸಾಕ್ಷರತಾ ಕಾರ್ಯಕ್ರಮ ವಿಸ್ತರಿಸಲು ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತಂದಿದೆ. ಸೈನಿಕಶಾಖೆ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಆರಂಭಿಸಿದೆ. ಬೇಸಗೆ ಕಾಲದಲ್ಲಿ ಅಕ್ಷರ ಪ್ರಚಾರ ತರಗತಿಗಳನ್ನು ತೆರೆಯುವ ಯೋಚನೆಯೂ ಉಂಟು.

ಏಷ್ಯ ಖಂಡದ ಇತರ ದೇಶಗಳಲ್ಲೂ ಪ್ರಯತ್ನಗಳು ಸಾಗುತ್ತಿವೆ. ಇಲ್ಲಿ ಅನಕ್ಷರತಾ ಸಮಸ್ಯೆ ಅಗಾಧ. ಭಾರತದಲ್ಲಿ ೧೫ ಕೋಟಿ ವಯಸ್ಕರು ಅನಕ್ಷರಸ್ಥರು. ಇವರೆಲ್ಲರೂ ೧೪ ರಿಂದ ೪೫ ವಯಸ್ಸಿನವರು. ಸರ್ಕಾರಗಳು ಮತ್ತು ಖಾಸಗಿ ಸಂಸ್ಥೆಗಳು ನಿರಕ್ಷರತಾ ಸಮಸ್ಯೆಯ ಪರಿಹಾರಕ್ಕೆ ಶ್ರಮಿಸುತ್ತಿವೆ. ೧೯೬೮ರಲ್ಲಿ ಅಖಿಲ ಭಾರತ ವಯಸ್ಕರ ಶಿಕ್ಷಣ ಸಮ್ಮೇಳನ ನಡೆದು, ಸಾಧ್ಯವಾದಷ್ಟು

ಶೀಘ್ರಕಾಲದಲ್ಲಿ ನಿರಕ್ಷರತೆಯನ್ನು ನಿರ್ಮೂಲ ಮಾಡಲು ಸಮ್ಮೇಳನ ನಿರ್ಧರಿಸಿತು. ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ಗ್ರಾಮಶಿಕ್ಷಣ ಚಳವಳಿ ಅನುಕರಣ ಯೋಗ್ಯವಾಗಿದೆ. ಪ್ರತಿಯೊಂದು ಗ್ರಾಮದ ಜನರೂ ತಮ್ಮ ಗ್ರಾಮದಲ್ಲಿ ಅನಕ್ಷರತೆಯನ್ನು ನಿವಾರಿಸಲು ನಿರ್ಧರಿಸಿರುವುದು ಚಳವಳಿಯ ವೈಶಿಷ್ಟ್ಯ. ಈ ಚಳವಳಿಗೆ ತಗಲುವ ಖರ್ಚು ಕಡಿಮೆ. ತಲಾ ಕೇವಲ ೧ ರೂ. ಇದುವರೆಗೆ ೩೦ ಲಕ್ಷ ವಯಸ್ಕರನ್ನು ಅಕ್ಷರಸ್ಥರನ್ನಾಗಿ ಮಾಡಲಾಗಿದೆ. ಒಟ್ಟಿನಲ್ಲಿ ಜನತೆಯ ಉತ್ಸಾಹವೇ ಈ ಚಳವಳಿಯ ಯಶಸ್ಸಿಗೆ ಕಾರಣ. ಬೊಂಬಾಯಿ ನಗರ ಸಮಾಜ ಶಿಕ್ಷಣ ಸಮಿತಿ ಶಾಲಾ ಕಾಲೇಜು ವಿದ್ಯಾರ್ಥಿಗಳ ನೆರವನ್ನು ತೀವ್ರತೆರನಾದ ನಿರಕ್ಷರತಾ ನಿರ್ಮೂಲ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡಿದೆ. ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಪ್ರತಿಯೊಬ್ಬ ತಾಲ್ಲೂಕು ನಿರ್ವಹಣಾಧಿಕಾರಿಯೂ ಒಂದೊಂದು ಗ್ರಾಮವನ್ನು ಆರಿಸಿಕೊಂಡಿದ್ದಾನೆ. ಆ ಗ್ರಾಮದ ಎಲ್ಲ ಅನಕ್ಷರಸ್ಥ ವಯಸ್ಕರನ್ನೂ ಒಂದು ಗೊತ್ತಾದ ಅವಧಿಯಲ್ಲಿ ಸಾಕ್ಷರಸ್ಥರನ್ನಾಗಿ ಮಾಡುವುದೇ ಕಾರ್ಯಕರ್ತನ ಗುರಿ.

ಇಡೀ ಇರಾನ್ ದೇಶ ಅಕ್ಷರ ಪ್ರಚಾರ ಕಾರ್ಯದಲ್ಲಿ ತೊಡಗಿದೆ. ಅಲ್ಲಿ ಅಕ್ಷರ ಪ್ರಚಾರ ಕಾರ್ಯಕ್ರಮ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ. ಯುವಕರು ಸೈನ್ಯಕ್ಕೆ ಸೇರಬೇಕು. ಇಲ್ಲವೇ ಅಕ್ಷರ ಪ್ರಚಾರದಲ್ಲಿ ತೊಡಗಬೇಕು. ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಲೇಬೇಕು. ಗ್ರೀಸಿನಲ್ಲಿ ೧೪ರಿಂದ ೨೦ರವರೆಗಿನ ವಯಸ್ಸಿನ ಅನಕ್ಷರಸ್ಥರು ರಾತ್ರಿಶಾಲೆಗಳಿಗೆ ಕಡ್ಡಾಯವಾಗಿ ಸೇರಲೇಬೇಕು. ಪ್ರಾಥಮಿಕ ಶಾಲೆಯ ಶಿಕ್ಷಣ ಪೂರೈಸದ ವಿದ್ಯಾರ್ಥಿಗಳಿಗೂ ಇದು ಕಡ್ಡಾಯ. ಶಾಲೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸಾಕ್ಷರತಾ ಡಿಪ್ಲೊಮಗಳನ್ನು ನೀಡುತ್ತಾರೆ. ಟ್ಯುನೀಷಿಯದಲ್ಲಿ ಸಾಕ್ಷರತಾ ಚಳವಳಿಯ ಫಲಿತಾಂಶ ಆಶಾದಾಯಕ. ಅಲ್ಲಿಯ ಸರ್ಕಾರ ಹತ್ತು ವರ್ಷದ ಯೋಜನೆಯನ್ನು ರೂಪಿಸಿದೆ. ಯೋಜನೆಯ ವ್ಯಾಪ್ತಿಯಲ್ಲಿ ೯ ಲಕ್ಷ ಅನಕ್ಷರಸ್ಥ ವಯಸ್ಕರು ಬರುತ್ತಾರೆ. ಅಮೆರಿಕ ಸಹ ನಿರಕ್ಷರತಾ ನಿರ್ಮೂಲ ಕಾರ್ಯಕ್ರಮಕ್ಕೆ ಹೊರತಲ್ಲ. ಇದುವರೆಗೆ ಇದಕ್ಕಾಗಿ ೧೦ ಕೋಟಿ ಡಾಲರು ವೆಚ್ಚ ಮಾಡಿದೆ. ೧.೫ ಲಕ್ಷ ಮಂದಿ ಅಕ್ಷರಸ್ಥರಾಗಿದ್ದಾರೆ. ಅವರ ಪೈಕಿ ೮೭,೦೦೦ ಮಂದಿಗೆ ಉದ್ಯೋಗಗಳು ದೊರಕಿ ಹೆಚ್ಚಿನ ಸಂಬಳ ಮತ್ತು ಬಡ್ತಿ ದೊರಕಿವೆ.

ಕ್ರಿಯಾತ್ಮಕ ಯೋಜನೆ

ಅನೇಕ ದೇಶಗಳಲ್ಲಿ ಸಾಮೂಹಿಕ ಸಾಕ್ಷರತಾ ಕಾರ್ಯಕ್ರಮಗಳು ಕ್ರಿಯಾತ್ಮಕ ವಾಗಿ ಮಾರ್ಪಾಡುಹೊಂದಿವೆ. ಟ್ಯುನೀಷಿಯದಲ್ಲಿ ಸಹಕಾರಿ ಬೇಸಾಯ ಕ್ಷೇತ್ರದಲ್ಲಿ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ ಆರಂಭವಾಗಿದೆ. ಅರಬ್ ಗಣರಾಜ್ಯದಲ್ಲಿ ಸಾಮೂಹಿಕ ಸಾಕ್ಷರತಾ ಯೋಜನೆಗೆ ೬ ಲಕ್ಷ ಮಂದಿ ವಯಸ್ಕರು ಒಳಗಾಗಿದ್ದಾರೆ.

ಪ್ರತಿವರ್ಷ ಒಂದು ಲಕ್ಷ ವಯಸ್ಕರಿಗೆ ಕ್ರಿಯಾತ್ಮಕವಾಗಿ ಸಾಕ್ಷರರನ್ನಾಗಿ ಮಾಡಲು ಏರ್ಪಾಡಾಗಿದೆ. ಮಲೇಷಿಯ ೧೯೭೫ರ ವೇಳೆಗೆ ಸಾಕ್ಷರತೆ ಸಾಧಿಸಬೇಕೆಂಬ ಗುರಿ ಹೊಂದಿದೆ. ಸಾಕ್ಷರತೆಯನ್ನು ಗಳಿಸಲು ಗೊತ್ತುಮಾಡಿರುವ ಅವಧಿ ೨ ವರ್ಷ. ವ್ಯವಸಾಯ, ಪಶುಪಾಲನೆ, ಮೀನುಗಾರಿಕೆ, ರಬ್ಬರು ಬೆಳೆ, ಗೃಹವಿಜ್ಞಾನ ಮುಂತಾದ ಜನಪ್ರಿಯ ಕಸಬುಗಳ ಬಗ್ಗೆ ಹೆಚ್ಚಿನ ತಿಳಿವಳಿಕೆಯನ್ನು ಓದುಬರಹ ದೊಂದಿಗೆ ಕಲಿಸುವ ಏರ್ಪಾಡು ಈ ಯೋಜನೆಯ ವೈಶಿಷ್ಟ್ಯ. ಇಸ್ರೇಲಿನಲ್ಲಿ ಅಕ್ಷರ ಪ್ರಚಾರ ತರಗತಿಯ ಅವಧಿ ಮೂರು ತಿಂಗಳು. ತರಬೇತು ಬಲವತ್ತರವಾದುದು. ತರಗತಿ ಪ್ರತಿನಿತ್ಯವೂ ಪೂರ್ಣಕಾಲ ನಡೆಯುತ್ತದೆ. ತರಗತಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ನಿತ್ಯಸಂಪಾದನೆಯ ನಷ್ಟವಾಗಬಹುದು. ಕಾರ್ಮಿಕ ಇಲಾಖೆ ಈ ನಷ್ಟವನ್ನು ದಿನಗೂಲಿ ಕೊಡುವುದರ ಮೂಲಕ ಭರ್ತಿಮಾಡಿಕೊಡುತ್ತದೆ.

ಕಾಂಗೋ ಗಣರಾಜ್ಯದಲ್ಲಿ ಅನುಕರಣೀಯ ಯೋಗ್ಯವಾದ ಏರ್ಪಾಡಿದೆ. ಖಾಸಗಿ ಕಾರ್ಖಾನೆಗಳಲ್ಲಿ ಅನಕ್ಷರಸ್ಥರಾದ ಕಾರ್ಮಿಕರಿಗೆ ಓದುಬರಹ ಕಲಿಸುವ ಜವಾಬ್ದಾರಿ ಆಯಾ ಕಾರ್ಖಾನೆಗಳ ಮಾಲೀಕರಿಗೆ ಸೇರಿದ್ದು. ಅರಬ್ ಗಣ ರಾಜ್ಯದಲ್ಲೂ ಇದೇ ಏರ್ಪಾಡಿದೆ. ಶೀಘ್ರದಲ್ಲೇ ಈ ಏರ್ಪಾಡು ಕಾನೂನಿನ ಸ್ವರೂಪ ತಾಳುತ್ತದೆ. ಕಾನೂನು ಜಾರಿಗೆ ಬಂದ ಐದು ವರ್ಷಗಳ ಅನಂತರ ಯಾವ ಕಾರ್ಖಾನೆಯವರೂ ಅನಕ್ಷರಸ್ಥ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸು ವಂತಿಲ್ಲ. ಇದಕ್ಕೆ ವಿರುದ್ಧವಾಗಿ ವರ್ತಿಸಿದಲ್ಲಿ ಶಿಕ್ಷೆಗೆ ಗುರಿಯಾಗುವರು. ಸಿರಿಯದ ಕಾರ್ಖಾನೆಗಳಲ್ಲಿ ೪೫ ವರ್ಷದ ಒಳಗಿರುವ ಕಾರ್ಮಿಕರು ಅಕ್ಷರಸ್ಥರಾಗಬೇಕು. ತಾವು ವಾಸಮಾಡುವ ಕ್ಷೇತ್ರದ ಸುತ್ತುಮುತ್ತ ಇರುವ ಹತ್ತಿರದ ಶಾಲೆಗಳಿಗೆ ಹೋಗಿ ಓದುಬರಹ ಕಲಿಯಲೇಬೇಕು. ಈ ಏರ್ಪಾಡಿಗೆ ಕಾನೂನಿನ ಬೆಂಬಲವೂ ದೊರೆಯಲಿದೆ. ತರಬೇತು ಪಡೆಯಲಿರುವ ಪ್ರತಿಯೊಬ್ಬ ಉಪಾಧ್ಯಾಯನೂ ತಲಾ ೬ ಮಂದಿ ವಯಸ್ಕ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ಆಜ್ಞೆಯನ್ನು ಗ್ವಾಟಿಮಾಲ ವಿದ್ಯಾ ಶಾಖೆ ಜಾರಿ ಮಾಡಿದೆ. ಅಕ್ಷರ ಪ್ರಚಾರದ ಉಸ್ತುವಾರಿ ನಡೆಸಲು ಇಂಡೊನೇಷ್ಯ ಸರ್ಕಾರ ಗ್ರಾಮಮಟ್ಟದ ವರೆಗೂ ಸಮಿತಿಗಳನ್ನು ರಚಿಸಿದೆ. ಸಿರಿಯದಲ್ಲಿ ಅಕ್ಷರ ಪ್ರಚಾರದಲ್ಲಿ ತೊಡಗಿರುವ ಸ್ವಯಂಸೇವಕ ಸಂಸ್ಥೆಗಳ ಸಂಖ್ಯೆ ೧೮.

ಹಣಕಾಸಿನ ವ್ಯವಸ್ಥೆ

ಯುನೆಸ್ಕೋ ಸಂಗ್ರಹಿಸಿರುವ ಅಂಕಿ ಅಂಶಗಳ ಪ್ರಕಾರ ೧೬ ದೇಶಗಳು ಅಕ್ಷರ ಪ್ರಚಾರ ಯೋಜನೆಗೆ ಹೆಚ್ಚು ಹಣ ನಿಗದಿಮಾಡಿವೆ. ವಿದ್ಯಾಖಾತೆಯ ಜೊತೆಗೆ ಆಸಕ್ತಿಹೊಂದಿದ ಇತರ ಶಾಖೆಗಳೂ ಹಣ ಖರ್ಚುಮಾಡುತ್ತಿವೆ. ಕೆಲವು ಕಡೆಗಳಲ್ಲಿ ಸಾರ್ವಜನಿಕರಿಂದ, ಲಾಟರಿ ಮತ್ತು ಧ್ವಜಗಳನ್ನು ಮಾರುವುದರ ಮೂಲಕ ಹಣ

ಸಂಗ್ರಹ ಮಾಡಲಾಗುತ್ತಿದೆ. ಬ್ರಜಿಲ್ ಸರ್ಕಾರ ೧೯೬೯ರಲ್ಲಿ ಅಂಚೆಯ ಕಾಗದ ಮತ್ತು ಪ್ಯಾಕೆಟ್ಟುಗಳ ಮೇಲೆ ೩೦ ಸೆಂಟವೊ ಹೆಚ್ಚಿಗೆ ಸ್ಟಾಂಪುಗಳನ್ನು ಹಚ್ಚ ಬೇಕೆಂದು ನಿಗದಿಮಾಡಿತು. ಈ ರೀತಿ ವಸೂಲಾದ ಹಣ ಅಕ್ಷರ ಪ್ರಚಾರಕ್ಕೆ ಮುಡಿಪು. ಜೊತೆಗೆ ಜೂಜಿನ ತೆರಿಗೆಯಿಂದ ವಸೂಲಾದ ಹಣವೂ ಅಕ್ಷರ ಪ್ರಚಾರಕ್ಕೆ ಮೀಸಲು. ೧೯೬೫ರಿಂದ ಕಾರ್ಖಾನೆ ಮತ್ತು ವಾಣಿಜ್ಯಕೇಂದ್ರಗಳಲ್ಲಿ ಕೆಲಸಗಾರರ ಸಂಬಳದಲ್ಲಿ ಶೇಕಡ ೧.೫ರಷ್ಟನ್ನು ಇದಕ್ಕಾಗಿ ವಸೂಲು ಮಾಡ ಲಾಗುತ್ತಿದೆ. ಖಾಸಗಿ ಕಾರ್ಖಾನೆಗಳಲ್ಲಿ ಕೆಲಸಮಾಡುವ ಅನಕ್ಷರಸ್ಥ ಉದ್ಯೋಗಿ ಗಳಿಗೆ ಓದುಬರಹ ಕಲಿಸುವ ಜವಾಬ್ದಾರಿ ಆಯಾ ಮಾಲೀಕರಿಗೆ ಸೇರಿದ್ದು.

೧೯೬೯ರಲ್ಲಿ ರೋಂನಲ್ಲಿ ಪ್ರಪಂಚದ ವಿವಿಧ ಬ್ಯಾಂಕರುಗಳು, ಬಂಡವಾಳ ಗಾರರು ಮತ್ತು ಆರ್ಥಿಕ ಪ್ರವೀಣರು ಸಭೆಸೇರಿ ಅಕ್ಷರ ಪ್ರಚಾರಕ್ಕೆ ಹಣದ ನೆರವು ನೀಡುವ ಬಗ್ಗೆ ವಿಚಾರಮಥನ ಮಾಡಿ ಕೆಲವು ನಿರ್ಧಾರಗಳನ್ನು ಕೈಕೊಂಡರು. ಕಾರ್ಮಿಕ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿ ಕೆಲಸಮಾಡುವ ಅನಕ್ಷರಸ್ಥರಿಗೆ ಓದುಬರಹ ಕಲಿಸುವ ಜವಾಬ್ದಾರಿ ಆಯಾ ಕ್ಷೇತ್ರದ ಮಾಲೀಕರಿಗೆ ಸೇರಿದ್ದು. ಈ ಕಾರ್ಯದಲ್ಲಿ ನಿರತರಾಗುವ ಸಂಘ, ಸಂಸ್ಥೆ ಮತ್ತು ಮಾಲೀಕರ ತೆರಿಗೆಯಲ್ಲಿ ರಿಯಾಯಿತಿ ನೀಡಬೇಕು. ಇಲ್ಲವೇ ಸ್ವಲ್ಪ ಭಾಗ ತೆರಿಗೆಯನ್ನಾದರೂ ಮನ್ನಾ ಮಾಡಬೇಕು ಎಂಬುದಾಗಿ ಶಿಫಾರಸು ಮಾಡಿದ್ದಾರೆ. ಸಣ್ಣಪುಟ್ಟ ಮತ್ತು ಮಧ್ಯಮ ವರ್ಗದ ಕೈಗಾರಿಕಾ ಮಾಲೀಕರಿಗೆ ಕ್ರಿಯಾತ್ಮಕ ಸಾಕ್ಷರತೆ ಕೈಕೊಳ್ಳಲು ಸಾಲ ನೀಡುವ ವ್ಯವಸ್ಥೆ ಇರಬೇಕೆಂದು ಅವರು ಸೂಚಿಸಿದ್ದಾರೆ.

ಇದಕ್ಕಾಗಿ ಶ್ರೀಮಂತ ರಾಷ್ಟ್ರಗಳೂ ನೆರವು ನೀಡುತ್ತಿವೆ. ಡೆನ್‌ಮಾರ್ಕ್, ಫಿನ್‌ಲೆಂಡ್, ನಾರ್ವೇ ಮತ್ತು ಸ್ವೀಡನ್ ದೇಶಗಳು ಇದಕ್ಕಾಗಿ ವಿಶೇಷ ನಿಧಿ ಕೂಡಿಸಲು ಪ್ರಯತ್ನ ಮಾಡಿವೆ. ಭಾರತದಲ್ಲಿ ನಡೆಯುತ್ತಿರುವ ರೈತರ ತರಬೇತಿ ಯೋಜನೆಗೆ ೪೦ ಸಾವಿರ ಡಾಲರು ನೆರವು ನೆದರ್ಲೆಂಡ್ಸ್ ಸರ್ಕಾರ ನೀಡಿದೆ.

ಸಾರ್ವಜನಿಕರು ಮತ್ತು ಸಂಘಗಳಿಂದಲೂ ಈ ಕಾರ್ಯದಲ್ಲಿ ನೆರವು ದೊರಕುತ್ತಿದೆ. ಟಾನ್ಜೀನಿಯ ದೇಶದಲ್ಲಿ ನಡೆಯುತ್ತಿರುವ ಅಕ್ಷರ ಪ್ರಚಾರ ಕಾರ್ಯಕ್ಕೆ ವಿದ್ಯಾರ್ಥಿಗಳು ೪,೨೦೦ ಡಾಲರು ಚಂದಾ ವಸೂಲಿ ಮಾಡಿದರು. ಹೆಲ್ಸಿಂಕಿಯ ಕ್ರೈಸ್ತ ವಿದ್ಯಾರ್ಥಿಗಳು ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿ ಮೆರವಣಿಗೆ ಹೊರಟು ಚಂದಾ ವಸೂಲಿ ಮಾಡಿದ್ದಾರೆ. ಗಿನಿ ದೇಶದಲ್ಲಿ ಕಾರ್ಮಿಕ ಸಂಘಗಳು ಹೆಚ್ಚಿನ ಆಸಕ್ತಿ ವಹಿಸಿವೆ. ಮಹಿಳಾ ಸಂಘಗಳೂ ಹಿಂದೆಬಿದ್ದಿಲ್ಲ. ಉಡುಗೊರೆ ಚೀಟಿಯ (ಗಿಫ್ಟ್ ಕೂಪನ್) ಮೂಲಕ ಧನ ಸಂಗ್ರಹಿಸಿವೆ. ಕ್ಯಾಮರೂನ್, ಕೊಲಂಬಿಯ, ಲೆಬನನ್, ನೈಜೀರಿಯ ಮತ್ತು ಉಗಾಂಡ ದೇಶಗಳಿಗೆ ಬೋಧನ ಸಾಮಗ್ರಿಗಳನ್ನು ಒದಗಿಸಿವೆ. ಬಾಲಚಮೂದಳದವರೂ ೩೧ ದೇಶಗಳಲ್ಲಿ ಅಕ್ಷರ ಪ್ರಚಾರಕಾರ್ಯದಲ್ಲಿ ತೊಡಗಿದ್ದಾರೆ. ಬರ್ಮ ದೇಶದಲ್ಲಿ ಉಪಾಧ್ಯಾಯರು

ಸ್ವಯಂಸೇವೆ ಸಲ್ಲಿಸುತ್ತಿದ್ದಾರೆ. ಇರಾನ್, ವೆನಿಜ್ವೇಲ ಮುಂತಾದ ದೇಶಗಳಲ್ಲಿ ಸೈನ್ಯಾಧಿಕಾರಿಗಳು ಅಕ್ಷರ ಪ್ರಚಾರ ತರಗತಿ ನಡೆಸುತ್ತಿದ್ದಾರೆ.

ನಿರಕ್ಷರತೆ ಭಯಂಕರ ಪೀಡೆ. ಇದರ ನಿವಾರಣೆ ಒಂದು ಹೋರಾಟ. ಇಂದು ಇದು ಇಡೀ ವಿಶ್ವದ ಸಮಸ್ಯೆ. ನಿರಕ್ಷರತೆಯನ್ನು ನಿರ್ಮೂಲ ಮಾಡಲು ಆಯಾ ದೇಶಗಳು ಶಕ್ತಿಮೀರಿ ಶ್ರಮಿಸುತ್ತಿವೆ. ಶ್ರೀಮಂತ ರಾಷ್ಟ್ರಗಳು ನೆರವು ನೀಡುತ್ತಿವೆ. ಅನೇಕ ಆಸಕ್ತ ಮಹನೀಯರು ತಮ್ಮ ಕೈಲಾದ ಕಾಣಿಕೆ ಸಲ್ಲಿಸಿದ್ದಾರೆ. ಇರಾನಿನ ದೊರೆ ತನ್ನ ದೇಶದ ಸೈನ್ಯಕ್ಕೆ ಒಂದು ದಿನಕ್ಕೆ ಖರ್ಚುಮಾಡುವ ವೆಚ್ಚವನ್ನು ಸಾಕ್ಷರತಾ ಪ್ರಚಾರ ನಿಧಿಗೆ ನೀಡಿದ್ದಾರೆ. ಮಧ್ಯ ಆಫ್ರಿಕ ಗಣರಾಜ್ಯ, ಸೈಪ್ರಸ್, ಮಾಲಿ, ಮೊರಾಕೋ, ಟ್ಯುನೀಷಿಯಗಳು ತಮ್ಮ ಭಾಗದ ವಂತಿಗೆಗಳನ್ನು ಈ ನಿಧಿಗೆ ಸಲ್ಲಿಸಿವೆ.

ವಿಶ್ವಬ್ಯಾಂಕು ಸಹ ಈ ಕಾರ್ಯದಲ್ಲಿ ನೆರವು ನೀಡಲು ಯೋಚಿಸುತ್ತಿದೆ. ಯೂನೆಸ್ಕೋ, ಪ್ರಪಂಚ ಆಹಾರಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ನೇರವಾಗಿ ಆಸಕ್ತಿ ವಹಿಸುತ್ತಿವೆ. ಸಾಕ್ಷರತಾ ಯೋಜನೆಗೆ ಸಹಾಯ ಮಾಡಲು ಅಂತರರಾಷ್ಟ್ರೀಯ ನಿಧಿ ಏರ್ಪಾಡಾಗಿದೆ. ಇದಕ್ಕಾಗಿ ಆಗಿರುವ ಸಂಗ್ರಹಗಳ ಮೊತ್ತ ೭,೪೦,೦೦೦ ಡಾಲರ್. ೧೯೬೭ರ ಸೆಪ್ಟೆಂಬರ್‌ವರೆಗೆ ವಿನಿಯೋಗವಾದ ಹಣ ೨,೫೫,೦೦೦ ಡಾಲರ್.

ಆರ್. ವಿ. ಹೆಗಡೆ

ಭಾರತದಲ್ಲಿ ಕಾಗದದ ಕೈಗಾರಿಕೆ

ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಯಲ್ಲಿ ಕಾಗದದ ಪಾತ್ರ ಮಹತ್ತ್ವವಾದುದು. ಆಧುನಿಕ ಜೀವನದ ಅಗತ್ಯಗಳಲ್ಲಿ ಇದೂ ಒಂದು. ಯಾವುದೇ ದೇಶದ ಶೈಕ್ಷಣಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ಅಲ್ಲಿಯ ಜನ ಬಳಸುವ ಕಾಗದದ ಪ್ರಮಾಣ ದಿಂದ ಸಾಮಾನ್ಯವಾಗಿ ಅಳೆಯಬಹುದು. ಜನತೆ ವಿದ್ಯಾವಂತರಾಗಿದ್ದರೆ, ಸಾಕಷ್ಟು ಪ್ರಮಾಣದಲ್ಲಿ ವೃತ್ತಪತ್ರಿಕೆಗಳ ಬಳಕೆ ಮಾಡುತ್ತಿದ್ದರೆ, ಸಾಹಿತ್ಯಿಕ ಅಭಿರುಚಿಯುಳ್ಳವರಾಗಿ ಪುಸ್ತಕಗಳ ಪ್ರಕಟನೆ ವಾಚನ ಮುಂತಾದವುಗಳಲ್ಲಿ ಅಭಿರುಚಿ ಹೊಂದಿದ್ದರೆ ಅಥವಾ ದೈನಂದಿನ ಜೀವನದಲ್ಲಿ ಕಾಗದವನ್ನು ವಿವಿಧ ಉಪಯೋಗಗಳಿಗೆ ಬಳಸುತ್ತಿದ್ದರೆ ಕಾಗದ ಹೆಚ್ಚು ಪ್ರಮಾಣದಲ್ಲಿ ಉಪಯೋಗಕ್ಕೆ ಬೇಕಾಗುತ್ತದೆ; ಆ ದೇಶದಲ್ಲಿ ಕಾಗದ ಕೈಗಾರಿಕೆಯ ಪ್ರಗತಿಗೆ ಅವಕಾಶವಿದೆ, ಅದರ ಆವಶ್ಯಕತೆಯಿದೆ. ಕಾಗದ ಕೈಗಾರಿಕೆ ಆರ್ಥಿಕ ಅಭಿವೃದ್ಧಿಯ ದೃಷ್ಟಿ ಯಿಂದಲೂ ಮುಖ್ಯವೇ. ಏಕೆಂದರೆ ಅಭಿವೃದ್ಧಿಯೆಂದರೆ ಸರ್ವತೋಮುಖ ಏಳ್ಗೆಯ ಪ್ರಯತ್ನ. ಇಂಥ ಕೈಗಾರಿಕೆಗಳು ಹೆಚ್ಚಿದಷ್ಟೂ ಹೆಚ್ಚು ಜನರಿಗೆ ಉದ್ಯೋಗಾವ ಕಾಶಗಳು ದೊರಕುತ್ತದೆ. ರಾಷ್ಟ್ರದ ನೈಸರ್ಗಿಕ ಸಂಪತ್ತಿನ ಉಪಯೋಗ ನಡೆಯು ತ್ತದೆ. ಅರ್ಥವ್ಯವಸ್ಥೆಗೆ ಬೇರೆ ದೇಶಗಳ ಮೇಲೆ ಅವಲಂಬಿಸುವ ಆವಶ್ಯಕತೆ ಕಡಿಮೆಯಾಗುತ್ತದೆ. ದೇಶದಲ್ಲಿ ಬಂಡವಾಳ ಸಂಗ್ರಹಣೆಯಾಗಿ ದೇಶದ ಆರ್ಥಿಕ ರೂಪರೇಷೆಯೇ ಬದಲಾಗುತ್ತದೆ. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ಈ ಕೈಗಾರಿಕೆಯ ಬೆಳೆವಣಿಗೆಯ ವಿವೇಚನೆ ಅತ್ಯಂತ ಉಪಯುಕ್ತವೆನಿಸುತ್ತದೆ.

ಹುಟ್ಟು, ಬೆಳವಣಿಗೆ

ಪ್ರಾಚೀನ ಭಾರತದಲ್ಲಿ ಈ ಕೈಗಾರಿಕೆ ಇದ್ದಿರಲಿಲ್ಲ. ಕಾಗದ ತಯಾರಿಸುವ ಕಲೆ ಭಾರತದಲ್ಲಿ ತಡವಾಗಿಯೇ ಪ್ರಾರಂಭವಾಯಿತೆನ್ನಬಹುದು. ಯಂತ್ರಗಳಿಂದ ಕಾಗದ ಉತ್ಪಾದನೆ ನಮ್ಮ ದೇಶದಲ್ಲಿ ಮೊಟ್ಟಮೊದಲ ಬಾರಿ ೧೮೭೦ರಲ್ಲಿ ಪ್ರಾರಂಭ ವಾಯಿತು. ಕಲ್ಕತ್ತದಲ್ಲಿ ಪ್ರಾರಂಭವಾದ ಬ್ಯಾಲಿ ಮಿಲ್ಸ್ ಈ ಉದ್ಯಮಕ್ಕೆ ಅಸ್ತಿ

ಭಾರ ಹಾಕಿತು. ಆದರೆ ಮೊಟ್ಟಮೊದಲ ಸಫಲ ಯತ್ನವಾದದ್ದು ೧೮೮೧ರಲ್ಲಿ—ಬಂಗಾಳದಲ್ಲಿ ಟಿಟಾಘರ್ ಪೇಪರ್ ಮಿಲ್ಲಿನ ಉದ್ಘಾಟನೆಯಿಂದ. ಅನಂತರ ಈ ಕೈಗಾರಿಕೆ ದೇಶದ ಹಲವೆಡೆ ಬೆಳೆಯಿತು. ೧೯೨೫ರಲ್ಲಿ ಕೈಗಾರಿಕೆ ಸಂರಕ್ಷಣ ಕರದ (ಪ್ರೊಟೆಕ್ಟಿವ್ ಟ್ಯಾರಿಫ್) ಆಶ್ರಯ ಪಡೆಯಿತು. ೧೯೪೫ರಲ್ಲಿ ಈ ಸುಂಕವನ್ನು ರೆವಿನ್ಯೂ ಕರವನ್ನಾಗಿ ಮಾರ್ಪಡಿಸಲಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ದೇಶದ ಕಾರ್ಖಾನೆಗಳ ಸಂಖ್ಯೆ ೧೫ಕ್ಕೆ ಏರಿತು. ಉತ್ಪಾದನೆ ೧,೦೩,೮೮೪ ಟನ್ನುಗಳಷ್ಟಾಯಿತು. ದೇಶ ಸ್ವಾತಂತ್ರ್ಯ ಗಳಿಸಿದ ಅನಂತರ, ಮುಖ್ಯವಾಗಿ ಯೋಜನೆಗಳು ಪ್ರಾರಂಭವಾದಮೇಲೆ ನಮ್ಮ ಪ್ರಗತಿಯಲ್ಲಿ ವೇಗ ಕಂಡುಬಂದಿದೆ. ಈ ಪ್ರಗತಿಯನ್ನು ಈ ಕೆಳಗಿನ ಅಂಕಿಗಳಿಂದ ಗುರುತಿಸಬಹುದು.

ವರ್ಷ	ಸಾಮರ್ಥ್ಯ	ಉತ್ಪಾದನೆ	ಉತ್ಪಾದನೆ
	(ಸಾವಿರ ಟನ್ನುಗಳು)		ಸಾಮರ್ಥ್ಯದ ಶೇಕಡಾ
೧೯೫೧–೫೨	೧೩೭.೦	೧೩೨.೦	೯೬.೦
೧೯೬೦–೬೧	೪೧೮.೦	೩೫೦.೦	೮೪.೦
೧೯೬೫–೬೬	೬೮೦.೦	೫೫೦.೦	೮೨.೦
೧೯೬೬–೬೭	೭೧೧.೦	೫೮೦.೦	೮೧.೦
೧೯೬೭–೬೮	೭೩೦.೦	೬೨೦.೦	೮೫.೦
೧೯೬೮–೬೯	೭೫೦.೦	೬೪೦.೦	೮೫.೦

ಪ್ರಥಮ ಪಂಚವಾರ್ಷಿಕ ಯೋಜನೆ ಪ್ರಾರಂಭವಾದಾಗ ನಮ್ಮ ದೇಶದಲ್ಲಿ ೧೭ ಕಾಗದ ಕಾರ್ಖಾನೆಗಳಿದ್ದವು. ಆ ಯೋಜನೆಯ ಅವಧಿಯಲ್ಲಿ ಮೂರು ಹೊಸ ಕಾರ್ಖಾನೆಗಳು ಸ್ಥಾಪಿತವಾದುವು. ಅಲ್ಲದೆ ೧೪ ಕಾರ್ಖಾನೆಗಳ ನವೀಕರಣ ಕಾರ್ಯ ನಡೆಯಿತು. ಎರಡನೆಯ ಯೋಜನೆಯ ಅವಧಿಯಲ್ಲಿ ೮ ಹೊಸ ಸಂಸ್ಥೆಗಳು ಉತ್ಪಾದನೆ ಆರಂಭಿಸಿದುವು. ಹಲವು ಹಳೆಯ ಕಾರ್ಖಾನೆಗಳು ವಿಸ್ತೃತವಾದುವು, ಅಭಿವೃದ್ಧಿಗೊಂಡುವು. ಮೂರನೆಯ ಯೋಜನೆಯ ಅವಧಿಯಲ್ಲಿ ಸ್ವಪರಿಪೂರ್ಣತೆಯ—ಎಂದರೆ ೭೨೦ ಸಾವಿರ ಟನ್ನು ಕಾಗದ ಉತ್ಪಾದಿಸುವ—ಗುರಿ ಇತ್ತು. ಅಲ್ಲದೆ ಸಾಮರ್ಥ್ಯವನ್ನು ೮,೩೩,೦೦೦ ಟನ್ನುಗಳಿಗೆ ಏರಿಸುವ ಗುರಿ ಇತ್ತು. ಆದರೆ ಮೂರನೆಯ ಯೋಜನೆಯಲ್ಲಿ ನಾವು ಈ ಗುರಿಯನ್ನು ಸಾಧಿಸಲಾಗಲಿಲ್ಲ.

ಯೋಜನೆಗಳು ಪ್ರಾರಂಭವಾದ ಅನಂತರ ಈವರೆಗೆ ನಮ್ಮ ಸಾಮರ್ಥ್ಯದಲ್ಲಿ ೫ತ್ರಿ ಪಟ್ಟು ಹೆಚ್ಚಳವಾಗಿದೆ. ಉತ್ಪಾದನೆಯಲ್ಲಿಯೂ ಸುಮಾರು ೫ ಪಟ್ಟು ಹೆಚ್ಚಳವಾಗಿದೆ. ಆದರೆ ನಾವು ಕೈಗಾರಿಕೆಯ ಸ್ಥಾಪಿತ ಸಾಮರ್ಥ್ಯವನ್ನು ಇನ್‌ಸ್ಟಾಲ್ಡ್ ಕೆಪ್ಯಾಸಿಟಿ ಪೂರ್ಣ ಬಳಸಿಕೊಳ್ಳುತ್ತಿಲ್ಲ. ೧೯೫೧–೫೨ರಲ್ಲಿ ಸ್ಥಾಪಿತ ಸಾಮರ್ಥ್ಯದ ೯೬%ರಷ್ಟನ್ನು ಬಳಸಿಕೊಳ್ಳುತ್ತಿದ್ದರೆ, ೧೯೬೮–೬೯ರಲ್ಲಿ ಕೇವಲ ೮೫%ರಷ್ಟನ್ನು ಮಾತ್ರ ಬಳಸಿಕೊಳ್ಳುತ್ತಿದ್ದೆವು. ನಮ್ಮ ಕಾರ್ಖಾನೆಗಳು ತಮ್ಮ ಸಂಪೂರ್ಣ ಸಾಮರ್ಥ್ಯಕ್ಕನುಗುಣವಾಗಿ ಕೆಲಸ ಮಾಡುತ್ತಿಲ್ಲ.

ಈಗ ಭಾರತದಲ್ಲಿ ೫೭ ಕಾಗದ ಕಾರ್ಖಾನೆಗಳಿವೆ. ಒಂದನ್ನುಳಿದು ಎಲ್ಲವೂ ಖಾಸಗೀ ಕ್ಷೇತ್ರದಲ್ಲಿವೆ. ಒಂದು ಪತ್ರಿಕಾ ಕಾಗದ ಕಾರ್ಖಾನೆ ಮಾತ್ರ ಸರ್ಕಾರಿ ಕ್ಷೇತ್ರದಲ್ಲಿದೆ. ಕೇವಲ ಹತ್ತು ಕಾರ್ಖಾನೆಗಳು ತಲಾ ೩೦,೦೦೦ ಟನ್ನುಗಳಿಗಿಂತಲೂ ಹೆಚ್ಚು ವಾರ್ಷಿಕ ಉತ್ಪಾದನ ಸಾಮರ್ಥ್ಯ ಹೊಂದಿವೆ. ಟಿಟಾಘರ್ ಪೇಪರ್ ಮಿಲ್ಸ್ (ಪ. ಬಂಗಾಲ), ರೋಹತಾಸ್ ಇಂಡಸ್ಟ್ರೀಸ್ (ಬಿಹಾರ), ಓರಿಯೆಂಟ್ ಪೇಪರ್ ಮಿಲ್ಸ್ (ಒರಿಸ್ಸಾ, ಮ. ಪ್ರದೇಶ), ಶ್ರೀ ಗೋಪಾಲ ಮಿಲ್ಸ್ (ಹರಿಯಾನ), ಬೆಲ್ಲಾರಪುರ ಪೇಪರ್ ಅಂಡ್ ಸ್ಟ್ರಾ ಬೋರ್ಡ್ಸ್ ಮಿಲ್ಸ್ (ಮಹಾರಾಷ್ಟ್ರ), ಸಿರಪುರ ಪೇಪರ್ ಮಿಲ್ಸ್ (ಆಂಧ್ರಪ್ರದೇಶ), ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ (ಮೈಸೂರು), ಈ ಕಾರ್ಖಾನೆಗಳನ್ನು ನಮ್ಮ ದೇಶದ ದೊಡ್ಡ ಕಾಗದ ಕಾರ್ಖಾನೆಗಳೆಂದು ಹೆಸರಿಸಬಹುದು.

ಕಾರ್ಖಾನೆಗಳ ಗಾತ್ರ

ಅಮೆರಿಕ ಮತ್ತು ಸ್ಕ್ಯಾಂಡಿನೇವಿಯನ್ ದೇಶಗಳಲ್ಲಿ ಪ್ರತಿದಿನ ೫೦೦ರಿಂದ ೧,೦೦೦ ಟನ್ ಕಾಗದ ಉತ್ಪಾದಿಸುವ ಕಾರ್ಖಾನೆಗಳಿವೆ. ಆದರೆ ಜಪಾನ್, ಬ್ರಿಟನ್ ಮತ್ತು ಇತರ ದೇಶಗಳಲ್ಲಿರುವಂತೆ ನಮ್ಮ ದೇಶದಲ್ಲಿಯೂ ಸಣ್ಣ ಪ್ರಮಾಣದ ಕಾಗದ ಉದ್ಯಮಗಳಿಗೇ ಉತ್ತೇಜನ ದೊರಕಿದೆ. ಏಕೆಂದರೆ ಇಂಥವುಗಳಿಗೆ ಹೆಚ್ಚಿನ ಬಂಡವಾಳ ಹಾಗೂ ತಾಂತ್ರಿಕ ಪ್ರಾವೀಣ್ಯದ ಅವಶ್ಯಕತೆ ಇರುವುದಿಲ್ಲ. ಸ್ಥಾನಿಕ ಕಚ್ಚಾಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಸ್ಥಳೀಯ ಮಾರುಕಟ್ಟೆಗಳಿಗಾಗಿ ಕಾಗದ ಉತ್ಪಾದಿಸಬಹುದು. ಆದರೆ ಇಂಥ ಕಾರ್ಖಾನೆಗಳಿಂದ ದೊಡ್ಡ ಕೈಗಾರಿಕೆಗಳ ಮಿತವ್ಯಯಗಳು ಸಾಧ್ಯವಿಲ್ಲ.

ರಾಜ್ಯಾನುಗುಣ ವಿಂಗಡಣೆ

ಈ ಕೈಗಾರಿಕೆ ಮೊದಲು ಬಂಗಾಳ ರಾಜ್ಯದಲ್ಲಿ ಕೇಂದ್ರೀಕೃತವಾಗಿತ್ತು. ಆದರೆ ಈಗ ಹೊಸ ಕಚ್ಚಾಸಾಮಗ್ರಿಗಳ ಬಳಕೆ, ಕೈಗಾರಿಕೆಗಳ ವಿಕೇಂದ್ರೀಕರಣ ನೀತಿ ಮತ್ತು ವಿದ್ಯುಚ್ಛಕ್ತಿಯ ಬಳಕೆಯಿಂದಾಗಿ ಎಲ್ಲ ರಾಜ್ಯಗಳಲ್ಲಿಯೂ ಹಂಚಿದೆ.

ಆದಾಗ್ಯೂ, ಬಂಗಾಳ, ಬಿಹಾರ, ಒರಿಸ್ಸ, ಮಹಾರಾಷ್ಟ್ರಗಳು ಪ್ರಮುಖ ಉತ್ಪಾದಕ ರಾಜ್ಯಗಳು. ಬಂಗಾಳ, ಬಿಹಾರ, ಒರಿಸ್ಸಗಳ ಪ್ರಾಮುಖ್ಯ ೧೯೬೧-೬೯ರಲ್ಲಿ ಕಡಿಮೆಯಾದರೆ ಮಹಾರಾಷ್ಟ್ರ, ಮಧ್ಯಪ್ರದೇಶಗಳು ಗಣನೀಯ ಪ್ರಗತಿ ಸಾಧಿಸಿವೆ. ೧೯೬೧–೬೯ರಲ್ಲಿ ವಿವಿಧ ರಾಜ್ಯಗಳಲ್ಲಿದ್ದ ಕಾರ್ಖಾನೆಗಳ ಸಂಖ್ಯೆ ಮತ್ತು ಒಟ್ಟು ಸ್ಥಾಪಿತ ಸಾಮರ್ಥ್ಯದ ಶೇಕಡ ಪ್ರಮಾಣಗಳನ್ನು ಮುಂದೆ ಕೊಟ್ಟಿದೆ:

ರಾಜ್ಯಗಳು	ಕಾರ್ಖಾನೆಗಳ ಸಂಖ್ಯೆ	ಸ್ಥಾಪಿತ ಸಾಮರ್ಥ್ಯದ ಶೇಕಡ ಪ್ರಮಾಣ	
		೧೯೬೧	೧೯೬೯
ಪ. ಬಂಗಾಲ	೯	೨೩.೩	೧೮.೬
ಒರಿಸ್ಸ	೩	೧೭.೬	೧೫.೬
ಬಿಹಾರ	೨	೧೪.೭	೯.೬
ಮಧ್ಯಪ್ರದೇಶ	೩	೧.೩	೮.೭
ಹರಿಯಾನ	೪	—	೭.೦
ಉ. ಪ್ರದೇಶ	೨	೬.೫	೫.೨
ಮಹಾರಾಷ್ಟ್ರ	೧೪	೭.೩	೧೧.೧
ಗುಜರಾತ್	೬	೧.೫	೨.೮
ಮೈಸೂರು	೫	೮.೯	೮.೬
ಆಂಧ್ರಪ್ರದೇಶ	೨	೯.೫	೬.೬
ತಮಿಳುನಾಡು	೩	—	೪.೦
ಕೇರಳ	೨	೨೧	೨.೨

ಸಂಘಟನೆ

ಕೈಗಾರಿಕೆಯ ಆಡಳಿತ ವ್ಯವಸ್ಥೆಗೋಸ್ಕರ ಎರಡನೆಯ ಯೋಜನೆಯ ಕೊನೆಯ ವರೆಗೂ ಈ ಕೈಗಾರಿಕೆಯನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು: (೧) ಕಾಗದ ಹಾಗೂ ಕಾಗದ ರಟ್ಟು, (೨) ಹುಲ್ಲಿನ ಮತ್ತು ಇತರ ಬಗೆಯ ರಟ್ಟುಗಳು (ಸ್ಟ್ರಾ ಅಂಡ್ ಅದರ್ ಬೋರ್ಡ್ಸ್) ಮತ್ತು (೩) ಪತ್ರಿಕಾ ಕಾಗದ.

ಇವುಗಳ ಜೊತೆಗೆ ಈಗ ಸೆಕ್ಯೂರಿಟಿ ಕಾಗದ ಎಂಬ ಹೊಸ ವಿಭಾಗವನ್ನು ಸೇರಿಸಲಾಗಿದೆ.

ಮೊದಲನೆಯ ವಿಭಾಗದಲ್ಲಿ ಬರೆಯುವ, ಅಚ್ಚುಮಾಡುವ, ಸುತ್ತುವ ಕಾಗದಗಳು, ಕಾಗದದ ರಟ್ಟು ಹಾಗೂ ವಿಶೇಷ ಕಾಗದಗಳ ಉತ್ಪಾದನೆಗಳು ಸಮಾವೇಶವಾಗುತ್ತವೆ. ೧೯೬೭ರಲ್ಲಿ ಇವುಗಳ ಒಟ್ಟು ಉತ್ಪಾದನೆ ೬,೧೯,೦೦೦ ಟನ್ನುಗಳು. ಸ್ಟ್ರಾಬೋರ್ಡುಗಳ ಉತ್ಪಾದನೆ ೧,೧೧,೦೦೦ ಟನ್ನುಗಳು.

ಪತ್ರಿಕಾ ಕಾಗದದ ಉತ್ಪಾದನೆ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಾಧ್ಯವಾಗಲಿಲ್ಲ. ಮಧ್ಯಪ್ರದೇಶದ ನೀಪಾ ನಗರದ ಕಾರ್ಖಾನೆ ಕಾರಣಾಂತರಗಳಿಂದ ೧೯೫೫ರ ಅನಂತರ ಉತ್ಪಾದನೆ ಪ್ರಾರಂಭಿಸಿತು. ನಮ್ಮ ದೇಶದಲ್ಲಿ ಪತ್ರಿಕಾ ಕಾಗದ ಕಾರ್ಖಾನೆಯೆಂದರೆ ಇದೊಂದೇ. ಇದರ ವಾರ್ಷಿಕ ಉತ್ಪಾದನಸಾಮರ್ಥ್ಯ ೩೧ ಸಾವಿರ ಟನ್ನುಗಳು. ಆದರೆ ನಮ್ಮ ದೇಶದ ಆವಶ್ಯಕತೆ ೧,೮೫,೦೦೦ ಟನ್ನುಗಳು. ನಿರಕ್ಷರಕುಕ್ಷಿಗಳು ಹೆಚ್ಚಾಗಿರುವ, ಓದುವ ಹವ್ಯಾಸವಿಲ್ಲದ ಈಗಿನ ಪರಿಸ್ಥಿತಿಯಲ್ಲಿಯೇ ಇಷ್ಟು ಕೊರತೆಯಿರುವಾಗ ದೇಶದಲ್ಲಿ ಶೈಕ್ಷಣಿಕ ಅಭಿವೃದ್ಧಿಯಾಗುತ್ತ ನಡೆದಂತೆ ನಮ್ಮ ಕೊರತೆ ಹೆಚ್ಚಬಹುದು. ಈ ಕಾರಣದಿಂದ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ೩ ಪತ್ರಿಕಾ ಕಾಗದ ಕಾರ್ಖಾನೆಗಳಿಗೆ ಪರವಾನೆ ಕೊಡಲಾಗಿದ್ದರೂ ಹಿಮಾಚಲ ಪ್ರದೇಶದ ಕಾರ್ಖಾನೆ ಮಾತ್ರ ಸ್ವಲ್ಪ ಪ್ರಗತಿ ಸಾಧಿಸಿದೆ. ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಸರ್ಕಾರ ಇನ್ನೊಂದು ಹೊಸ ಕಾರ್ಖಾನೆಯನ್ನು ಸ್ಥಾಪಿಸಲು ಉದ್ದೇಶಿಸಿದ್ದರೂ ಹಿಮಾಚಲ ಪ್ರದೇಶದ ಕಾರ್ಖಾನೆಯನ್ನು ತಾನೇ ನಿರ್ವಹಿಸುವುದಾಗಿ ಇತ್ತೀಚೆಗೆ ಸಾರಿದೆ. ಅಲ್ಲದೆ ನೀಪಾ ನಗರದ ಕಾರ್ಖಾನೆಯ ವಿಸ್ತರಣಕ್ಕೆ ಆದ್ಯಗಮನ ಕೊಡಲಾಗಿದೆ.

ನಾಲ್ಕನೆಯ ಯೋಜನೆಯ ಗುರಿ

ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಸ್ಥಾಪಿತ ಸಾಮರ್ಥ್ಯವನ್ನು ೧೧ ಲಕ್ಷ ಟನ್ನುಗಳಿಗೆ ಏರಿಸುವುದರ ಜೊತೆಗೆ ಉತ್ಪಾದನೆಯನ್ನು ೯.೬ ಲಕ್ಷ ಟನ್ನುಗಳಿಗೂ ಮೀರಿಸುವ ಗುರಿ ಇದೆ. ಇದಲ್ಲದೆ ವೃತ್ತಪತ್ರಿಕೆಗಳ ಕಾಗದದ ಉತ್ಪಾದನ ಸಾಮರ್ಥ್ಯವನ್ನು ೧.೬೫ ಲಕ್ಷ ಟನ್ನುಗಳಿಗೆ ಮೀರಿಸುವ ಗುರಿಹೊಂದಿದ್ದೇವೆ.

ಕಾಗದದ ಅನುಭೋಗ

ಯಾವುದೊಂದು ದೇಶದ ಜನತೆಯ ತಲಾ ಅನುಭೋಗದ ಮೇಲಿಂದ ಅಲ್ಲಿಯ ಅಭಿವೃದ್ಧಿಯ ಮಟ್ಟವನ್ನು ಗುರುತಿಸಬಹುದು. ಜಗತ್ತಿನ ಪ್ರಮುಖ ದೇಶಗಳೊಂದಿಗೆ ನಮ್ಮ ತಲಾ ಅನುಭೋಗವನ್ನು ಹೋಲಿಸಿದರೆ ನಾವು ತೀರ ಹಿಂದುಳಿದ್ದೇವೆ ಎಂದು ತಿಳಿಯುತ್ತದೆ. ಅಮೆರಿಕದವರು ನಮ್ಮ ೧೯೭ರಷ್ಟು, ಬ್ರಿಟಿಷರು ೮೮ರಷ್ಟು ಜಪಾನಿಗಳು ೫೯ರಷ್ಟು ಹೆಚ್ಚು ಕಾಗದ ಬಳಕೆಮಾಡುತ್ತಾರೆ. ನಮ್ಮ ಅನುಭೋಗ ಹಾಗೂ ಇತರ ದೇಶಗಳಲ್ಲಿಯ ತಲಾ ಅನುಭೋಗಗಳನ್ನು (೧೯೬೭ರಲ್ಲಿ ಇದ್ದಂತೆ) ಈ ಕೆಳಗಿನ ಅಂಕಿಗಳಿಂದ ಕಂಡುಕೊಳ್ಳಬಹುದು.

ದೇಶ		ತಲಾ ಅನುಭೋಗ (ಪೌಂಡುಗಳಲ್ಲಿ)
ಅಮೆರಿಕ ಸಂಯುಕ್ತ ಸಂಸ್ಥಾನ	....	೫೩೦
ಬ್ರಿಟನ್	....	೨೬೫
ಪಶ್ಚಿಮ ಜರ್ಮನಿ	....	೨೨೫
ಜಪಾನ್	....	೧೭೬
ಸೋವಿಯತ್ ದೇಶ	....	೪೬
ಅರಬ್ ಗಣರಾಜ್ಯ	....	೧೭
ಸಿಂಹಳ	....	೮
ಭಾರತ	....	೩

೧೯೬೬ರ ಮಾರ್ಚ್ ಅಂತ್ಯದ ವೇಳೆಗೆ ಸುಮಾರು ೬೪ ಸಾವಿರ ಜನ ಈ ಕೈಗಾರಿಕೆಯಲ್ಲಿ ಕೆಲಸಮಾಡುತ್ತಿದ್ದರು. ಅಲ್ಲದೆ ಸುಮಾರು ೧೦ ಸಾವಿರ ಜನ ಕಚ್ಚಾಸಾಮಗ್ರಿಯ ಪೂರೈಕೆಯಲ್ಲಿ ತೊಡಗಿದ್ದರು.

ಆಮದು–ರಫ್ತು

ನಾವು ಕೆಲವು ಬಗೆಯ ಕಾಗದಗಳನ್ನು ರಫ್ತುಮಾಡಲು ಪ್ರಾರಂಭಿಸಿದ್ದೇವೆ. ಇವುಗಳಲ್ಲಿ ಪ್ರಮುಖವಾದುದು ಸಿಗರೇಟ್ ಕಾಗದ. ಇತ್ತೀಚೆಗೆ ಮುದ್ರಣ ಕಾಗದಕ್ಕೂ ಬೇಡಿಕೆ ಬಂದಿದೆ. ಕಾಗದದ ರಫ್ತುಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಇದಕ್ಕೆ ಕೊಡುವ ಸಹಾಯದ್ರವ್ಯವನ್ನು ೧೯೬೮ರಲ್ಲಿ ಸೇಕಡ ೧೦ರಿಂದ ೧೫ಕ್ಕೆ ಹೆಚ್ಚಿಸಿದೆ. ನಾವು ೧೯೬೮–೬೯ರಲ್ಲಿ ೫.೫೦ ಕೋಟಿ ರೂ.ಗಳನ್ನು ಕಾಗದ ನಿರ್ಯಾತದಿಂದ ಸಂಪಾದಿಸಿದೆವು.

ನಮ್ಮ ದೇಶದಲ್ಲಿ ಪತ್ರಿಕಾ ಕಾಗದ, ಅಂಚೆ ಚೀಟಿಗಳ ಕಾಗದ ಮತ್ತು ಕರೆನ್ಸಿ ನೋಟುಗಳ ಕಾಗದಗಳ ಅಭಾವ ತೀವ್ರವಾಗಿದೆ. ಅಮೆರಿಕ, ಕೆನಡ, ಸೋವಿಯತ್ ದೇಶ, ಹಾಲಂಡ್, ಜೆಕೊಸ್ಲವಾಕಿಯ ಹಾಗೂ ಸ್ಕಾಂಡಿನೇವಿಯನ್ ದೇಶಗಳಿಂದ ನಾವು ಇವನ್ನು ಪಡೆಯುತ್ತಿದ್ದೇವೆ.

ಸಮಸ್ಯೆಗಳು

ಈ ಕೈಗಾರಿಕೆ ತನ್ನ ಅಭಿವೃದ್ಧಿಯಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳ ನಿವಾರಣೆಯಾದ ಹೊರತು ಕೈಗಾರಿಕೆ ಭರದಿಂದ ಬೆಳೆಯಲಾರದು. ಈ ಕೈಗಾರಿಕೆಯ ಅಭಿವೃದ್ಧಿಯಾಗಬೇಕಾದರೆ ಕೆಲವು ಸಮಸ್ಯೆಗಳ ಪರಿಹಾರ ಅತ್ಯವಶ್ಯ.

ಈ ಕೈಗಾರಿಕೆಯ ಪ್ರಮುಖ ಸಮಸ್ಯೆಯೆಂದರೆ ಕಚ್ಚಾಸಾಮಗ್ರಿಯ ಕೊರತೆ.

ಮುಖ್ಯವಾಗಿ ಈ ಕೈಗಾರಿಕೆ ಬಿದಿರನ್ನೇ ಅವಲಂಬಿಸಿದೆ. ಆದರೆ ನಮ್ಮ ದೇಶದಲ್ಲಿ ೨೦ ಲಕ್ಷ ಟನ್ನುಗಳಷ್ಟು ಬಿದಿರಿನ ಉತ್ಪಾದನೆಯಿದ್ದರೂ ಕೇವಲ ೧೪ ಲಕ್ಷ ಟನ್ನುಗಳಷ್ಟು ಕೈಗಾರಿಕೆಗಳಿಗೆ ಸಿಗುತ್ತದೆ. ನಮ್ಮ ಕೈಗಾರಿಕೆಗಳಿಗೆ ಸಾಮಾನ್ಯವಾಗಿ ೧೯.೬೦ ಲಕ್ಷ ಟನ್ನುಗಳಷ್ಟು ಬಿದಿರು ಬೇಕಾಗುತ್ತದೆ. ಹೀಗಾಗಿ ಕಚ್ಚಾಸಾಮುಗ್ರಿಗಳ ಕೊರತೆ ತೀವ್ರವಾಗಿದೆ. ಆದಕಾರಣ ಇತ್ತೀಚಿಗೆ ಕಬ್ಬಿನ ಸಿಪ್ಪೆ, ಮೃದು ಹಾಗೂ ಕಠಿಣ ಕಟ್ಟಿಗೆಗಳು ಮತ್ತು ಇತರ ವಸ್ತುಗಳಿಂದ ನಾವು ತಿರುಳು ತಯಾರಿಸಿ ಕೈಗಾರಿಕೆಯನ್ನು ಉಳಿಸಿಕೊಳ್ಳಬೇಕಾಗಿದೆ.

ಬಿದಿರಿನ ಎಕರೆವಾರು ಉತ್ಪನ್ನವೂ ನಮ್ಮ ದೇಶದಲ್ಲಿ ಕಡಿಮೆ—ಒಂದು ಎಕರೆಗೆ ಒಂದು ಟನ್ನು ಮಾತ್ರ. ಜಪಾನಿನಲ್ಲಿ ಎಕರೆಗೆ ನಾಲ್ಕು ಟನ್ನು. ಎಂದರೆ ನಾವು ನಮ್ಮ ಬಿದಿರಿನ ಉತ್ಪನ್ನವನ್ನು ಹೆಚ್ಚಿಸಬೇಕಾಗಿದೆ.

ಕಚ್ಚಾಸಾಮುಗ್ರಿಯ ಅಪವ್ಯಯುವನ್ನು ಶೀಘ್ರವಾಗಿ ತಡೆಗಟ್ಟಬೇಕು. ಅಡವಿಗಳು ರಾಜ್ಯಸರ್ಕಾರಗಳಿಗೆ ಸಂಬಂಧಿಸಿದವು. ಕೆಲವು ರಾಜ್ಯ ಸರ್ಕಾರಗಳು ಹೆಚ್ಚು ಆದಾಯ ಗಳಿಸಲು ಅಡವಿಗಳನ್ನು ಕಡಿಯಲು ಗುತ್ತಿಗೆಗೆ ಕೊಟ್ಟಿವೆ. ಗುತ್ತಿಗೆದಾರರಿಗೆ ಕೈಗಾರಿಕೆಯ ಉಳಿಯುವಿಕೆ, ಅಭಿವೃದ್ಧಿಗಳ ಬಗ್ಗೆ ಚಿಂತಿಸುವ ಅವಕಾಶವಾದರೂ ಎಲ್ಲಿ? ಹಾಗಾಗಿ ಅಮೂಲ್ಯ ಅರಣ್ಯಸಂಪತ್ತಿನ ಅಪವ್ಯಯ ನಡೆದಿದೆ. ಇದನ್ನು ಶೀಘ್ರವಾಗಿ ನಿಲ್ಲಿಸಬೇಕು. ಅಲ್ಲದೆ ಬಿದಿರು ಹಾಗೂ ಇತರ ಕಚ್ಚಾಸಾಮುಗ್ರಿಗಳ ಬೆಳವಣಿಗೆಗೆ ಯೋಗ್ಯ ಅವಕಾಶ ನಿರ್ಮಿಸಿ, ದೀರ್ಘ ಕಾಲಕ್ಕಾಗಿ ಒಂದು ನೀತಿಯನ್ನು ರೂಪಿಸುವುದು ಅತ್ಯಗತ್ಯ.

ಸಾಗಾಣಿಕೆಯ ತೊಂದರೆಗಳು ಈ ಕೈಗಾರಿಕೆಯ ಪ್ರಗತಿಗೆ ಅಡ್ಡಿಯಾಗಿವೆ. ಉತ್ಪಾದನಾವೆಚ್ಚ ಮಿತಿಮೀರಿ ಬೆಳೆಯುತ್ತಿದೆ. ಇದರಿಂದಲೂ ನಿರೀಕ್ಷಿಸಿದ ಪ್ರಗತಿ ಸಾಧ್ಯವಾಗಲಾರದು. ಬಂಡವಾಳದ ಅಭಾವ ಈ ಕೈಗಾರಿಕೆಯನ್ನು ಬಾಧಿಸುತ್ತಿದೆ. ಮಿತಿಮೀರಿದ ಉತ್ಪಾದನವೆಚ್ಚದಿಂದ ಈಗಿರುವ ಉತ್ಪಾದಕರಿಗೆ ಲಾಭ ಪ್ರಾಪ್ತವಾಗುತ್ತಿಲ್ಲ. ಹಾಗಾಗಿ ಅವರು ಹೆಚ್ಚು ಬಂಡವಾಳ ತೊಡಗಿಸಲಾರರು. ಲಾಭ ಕಡಿಮೆಯಾಗಿ, ಹೆಚ್ಚು ಬಂಡವಾಳ ಬೇಕಾಗಿರುವುದರಿಂದ ಹೊಸಬರು ಆಕರ್ಷಿತರಾಗಿರುವುದಿಲ್ಲ. ಹಾಗಾಗಿ ಬಂಡವಾಳದ ಕೊರತೆ ಕೈಗಾರಿಕೆಗಳ ಅಭಿವೃದ್ಧಿಗೆ ಅಡಚಣೆಯಾಗಿದೆ.

ಪ್ರಾಚೀನ ಭಾರತದಲ್ಲಿ ಕಾಗದದ ಬಳಕೆ

ಕ್ರಿ.ಶ. ೧೦೫ರಲ್ಲಿ ಚೀನೀಯರು ಮೊಟ್ಟಮೊದಲಿಗೆ ಕಾಗದವನ್ನು ತಯಾರಿಸಿದರೆಂದು ಎಲ್ಲರೂ ಒಪ್ಪುತ್ತಾರೆ. ಚೀನೀ ಯಾತ್ರಿಕ ಇತ್ಸಿಂಗ ಭಾರತೀಯ ಕಾಗದದ ಬಗೆಗೆ ಉಲ್ಲೇಖಿಸುತ್ತಾನೆಯಾದರೂ, ಅದು ಅಷ್ಟೊಂದು ಜನಪ್ರಿಯ ಬರೆವಣಿಗೆಯ ಸಾಮಗ್ರಿಯಾಗಿರಲಿಲ್ಲವೆಂದು ತೋರುತ್ತದೆ. ತಾಳೆಗರಿ ಮತ್ತು ಭೂರ್ಜಪತ್ರದ ಮೇಲೆ ಬರೆಯುವುದು ಹೆಚ್ಚು ಪ್ರಚಲಿತವಾಗಿದ್ದರೂ ಕ್ರಿ.ಶ. ಎಂಟನೆಯ ಶತಮಾನದ ಸಂಸ್ಕೃತ–ಚೀನೀ ಕೋಶವೊಂದರಲ್ಲಿ ತ್ಸೀ (ಕಾಗದ) ಎಂಬ ಚೀನೀ ಪದದ ಶಯ ಎಂಬ ಸಂಸ್ಕೃತರೂಪ ಕಾಣಬರುತ್ತದೆ. ಇದೇ ಕೋಶದಲ್ಲಿ ಕಾಘಜ್ ಎಂಬ ಪದದ ಸಂಸ್ಕೃತ ಕಕಲಿ ಅಥವಾ ಕಕರಿ ಎಂಬ ರೂಪಗಳೂ ಸಿಗುತ್ತವೆ.

ಗುಜರಾತಿನಲ್ಲಿ ದೊರಕಿರುವ ಅತ್ಯಂತ ಪ್ರಾಚೀನ ಕಾಗದದ ಹಸ್ತಪ್ರತಿ ಕ್ರಿ.ಶ. ೧೨೨೩–೨೪ರಲ್ಲಿ ಬರೆದದ್ದು. ಕಾಗದದ ಮೇಲೆ ಬರೆದ ಶತಪಥ ಬ್ರಾಹ್ಮಣದ ಕಾಶ್ಮೀರದ ಹಸ್ತಪ್ರತಿಯೊಂದು ಕ್ರಿ.ಶ. ೧೦೮೯ರಲ್ಲಿ ಬರೆದದ್ದೆಂದು ಎಂ. ಎ. ಸ್ಟೇನ್ ಉಲ್ಲೇಖಿಸಿದ್ದಾರೆ. ಜಿಪ್ಸಂ ಖನಿಜ ಬಳಿದಿದ್ದ ಕೆಲವು ಕಾಗದದ ಹಸ್ತಪ್ರತಿಗಳಲ್ಲಿ ಕ್ರಿ.ಶ. ೫ನೆಯ ಶತಮಾನದ ಅಥವಾ ಇನ್ನೂ ಸ್ವಲ್ಪ ಪ್ರಾಚೀನವಾಗಿರಬಹುದಾದ ಉತ್ತರ ಭಾರತದ ಲಿಪಿಗಳಿವೆ. ಇವು ಮಧ್ಯ ಏಷ್ಯದ ಯಾರ್‌ಖಂಡ್ ಎಂಬಲ್ಲಿ ದೊರಕಿವೆ. ಆದರೆ ಇವು ಭಾರತದ ಹೊರಗಡೆಯೇ ಬರೆದಂಥವುಗಳಿರಬೇಕು.[1]

—ಡಾ. ಡಿ. ಸಿ. ಸರ್ಕಾರ್

[1] D. C. Sircar: *Indian Epigraphy*; Motilal Banarsidas, Delhi, 1965; P 67–8

ಡಾ. ಕೆ. ಎನ್. ವೆಂಕಟರಾಯಪ್ಪ
ಎಂ. ಕೃಷ್ಣಪ್ಪ

ರಾಷ್ಟ್ರೀಯ ಸಮಗ್ರತಾ ಸಾಧನೆ

ರಾಷ್ಟ್ರೀಯ ಸಮಗ್ರತೆ ಇಂದು ಒಂದು ಕುತೂಹಲಕಾರಿಯಾದ ಹಾಗೂ ಮುಖ್ಯವಾದ ವಿಷಯವಾಗಿದೆ. ಭಾರತ ಪರಕೀಯರ ದಬ್ಬಾಳಿಕೆಗೆ ಸಿಕ್ಕಿದಾಗ ಸ್ವರಾಜ್ಯವನ್ನು ಪಡೆಯಲು ಜನರನ್ನು ಒಂದುಗೂಡಿಸಲು ಹಾಗೂ ಅವರಲ್ಲಿ ಏಕತೆಯನ್ನು ತರಲು ಪ್ರಯತ್ನಿಸಲಾಯಿತು. ಸ್ವಾತಂತ್ರ್ಯಾನಂತರ ಅದೇ ಜನ ಮತ್ತು ನಾಯಕರು ಪ್ರತ್ಯೇಕವಾದ ರೀತಿಯಲ್ಲಿ ಯೋಚನೆ ಮಾಡಲಾರಂಭಿಸಿದರು. ಜಾತಿ, ಭಾಷೆ, ಮತ್ತು ಮತಗಳ ಸಂಕುಚಿತ ಭಾವನೆಗಳು ದೇಶದ ಹಿತಸಾಧನೆಗಿಂತ ಹೆಚ್ಚಿನ ಮನ್ನಣೆ ಮತ್ತು ಪ್ರಾಮುಖ್ಯ ಪಡೆದುವು. ಪ್ರಾಂತೀಯ ಮನೋಭಾವಗಳೇ ಮುಂತಾದವು ರಾಷ್ಟ್ರೀಯ ಸಮಗ್ರತೆಯನ್ನು ಒಡೆಯಲು ಮುಖ್ಯ ಪಾತ್ರ ವಹಿಸಿದುವು. ಚೀನ ಮತ್ತು ಪಾಕಿಸ್ತಾನಗಳ ದಾಳಿ ಭಾರತದ ಜನರ ಕಣ್ಣು ತೆರೆಸಿತು. ಇದರಿಂದಾಗಿ ಪ್ರದೇಶ ಹಾಗೂ ಮತಗಳಿಗೆ ಪ್ರಾಮುಖ್ಯ ಕೊಡದೆ ಎಲ್ಲರನ್ನೂ ಒಂದೇ ವೇದಿಕೆಯ ಮೇಲೆ ತರುವ, ಅವರನ್ನು ಒಂದುಗೂಡಿಸುವ ಪ್ರಯತ್ನಗಳು ಈಗ ನಡೆಯುತ್ತಿವೆ.

ರಾಷ್ಟ್ರೀಯ ಸಮಗ್ರತೆ ರಾಷ್ಟ್ರೀಯ ಒಗ್ಗಟ್ಟಿಗಿಂತಲೂ ಹೆಚ್ಚು ವಿಶಾಲವಾದುದು. ಮೊಟ್ಟಮೊದಲು ಜನರ ಭಾವನೆ, ಧ್ಯೇಯ ಮತ್ತು ನಡತೆಗಳಲ್ಲಿ ಒಂದು ರೀತಿಯ ಒಗ್ಗಟ್ಟನ್ನು ಸಾಧಿಸುವುದು ರಾಷ್ಟ್ರೀಯ ಜೀವನ ಕ್ಷೇತ್ರದಲ್ಲಿ ಅದರಲ್ಲಿಯೂ ಮುಖ್ಯವಾಗಿ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅತ್ಯಾವಶ್ಯಕ. ಈ ಅಂಶಗಳು ಇಲ್ಲದಿದ್ದರೆ ಯಾವುದೇ ಬಗೆಯ ರಾಷ್ಟ್ರೀಯ ಸಮಗ್ರತೆಯನ್ನೂ ಯೋಚಿಸುವುದಕ್ಕೆ ಆಗುವುದಿಲ್ಲ. ಆದರೆ ಅದೇ ಕಾಲದಲ್ಲಿ, ಈ ರೀತಿಯ ಒಗ್ಗಟ್ಟನ್ನು ತರಲು ಸಾಧ್ಯವಾಗದಂಥ ಮತ್ತು ಅನಪೇಕ್ಷಣೀಯವಾದ ಅನೇಕ ಕ್ಷೇತ್ರಗಳು ಇವೆ. ಇಂಥ ಕ್ಷೇತ್ರಗಳಲ್ಲಿ ಒಗ್ಗಟ್ಟಿನ ಬದಲು ಜನರ ಪರಸ್ಪರ ಅರಿವು ಮತ್ತು ಅನುಕಂಪಗಳನ್ನು ಹೆಚ್ಚಿಸಲು ಹೋರಾಡಬೇಕಾಗಿದೆ. ಕೆಲವು ಬಾರಿ ಇಂಥ ಪರಿಸ್ಥಿತಿಗಳನ್ನೆಲ್ಲ ತಾಳ್ಮೆಯಿಂದ ಸಹಿಸಿಕೊಳ್ಳಲೂ ಬೇಕಾಗುತ್ತದೆ. ಅಗಾಧ

ಜನಸಂಖ್ಯೆಯಿರುವ ಹಾಗೂ ನಡತೆ, ಸಂಸ್ಕೃತಿ ಮತ್ತು ಸಂಪ್ರದಾಯಗಳು ಹೆಚ್ಚು ವೈವಿಧ್ಯಮಯವಾಗಿರುವ ಭಾರತದಂಥ ದೊಡ್ಡ ದೇಶದಲ್ಲಿ ಯಾವುದೇ ಸಮಯದಲ್ಲಿ ರಾಷ್ಟ್ರೀಯ ಸಮಗ್ರತೆ ಪೂರ್ಣಗೊಂಡಿದೆಯೆಂದು ಭಾವಿಸಲು ಸಾಧ್ಯವಿಲ್ಲ.

ರಾಷ್ಟ್ರೀಯ ಸಮಗ್ರತೆಗೆ ಅಡಿಗಲ್ಲಾದ ಇನ್ನೊಂದು ಮುಖ್ಯ ಅಂಶವೆಂದರೆ ವಾಸ್ತವ ಪರಿಸ್ಥಿತಿ. ಜನರಿಗೆ ತಮ್ಮ ಭವಿಷ್ಯದಲ್ಲಿ ನಂಬಿಕೆ ಮೂಡುವ ಹಾಗಾಗ ಬೇಕು. ಅವರ ಪರಿಸ್ಥಿತಿ ಸುಧಾರಿಸುವ ಸೂಚನೆಗಳು ಏರ್ಪಡಬೇಕು. ಜನರನ್ನು ಸುಳ್ಳು ಭರವಸೆ ಹಾಗೂ ಮೋಸದ ವಿಧಾನಗಳ ಮೂಲಕ ಉತ್ಸಾಹಶೀಲರನ್ನಾಗಿ ಮತ್ತು ಚಟುವಟಿಕೆಯುಳ್ಳವರನ್ನಾಗಿ ಮಾಡುವ ಪ್ರಯತ್ನಗಳು ಅಂತಿಮವಾಗಿ ಹಾನಿಯನ್ನೇ ಉಂಟುಮಾಡುತ್ತವೆ.

ರಾಷ್ಟ್ರೀಯ ಸಮಗ್ರತೆಗೆ ಅತ್ಯಾವಶ್ಯಕವಾದ ಮೂರನೆಯ ಅಂಶವೆಂದರೆ ಶಾಂತಿ ಮತ್ತು ಅಹಿಂಸೆಗಳ ಅನುಸರಣೆ. ನಮ್ಮ ಆಂತರಿಕ ಹಾಗೂ ಅಂತರ ರಾಷ್ಟ್ರೀಯ ಸಂಬಂಧಗಳನ್ನು ಉತ್ತಮಗೊಳಿಸಲು ಇದು ಅತ್ಯಾವಶ್ಯಕ. ಆದರೆ ಚೀನ ಮತ್ತು ಪಾಕಿಸ್ತಾನಗಳು ಭಾರತದ ವಿರುದ್ಧ ನಡೆಸಿದ ದಾಳಿಯಿಂದಾಗಿ ಒಂದು ನಿರ್ದಿಷ್ಟ ಗುಂಪಿನ ಜನರಲ್ಲಿ ಯುದ್ಧಮನೋಭಾವ ಏರ್ಪಟ್ಟಿತು. ಅದರ ಪರಿಣಾಮವಾಗಿ ಕೆಲವು ಮುಖಂಡರು ಮತ್ತು ಪಂಗಡಗಳು ರಾಷ್ಟ್ರೀಯ ಸಮಗ್ರತೆ ಯನ್ನು ಪರಸ್ಪರ ದ್ವೇಷದ ಮೂಲಕವೇ ಸಾಧಿಸಬಹುದೆಂದು ಭಾವಿಸಿದರು. ಇಂಥ ಪ್ರಯತ್ನಗಳು ಬೇರೆ ದೇಶಗಳಲ್ಲಿ ವಿಫಲಗೊಂಡಿವೆ. ಭಾರತದಲ್ಲಿ ಈ ವಿಧಾನ ದಿಂದ ಸಮಗ್ರತೆ ಖಂಡಿತ ಸಾಧ್ಯವಾಗುವುದಿಲ್ಲ.

ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ, ಬ್ರಿಟಿಷರಿಂದ ದೇಶದ ಜನತೆಗೆ ಆಡಳಿತದ ವರ್ಗಾವಣೆ, ಪ್ರಜಾಪ್ರಭುತ್ವ ಸಂವಿಧಾನದ ಸ್ಥಾಪನೆ—ಇವು ರಾಷ್ಟ್ರೀಯ ಸಮಗ್ರತೆಗೆ ಒಂದು ವಿಶಾಲವಾದ ರಾಜಕೀಯ ತಳಪಾಯ ನೀಡಿದುವು. ಶಾಂತಿ ಯುತವಾದ ಮತ್ತು ಸಂಪೂರ್ಣವಾಗಿ ಯಶಸ್ವಿಯಾದ ನಾಲ್ಕು ಸಾರ್ವತ್ರಿಕ ಚುನಾವಣೆಗಳು ಈ ತಳಪಾಯವನ್ನು ಭದ್ರಗೊಳಿಸಿದುವು. ಆದರೆ ದುರದೃಷ್ಟ ವಶಾತ್ ಆಡಳಿತಮಟ್ಟ ಕ್ರಮೇಣ ಕ್ಷೀಣಗೊಂಡಿತು. ಸಚಿವರು, ಶಾಸಕರು ಹಾಗೂ ಅಧಿಕಾರಿಗಳಲ್ಲಿ ಒಗ್ಗಟ್ಟು ಹೋಯಿತು. ಸ್ವಾರ್ಥಸಾಧಕ ರಾಜಕಾರಣಿ ಗಳ ಪಕ್ಷಾಂತರ ಪ್ರವೃತ್ತಿ ಬೆಳೆಯಿತು. ಇವುಗಳಿಂದ ಈ ಭದ್ರವಾದ ತಳಪಾಯ ಅಪಾಯಕ್ಕೊಳಗಾಯಿತು. ನಮ್ಮ ಸಂವಿಧಾನದಲ್ಲಿ ರೂಪಿತವಾಗಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂಬಂಧಗಳು ರಾಜಕೀಯದಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ತರಲು ಅಡಚಣೆಗಳಾಗಿವೆ. ಗ್ರಾಮಪಂಚಾಯಿತಿಗಳು, ಪಂಚಾಯಿತಿ ಸಮಿತಿಗಳು, ಜಿಲ್ಲಾ ಪರಿಷತ್ತುಗಳು, ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ತಮಗೆ ನಿರ್ದೇಶಿಸಿದ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿದಲ್ಲಿ, ತಮ್ಮ ವಿಶೇಷ ಜವಾಬ್ದಾರಿಯನ್ನು ಶೀಘ್ರವಾಗಿಯೂ ಸಮರ್ಥವಾಗಿಯೂ ನಡೆಸಿ

ದಲ್ಲಿ ಮತ್ತು ಒಂದು ಮತ್ತೊಂದರ ಕಾರ್ಯಚಟುವಟಿಕೆಯಲ್ಲಿ ಮಧ್ಯೆ ಪ್ರವೇಶಿಸದೆ ತಮ್ಮ ಕಾರ್ಯವನ್ನು ತಾವೇ ನಿರ್ವಹಿಸಿದಲ್ಲಿ ಭಾರತದ ರಾಜಕೀಯ ಉನ್ನತಿ ಸುಸೂತ್ರವಾಗುತ್ತದೆ. ಇದಕ್ಕಾಗಿ ಅಧಿಕಾರವನ್ನೂ ಹಣಕಾಸಿನ ವ್ಯವಸ್ಥೆಯನ್ನೂ ಪುನರ್ನಿಯೋಜಿಸುವುದು ಅವಶ್ಯವಾಗಬಹುದು. ಆದರೆ ಸಂವಿಧಾನದಲ್ಲಿ ಯಾವುದೇ ತೀವ್ರವಾದ ಬದಲಾವಣೆಯೂ ಇಲ್ಲದಂತೆ ಇದನ್ನು ಮಾಡಲು ಸಾಧ್ಯವಾದೀತು. ಅಧ್ಯಕ್ಷೀಯ ಪ್ರಜಾಪ್ರಭುತ್ವವಾದಿಗಳು ಕಾರ್ಯಾಂಗವನ್ನು ಶಾಸನಾಂಗದಿಂದ ಬೇರ್ಪಡಿಸುವುದರಿಂದ ಸುಭದ್ರತೆಯನ್ನು ಸಾಧಿಸಬಹುದೆಂದು ನಂಬಿರುತ್ತಾರೆ. ಒಟ್ಟಿನಲ್ಲಿ ನಾವು ನಮ್ಮ ಸಂವಿಧಾನಕ್ಕೆ ಬದ್ಧರಾಗಿ, ಆತ್ಮ ಸಾಕ್ಷಿಯಾಗಿ ಕೆಲಸಮಾಡಿ, ಲಂಚಗುಳಿತನ ಮತ್ತು ಸ್ವಜನಪಕ್ಷಪಾತವನ್ನು ಹೋಗಲಾಡಿಸಲೂ ರಾಜಕೀಯ ಪಕ್ಷಗಳ ಮತ್ತು ಶಾಸಕರ ಯೋಗ್ಯತೆಯನ್ನು ನಿರ್ದೇಶಿಸಲೂ ಯೋಜನೆಯ ಮೂಲಕ ಆರ್ಥಿಕ ಸಮಗ್ರತೆಯನ್ನು ಸಾಧಿಸಲೂ ಅಗತ್ಯವಿರುವಷ್ಟು ಮಟ್ಟಿಗೆ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದೇ ಈಗ ತಳೆಯಬೇಕಾದ ಅತಿಮುಖ್ಯವಾದ ಧ್ಯೇಯ. ಆದರೆ ಯೋಜಿತ ಆರ್ಥಿಕ ಆಡಳಿತವೂ ಅಸಮರ್ಥವಾದ ಮತ್ತು ಜವಾಬ್ದಾರಿಯುತವಲ್ಲದ ಸರ್ಕಾರಿ ಬಂಡವಾಳಶಾಹಿಯೇ ಆಗಬಹುದು. ರಾಜಕೀಯ ಮತ್ತು ಆರ್ಥಿಕ ಅಧಿಕಾರ ಮತ್ತು ಜವಾಬ್ದಾರಿಗಳು ಕೇಂದ್ರೀಕೃತಗೊಂಡಿರುವುದರಿಂದಲೇ ಭಾರತದ ಈ ಹದಿನೈದು ವರ್ಷಗಳ ಯೋಜನೆಗಳು ತೃಪ್ತಿಕರವಾದ ಕಾರ್ಯನಿರ್ವಹಣೆ ಮಾಡಲು ಸಾಧ್ಯವಾಗಲಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಪುರಸಭೆ ಹಾಗೂ ಪಂಚಾಯಿತಿ ರಾಜ್ಯ ಸಂಸ್ಥೆಗಳು, ಸಹಕಾರ ಸಂಘಗಳು, ಸಾರ್ವಜನಿಕ ಹಾಗೂ ಖಾಸಗಿ ಕಂಪನಿಗಳು, ಖಾಸಗಿ ಹಂಚಿಕೆದಾರರು ದೇಶದ ಸಂಪತ್ತನ್ನು ಹೆಚ್ಚಿಸುವುದರಲ್ಲಿ, ಅದರಲ್ಲೂ ಆರ್ಥಿಕ ಬೆಳವಣಿಗೆಯಲ್ಲಿ, ಪ್ರಮುಖ ಪಾತ್ರ ವಹಿಸಬೇಕಾಗಿದೆ. ಪ್ರತಿಯೊಬ್ಬರಿಗೂ ವಹಿಸುವ ಕ್ಷೇತ್ರವನ್ನು ಅವರ ದಕ್ಷತೆ ಹಾಗೂ ಕಾರ್ಯನಿರ್ವಹಣೆಯ ಆಧಾರದ ಮೇಲೆ ಆರಿಸಬೇಕು. ಈ ಪ್ರತಿನಿಧಿಗಳಲ್ಲೆಲ್ಲ ತೃಪ್ತಿಕರವಾದ ಸ್ಪರ್ಧೆ ನಡೆಯಬೇಕು. ಎಲ್ಲೆಲ್ಲಿ ಕಾರ್ಯನಿರ್ವಹಣೆಯ ಜವಾಬ್ದಾರಿ ಅತ್ಯಧಿಕವಾಗಿರುತ್ತದೋ ಅಲ್ಲೆಲ್ಲ ಈ ಮೇಲಿನ ಸ್ಪರ್ಧೆಯನ್ನು ಪ್ರೋತ್ಸಾಹಿಸಬೇಕು. ಕಾನೂನು ಮತ್ತು ಶಾಂತಿಪಾಲನೆ, ನ್ಯಾಯವಿತರಣೆ, ಸಾಮಾಜಿಕ ಸೇವೆಯ ಅವಕಾಶ, ಸಾಮಾಜಿಕ ಭದ್ರತೆ—ಇವುಗಳ ಅಡಿಪಾಯಗಳೆನಿಸಿದ ರಸ್ತೆ, ಬಂದರು, ಸಾರಿಗೆ, ಸಂಪರ್ಕ ಮತ್ತು ವಿಜ್ಞಾನ ಸಂಶೋಧನೆಗಳ ಅಭಿವೃದ್ಧಿಗಳೇ ರಾಜ್ಯದ ಅತ್ಯಂತ ಪ್ರಮುಖವಾದ ಹಾಗೂ ಅನೇಕ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಗೆ ಸೀಮಿತವಾದ ವಿಷಯಗಳು. ಭಾರತದ ಯೋಜನೆಯ ಮತ್ತೊಂದು ದೊಡ್ಡ ತಪ್ಪೆಂದರೆ, ಆರ್ಥಿಕ ಕ್ಷೇತ್ರದಲ್ಲಿನ ಆರ್ಥಿಕ ವ್ಯವಹಾರಗಳ ಕೇಂದ್ರೀಕರಣ. ಸ್ವತಂತ್ರ ಪ್ರವೃತ್ತಿಯ ಸಂಸ್ಥೆಗಳ ಬಗೆಬಗೆಯ ಚಟುವಟಿಕೆಗಳನ್ನು ರೂಪಿಸುವುದಕ್ಕೆ

ಮಾರ್ಗಗಳನ್ನೂ ಸಾಧನಗಳನ್ನೂ ಕಂಡುಹಿಡಿಯಬೇಕು. ಏಕೆಂದರೆ ಸ್ವತಂತ್ರ ಪ್ರವೃತ್ತಿಯ ಬೆಳವಣಿಗೆಯನ್ನು ರಾಜ್ಯ ಸರ್ಕಾರದಿಂದ ರಚಿಸಲಾದ ಸಾರ್ವಜನಿಕ ಸಂಸ್ಥೆಗಳ ಸಹಾಯದಿಂದ ರೂಪಿಸುವುದಕ್ಕೂ ನಿರ್ದಿಷ್ಟ ರಾಜ್ಯ ಸರ್ಕಾರಗಳು ಇದನ್ನು ಸ್ವತಂತ್ರವಾಗಿ ನಿರ್ವಹಿಸುವುದಕ್ಕೂ ಇದು ಆವಶ್ಯಕ.

ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಕಂಡುಬರುವ ಪ್ರಾದೇಶಿಕ ವೈಷಮ್ಯಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ತಡೆಗಟ್ಟಬೇಕಾದರೆ ಇವು ಯಾವ ಸೆಳೆತ ಮತ್ತು ಒತ್ತಡಗಳಿಗೂ ಮಣಿಯಬಾರದು. ರಾಷ್ಟ್ರೀಯ ಸಮಗ್ರತೆಗೆ ಬಹುಶಃ ನಿವಾರಿಸಲಾಗದ ದೊಡ್ಡ ಅಡಚಣೆಯೆಂದರೆ ಭಾಷಾ ಸಮಸ್ಯೆ. ವಿದ್ಯಾಭ್ಯಾಸದ ಸಮಿತಿ ಸೂಚಿಸಿದಂತೆ, ಪ್ರತಿಯೊಂದು ಪ್ರದೇಶದ ಭಾಷೆಯ ಸಂಪೂರ್ಣ ಬೆಳವಣಿಗೆಯೂ ವಿಶ್ವವಿದ್ಯಾನಿಲಯಗಳಲ್ಲಿ ಮಾಧ್ಯಮವಾಗಿ ಅದರ ಬಳಕೆಯೂ ರಾಷ್ಟ್ರೀಯ ಸಮಗ್ರತೆಗೆ ಭದ್ರಬುನಾದಿಗಳಾಗುತ್ತವೆ ಇದೇ ವೇಳೆಯಲ್ಲಿ ಇಂಗ್ಲಿಷ್ ಮತ್ತು ಹಿಂದಿಗಳ ನಡುವೆ ಬರುವ ಸ್ಪರ್ಧೆಯನ್ನು ನಿವಾರಿಸಬೇಕು. ವಿವಿಧ ಭಾಷೆಗಳ ಕಾರ್ಯಭಾರಗಳನ್ನು ಖಚಿತವಾಗಿ ನಿರ್ದೇಶಿಸುವುದರಿಂದ ಈ ಪರಿಸ್ಥಿತಿ ಸುಧಾರಿಸ ಬಹುದು.

ಜಾತಿ ಮತ್ತು ವರ್ಗಗಳ ಬಗೆಗೆ ಆಲಂಕಾರಿಕವಾಗಿ ಮಾಡುವ ಭಾಷಣಗಳು ಜನರನ್ನು ಭ್ರಾಂತಿಗೀಡುಮಾಡುತ್ತವೆ. ರಾಜಕೀಯ ಪಕ್ಷಗಳು ಜಾತೀಯತೆಯನ್ನು ದುರುಪಯೋಗಪಡಿಸಿಕೊಳ್ಳದಂತೆ ನೋಡಿಕೊಳ್ಳಬೇಕು. ಆದರೂ ಆಹಾರ, ವಿವಾಹ ಹಾಗೂ ಇತರ ಸಾಮಾಜಿಕ ಸಂಬಂಧಗಳ ನಿರ್ಬಂಧಗಳು ಇನ್ನೂ ನಿವಾರಣೆಯಾಗಬೇಕಾಗಿವೆ. ಇವುಗಳನ್ನು ಹೋಗಲಾಡಿಸಲು ಮಾಡುವ ನೇರ ಪ್ರಚಾರಗಳೂ ಕಾನೂನುಗಳೂ ಯಾವ ರೀತಿಯಲ್ಲೂ ಜಯಪ್ರದವಾಗುವುದಿಲ್ಲ.

ಸಹನೆಯೊಂದೇ ಧಾರ್ಮಿಕತೆಯಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ಕಾಣಲು ಉತ್ತಮ ಮಾರ್ಗ. ಹಿಂದೂಗಳನ್ನು, ಮುಸಲ್ಮಾನರನ್ನು, ಕ್ರೈಸ್ತರನ್ನು ಮತ್ತು ಇತರ ಜನರನ್ನು ಧಾರ್ಮಿಕ ಹಬ್ಬಗಳ ಕಾಲದಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ಒಂದುಗೂಡಿಸುವ ಪ್ರಯತ್ನ ಮಾಡಬಹುದು. ತಾವು ನಂಬಿರುವ ಧರ್ಮ ಸತ್ಯ ವಾದುದು, ಉಳಿದೆಲ್ಲ ಧರ್ಮಗಳೂ ಮಿಥ್ಯವೆಂದು ಯಾವುದೇ ಜನಾಂಗ ತಿಳಿಯು ವುದು ಮೂರ್ಖತನ. ಈ ಮೂಢನಂಬಿಕೆಯಿಂದ ಹಿಂಸೆ ಅಥವಾ ಸಮಾಜ ಹಾನಿಯಾಗದಿರುವ ವರೆಗೂ ತಾಳ್ಮೆಯಿಂದ ಸಹಿಸಬಹುದು.

ಗಡಿ ಮತ್ತು ಜಲವಿವಾದ, ಆರ್ಥಿಕ ಬೆಳೆವಣಿಗೆಯಲ್ಲಿಯ ಅಸಮಾನತೆ, ಆಯಾ ಪ್ರದೇಶಗಳ ಜನರಿಗೆ ಮಾತ್ರ ಉದ್ಯೋಗದಾನ, ರಾಜ್ಯ ಮತ್ತು ಕೇಂದ್ರಗಳ ನಡುವಣ ಬಿಕ್ಕಟ್ಟು ಮುಂತಾದ ವಿಷಯಗಳು ರಾಷ್ಟ್ರೀಯ ಸಮಗ್ರತೆಗೆ ಅಡಚಣೆಯಾಗಿವೆ ಎಂದು ರಾಷ್ಟ್ರೀಯ ಸಮಗ್ರತಾ ಸಮಿತಿ ವರದಿ ಮಾಡಿದೆ.

ಮತೀಯ ಗಲಭೆಗಳು ಉಂಟಾದಾಗ ವಿಶೇಷ ರೀತಿಯ ಸಮಿತಿಗಳನ್ನು

ಕೇಂದ್ರ ಹಾಗೂ ರಾಜ್ಯಮಟ್ಟದಲ್ಲಿ ರಚಿಸಬೇಕು. ಆ ಸಮಿತಿ ಅಲ್ಲಿ ನಡೆಯುವ ಮತೀಯ ಚಟುವಟಿಕೆಗಳನ್ನು ಸಂಬಂಧಪಟ್ಟ ಜಿಲ್ಲೆಯ ಮುಖ್ಯ ಅಧಿಕಾರಿಗಳಿಗೆ ವರದಿ ಮಾಡಬೇಕು. ಇದರಿಂದ ಆ ಅಧಿಕಾರಿ ಜವಾಬ್ದಾರಿಯಿಂದ ಸೂಕ್ತಕ್ರಮ ಕೈಕೊಂಡು ಪರಿಸ್ಥಿತಿಯನ್ನು ಉತ್ತಮಪಡಿಸಲು ಸಾಧ್ಯವಾಗುತ್ತದೆ. ಮತೀಯ ಗಲಭೆಗಳನ್ನು ಉಂಟುಮಾಡುವ ಸಭೆ ಮತ್ತು ಕಲಾಪಗಳ ಮೇಲೆ ನಿರ್ಬಂಧ ಗಳನ್ನು ಹೇರಲೇಬೇಕು. ಮತೀಯ ಗಲಭೆಗಳನ್ನು ಪ್ರಚೋದಿಸುವಂಥ ಅಥವಾ ಜನರಲ್ಲಿ ಭೀತಿಯನ್ನುಂಟುಮಾಡುವಂಥ ಪ್ರಚಾರಗಳನ್ನು ತಡೆಗಟ್ಟುವುದಕ್ಕೆ ಅದರಿಂದ ಅನುಕೂಲವಾಗುತ್ತದೆ. ಇಂದಿನ ದಿನಗಳಲ್ಲಿ ಜನರು ಪಂಜಾಬಿಗಳು, ಗುಜರಾತಿಗಳು, ಮರಾಠಿಗಳು ಎಂಬುದಾಗಿ ಆಲೋಚಿಸುತ್ತಾರೆಯೇ ಹೊರತು ತಾವೆಲ್ಲ ಮೊದಲು ಭಾರತೀಯರು ಅನಂತರ ಉಳಿದವರು ಎಂದು ಯೋಚಿಸುವುದು ತೀರಾ ಕಡಿಮೆ. ಈ ತೊಡಕನ್ನು ನಿವಾರಿಸಲು ಸೂಕ್ತ ಸಮಿತಿಗಳ ರಚನೆಯಾಗ ಬೇಕು.

ಪ್ರಾಂತೀಯ ಅಭಿಮಾನ ಇಂದು ತೀವ್ರವಾಗಿ ಬೆಳೆದಿದೆ. ಅದು ಎಷ್ಟು ಮಿತಿ ಮೀರಿದೆ ಎಂದರೆ ಕೆಲವು ಜನರು ಭಾರತದಲ್ಲಿಯ ರಾಜ್ಯಗಳನ್ನು ಉಪರಾಷ್ಟ್ರ ಗಳೆಂದು ಭಾವಿಸುವಷ್ಟು ಮುಂದುವರೆದಿದೆ. ಈ ದಿನಗಳಲ್ಲಿ ಪ್ರಾಂತೀಯ ಸ್ವಾತಂತ್ರ್ಯಕ್ಕೆ ತೀವ್ರವಾದ ಬೇಡಿಕೆ ಇದೆ. ಇದು ಅಂತ್ಯದಲ್ಲಿ ಪ್ರತ್ಯೇಕತೆಗೆ ಕಾರಣವಾಗುತ್ತದೆ. ಯಾವಾಗಲೂ ಪ್ರಾಂತೀಯ ಅಭಿಮಾನ ದೇಶದ ಒಗ್ಗಟ್ಟಿನ ಅಭಿಮಾನಕ್ಕೆ ಒಳಪಟ್ಟಿರಬೇಕು.

ಭಾರತ ರಾಷ್ಟ್ರೀಯ ಸಮಗ್ರತೆಗೆ ಹಾನಿಕಾರಕವಾದ, ಭಯವನ್ನುಂಟು ಮಾಡುವ, ಮತ್ತೊಂದು ಪ್ರಮುಖ ಅಂಶವೆಂದರೆ ತೀವ್ರವಾಗಿ ದುರ್ಬಲ ಗೊಂಡಿರುವ ಕೇಂದ್ರ ಸರ್ಕಾರ. ಈ ಮಾತನ್ನು ಸಿದ್ಧಪಡಿಸಲು ಆಧಾರ ಹುಡುಕಬೇಕಾಗಿಲ್ಲ. ಉದಾಹರಣೆ ಕೊಡುವುದಾದರೆ ಮಹಾಜನ ವರದಿಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಮಹಾಜನ ವರದಿ ಮತ್ತು ಭಾಷಾಸಮಸ್ಯೆಗಳಲ್ಲಿ ಕೇಂದ್ರ ಸರ್ಕಾರ ನಿಸ್ಸಹಾಯಕವಾಗಿದೆ. ರಿಸರ್ವ್ ಬ್ಯಾಂಕಿನಿಂದ ರಾಜ್ಯ ಸರ್ಕಾರಗಳು ಅತಿಯಾಗಿ ಹಣ ಪಡೆಯುತ್ತಿರುವುದೂ ಮಿತವ್ಯಯ ಸೂತ್ರಗಳಿಗೆ ಗಮನ ಕೊಡದಿರುವುದೂ ಕೇಂದ್ರ ಸರ್ಕಾರದ ದೌರ್ಬಲ್ಯದ ಪರಿಣಾಮ. ರಾಜ್ಯದ ಸಚಿವರೂ ಅನೇಕ ಪಕ್ಷಗಳ ಮುಖಂಡರೂ ಸಂಸತ್ತಿನ ಮುಂದೆ ಪ್ರದರ್ಶನ ನಡೆಸಿ ಬಂಧನಕ್ಕೆ ಒಳಗಾಗಿ ಕೂಡಲೇ ಯಾವುದೇ ವಿಚಾರಣೆಗೂ ಒಳಗಾಗದೆ ಬಿಡುಗಡೆ ಹೊಂದಿರುವ ಉದಾಹರಣೆಗಳೂ ಇವೆ. ಕೆಲವು ಪಕ್ಷಗಳ ಮುಖಂಡರು ಬಹಿರಂಗ ವಾಗಿ ಗಲಭೆಗಳನ್ನು ನಡೆಸಿ ಚೀನದಂಥ ಕಮ್ಯುನಿಸ್ಟ್ ದೇಶಗಳ ಪ್ರಣಾಳಿಕೆಯನ್ನು ಹಾಗೂ ಕೆಳಮಟ್ಟದ ಚಟುವಟಿಕೆಗಳ ಧ್ಯೇಯಗಳನ್ನು ಧೈರ್ಯವಾಗಿ ಘೋಷಿಸು ತ್ತಿದ್ದಾರೆ. ಕೇಂದ್ರ ಸರ್ಕಾರ ಅಗತ್ಯವಾದ ಕ್ರಮ ತೆಗೆದುಕೊಳ್ಳಲಾರದಷ್ಟು

ದುರ್ಬಲಗೊಂಡಿದೆ. ತಮ್ಮ ಸ್ವಾರ್ಥಕ್ಕಾಗಿ, ದೇಶದ ರಹಸ್ಯಗಳನ್ನು ಶತ್ರುರಾಷ್ಟ್ರದವರಿಗೆ ಬೇಕಾದರೂ ಬಿಟ್ಟುಕೊಡುವಂಥ ಸ್ವಾರ್ಥಸಾಧಕರೂ ದೇಶದಲ್ಲಿ ತುಂಬಿದ್ದರೂ ಕೇಂದ್ರ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಇರುವುದು ದುರದೃಷ್ಟಕರ ಸಂಗತಿ. ಆದ್ದರಿಂದ ಕೇಂದ್ರದಲ್ಲಿ ಸುಭದ್ರ ಸರ್ಕಾರ ಅತ್ಯಾವಶ್ಯಕ.

ಹೀಗೆ ರಾಷ್ಟ್ರೀಯ ಸಮಗ್ರತೆಯೆಂಬುದು ರಾಷ್ಟ್ರಜೀವನದ ವಿವಿಧ ರಂಗಗಳಲ್ಲಿ ನಡೆಯುತ್ತಿರುವ ವಿವಿಧ ಪ್ರಯತ್ನಗಳಲ್ಲಿ ಸಮಗ್ರವಾಗಿ ಪ್ರತಿಫಲಿಸಬೇಕು. ಇದಕ್ಕಾಗಿ ಘೋಷಣೆ, ಪ್ರಚಾರ ಮುಂತಾದ ಕ್ರಮಗಳನ್ನು ಕೈಗೊಳ್ಳುವುದರಿಂದ ತತ್‌ಕ್ಷಣವೇ ಹೆಚ್ಚಿನ ಫಲ ದೊರಕದಾದರೂ ಕ್ರಮೇಣ ಇವುಗಳಿಂದ ಜನರಲ್ಲಿ ಸರಿಯಾದ ಅರಿವು ಮೂಡಬಹುದು.

ಡಾ. ಕೆ. ಎಚ್. ಚೆಲುವರಾಜು

ವಿಶ್ವಸಂಸ್ಥೆ : ಕೆಲವು ಸಮಸ್ಯೆಗಳು

೧೯೭೦ರ ಅಕ್ಟೋಬರ್ ೨೪ಕ್ಕೆ ವಿಶ್ವಸಂಸ್ಥೆಗೆ ೨೫ ವರ್ಷಗಳು ತುಂಬಿದುವು. ಇದರ ಬೆಳ್ಳಿಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಇದು ಕಳೆದ ೨೫ ವರ್ಷಗಳಲ್ಲಿ ವಿಶಾಲವಾಗಿ ಬೆಳೆದಿದೆ ಮತ್ತು ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಮುಖ್ಯ ಸಂಸ್ಥೆಯಾಗಿ ತನ್ನ ಅಪಾರ ಪ್ರಭಾವವನ್ನು ಮಾನವಕೋಟಿಯ ಮೇಲೆ ಬೀರಿದೆ. ಈ ಕಾಲು ಶತಮಾನದಲ್ಲಿ ವಿಶ್ವಸಂಸ್ಥೆ ಅನೇಕ ವಿಧಾನಗಳಲ್ಲಿ ವಿಶ್ವಶಾಂತಿ, ರಾಷ್ಟ್ರಗಳ ಪ್ರಗತಿ ಮತ್ತು ಲೋಕಕಲ್ಯಾಣಗಳಿಗಾಗಿ ಸೇವೆಮಾಡಿದೆ; ಸ್ವಲ್ಪ ಮಟ್ಟಿಗೆ ಯಶಸ್ವಿಯೂ ಆಗಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಯಶಸ್ವಿಯಾಗಲು ಸಾಧ್ಯವಾಗಿಲ್ಲ. ಈ ಕಾರಣಗಳಿಂದ ಇದರ ಭವಿಷ್ಯವೂ ದೊಡ್ಡ ಪ್ರಶ್ನೆಯಾಗಿ ಉಳಿದಿದೆ.

ವಿಶ್ವಸಂಸ್ಥೆ ಇಲ್ಲದಿದ್ದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಮೂರನೆಯ ಮಹಾ ಯುದ್ಧ ಆಗುತ್ತಿತ್ತೋ ಏನೊ ಎಂದೆನಿಸುತ್ತದೆ. ರಾಷ್ಟ್ರಗಳಲ್ಲಿ ಅನೇಕ ವೈಷಮ್ಯಗಳು, ಮನಸ್ತಾಪಗಳು ಮತ್ತು ಕಲಹಗಳು ಉಂಟಾದಾಗ ವಿಶ್ವಸಂಸ್ಥೆ ಮಧ್ಯೆ ಪ್ರವೇಶಿಸಿ ಶಾಂತ ರೀತಿಯಿಂದ ಅವುಗಳ ನಿವಾರಣೆಗೆ ಕಾರಣವಾಗಿದೆ. ಕೊರಿಯ ಯುದ್ಧ, ಇಂಡೋನೇಷ್ಯ ಕಲಹ, ಸೂಯೆಜ್ ಯುದ್ಧ, ಸೈಪ್ರಸ್ ಸಮಸ್ಯೆ, ಕಾಶ್ಮೀರ ಸಮಸ್ಯೆ, ಕಾಂಗೋ ಮತ್ತು ಕ್ಯೂಬಾ ಯುದ್ಧಗಳು—ಇವೇ ಮುಂತಾದವು ಸಂಭವಿಸಿದ ಸಮಯಗಳಲ್ಲಿ ಇದು ಪ್ರವೇಶಿಸಿ ಯುದ್ಧವನ್ನು ತಡೆಗಟ್ಟಿ ಸ್ವಲ್ಪಮಟ್ಟಿಗೆ ವಿಶ್ವಶಾಂತಿ ಕಾಪಾಡಿದೆ. ಕೊರಿಯ ಯುದ್ಧದಲ್ಲಿ ಈ ಸಂಸ್ಥೆ ಬಲವನ್ನು ಪ್ರಯೋಗಿಸಿ ಯುದ್ಧವನ್ನು ತಡೆಗಟ್ಟಿತು.

ವಿಶ್ವದ ನಾನಾ ರಾಷ್ಟ್ರಗಳಲ್ಲಿ ಮಾನವನ ಹಕ್ಕುಗಳು ಮತ್ತು ಮೂಲ ಸ್ವಾತಂತ್ರ್ಯಗಳ ಬೆಳೆವಣಿಗೆ ಮತ್ತು ಸಂರಕ್ಷಣೆಗೆ ಇದು ಸೇವೆ ಸಲ್ಲಿಸಿದೆ. ಈ ಸಂಸ್ಥೆಗೆ ಸಂಬಂಧಪಟ್ಟ ವಿಶೇಷ ಮತ್ತು ಸಹಾಯಕ ಸಂಸ್ಥೆಗಳು ರಾಷ್ಟ್ರಗಳ ಆಹಾರ, ವ್ಯವಸಾಯ, ಹಣಕಾಸು, ವೈಜ್ಞಾನಿಕ ಮತ್ತು ಸಾಮಾಜಿಕ ಕ್ಷೇತ್ರ ಗಳಲ್ಲಿ ಹಿಂದುಳಿದ ಮತ್ತು ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರಗಳಿಗೆ ಬಹಳ

ಸಹಕಾರಿಯಾಗಿದೆ. ವಸಾಹತುನೀತಿಗೆ ಸಿಕ್ಕಿ ನರಳುತ್ತಿದ್ದ ಅನೇಕ ಪ್ರದೇಶಗಳಿಗೆ ಸರ್ವತೋಮುಖವಾಗಿ ಸಹಾಯಮಾಡಿ ಅವನ್ನು ಸ್ವಯಂ ಆಡಳಿತಕ್ಕೆ ಸಿದ್ಧಮಾಡಿ ಸ್ವತಂತ್ರ ರಾಷ್ಟ್ರಗಳನ್ನಾಗಿ ಮಾಡಿದೆ. ೧೯೬೦ರ ದಶಕದಲ್ಲಿ ವಿಶ್ವಸಂಸ್ಥೆ ಪ್ರಪಂಚ ರಾಷ್ಟ್ರಗಳ ಅಭಿವೃದ್ಧಿಕಾರ್ಯದಲ್ಲಿ ವಿಶೇಷ ಪಾತ್ರವಹಿಸಲು ಪ್ರಾರಂಭಿಸಿ, ಅಭಿವೃದ್ಧಿಹೊಂದದ ರಾಷ್ಟ್ರಗಳ ಬೆಳವಣಿಗೆ ಮತ್ತು ಪ್ರಗತಿಗೆ ಸಹಾಯಕವಾಗಿದೆ.

ಹೀಗೆಂದ ಮಾತ್ರಕ್ಕೆ ಈ ಸಂಸ್ಥೆ ಪರಿಪೂರ್ಣವಾಗಿ ಕೆಲಸಮಾಡಿ ಯಶಸ್ವಿಯಾಗಿದೆ ಎಂದಲ್ಲ. ಇದು ಇನ್ನೂ ತನ್ನ ಉದ್ದೇಶಗಳನ್ನು ಪರಿಪೂರ್ಣವಾಗಿ ಸಾಧಿಸಿಲ್ಲ. ಈ ಸಂಸ್ಥೆ ಇನ್ನೂ ಮಾಡಬೇಕಾದ ಮಹಾಕಾರ್ಯಗಳು ಉಳಿದಿವೆ. ವರ್ಷಗಳುರುಳಿದಂತೆ ಇದರ ವಿವಿಧ ಕರ್ತವ್ಯಗಳು, ಸಮಸ್ಯೆಗಳು ಮತ್ತು ಸಾಧನ ವಿಧಾನಗಳು ಹೆಚ್ಚುತ್ತಿವೆ. ಇನ್ನೂ ವಿಶ್ವದಲ್ಲಿ ಶಾಶ್ವತವಾಗಿ ಶಾಂತಿ, ಭದ್ರತೆ, ಪ್ರಜಾಪ್ರಭುತ್ವ, ಮಾನವನ ಹಕ್ಕುಬಾಧ್ಯತೆಗಳು ಮತ್ತು ಸುಖೀರಾಜ್ಯಸ್ಥಾಪನೆ ಆಗಿಲ್ಲ. ಇವು ಇನ್ನೂ ಮಾನವನ ಕನಸಾಗಿಯೇ ಉಳಿದಿವೆ. ಕಳೆದ ಇಪ್ಪತ್ತೈದು ವರ್ಷಗಳ ಅನುಭವದಲ್ಲಿ ಇದು ಅನೇಕ ಅಡ್ಡಿ ಆತಂಕಗಳನ್ನು ಮತ್ತು ಕುಂದು ಕೊರತೆಗಳನ್ನು ತನ್ನ ಕಾರ್ಯಕಲಾಪಗಳಲ್ಲಿ ಕಂಡುಕೊಂಡಿದೆ. ಕೆಲವು ಸಮಸ್ಯೆಗಳು ಬಹುಮುಖವಾದವುಗಳು. ಈ ಕೆಲವು ಸಮಸ್ಯೆಗಳನ್ನು ಈ ಪ್ರಬಂಧದಲ್ಲಿ ವಿವೇಚಿಸಲಾಗಿದೆ.[1]

ಸದಸ್ಯತ್ವ

ವಿಶ್ವಸಂಸ್ಥೆಯ ಸನ್ನದಿನ ಪ್ರಕಾರ ಯಾವ ರಾಷ್ಟ್ರವೇ ಆಗಲಿ ವಿಶ್ವಶಾಂತಿಯಲ್ಲಿ ಆಸಕ್ತಿ ಹೊಂದಿದ್ದರೆ ಅದು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಲು ಅವಕಾಶವಿದೆ.[2] ಆದರೆ ಸದಸ್ಯರಾಷ್ಟ್ರವಾಗುವ ವಿಧಾನ ಬಹಳ ಕ್ಲಿಷ್ಟವಾದುದು. ಜೊತೆಗೆ ರಾಜಕೀಯವೂ ಇದರಲ್ಲಿ ಬೆರೆತುಹೋಗಿದೆ. ವಿಶ್ವಸಂಸ್ಥೆಯ ಭದ್ರತಾಸಮಿತಿಯು ಶಿಫಾರಸಿನ ಮೇಲೆ ಮಹಾಸಭೆ ಹೊಸ ರಾಷ್ಟ್ರಗಳನ್ನು ಈ ಸಂಸ್ಥೆಗೆ ಸೇರಿಸಿಕೊಳ್ಳಬಹುದಾಗಿದೆ. ಆದರೆ ಭದ್ರತಾಸಮಿತಿಯಲ್ಲಿರುವ ಐದು ಖಾಯಂ ರಾಷ್ಟ್ರಗಳಲ್ಲಿ ಈ ಬಗ್ಗೆ ಒಮ್ಮತವಿರಬೇಕು. ಯಾವುದಾದರೊಂದು ಖಾಯಂ ರಾಷ್ಟ್ರಕ್ಕೆ ಒಪ್ಪಿಗೆ ಇಲ್ಲದಿದ್ದಲ್ಲಿ ಆ ರಾಷ್ಟ್ರ ತನ್ನ ನಿಷೇಧಾಧಿಕಾರ(ವೀಟೊ)ವನ್ನು ಚಲಾಯಿಸಬಹುದು. ಈ ಐದು ಬಲಿಷ್ಠ ರಾಷ್ಟ್ರಗಳ (ಅಮೆರಿಕ, ಬ್ರಿಟನ್, ಸೋವಿಯತ್ ದೇಶ, ಫ್ರಾನ್ಸ್, ಕೌಮಿಂಟಾಂಗ್ ಚೀನ) ರಾಜಕೀಯ ಪ್ರಭಾವದಿಂದ ಕೆಲವು

---

[1] ವಿಶ್ವಸಂಸ್ಥೆಯ ಉಗಮ, ತತ್ತ್ವ ಮತ್ತು ಕಲಾಪಗಳನ್ನು ಕುರಿತ ಲೇಖನ **ಮಾನವಿಕ ಕರ್ನಾಟಕ** ಸಂಪುಟ, ೧, ಸಂಚಿಕೆ ೩ರಲ್ಲಿ (ಮೇ ೧೯೭೧) ಪ್ರಕಟವಾಗಿದೆ.

[2] *Charter of the United Nations*, Article–3

ರಾಷ್ಟ್ರಗಳು ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಲು ಕಷ್ಟವಾಗಿದೆ. ಚೀನದಲ್ಲಿ ಕ್ರಾಂತಿಯಾಗಿ ಪೀಕಿಂಗಿನಲ್ಲಿ ಭದ್ರ ಸರ್ಕಾರ ಸ್ಥಾಪಿತವಾಗಿ ಇಪ್ಪತ್ತೆರಡು ವರ್ಷಗಳಾದರೂ ಅದು ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಲುಸಾಧ್ಯವಾಗಿಲ್ಲ. ಎರಡನೆಯ ಮಹಾಯುದ್ಧವಾಗಿ ಇಪ್ಪತ್ತೈದು ವರ್ಷಗಳಾದರೂ ಉತ್ತರ ಕೊರಿಯ, ದಕ್ಷಿಣ ಕೊರಿಯ, ಉತ್ತರ ವಿಯಟ್ನಾಂ, ದಕ್ಷಿಣ ವಿಯಟ್ನಾಂ, ಪೂರ್ವ ಜರ್ಮನಿ, ಪಶ್ಚಿಮ ಜರ್ಮನಿ—ಮುಂತಾದವು ಸಂಸ್ಥೆಗೆ ಸೇರಲು ಸಾಧ್ಯವಾಗಿಲ್ಲ. ಈ ಕಾರಣದಿಂದ ವಿಶ್ವಸಂಸ್ಥೆ ನಿಜವಾದ ವಿಶ್ವಸಂಸ್ಥೆಯಾಗಲು ಸಾಧ್ಯವಾಗಿಲ್ಲ. ಬಲಿಷ್ಠ ರಾಷ್ಟ್ರಗಳ ರಾಜಕೀಯ ಚಟುವಟಿಕೆಗಳಿಂದ ವಿಶ್ವಸಂಸ್ಥೆ ತನ್ನ ವ್ಯಾಪ್ತಿ ಮತ್ತು ಪ್ರಾಮುಖ್ಯವನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ. ಈ ರಾಷ್ಟ್ರಗಳಿಗೆ ಎಲ್ಲಿಯ ವರೆಗೆ ವಿಶ್ವಸಂಸ್ಥೆಗೆ ಪ್ರವೇಶವಿಲ್ಲವೋ ಅಲ್ಲಿಯ ವರೆಗೂ ಇವುಗಳು ಸಂಸ್ಥೆಯ ಬಗ್ಗೆ ಗೌರವ ತಳೆದಿರುವುದಿಲ್ಲ ; ಅದಕ್ಕೆ ಮಾನ್ಯತೆ ನೀಡುವುದಿಲ್ಲ. ಈ ರಾಷ್ಟ್ರಗಳು ಆದಷ್ಟು ಜಾಗ್ರತೆ ವಿಶ್ವಸಂಸ್ಥೆಯ ಸದಸ್ಯತ್ವ ಪಡೆದರೆ ವಿಶ್ವಶಾಂತಿ ಮತ್ತು ಭದ್ರತೆಗೆ ಸಹಾಯವಾಗುವುದು.

ಶೀತಲಯುದ್ಧ

ದ್ವಿತೀಯ ಮಹಾಯುದ್ಧದಲ್ಲಿ ಜಯಗಳಿಸಿದ ರಾಷ್ಟ್ರಗಳಲ್ಲಿ ಮುಖ್ಯವಾದ ಅಮೇರಿಕ ಮತ್ತು ಸೋವಿಯತ್ ದೇಶಗಳ ಸ್ನೇಹಸಹಕಾರಗಳಿಂದ ವಿಶ್ವಸಂಸ್ಥೆ ಸ್ಥಾಪಿತವಾಯಿತು. ವಿಶ್ವದಲ್ಲಿ ಶಾಂತಿ ಸ್ಥಾಪಿಸಲು ಈ ಎರಡು ರಾಷ್ಟ್ರಗಳು ಸಹಕರಿಸುವುವೆಂದು ಸಂಸ್ಥೆ ಜನಿಸಿದಾಗ ನಂಬಲಾಗಿತ್ತು. ಆದರೆ ಕ್ರಮೇಣ ಅಮೆರಿಕ, ರಷ್ಯಗಳ ನಡುವಿನ ಮನಸ್ತಾಪ ಮತ್ತು ವೈಷಮ್ಯಗಳಿಂದ ವಿಶ್ವದಲ್ಲಿ ಶೀತಲಯುದ್ಧ ಪ್ರಾರಂಭವಾಗಲು ಕಾರಣವಾಯಿತು. ಅಮೆರಿಕ, ರಷ್ಯಗಳ ತಾತ್ತ್ವಿಕ ಸಮರದ ಫಲವಾಗಿ ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳಲ್ಲಿ ಇಬ್ಬಣವಾಯಿತು. ಈ ಮಹಾರಾಷ್ಟ್ರಗಳ ಜಗಳ ಮತ್ತು ಪೈಪೋಟಿಯಿಂದಾಗಿ ವಿಶ್ವವೇ ಎರಡು ಹೋಳಾಗಿಹೋಗಿದೆ. ವಿಶ್ವಸಂಸ್ಥೆಯ ವಿವಿಧ ಅಂಗಗಳ ಮುಂದೆ ಬರುವ ಸಮಸ್ತ ವಿಷಯಗಳನ್ನೂ ಈ ಎರಡು ಗುಂಪುರಾಷ್ಟ್ರಗಳ ದೃಷ್ಟಿಯಿಂದ ನೋಡಲಾಗುತ್ತಿದೆ. ಗುಂಪುಮನೋಭಾವದಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತಿಲ್ಲ. ಎರಡು ಗುಂಪುಗಳೂ ತಮ್ಮ ಸ್ವಾರ್ಥ ಮತ್ತು ರಾಜಕೀಯ ಗುರಿಗಳಿಗಾಗಿ ಸಂಸ್ಥೆಯನ್ನು ದುರುಪಯೋಗ ಮಾಡಿಕೊಳ್ಳುತ್ತ ಇವೆ.[3] ಈ ಕಾರಣದಿಂದ ಅನೇಕ ಸಮಸ್ಯೆಗಳಿಗೆ ನ್ಯಾಯ ದೊರೆಯದೆ, ಪರಿಹಾರ ದೊರೆಯದೆ ಅವು ಮುಂದುವರಿಯುತ್ತಾ ಇವೆ. ವಿಶ್ವ

---

[3] Northrop, F. S. C.: *The Taming of the Nations* ; New York: Macmillan, 1952 ; p. 47

ಸಂಸ್ಥೆಯ ಉಪಯೋಗ ಮತ್ತು ಗೌರವಗಳು ದಿನೇ ದಿನೇ ಕುಗ್ಗುತ್ತಿವೆ. ಅಮೆರಿಕ ರಷ್ಯಗಳ ನಡುವಿನ ತಾತ್ತ್ವಿಕ ಭಿನ್ನಾಭಿಪ್ರಾಯ ಪರಿಹಾರವಾಗುವ ತನಕ ಮತ್ತು ಈ ರಾಷ್ಟ್ರಗಳು ಪರಸ್ಪರ ಸಹಕರಿಸುವ ವರೆಗೆ ವಿಶ್ವಶಾಂತಿಯೂ ವಿಶ್ವಸಂಸ್ಥೆಯ ಯಶಸ್ಸೂ ಸಾಧ್ಯವಿಲ್ಲ.

ಪ್ರಬಲ ರಾಷ್ಟ್ರಗಳ ಪ್ರಭಾವ

ಮತ್ತೊಂದು ದೃಷ್ಟಿಯಲ್ಲಿ ನೋಡಿದರೆ ವಿಶ್ವಸಂಸ್ಥೆ ಅದರ ಖಾಯಂ ರಾಷ್ಟ್ರಗಳಾದ ಅಮೆರಿಕ, ರಷ್ಯ, ಬ್ರಿಟನ್ ಮತ್ತು ಫ್ರಾನ್ಸ್ ಇವುಗಳ ರಾಜಕೀಯ ಪ್ರಭಾವಕ್ಕೆ ಸಿಕ್ಕಿ ನರಳುತ್ತಿದೆ. ಸಂಸ್ಥೆಯ ಭದ್ರತಾಸಮಿತಿಯಲ್ಲಿ ಈ ರಾಷ್ಟ್ರಗಳಿಗೆ ಅತಿಮುಖ್ಯ ಮಾನ್ಯತೆ, ಪುರಸ್ಕಾರ ಮತ್ತು ಅಧಿಕಾರವನ್ನು ಕೊಟ್ಟದ್ದು ಸಂಸ್ಥೆಯ ಭವಿಷ್ಯಕ್ಕೆ ಧಕ್ಕೆ ತಂದಂತಾಗಿದೆ. ಅದರಲ್ಲೂ ಖಾಯಂ ರಾಷ್ಟ್ರಗಳಿಗೆ ಕೊಟ್ಟಿರುವ ನಿಷೇಧಾಧಿಕಾರ (ವೀಟೊ) ಭದ್ರತಾಸಮಿತಿಯ ಕಾರ್ಯಕಲಾಪಗಳಿಗೆ ಅಡ್ಡಿಯಾಗಿದೆ. ಪ್ರಬಲ ರಾಷ್ಟ್ರಗಳ ರಾಜಕೀಯ ಚದುರಂಗದಾಟದಿಂದ ವಿಶ್ವದ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ವಿಶ್ವಸಂಸ್ಥೆ ಅಸಮರ್ಥವಾಗಿದೆ. ಹೀಗಾಗಿ ವಿಶ್ವಸಂಸ್ಥೆಯ ಮುಖ್ಯ ಸ್ಥಾಪಕರಾಷ್ಟ್ರಗಳೇ ಅದರ ಮೂಲತತ್ತ್ವಗಳನ್ನು ಮರೆತು ವಿಶ್ವಸಂಸ್ಥೆಯನ್ನು ವಿಫಲಗೊಳಿಸುವ ಪರಿಸ್ಥಿತಿ ಬಂದಿದೆ. ವಿಶ್ವದ ಇತರ ದುರ್ಬಲ ರಾಷ್ಟ್ರಗಳಿಗೆ ಅದರಲ್ಲೂ ಏಷ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕ ರಾಷ್ಟ್ರಗಳಿಗೆ ಸಾಕಾದಷ್ಟು ಮತ್ತು ಕೊಡಬೇಕಾದಷ್ಟು ಪ್ರಾತಿನಿಧ್ಯವನ್ನು ಭದ್ರತಾಸಮಿತಿಯಲ್ಲೂ ಇತರ ಅಂಗಗಳಲ್ಲೂ ಕೊಟ್ಟಿಲ್ಲ. ಈ ಕಾರಣದಿಂದ ಪ್ರಬಲ ರಾಷ್ಟ್ರಗಳ ಪಾತ್ರ ಹೆಚ್ಚಾಗಿರುವುದಲ್ಲದೆ ದುರ್ಬಲ ರಾಷ್ಟ್ರಗಳು ಯತ್ನವಿಲ್ಲದೆ ತಟಸ್ಥವಾಗಿರುವ ಸನ್ನಿವೇಶ ಬಂದಿದೆ.[4] ವಿಶ್ವಸಂಸ್ಥೆಯಲ್ಲಿ ದುರ್ಬಲ ರಾಷ್ಟ್ರಗಳಿಗೆ ಹೆಚ್ಚು ಪ್ರಾತಿನಿಧ್ಯ ಮತ್ತು ಪಾತ್ರ ಕೊಡಲು ವಿಶ್ವಸಂಸ್ಥೆಯ ಸನ್ನದನ್ನು ತಿದ್ದುಪಡಿ ಮಾಡುವ ಸಲಹೆಗಳೂ ಇವೆ. ಆದರೆ ಖಾಯಂ ರಾಷ್ಟ್ರಗಳ ಒಪ್ಪಿಗೆ ಮತ್ತು ಸಹಕಾರ ಸಿಗದೆ ಈ ಬದಲಾವಣೆಗಳು ಕಷ್ಟ. ಈಗಿನ ಪರಿಸ್ಥಿತಿಯಲ್ಲಿ ಈ ದುರ್ಬಲ ರಾಷ್ಟ್ರಗಳು ಪ್ರಬಲ ರಾಷ್ಟ್ರಗಳನ್ನೇ ಅನುಸರಿಸಬೇಕು ಅಥವಾ ಆ ರಾಷ್ಟ್ರಗಳ ಕೋಪಕ್ಕೆ ತುತ್ತಾಗಿ ನರಳಬೇಕು.

ಶ್ರೀಮಂತ ಮತ್ತು ಬಡ ರಾಷ್ಟ್ರಗಳ ತಾರತಮ್ಯ

ಮತ್ತೊಂದು ಸಮಸ್ಯೆಯೆಂದರೆ ವಿಶ್ವದ ಶ್ರೀಮಂತ ಮತ್ತು ಬಡರಾಷ್ಟ್ರಗಳ ಮಧ್ಯೆ ಅಧಿಕವಾಗುತ್ತಿರುವ ಆರ್ಥಿಕ ತಾರತಮ್ಯ. ಎರಡನೆಯ ಮಹಾಯುದ್ಧಾನಂತರ ಈ ಸಮಸ್ಯೆ ಇನ್ನೂ ಪ್ರಚಂಡವಾಗಿದೆ. ಶ್ರೀಮಂತ ರಾಷ್ಟ್ರಗಳು ಇನ್ನೂ ಶ್ರೀಮಂತ

[4] Prime Minister Indira Gandh's Speech before the U. N. General Assembly; *Hindu*, October 24, 1970

ವಾಗುವುದನ್ನೂ ಬಡರಾಷ್ಟ್ರಗಳು ಹಿಂದುಳಿದಿರುವುದನ್ನೂ ನಾವು ಅಂತರರಾಷ್ಟ್ರೀಯ ಆರ್ಥಿಕ ಜೀವನದಲ್ಲಿ ಕಾಣಬಹುದು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾದ ಅಮೆರಿಕ, ರಷ್ಯ, ಬ್ರಿಟನ್, ಪಶ್ಚಿಮ ಜರ್ಮನಿ, ಫ್ರಾನ್ಸ್ ಮತ್ತು ಜಪಾನ್ ದೇಶಗಳು ಅಭಿವೃದ್ಧಿಹೊಂದದ ರಾಷ್ಟ್ರಗಳಿಗೆ ಆರ್ಥಿಕ ಮತ್ತು ಹಣಕಾಸಿನ ಸಹಾಯ ಮಾಡುತ್ತಿದ್ದರೂ ವಾಣಿಜ್ಯ ಮತ್ತು ವ್ಯಾಪಾರಕ್ಷೇತ್ರಗಳಲ್ಲಿ ಸಾಕಷ್ಟು ಸಹಾನುಭೂತಿ ತೋರುತ್ತಿಲ್ಲ.[5] ಹಿಂದುಳಿದ ರಾಷ್ಟ್ರಗಳು ಅಭಿವೃದ್ಧಿಗಾಗಿ ಕೊಡಬೇಕಾದ ಸಾಲಕ್ಕಾಗಿ ಮತ್ತು ಬಡ್ಡಿಗಾಗಿ ಹೆಚ್ಚು ಸಂಪತ್ತನ್ನು ವ್ಯಯಮಾಡುತ್ತಿವೆ. ಸಾಕಾದಷ್ಟು ಆರ್ಥಿಕ, ವೈಜ್ಞಾನಿಕ, ತಾಂತ್ರಿಕ, ವಾಣಿಜ್ಯ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಅಭಿವೃದ್ಧಿಹೊಂದಿದ ರಾಷ್ಟ್ರಗಳಿಂದ ಅಭಿವೃದ್ಧಿಹೊಂದದ ರಾಷ್ಟ್ರಗಳಿಗೆ ನೆರವು ಬರುವ ವರೆಗೂ ವಿಶ್ವದ ಬಡತನದ ಸಮಸ್ಯೆ ಇದ್ದೇ ಇರುತ್ತದೆ. ಈ ಸಮಸ್ಯೆ ಒಂದು ರಾಜಕೀಯ ಸಮಸ್ಯೆಯಾಗಿ ಪರಿಣಮಿಸಿ, ವಿಶ್ವಶಾಂತಿಗೂ ಅಡ್ಡಿಯಾಗಿದೆ. ವಿಶ್ವಶಾಂತಿಸ್ಥಾಪನೆಗಾಗಿ ಅಭಿವೃದ್ಧಿಹೊಂದದ ರಾಷ್ಟ್ರಗಳ ಆರ್ಥಿಕ, ಸಾಮಾಜಿಕ ಪ್ರಗತಿಗೆ ವಿಶ್ವಸಂಸ್ಥೆ ಹೆಚ್ಚು ಗಮನ ಕೊಡುವುದು ಅತಿಮುಖ್ಯ. ವಿಶ್ವಸಂಸ್ಥೆಯಲ್ಲಿ ಸಲ್ಲಿಸಿದ ಸೇವೆಗಾಗಿ ನೊಬೆಲ್ ಬಹುಮಾನ ಪಡೆದ ಕೆನಡದ ಮಾಜಿ ಪ್ರಧಾನಿ ಲೆಸ್ಟರ್ ಪಿಯರ್ಸನ್ "ವಿಶ್ವದ ಶ್ರೀಮಂತ ಹಾಗು ಬಡರಾಷ್ಟ್ರಗಳ ನಡುವೆ ಇರುವ ತಾರತಮ್ಯವನ್ನು ಕಡಿಮೆ ಮಾಡಲು ವಿಶ್ವಸಂಸ್ಥೆ ಯತ್ನಿಸದಿದ್ದರೆ ಉಳಿಯುವುದು ಕಷ್ಟ" ಎಂದು ಎಚ್ಚರಿಸಿದ್ದಾರೆ. ಇತ್ತೀಚೆಗೆ ಲುಸಾಕಾದಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಸಭೆಯಲ್ಲಿ "ಅಲಿಪ್ತನೀತಿ–ಆರ್ಥಿಕ ಪ್ರಗತಿ" ಕುರಿತು ಈ ರಾಷ್ಟ್ರಗಳು ಅಂಗೀಕರಿಸಿದ ನಿರ್ಣಯ ಗಮನಾರ್ಹವಾದುದು. "ವಿಶ್ವದ ಮೂರನೆಯ ಶಕ್ತಿಯಾದ ಅಲಿಪ್ತ ರಾಷ್ಟ್ರಗಳನ್ನು ಕಡೆಗಣಿಸುವಂತಿಲ್ಲ. ಆಹಾರ ಸಮಸ್ಯೆಯನ್ನು ಎದುರಿಸುತ್ತಿರುವ ಈ ರಾಷ್ಟ್ರಗಳ ಸಂಖ್ಯೆ ಹೆಚ್ಚಿದಷ್ಟೂ ವಿಶ್ವದಲ್ಲಿ ರಾಜಕೀಯ ಭದ್ರತೆ ಅಸಾಧ್ಯವಾಗುತ್ತದೆ. ಅಂತೆಯೇ ವಿಶ್ವಸಂಸ್ಥೆ ಅಭಿವೃದ್ಧಿಹೊಂದದ ಅಲಿಪ್ತ ರಾಷ್ಟ್ರಗಳ ಆರ್ಥಿಕ ಪ್ರಗತಿಗೆ ನೆರವಾಗುವ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು" ಎಂದು ನಿರ್ಣಯದಲ್ಲಿ ಕರೆ ನೀಡಲಾಗಿದೆ. ೧೯೭೧ರಿಂದ ಪ್ರಾರಂಭವಾದ "ಅಭಿವೃದ್ಧಿ ಶತಕ"ದಲ್ಲಿ ವಿಶ್ವಸಂಸ್ಥೆ ಅಭಿವೃದ್ಧಿಹೊಂದಿದ ರಾಷ್ಟ್ರಗಳ ಮೂಲಕ ಹೆಚ್ಚು ಪಾತ್ರ ವಹಿಸುತ್ತದೆಯೆಂದು ನಂಬಲಾಗಿದೆ.

ನಿಶ್ಶಸ್ತ್ರೀಕರಣ

೧೯೪೫ರಲ್ಲಿ ವಿಶ್ವಸಂಸ್ಥೆಯು ಸ್ಥಾಪನೆಯಾದಾಗ ವಿಜಯೀ ರಾಷ್ಟ್ರಗಳಾದ ಅಮೆರಿಕ

---

[5] Myrdal, Gunnar : *International Economics*; New York : Macmillan, 1957, p. 147

ರಾಷ್ಟ್ರಗಳು ಯುದ್ಧಾಸ್ತ್ರಗಳ ಮೇಲೆ ಹೆಚ್ಚಿಗೆ ವ್ಯಯಮಾಡದೆ ವಿಶ್ವಶಾಂತಿಗೆ ತಮ್ಮ ಸಂಪತ್ತನ್ನು ವಿನಿಯೋಗ ಮಾಡುವುವೆಂಬ ನಂಬಿಕೆ ಇತ್ತು. ಆದರೆ ಇದು ನಿಜವಾಗಲಿಲ್ಲ. ವಿಶ್ವಸಂಸ್ಥೆ ಸ್ಥಾಪನೆಯಾದ ಕೆಲವು ತಿಂಗಳುಗಳಲ್ಲೇ ಈ ಮಹಾರಾಷ್ಟ್ರಗಳಲ್ಲಿ ಮನಸ್ತಾಪ ಮತ್ತು ಪೈಪೋಟಿ ಪ್ರಾರಂಭವಾಗಿ ಶೀತಲಯುದ್ಧಕ್ಕೆ ನಾಂದಿಯಾಯಿತು. ಈ ಪೈಪೋಟಿ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಮಾತ್ರವಲ್ಲ: ಶಸ್ತ್ರಾಸ್ತ್ರಗಳ ಕ್ಷೇತ್ರಕ್ಕೂ ಹಬ್ಬಿ ಸಮಸ್ಯೆ ಭೀಕರವಾಯಿತು.[6] ಈ ದೊಡ್ಡ ರಾಷ್ಟ್ರಗಳು ತಮ್ಮ ರಾಷ್ಟ್ರದ ಸಂಪತ್ತಿನ ಬಹುಭಾಗವನ್ನು ಅಸ್ತ್ರಗಳ ಮೇಲೆ ಖರ್ಚುಮಾಡುತ್ತಿವೆ. ಗ್ಗಳಳರಲ್ಲಿ ನಾಗಸಾಕಿ ಮತ್ತು ಹಿರೋಷಿಮ ನಗರಗಳ ಮೇಲೆ ಹಾಕಿದ ಪರಮಾಣು ಬಾಂಬುಗಳ ಪರಿಣಾಮಗಳನ್ನು ಇನ್ನೂ ಗಮನಿಸಿಲ್ಲ. ಪರಮಾಣು ಬಾಂಬಿಗಿಂತ ಪ್ರಬಲವಾದ ಜಲಜನಕ ಬಾಂಬ್ ಮತ್ತು ಐ.ಸಿ.ಬಿ.ಎಂ.ಗಳನ್ನು (ಇಂಟರ್-ಕಾಂಟಿನೆಂಟಲ್ ಬ್ಯಾಲಿಸ್ಟಿಕ್ ಮಿಸೈಲ್ಸ್) ಕಂಡುಹಿಡಿದು ಮಾನವನ ಉಳಿವಿಗೆ ಧಕ್ಕೆತಂದಿದ್ದಾರೆ. ಈ ಮಹಾರಾಷ್ಟ್ರಗಳಲ್ಲಿ ಪರಸ್ಪರ ನಂಬಿಕೆ ಮತ್ತು ಸಹಕಾರ ಇಲ್ಲದಿರುವುದೇ ಇದಕ್ಕೆ ಕಾರಣ. ತಮ್ಮ ರಾಷ್ಟ್ರದ ಭದ್ರತೆಗೋಸ್ಕರ ವಿಶ್ವದ ಭದ್ರತೆಯನ್ನೇ ಕಳೆಯುವ ಪರಿಸ್ಥಿತಿ ಸಂಭವಿಸಿದೆ. ಇದನ್ನು ತಡೆಗಟ್ಟಲು ವಿಶ್ವಸಂಸ್ಥೆ ನಿಶ್ಶಸ್ತ್ರೀಕರಣ ಕಾರ್ಯವನ್ನು ಕೈಗೊಂಡಿದೆ. ಆದರೆ ಈ ಕಾರ್ಯ ಇನ್ನೂ ಯಶಸ್ವಿಯಾಗಿಲ್ಲ. ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ನಿಶ್ಶಸ್ತ್ರೀಕರಣ ಸಮಿತಿ ನೂರಾರು ಸಲ ಸಭೆ ಸೇರಿದ್ದರೂ ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ; ಬರುವ ಚಿಹ್ನೆಗಳೂ ಇಲ್ಲ. ಇದು ಮಾನವ ಕೋಟಿಯ ದುರದೃಷ್ಟ. ಪ್ರಬಲ ರಾಷ್ಟ್ರಗಳು ಶಸ್ತ್ರಾಸ್ತ್ರಗಳಲ್ಲಿ ಇಟ್ಟಿರುವ ನಂಬಿಕೆ ಕಡಿಮೆಯಾಗುವ ವರೆಗೂ ಈ ಸಮಸ್ಯೆಯ ಪರಿಹಾರ ಸಾಧ್ಯವಿಲ್ಲ. ಶಸ್ತ್ರಾಸ್ತ್ರಗಳ ಮೇಲೆ ವೆಚ್ಚಮಾಡುತ್ತಿರುವ ಸಂಪತ್ತಿನ ಜೊತೆಗೆ ಇವುಗಳ ಸಂಶೋಧನೆ ಮತ್ತು ಪ್ರಯೋಗಗಳಿಂದ ವಿಶ್ವದ ಆರೋಗ್ಯ ಮತ್ತು ವಾತಾವರಣಗಳು ಹದಗೆಟ್ಟು ಮಾನವನ ಮತ್ತು ಪ್ರಾಣಿಗಳ ಕ್ಷೇಮಜೀವನಕ್ಕೆ ಧಕ್ಕೆ ಬಂದಿದೆ. ಶಸ್ತ್ರಾಸ್ತ್ರಗಳ ಮೇಲೆ ವೆಚ್ಚಮಾಡುತ್ತಿರುವ ಸಂಪತ್ತು ಮತ್ತು ಬುದ್ಧಿಶಕ್ತಿಯನ್ನು ವಿಶ್ವದ ಅಭಿವೃದ್ಧಿಗೆ ಮತ್ತು ಬಡತನದ ನಿರ್ಮೂಲಕ್ಕೆ ಉಪಯೋಗಿಸಿದರೆ ಲೋಕಕಲ್ಯಾಣಕ್ಕೆ ಬಹಳ ನೆರವಾಗುವುದು. ಆದರೆ ಬಲಿಷ್ಠ ರಾಷ್ಟ್ರಗಳಲ್ಲಿ ಈ ವಿವೇಕ ಇಲ್ಲ. ಅತಿವೇಗವಾಗಿ ಮಿತಿ ಇಲ್ಲದೆ ಬೆಳೆಯುತ್ತಿರುವ ಭಯಂಕರ ಶಸ್ತ್ರಾಸ್ತ್ರಗಳಿಂದ ವಿಶ್ವಶಾಂತಿಗೆ ಮಾತ್ರವಲ್ಲ, ವಿಶ್ವಸಂಸ್ಥೆಗೂ ಅಪಾಯವಿದೆ.

ಮಾನವ ಹಕ್ಕುಗಳ ಜಾಗೃತಿ ಮತ್ತು ಅವುಗಳ ರಕ್ಷಣೆ

ವಿಶ್ವಸಂಸ್ಥೆಯ ಒಂದು ಮುಖ್ಯ ಧ್ಯೇಯವೆಂದರೆ ಮಾನವನ ಮೂಲಭೂತ

[6] Hoffman, Paul G. : *Peace Can be Won* ; New York : Doubleday, 1951, p. 190

ಹಕ್ಕುಗಳು ಮತ್ತು ಸ್ವಾತಂತ್ರ್ಯಗಳಲ್ಲಿ ಜಾಗೃತಿಯನ್ನು ಉಂಟುಮಾಡುವುದು; ಅವುಗಳನ್ನು ರಕ್ಷಿಸುವುದು. ವಿಶ್ವಸಂಸ್ಥೆಯ ಸನ್ನದಿನ ಪ್ರಕಾರ ಪ್ರತಿಯೊಂದು ಸದಸ್ಯರಾಷ್ಟ್ರವೂ ತನ್ನ ಪ್ರಜೆಗಳಿಗೆ ಸಮಾನವಾದ ಮೂಲಭೂತ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯಗಳನ್ನು ನೀಡುವುದು ಮತ್ತು ಕಾಪಾಡುವುದು ಅದರ ಆದ್ಯ ಕರ್ತವ್ಯ. ೧೯೪೮ರಲ್ಲಿ ಈ ಧ್ಯೇಯದ ಪಾಲನೆಗಾಗಿ "ಮಾನವ ಹಕ್ಕುಗಳು" ಎಂಬ ಪ್ರಣಾಳಿಕೆಯನ್ನು ವಿಶ್ವಸಂಸ್ಥೆ ರೂಪಿಸಿ ಎಲ್ಲ ಪ್ರಜೆಗಳಿಗೂ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳನ್ನು ಘೋಷಿಸಿತು. ಎಲ್ಲ ರಾಷ್ಟ್ರಗಳೂ ಮಾನವ ಹಕ್ಕುಗಳಿಗೆ ಪುರಸ್ಕಾರ ಮತ್ತು ರಕ್ಷಣೆ ನೀಡಬೇಕಾದ್ದು ಕರ್ತವ್ಯವಾಗಿದ್ದರೂ ಅನೇಕ ಸದಸ್ಯರಾಷ್ಟ್ರಗಳು ಈ ಪ್ರಣಾಳಿಕೆಗೆ ವಿರೋಧವಾಗಿ ವರ್ತಿಸುತ್ತಿವೆ.[7] ಅಮೆರಿಕ ದೊಡ್ಡ ಹಾಗೂ ಪ್ರಖ್ಯಾತ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದರೂ ತನ್ನ ಸಹಸ್ರಾರು ನೀಗ್ರೋ ಜನರಿಗೆ ಸರ್ವಸಮಾನತೆಯ ಹಕ್ಕನ್ನು ಕೊಡಿಸಲು ಅಸಮರ್ಥವಾಗಿದೆ. ದಕ್ಷಿಣ ಆಫ್ರಿಕ "ಅಪಾರ್ತೀಡ್" ಎಂಬ ಪ್ರತ್ಯೇಕತಾ ನೀತಿಯನ್ನು ಪಾಲಿಸಿಕೊಂಡು ಬಂದು ಕಪ್ಪು ಜನರನ್ನು ಅಸ್ಪೃಶ್ಯರಂತೆ ಬೇರೆಮಾಡಿ ಅಮಾನುಷ ಕೃತ್ಯಗಳನ್ನು ಮಾಡುತ್ತಿದೆ. ಇದೇ ರೀತಿ ರೊಡೀಷಿಯ ದೇಶ ಕಪ್ಪು ಜನಕ್ಕೆ ಮತ ನೀಡುವ ಹಕ್ಕನ್ನು ಕೊಡದೆ ಬಿಳಿಜನರ ಸರ್ಕಾರವನ್ನು ಸ್ಥಾಪಿಸಿ ಪ್ರಜಾಪ್ರಭುತ್ವದ ತತ್ತ್ವಗಳಿಗೆ ಅಪಮಾನ ಮಾಡುತ್ತಿದೆ. ಪಾಕಿಸ್ತಾನ ಬಾಂಗ್ಲಾದೇಶದ ಪ್ರಜೆಗಳಿಗೆ ಸ್ವಾತಂತ್ರ್ಯ ಕೊಡದೆ ದೇಶದಿಂದ ಹೊರದೂಡುತ್ತಿದೆ. ಪೋರ್ಚುಗಲ್ ದೇಶ ತನ್ನ ವಸಾಹತು ನೀತಿಯನ್ನು ಇನ್ನೂ ಬೆಳೆಸಿಕೊಂಡು ಬಂದು ಆಫ್ರಿಕದ ಕಪ್ಪು ಜನರನ್ನು ಗುಲಾಮರಂತೆ ನೋಡುತ್ತಿದೆ. ಇಂಥ ಪ್ರಸಂಗಗಳಾಗುತ್ತಿದ್ದರೂ ವಿಶ್ವಸಂಸ್ಥೆ ಏನು ಮಾಡಲೂ ಅಸಮರ್ಥವಾಗಿದೆ. ವಿಶ್ವಸಂಸ್ಥೆಯ ಮಹಾಸಭೆ ಆರ್ಥಿಕ ಮತ್ತು ಸಾಮಾಜಿಕ ಸಮಿತಿ ಮಾಡಿದ ಶಿಫಾರಸುಗಳಿಗೆ ಯಾವ ಗೌರವವನ್ನೂ ತೋರಿಸದೆ ಅವುಗಳನ್ನು ಉಲ್ಲಂಘನೆ ಮಾಡುತ್ತಾ ಇದೆ. ಬಹುಶಃ ಪ್ರಬಲ ರಾಷ್ಟ್ರಗಳು ತಮ್ಮ ಪ್ರಭಾವವನ್ನು ಈ ಉಲ್ಲಂಘಿಸಿದ ರಾಷ್ಟ್ರಗಳ ಮೇಲೆ ಬೀರಿದ್ದರೆ ಪರಿಸ್ಥಿತಿಯೇ ಬೇರೆಯಾಗುತ್ತಿತ್ತು. ಆದರೆ ಈ ಪ್ರಬಲ ರಾಷ್ಟ್ರಗಳ ಪ್ರೋತ್ಸಾಹ ಇರುವುದೇ ಸಮಸ್ಯೆಯ ಪರಿಹಾರಕ್ಕೆ ದೊಡ್ಡ ಅಡ್ಡಿ. ಪ್ರಬಲ ರಾಷ್ಟ್ರಗಳು ಪ್ರಜಾಪ್ರಭುತ್ವ ತತ್ತ್ವಗಳಿಗೆ ಕೊಟ್ಟಿರುವ ಗೌರವ ಮತ್ತು ಪುರಸ್ಕಾರ ಎಷ್ಟರಮಟ್ಟಿಗೆ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಎಲ್ಲಿಯವರೆಗೂ ಮಾನವನ ವ್ಯಕ್ತಿಸ್ವಾತಂತ್ರ್ಯ ಮತ್ತು ಮೂಲಭೂತ ಹಕ್ಕುಗಳಿಗೆ ಮನ್ನಣೆ ಮತ್ತು ಪ್ರೋತ್ಸಾಹ ದೊರೆಯುವುದಿಲ್ಲವೋ ಅಲ್ಲಿಯ ವರೆಗೂ ವಿಶ್ವಸಂಸ್ಥೆಯ ಧ್ಯೇಯಗಳನ್ನು ಅನುಷ್ಠಾನಕ್ಕೆ ತರುವುದು ಅಸಾಧ್ಯ.

---

[7] *Year Book of The United Nations*, 1969, p. 605

ಸಣ್ಣ ಯುದ್ಧಗಳು

ಯುದ್ಧ ಭೀತಿಯಿಂದ ಮಾನವಕೋಟಿಯನ್ನುದ್ಧಾರಮಾಡುವ ಉದ್ದೇಶದಿಂದ ವಿಶ್ವ ಸಂಸ್ಥೆಯ ಸ್ಥಾಪನೆಯಾದರೂ ಸಣ್ಣ ಯುದ್ಧಗಳು ನಡೆಯುತ್ತಲೇ ಇವೆ. ಬಹುಶಃ ವಿಶ್ವಸಂಸ್ಥೆ ಇಲ್ಲದಿದ್ದರೆ ಈ ಸಣ್ಣ ಯುದ್ಧಗಳು ಮಹಾಯುದ್ಧಗಳಾಗಿ ಪರಿವರ್ತನೆ ಗೊಳ್ಳುತ್ತಿದ್ದುವೋ ಏನೊ. ಮಹಾಯುದ್ಧ ಇದುವರೆಗೂ ಸಂಭವಿಸದಿರಲು ಪರಮಾಣು ಭೀತಿಯೊಂದು ಮುಖ್ಯ ಕಾರಣ. ಒಂದು ರಾಷ್ಟ್ರ ಇನ್ನೊಂದರ ಮೇಲೆ ಆಕ್ರಮಣ ನಡೆಸಿದಾಗ ಹಿರಿಯ ರಾಷ್ಟ್ರಗಳು ಅಸಹಾಯಕವೋ ಎಂಬಂತೆ ಕೈಕಟ್ಟಿ ಕೂರಲೂ ಪರಮಾಣು ಭೀತಿ ಕಾರಣ. ಆದ್ದರಿಂದ ಪರಮಾಣು ಅಸ್ತ್ರ ಒಂದು ದೃಷ್ಟಿಯಲ್ಲಿ ವರ, ಇನ್ನೊಂದು ದೃಷ್ಟಿಯಲ್ಲಿ ಶಾಪ. ಪ್ರಬಲ ರಾಷ್ಟ್ರಗಳ ಪಾತ್ರ ದಿಂದಲೇ, ವಿಯಟ್ನಾಂ ಸಣ್ಣ ಯುದ್ಧವಾದರೂ ಬಹಳ ಕಾಲದಿಂದ ನಿರಂತರ ವಾಗಿ ಕಾದಾಟ ನಡೆಯುತ್ತಲೇ ಇದೆ. ವಿಶ್ವಸಂಸ್ಥೆಯೂ ವಿಯಟ್ನಾಮಿನ ಸಣ್ಣ ಯುದ್ಧವನ್ನು ನಿಲ್ಲಿಸಲು ಅಸಹಾಯಕವಾಗಿದೆ.

ವಿಶ್ವಸಂಸ್ಥೆಗೆ ಈ ಸಣ್ಣ ಯುದ್ಧಗಳನ್ನು ನಿಲ್ಲಿಸಲು ಅಥವಾ ತಡೆಗಟ್ಟಲು ವಿಶ್ವಸಂಸ್ಥೆಯ ಕಾವಲುಸೈನ್ಯವಿಲ್ಲ. ಸಣ್ಣ ಯುದ್ಧಗಳನ್ನು ತಡೆಗಟ್ಟಲು ವಿಶ್ವಸಂಸ್ಥೆ ಇತರ ರಾಷ್ಟ್ರಗಳ ಸೈನ್ಯವನ್ನು ಕೇಳಬೇಕು. ಕೆಲವು ಸಂದರ್ಭಗಳಲ್ಲಿ ರಾಷ್ಟ್ರಗಳು ತಿರಸ್ಕಾರ ಕೂಡ ಮಾಡಿವೆ. ವಿಶ್ವಸಂಸ್ಥೆ ಬಲಪ್ರಯೋಗಮಾಡಲು ಸ್ವಸೈನ್ಯಶಕ್ತಿ ಇಲ್ಲದೆ ಅಸಹಾಯಕವಾಗಿದೆ.[8] ವಿಶ್ವಸಂಸ್ಥೆಯ ಕಾವಲುದಳ ಅಥವಾ ಸೈನ್ಯವಿದ್ದರೆ ಉತ್ತಮ. ಆದರೆ ಇದರ ಸ್ಥಾಪನೆಗೆ ಖಾಯಂ ರಾಷ್ಟ್ರಗಳ ಒಪ್ಪಿಗೆ ಸಿಗುವುದು ಬಹಳ ಕಷ್ಟ. ಇದರಿಂದ ವಿಶ್ವಸಂಸ್ಥೆ ಸದಸ್ಯರಾಷ್ಟ್ರಗಳ ಸಹಕಾರದ ಮೇಲೆ ನಿಂತಿದೆ. ಸದಸ್ಯರಾಷ್ಟ್ರಗಳು ಸಹಾಯಮಾಡದಿದ್ದಲ್ಲಿ ಈ ಸಂಸ್ಥೆ ಏನೂ ಮಾಡಲು ಸಾಧ್ಯವಿಲ್ಲ. ಈ ಕಾರ್ಯಗಳಿಗೆ ಬೇಕಾದ ಖರ್ಚುವೆಚ್ಚಗಳನ್ನು ಸದಸ್ಯರಾಷ್ಟ್ರಗಳು ಕೊಡ ಬೇಕಾದ್ದು ಧರ್ಮ. ಆದರೆ ಪ್ರಬಲ ರಾಷ್ಟ್ರಗಳು ರಾಜಕೀಯ ಕಾರಣಗಳಿಂದ ಈ ಕಾರ್ಯಗಳಿಗೆ ಹಣದ ಸಹಾಯ ಸಹ ಮಾಡುತ್ತಿಲ್ಲ. ಬಹುಶಃ ವಿಶ್ವಸರ್ಕಾರ ಸ್ಥಾಪನೆಯಾಗುವ ವರೆಗೂ ಈ ಸಮಸ್ಯೆಯ ಪರಿಹಾರ ಅಸಾಧ್ಯ. ಬೃಹದ್ ರಾಷ್ಟ್ರಗಳಲ್ಲಿ ಒಮ್ಮತವೇರ್ಪಡುವ ವರೆಗೂ ವಿಶ್ವಸಂಸ್ಥೆಯ ಸೇನಾವ್ಯವಸ್ಥೆ ಸಾಧ್ಯ ವಿಲ್ಲ. ಇದು ಸದ್ಯಕ್ಕೆ ಕೇವಲ ಆದರ್ಶ.

ಆಡಳಿತ ಮತ್ತು ಹಣಕಾಸಿನ ಸಮಸ್ಯೆ

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ವಿಶ್ವಸಂಸ್ಥೆಯ ಸಮಿತಿಗಳು, ಅಂಗಗಳು,

---

[8] Margenthau, H.: *Politics Among Nations*: New York: Alfred Knopf, 1948, p. 415

ಸಹಾಯಕ ಮತ್ತು ವಿಶೇಷ ಸಂಸ್ಥೆಗಳು ವಿಶಾಲವಾಗಿ ಬೆಳೆದಿವೆ. ಸಂಘಸಂಸ್ಥೆಗಳು ಬೆಳೆದಂತೆ ಅವುಗಳ ಆಡಳಿತ ಕ್ರಮದಲ್ಲಿ ಒಡಂಬಡಿಕೆ, ದಕ್ಷತೆ ಮತ್ತು ಸುಸಂಘಟನೆ ಅತ್ಯಾವಶ್ಯಕ. ಆದರೆ ಇವುಗಳನ್ನು ಸುಗಮವಾಗಿ ಸಾಧಿಸಲು ಸಾಧ್ಯವಾಗಿಲ್ಲ. ಇದರಿಂದ ವಿಶ್ವಸಂಸ್ಥೆಯ ಆಡಳಿತ ಹದಗೆಡುತ್ತಿದೆ. "ವಿಶ್ವಸಂಸ್ಥೆಯ ಹಲವು ವಿಭಾಗಗಳು ಕೇಂದ್ರದ ನಿರ್ದೇಶನವನ್ನು ಪರಿಗಣಿಸದೆಯೇ ಸ್ವತಂತ್ರವಾಗಿ ಕಾರ್ಯ ಪ್ರವೃತ್ತವಾಗಿವೆ. ವಿಶ್ವಸಂಸ್ಥೆಯ ಶಾಖೆಗಳು ಪರಸ್ಪರ ಸಹಕಾರದಿಂದ ಕಾರ್ಯ ಮಾಡದಿದ್ದರೆ ಸಂಸ್ಥೆ ಉಳಿಯುವುದು ಕಷ್ಟ" ಎಂದು ವಿಶ್ವಸಂಸ್ಥೆಯಲ್ಲಿ ಬಹಳ ಕಾಲ ಸೇವೆಸಲ್ಲಿಸಿದ ಮತ್ತು ಅಭಿವೃದ್ಧಿಕಾರ್ಯಗಳ ತಜ್ಞರಾದ ರಾಬರ್ಟ್ ಜಾಕ್‌ಸನ್ ಹೇಳಿದ್ದಾರೆ.[9]

ವಿಶ್ವಸಂಸ್ಥೆಯ ಕಾರ್ಯಕಲಾಪ ಮತ್ತು ಯೋಜನೆಗಳು ಹೆಚ್ಚಿದಂತೆಲ್ಲ ಅದರ ನೌಕರರ ಮತ್ತು ಸೇವಾಸಿಬ್ಬಂದಿ ಜನರ ಸಂಖ್ಯೆ ಮತ್ತು ಜವಾಬ್ದಾರಿ ಹೆಚ್ಚುತ್ತಿದೆ. ಅವರಲ್ಲಿ ದಕ್ಷತೆ, ನ್ಯಾಯತತ್ಪರತೆ ಮತ್ತು ಅಂತರರಾಷ್ಟ್ರೀಯ ಮನೋಭಾವ ಹೆಚ್ಚಬೇಕು. ವಿಶ್ವಸಂಸ್ಥೆಯ ಧ್ಯೇಯ ಮತ್ತು ಕಾರ್ಯಕಲಾಪ ಗಳಲ್ಲಿ ಇವರಿಗೆ ಆಸಕ್ತಿ ಇರಬೇಕು. ಆದರೆ ವಿವಿಧ ರಾಷ್ಟ್ರಗಳಿಂದ ಆಯ್ಕೆಯಾದ ನೌಕರರಲ್ಲಿ ಮತ್ತು ಸೇವಾಸಿಬ್ಬಂದಿಯಲ್ಲಿ ವಿಶ್ವಸಂಸ್ಥೆಯನ್ನು ತಮ್ಮ ರಾಷ್ಟ್ರಗಳ ಪರವಾಗಿ ಮತ್ತು ಇತರ ರಾಷ್ಟ್ರಗಳ ವಿರೋಧವಾಗಿ ಉಪಯೋಗಿಸಿಕೊಳ್ಳುವ ಮನೋಭಾವವನ್ನು ಕಾಣುತ್ತಿದ್ದೇವೆ. ಇದರಿಂದ ವಿಶ್ವಸಂಸ್ಥೆಗೆ ಬಹಳ ಹಾನಿ ಉಂಟಾಗುವುದು ಖಂಡಿತ. ನಿಜವಾದ ಅಂತರರಾಷ್ಟ್ರೀಯ ಸೇವಾದಳದ ಆವಶ್ಯಕತೆ ಇದೆ. ಇದು ಶೀಘ್ರವಾಗಿ ಸ್ಥಾಪನೆಯಾದರೆ ವಿಶ್ವಸಂಸ್ಥೆಗೆ ಒಳ್ಳೆಯದು.

ಮತ್ತೊಂದು ಸಮಸ್ಯೆಯೆಂದರೆ ವಿಶ್ವಸಂಸ್ಥೆಯ ಹಣಕಾಸಿನ ಸಮಸ್ಯೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ವಿಶ್ವಸಂಸ್ಥೆಯ ಪಾತ್ರ, ಕಾರ್ಯಕಲಾಪಗಳು ಮತ್ತು ಹೊಸ ಯೋಜನೆಗಳು ಹೆಚ್ಚಿವೆ. ಆದರೆ ಸಂಸ್ಥೆಯ ವರಮಾನ ಅದೇ ಪ್ರಮಾಣದಲ್ಲಿ ಹೆಚ್ಚಿಲ್ಲ. ೧೯೭೦ರಲ್ಲಿ ಇದರ ಒಟ್ಟು ವರಮಾನ ೧೩.೩ ಕೋಟಿ ಡಾಲರ್. ನ್ಯೂಯಾರ್ಕ್ ನಗರದ ವರಮಾನ ಅಥವಾ ಮೈಸೂರು ಸರ್ಕಾರದ ವರಮಾನ ವಿಶ್ವಸಂಸ್ಥೆಯ ವರಮಾನಕ್ಕಿಂತ ಹೆಚ್ಚು ಎಂದು ಹೇಳಿದರೆ ಆಶ್ಚರ್ಯವಾಗಬಹುದು. ವಿಶ್ವಸಂಸ್ಥೆಗೆ ರಾಷ್ಟ್ರಸರ್ಕಾರಗಳಂತೆ ತೆರಿಗೆ ಹಾಕುವ ಅಧಿಕಾರವಿಲ್ಲ. ಸದಸ್ಯ ರಾಷ್ಟ್ರಗಳು ವರ್ಷಕ್ಕೊಮ್ಮೆ ಕೊಟ್ಟ ದಾನದ ಹಣದಿಂದ ಸಂಸ್ಥೆ ನಡೆಯಬೇಕಾಗಿದೆ. ಶ್ರೀಮಂತ ರಾಷ್ಟ್ರಗಳು ಕೊಡಬೇಕಾದಷ್ಟು ಹಣವನ್ನು ಸಂಸ್ಥೆಗೆ ಕೊಡುತ್ತಿಲ್ಲ. ಹಣದ ಸಮಸ್ಯೆಯಿಂದ ವಿಶ್ವಸಂಸ್ಥೆ ಅನೇಕ ಕಾರ್ಯಕಲಾಪಗಳನ್ನು ಕೈಗೊಳ್ಳಲು ಮತ್ತು ಪೂರ್ತಿಗೊಳಿಸಲು ಸಾಧ್ಯವಾಗುತ್ತಿಲ್ಲ. ಪ್ರತಿ ರಾಷ್ಟ್ರವೂ ತನ್ನ ಸಂಪತ್ತಿನ

[9] *International Conciliation*, January, 1968, p. 139

ಅಥವಾ ಉತ್ಪನ್ನದ ಒಂದು ಭಾಗವನ್ನು ಕೊಟ್ಟರೆ ವಿಶ್ವಸಂಸ್ಥೆ ಪರಿಪೂರ್ಣವಾಗಿ ಕೆಲಸ ಮಾಡಬಹುದೆಂದು ಆರ್ಥಿಕ ತಜ್ಞರು ಸಲಹೆಮಾಡಿದ್ದಾರೆ.[10] ಆದರೆ ರಾಷ್ಟ್ರಗಳು ಈ ಸಲಹೆಯ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿಲ್ಲ. ಪ್ರತಿ ರಾಷ್ಟ್ರವೂ ತನ್ನ ವಾರ್ಷಿಕ ವರಮಾನದಲ್ಲಿ ಸ್ವಲ್ಪ ಭಾಗವನ್ನು ವಿಶ್ವಸಂಸ್ಥೆಗೋಸ್ಕರ ಮೀಸಲಾಗಿಟ್ಟರೆ ಬಹಳ ಒಳ್ಳೆಯದು. ವಿಶ್ವಸಂಸ್ಥೆಗೆ ಶ್ರೀಮಂತ ರಾಷ್ಟ್ರಗಳು ಬಡರಾಷ್ಟ್ರಗಳಿಗಿಂತ ಹೆಚ್ಚಾಗಿ ಕೊಡುವುದು ನ್ಯಾಯ. ರಾಜಕೀಯ ಕಾರಣದಿಂದ ಮತ್ತು ರಾಷ್ಟ್ರಗಳ ಪೈಪೋಟಿಯಿಂದ ಇದು ಸಾಧ್ಯವಾಗಿಲ್ಲ. ವಿಶ್ವಸಂಸ್ಥೆಯ ಯಶಸ್ಸಿಗೆ ಈ ಸಮಸ್ಯೆ ಪರಿಹಾರವಾಗುವುದೂ ಮುಖ್ಯ.

ಸಮಾಪ್ತಿ

೧೯೭೦ರ ಅಕ್ಟೋಬರಿನಲ್ಲಿ ನಡೆದ ವಿಶ್ವಸಂಸ್ಥೆಯ ಬೆಳ್ಳಿ ಹಬ್ಬದ ಸಮಯದಲ್ಲಿ ಅನೇಕ ರಾಷ್ಟ್ರಗಳ ನಾಯಕರು, ವರಿಷ್ಠರು ಮತ್ತು ರಾಜಕಾರಣಿಗಳು ಮೇಲ್ಕಂಡ ಸಮಸ್ಯೆಗಳನ್ನು ಎಲ್ಲ ರಾಷ್ಟ್ರಗಳ ಗಮನಕ್ಕೂ ತಂದಿದ್ದಾರೆ. ಸಂಸ್ಥೆಯ ಮುಖ್ಯ ಕಾರ್ಯದರ್ಶಿ ಉ ಥಾಂಟ್ ಕೂಡ ಈ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಪರಿಸ್ಥಿತಿಯನ್ನು ವಿವರಿಸಿ ಅದರ ಬೆಳವಣಿಗೆಗೆ ಬೇಕಾದ ಸಲಹೆ ನೀಡಿದ್ದಾರೆ. ವಿಶ್ವಸಂಸ್ಥೆ ಎದುರಿಸುತ್ತಿರುವ ಸಮಸ್ಯೆಗಳು ಅದಕ್ಕೆ ಮಾತ್ರವೇ ಅಲ್ಲದೆ ಎಲ್ಲ ರಾಷ್ಟ್ರಗಳಿಗೂ ಮಾನವಜನಾಂಗಕ್ಕೂ ದೊಡ್ಡ ಸವಾಲುಗಳಾಗಿವೆ. ಈ ಸವಾಲುಗಳನ್ನು ಎಷ್ಟರಮಟ್ಟಿಗೆ ಪರಿಹರಿಸುವುದು ಸಾಧ್ಯವಾಗುತ್ತದೆ ಎಂಬುದರ ಮೇಲೆ ವಿಶ್ವಸಂಸ್ಥೆಯ ಯಶಸ್ಸು ಮತ್ತು ಭವಿಷ್ಯ ನಿಂತಿವೆ.

ವಿಶ್ವಸಂಸ್ಥೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ದೊರಕಿಸುವುದು ಪ್ರಬಲ ರಾಷ್ಟ್ರಗಳಿಗೂ ತಟಸ್ಥ ರಾಷ್ಟ್ರಗಳಿಗೂ ಸೇರಿದ ಜವಾಬ್ದಾರಿ. ಈ ಸಮಸ್ಯೆಗಳನ್ನು ಕೇವಲ ಪ್ರಬಲ ರಾಷ್ಟ್ರಗಳಿಗೆ ಬಿಟ್ಟರೆ ಸಾಲದು. ವಿಶ್ವಸಂಸ್ಥೆ ಬರುವ ದಶಕಗಳಲ್ಲಿ ಪ್ರಬಲ ರಾಷ್ಟ್ರಗಳಿಗಿಂತ ಅಲಿಪ್ತ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಬಹಳ ಉಪಯೋಗಕರವಾದುದು. ವಿಶ್ವದ ಹಿಂದುಳಿದ ಮತ್ತು ಬಡರಾಷ್ಟ್ರಗಳಿಗೆ ವಿಶ್ವಸಂಸ್ಥೆಯೊಂದು ಆಶಾಕಿರಣ. ವಿಶ್ವಸಂಸ್ಥೆಯ ಯಶಸ್ವೀ ಕಾರ್ಯನಿರ್ವಹಣೆಯಲ್ಲಿ ಅಲಿಪ್ತ ರಾಷ್ಟ್ರಗಳು ಮಹತ್ವದ ಪಾತ್ರವಹಿಸಬೇಕು. ಸಂಸ್ಥೆಯನ್ನು ಪ್ರಬಲ ರಾಷ್ಟ್ರಗಳು ದುರುಪಯೋಗಪಡಿಸಿಕೊಳ್ಳುವುದನ್ನು ತಪ್ಪಿಸಿ ವಿಶ್ವದ ನವೋದಿತ ಸ್ವತಂತ್ರ ರಾಷ್ಟ್ರಗಳು ತಮ್ಮ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಪ್ರಗತಿಗೆ, ವಿಶ್ವಶಾಂತಿ ಮತ್ತು ಮಾನವ ಕಲ್ಯಾಣಕ್ಕೆ ಸಾಧನವನ್ನಾಗಿ ಮಾಡಬೇಕು.

[10] *Year Book of United Nations*; 1967, p. 463

ಎಂ. ಶಿವಲಿಂಗಯ್ಯ

ಬಸ್ತಾರಿನ ಆದಿವಾಸಿಗಳು

ಮಧ್ಯಪ್ರದೇಶದ ಆಗ್ನೇಯದಲ್ಲಿರುವ ಬಸ್ತಾರ್ ಜಿಲ್ಲೆ ಆದಿವಾಸಿಗಳಿಗೆ ಹೆಸರಾದ ನಾಡು. ಈ ನಾಡಿನ ವಿಸ್ತೀರ್ಣ ಸುಮಾರು ೧೫,೦೦೦ ಚ.ಮೈ. ಜನಸಂಖ್ಯೆ ೧೦ ಲಕ್ಷಕ್ಕಿಂತಲೂ ಹೆಚ್ಚು. ಒಟ್ಟು ಜನಸಂಖ್ಯೆಯಲ್ಲಿ ಸೇಕಡ ೯೮ರಷ್ಟು ಜನ ಹಳ್ಳಿಗಾಡಿನವರು. ಹಳ್ಳಿಗಳ ಸಂಖ್ಯೆ ೩,೧೫೪ಕ್ಕಿಂತಲೂ ಮಿಗಿಲು. ಇವುಗಳ ಆಡಳಿತವನ್ನು ನೋಡಿಕೊಳ್ಳಲು ಪಟವಾರಿಗಳುಂಟು. ಈ ಜಿಲ್ಲೆಯ ಶೇಕಡ ೭೫ರಷ್ಟು ಭಾಗವನ್ನು ಅರಣ್ಯ ಆವರಿಸಿಕೊಂಡಿದೆ. ಸೇಕಡ ಸುಮಾರು ೨೫ರಷ್ಟು ಅರಣ್ಯಪ್ರದೇಶದಲ್ಲಿ ಅಭೂಜ್‌ಮಾರ್ ಬೆಟ್ಟಗಳಿವೆ. ಇವು ಸಮುದ್ರಮಟ್ಟಕ್ಕಿಂತ ೨,೦೦೦ ಅಡಿಗಳಷ್ಟು ಎತ್ತರದಲ್ಲಿವೆ. ಈ ಬೆಟ್ಟಗಳಲ್ಲಿ ಹಾಗೂ ಸುತ್ತಮುತ್ತಲೂ ಹರಡಿರುವ ಕಾಡುಪ್ರದೇಶದಲ್ಲಿ ವಿವಿಧ ಪಂಗಡಗಳಿಗೆ ಸೇರಿರುವ ಆದಿವಾಸಿ ಜನ ನೆಲಸಿದ್ದಾರೆ. ಇಲ್ಲಿಯ ಬಹುಮಂದಿ ಆದಿವಾಸಿಗಳನ್ನು "ಮಾರಿಯಾ" ಅಥವಾ "ಮಾಡಿಯಾ" ಎಂಬುದಾಗಿ ಕರೆಯಲಾಗುತ್ತದೆ. ಸ್ಥಳೀಯ ಭಾಷೆಯಲ್ಲಿ "ಮಾಡಿಯಾ" ಅಥವಾ ಮಾಡಿಯಾ ಎಂದರೆ ಗಿರಿಜನರೆಂದು ಅರ್ಥ. ಈ ನಾಡಿನ ಆದಿವಾಸಿಗಳನ್ನು ಅಭೂಜ್‌ಮಾರಿಯಾ, ಬೈಸನ್ ಹಾರನ್‌ಮಾರಿಯಾ, ಮಾರಿಯಾ ಅಥವಾ ಮುರಿಯಾ, ಧುರ್ವಾ, ಭಾತ್ರಾ, ಡೊರ್ಲಾ, ಹಾಲ್ಬಾ ಮತ್ತು ಗಾಂಡ್ಸ್‌ಗಳೆಂಬ ಪಂಗಡಗಳಲ್ಲಿ ಕಾಣಬಹುದು. ಈ ಗಿರಿಜನರ ಮಾತೃಭಾಷೆಗಳು ಮಾರಿಯಾ, ಛಟ್ಟೀಸ್‌ಗರಿ, ಹಿಂದಿ, ಭಾತ್ರಿ, ಪಾರ್ಜಿ, ಡೊರ್ಲಿ, ಹಾಲ್ಬಿ, ಗಾಂಡಿ, ತೆಲುಗು, ಮರಾಠಿ ಮತ್ತು ಒರಿಯ. ಕೆಲವು ಭಾಗಗಳಲ್ಲಿ ಆದಿವಾಸಿಗಳು ಇವುಗಳ ಮಿಶ್ರಣ ಭಾಷೆಯಲ್ಲಿ ಮಾತನಾಡುವುದುಂಟು. ನಾರಾಯಣಪುರ, ಬಿಜಾಪುರ, ಜಗದಲ್‌ಪುರ, ಕೊಂಡಗಾವ್, ಭಾನುಪ್ರತಾಪ್‌ಪುರ, ದಂತೇವಾರ (ಡ) ತಹಸಿಲ್‌ಗಳಲ್ಲಿ ಆದಿವಾಸಿಗಳು ವಿತರಣೆ ಹೊಂದಿದ್ದಾರೆ. ಅಭೂಜ್‌ಮಾರಿಯಾ, ಬೈಸನ್ ಹಾರನ್‌ಮಾರಿಯಾ ಮತ್ತು ಧುರ್ವಾ ಪಂಗಡಗಳಿಗಿಂತ ಮಾರಿಯಾ, ಭಾತ್ರಾ, ಡೊರ್ಲಾ, ಹಾಲ್ಬಾ ಮತ್ತು ಗಾಂಡ್ಸ್ ಪಂಗಡಗಳ ಆದಿವಾಸಿಗಳು ಆಧುನಿಕ ಜೀವನಕ್ರಮಗಳಿಗೆ ಅಲ್ಪ ಪ್ರಮಾಣದಲ್ಲಿ ಒಳಗಾಗಿದ್ದಾರೆ. ಆದರೂ ಆದಿವಾಸಿಗಳ

ಈ ನಾಡು ಭಾರತದ ಮತ್ತಾವ ಭಾಗದಲ್ಲಿಯೂ ಕಂಡುಬರದಂಥ ಸಾಮಾಜಿಕ ಮತ್ತು ಆರ್ಥಿಕ ಜೀವನ ನಡಸುತ್ತಿದ್ದಾರೆನ್ನಬಹುದು.

ಉಡುಪು

ಈ ಗಿರಿನಾಡಿನ ಜನ ಅತಿ ಪ್ರಾಚೀನ ಕಾಲದ ಬಗೆಯ ಜೀವನವನ್ನು ಪ್ರದರ್ಶಿಸುತ್ತಾರೆ. ಉಡುಪು, ಆಹಾರ ಮತ್ತು ವಸತಿಗಳು ಹಳೆಯಕಾಲದ ಜೀವನಪದ್ಧತಿಯನ್ನು ತೋರ್ಪಡಿಸುತ್ತವೆ. ಗಂಡಸರು ಹಾಗೂ ಹೆಂಗಸರ ಉಡುಪಿನಲ್ಲಿ ಅಷ್ಟಾಗಿ ವೈವಿಧ್ಯ ಕಂಡುಬರುವುದಿಲ್ಲ. ಹೆಂಗಸರು ಸೊಂಟದ ಸುತ್ತ ಸುಮಾರು ಒಂದು ಅಡಿ ಅಗಲದ ಬಟ್ಟೆಯನ್ನು ಸುತ್ತಿಕೊಳ್ಳುತ್ತಾರೆ. ಕೆಲವು ಹೆಂಗಸರು ಸೆರಗನ್ನು ಎದೆಯ ಮಧ್ಯಭಾಗದಲ್ಲಿ ಹಾದುಹೋಗುವಂತೆ ಹೆಗಲ ಮೇಲೆ ಹಾಕಿಕೊಳ್ಳುವುದುಂಟು. ಪ್ರಾಪ್ತವಯಸ್ಸಿನ ಹಾಗೂ ವಿವಾಹವಾಗಿರುವ ಹೆಂಗಸರೂ ನಡುವಿನ ಮೇಲುಭಾಗದ ಹೊಟ್ಟೆ ಮತ್ತು ಸ್ತನಭಾಗಗಳನ್ನು ಬಟ್ಟೆಯಿಂದ ಮುಚ್ಚಿಕೊಳ್ಳುವುದಿಲ್ಲ. ಹೆಂಗಸರ ಉಡುಪು ಗಂಡಸರದಂತೆಯೇ ಕಂಡುಬರುತ್ತದೆ. ಆದರೆ ಗಂಡಸರಲ್ಲಿ ತಲೆಗೆ ಸುತ್ತಿರುವ ಚೌಕದ ಬಟ್ಟೆಯನ್ನು ಕಾಣಬಹುದು. ಆದಿವಾಸಿಗಳ ಬಟ್ಟೆಯ ಬಣ್ಣ ಬಿಳಿ, ಹಸುರು ಮತ್ತು ಕೆಂಪುಬಣ್ಣದವಾಗಿರುತ್ತವೆ. ಕಾಡುಗಳಲ್ಲಿ ಓಡಾಡಬೇಕಾಗಿರುವುದರಿಂದ, ಮತ್ತು ಆರ್ಥಿಕ ಮಟ್ಟ ಬಹು ಕಡಿಮೆಯದಾಗಿ ಇರುವುದರಿಂದ ಹೆಚ್ಚು ಬಟ್ಟೆಯನ್ನು ಧರಿಸಲು ಅಶಕ್ತರಾಗಿದ್ದಾರೆ ಮತ್ತು ಅವಕಾಶವಿಲ್ಲದಂತಾಗಿದೆ. ಅಭೂಜ್‌ಮಾರ್ ಬೆಟ್ಟದ ಕಣಿವೆಯ ಇಳಿಜಾರುಗಳಲ್ಲಿ ವಾಸಿಸುವ ಅಭೂಜ್‌ಮಾರಿಯಾ (ಅನ್‌ನೋನ್ ಹಿಲ್‌ಮೆನ್) ಆದಿವಾಸಿಗಳು ಹೆಂಗಸರು ಗಂಡಸರಾದಿಯಾಗಿ "ಲುಂಡಾ ಬುಂಡಾ"ವಾಸಿಸುತ್ತಾರೆ. ಅಭೂಜ್ ಮಾರಿಯಾ ಆದಿವಾಸಿಗಳು ಕಾಡಿನ ಒಳಭಾಗದಲ್ಲಿ ಇತರರಿಗೆ ಗೋಚರಿಸದ ಭಾಗಗಳಲ್ಲಿ ವಾಸಿಸುತ್ತಾರೆ. ಸೊಪ್ಪುಸದೆಗಳಿಂದ ಮರ್ಮಾಂಗವನ್ನು ಮುಚ್ಚುವಂತೆ ನಡುವಿನ ಮುಂಭಾಗದಲ್ಲಿ ಕಟ್ಟಿಕೊಂಡಿರುತ್ತಾರೆ. ಈ ಗಿರಿಜನರು ಸಂಸಾರಸಹಿತ ನೆಲೆಗಳನ್ನು ಬದಲಾಯಿಸುತ್ತಾ ಪೋಡು (ಷಿಫ್ಟಿಂಗ್) ಬೇಸಾಯಪದ್ಧತಿ ಅನುಸರಿಸುತ್ತಾರೆ.

ಇತರ ಆದಿವಾಸಿ ಸಂಗಡದವರು ರಸ್ತೆಗಳ ಅಂಚಿನಲ್ಲಿ ಪಟ್ಟಣಗಳ ಸಮೀಪದಲ್ಲಿ ಮತ್ತು ನಾಗರಿಕ ಜನರ ಸಂಪರ್ಕವಿರುವ ಭಾಗಗಳಲ್ಲಿ ಉಡುಪನ್ನು ಧರಿಸುವುದರಲ್ಲಿ ಹೆಚ್ಚು ಬದಲಾವಣೆ ತೋರ್ಪಡಿಸುತ್ತಾರೆ. ಬೆಟ್ಟಗುಡ್ಡಗಳಿಂದ ಜಿಲ್ಲಾ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳು ಮತ್ತು ಪಟ್ಟಣಗಳ ಕಡೆ ಹಾದುಬಂದಂತೆಲ್ಲ ಬದಲಾವಣೆ ತೀಕ್ಷ್ಣವಾಗಿ ಗೋಚರವಾಗುತ್ತದೆ. ಈ ಬಗೆಯ ಬದಲಾವಣೆಯನ್ನು ಗಿರಿನಾಡಿನ ಒಳಾವರಣಗಳಲ್ಲಿ ವಾಸಿಸುವ ಆದಿವಾಸಿಗಳು ಸಹಿಸರು. ಏಕೆಂದರೆ ಅನಾದಿಕಾಲದಿಂದಲೂ ಬಂದಿರುವ ತಮ್ಮ ಸಂಸ್ಕೃತಿಗೆ ಧಕ್ಕೆ ಬರುತ್ತದೆ


ಎಂಬ ಮನೋಭಾವ ಬೇರೂರಿದೆ. ಹೆಂಗಸರು ತೊಡೆಯಿಂದ ಕೆಳಭಾಗಕ್ಕೆ ಸೀರೆ ಧರಿಸಿದರೆ ಅದು ಅವರ ಅನಾರೋಗ್ಯದ ಚಿಹ್ನೆಯೆಂದು ಭಾವಿಸುತ್ತಾರೆ. ಆದುದರಿಂದ ಗಿರಿನಾಡಿನಲ್ಲಿಯ ಆದಿವಾಸಿ ಹೆಂಗಸರು ಬಟ್ಟೆಯನ್ನು ತೊಡೆಯಿಂದ ಕೆಳಭಾಗಕ್ಕೆ ಮತ್ತು ನಡುವಿನಿಂದ ಮೇಲುಭಾಗಕ್ಕೆ ಬರುವಂತೆ ಧರಿಸುವುದಿಲ್ಲ. ಆದರೆ ಆದಿವಾಸಿ ಪಂಗಡಗಳಲ್ಲಿ ಉಡುಪಿನ ವೈವಿಧ್ಯವುಂಟು. ಅಭೂಜ್‌ಮಾರಿಯಾ ಬೆತ್ತಲೆ ಕಂಡುಬಂದರೆ ಮಾರಿಯಾ ಧುರ್ವಾ, ಬೈಸನ್ ಹಾರನ್‌ಮಾರಿಯಾ ಪಂಗಡದವರು ಸೊಂಟದ ಸುತ್ತ ಸ್ವಲ್ಪ ಬಟ್ಟೆ ಬಳಸುತ್ತಾರೆ. ಹಾಲ್ಬಾ, ಭಾತ್ರಾ, ದೊರ್ಲಾ ಮತ್ತು ಗಾಂಡ್ಸ್ ಪಂಗಡದ ಹೆಂಗಸರು ಮಂಡಿಯವರೆಗೆ ಸೀರೆಗಳನ್ನು ಕಚ್ಚೆಮಾದರಿಯಲ್ಲಿ ತೊಟ್ಟು ಹೊಟ್ಟೆ ಮತ್ತು ಸ್ತನಭಾಗಗಳು ಮುಚ್ಚಿಕೊಳ್ಳುವಂತೆ ಸೆರಗನ್ನು ಎಳೆದು ಉಡುಪನ್ನು ಧರಿಸುತ್ತಾರೆ. ದೊರ್ಲಾ ಪಂಗಡದ ಹೆಂಗಸರು ಸೀರೆ ಹಾಗೂ ಕುಪ್ಪಸಗಳನ್ನು ತೊಟ್ಟರೆ ಭಾತ್ರಾ ಹೆಂಗಸರು ಸೀರೆ ಮಾತ್ರ ಧರಿಸುವರು. ಪಟ್ಟಣಗಳ ಅತಿಸಮೀಪದಲ್ಲಿ ವಾಸಿಸುವ ಆದಿವಾಸಿ ಹೆಂಗಸರು ಆಧುನಿಕ ಉಡುಪುಗಳಾದ ಒಳಲಂಗ, ಸ್ತನಕಟ್ಟು, ಕುಪ್ಪಸ ಇವೇ ಮೊದಲಾದವು ಗಳನ್ನು ಬಳಸುತ್ತಾರೆ. ಇದು ಆದಿವಾಸಿಗಳ ಮೇಲೆ ಆಗಿರುವ ನಾಗರಿಕತೆಯ ಪ್ರಭಾವವನ್ನು ತೋರಿಸುತ್ತದೆ.

ಆಭರಣಗಳು

ಆದಿವಾಸಿ ಹೆಂಗಸರು ವಿವಿಧ ಬಗೆಯ ಆಭರಣಗಳನ್ನು ತೊಡುತ್ತಾರೆ. ಇವು ಕಬ್ಬಿಣ ಮತ್ತು ಅಲ್ಯೂಮಿನಿಯಂನಿಂದ ತಯಾರಾದವು. ಓಲೆ, ಕತ್ತಿನ ಸರ, ಮೂಗುತಿ, ಕೈಬಳೆ, ತೋಳುಬಳೆ, ಕಾಲುಬಳೆ, ಕಿವಿಬಳೆ, ತಲೆಪಿನ್ನು, ಕರಿಮಣಿ ಇವೇ ಮೊದಲಾದವನ್ನು ಬಳಸುತ್ತಾರೆ. ಚಿನ್ನ ಬೆಳ್ಳಿಯ ಆಭರಣಗಳು ಕಂಡು ಬರುವುದಿಲ್ಲ. ಆದಿವಾಸಿಗಳು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಹೆಚ್ಚು ಬೆಲೆಯ ಲೋಹಗಳಿಂದ ತಯಾರಿಸಿದ ಆಭರಣಗಳನ್ನು ತೊಡಲು ಸಾಧ್ಯವಿಲ್ಲ. ಆಭರಣದೋಪಾದಿಯಲ್ಲಿ ಹಚ್ಚೆಗಳನ್ನು ಹೆಂಗಸರು ದೇಹದ ವಿವಿಧ ಅಂಗಗಳ ಮೇಲೆ ಹಾಕಿಸಿಕೊಳ್ಳುವುದು ರೂಢಿಯಲ್ಲಿದೆ. ಇವನ್ನು ಕತ್ತಿನ ಸುತ್ತ, ತೋಳು ಮತ್ತು ಕೈಗಳು, ತೊಡೆ, ಕಾಲು ಮತ್ತು ಮುಖಗಳ ಮೇಲೆ ಕಾಣಬಹುದು.

ಆಹಾರ

ಆದಿವಾಸಿಗಳ ಆಹಾರ ಅರಣ್ಯದಲ್ಲಿ ದೊರಕುವ ಪದಾರ್ಥಗಳು ಮತ್ತು ಅವರು ಅನುಸರಿಸುವ ಪೋಡು ಬೇಸಾಯದಿಂದ ಉತ್ಪತ್ತಿಯಾದ ಸಾಮಗ್ರಿಗಳನ್ನೆ ಅವಲಂಬಿಸಿದೆ. ಅರಣ್ಯದಲ್ಲಿ ಹುಲಿ, ಚಿರತೆ, ಕರಡಿ, ಕಾಡೆಮ್ಮೆ, ಜಿಂಕೆ, ಮೊಲ, ನರಿ, ತೋಳ, ಕಾಡುಕೋಳಿ, ನವಿಲು ಇವೇ ಮೊದಲಾದ ಮೃಗ ಹಾಗೂ


ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆ
ಉ
ಭಾನುಪ್ರತಾಪಪುರ್
ಕಂಕರ್
ಅಬೂಜಮಾಡ್ ಬೆಟ್ಟಗಳು
ನಾರಾಯಣ್‌ಪುರ್
ಸೋನ್‌ಪುರ್
ಕೊಂಡಗಾವ್
ಇಂದ್ರಾವತಿ ನದಿ
ಬಸ್ತಾರ್
ಜಗದಲ್‌ಪುರ್
ದಂತೇವಾರ್
ಬಿಜಾಪುರ
ಶಬರಿ ನದಿ
ಕೊಂಟಾ
20°
19°
18°
81°
82°
MSM

ಪಕ್ಷಿಗಳು ವಾಸಿಸುತ್ತವೆ. ಆದಿವಾಸಿಗಳು ಕೆಲವು ಪ್ರಾಣಿ ಮತ್ತು ಪಕ್ಷಿಗಳನ್ನು ಬೇಟೆ ಯಾಡಿ ತಿನ್ನುತ್ತಾರೆ. ಇವರು ಬೇಟೆಯಲ್ಲಿ ನಿಸ್ಸೀಮರು. ಬಿದುರಿನ ಬಿರುಸಿನ ಬಾಣಗಳನ್ನು ಗುರಿಯಿಟ್ಟು ಹೊಡೆಯುವುದರಲ್ಲಿ ನಿಪುಣತೆ ಹೊಂದಿದ್ದಾರೆ. ಕಾಡಿನಲ್ಲಿ ದೊರಕುವ ಹುಣಿಸೆಹಣ್ಣು, ಮೊಹುವಾ, ಸೌದೆ, ಜೇನು, ಹಲಸಿನ ಹಣ್ಣು, ಗೆಡ್ಡೆಗೆಣಸು ಇವೇ ಮೊದಲಾದವುಗಳನ್ನು ಸಂಗ್ರಹಿಸಿ ಜೀವನ ನಡೆಸು ತ್ತಾರೆ. ಕೆಲವುವೇಳೆ ವಸ್ತುಗಳನ್ನು ಅಕ್ಕಪಕ್ಕದಲ್ಲಿರುವ ಪಟ್ಟಣಗಳು ಮತ್ತು ವಾರದ ಸಂತೆಗಳಿಗೆ ತಂದು ಮಾರಿ ಜೀವನ ನಡೆಸುವುದುಂಟು. ಕಾಡಿನಲ್ಲಿ ತಿರುಗು ವಾಗ ಕೆಲವು ವೇಳೆ ಕುಡಿಯಲು ನೀರು ಸಿಗುವುದು ಕಷ್ಟವಾಗುವುದರಿಂದ ಅಕ್ಕಿಯ ಗಂಜಿಯಿಂದ ತಯಾರಿಸಿದ "ಪೇಜ್"ಅನ್ನು ಸೋರೆಬುರುಡೆಯಲ್ಲಿ ತುಂಬಿ ತೆಗೆದು ಕೊಂಡು ಹೋಗುವರು. ಇದು ಆದಿವಾಸಿಗಳ ಹಸಿವು ಮತ್ತು ಬಾಯಾರಿಕೆಗೆ ಸಿದ್ಧೌಷಧ. ಹಗಲಿನ ಊಟ "ಪೇಜ್" ರೂಪದಲ್ಲಿಯೇ ಇರುತ್ತದೆ. ಹಂದಿ, ದನಕರು, ಕುರಿ ಮೇಕೆ ಮತ್ತು ಕೋಳಿಗಳನ್ನು ಸಾಕಿ ಆಹಾರಕ್ಕೆ ಬಳಸಿಕೊಳ್ಳು ತ್ತಾರೆ. ಆದಿವಾಸಿಗಳು ರಾವಣನ ಸಂತತಿಯ ರಾಕ್ಷಸರ ಗುಂಪಿಗೆ ಸೇರಿದವರೆಂಬ ದೃಢವಾದ ನಂಬಿಕೆ ಇಟ್ಟುಕೊಂಡಿದ್ದಾರೆ. ಗೋವಿನ ಕ್ಷೀರ ಅಮೃತಕ್ಕೆ ಸಮಾನ ವಾದ್ದರಿಂದ ಇದನ್ನು ಅಸುರರು ಸೇವಿಸಬಾರದೆಂಬ ನಂಬಿಕೆ ಬೆಳೆದುಬಂದಿದೆ. ಆದುದರಿಂದ ಈ ಜನ ಹಸುವಿನ ಹಾಲನ್ನು ಉಪಯೋಗಿಸುವುದಿಲ್ಲ. ಬೇಸಾಯಕ್ಕೆ ಪ್ರಾಣಿಗಳನ್ನು ಬಳಸುವುದಿಲ್ಲ. ಒಂದು ಮಾರು ಉದ್ದದ ಹಿಡಿಗೆ ಹಾಕಿರುವ ಎಲೆ ಗುದ್ದಲಿಯಲ್ಲಿ ನೆಲವನ್ನು ಮೀಟಿ ಉಳುಮೆ ಮಾಡಿ ರಾಗಿ, ಬತ್ತ, ಜೋಳ, ಹುರುಳಿ ಇವೇ ಮೊದಲಾದವುಗಳನ್ನು ಬೆಳೆಯುತ್ತಾರೆ. ಆದರೆ ಇವು ಸಾಕಷ್ಟು ಬೆಳೆಯುವು ದಿಲ್ಲ. ಆದಕಾರಣ ಇವರು ಅರಣ್ಯವಸ್ತುಗಳನ್ನು ಅವಲಂಬಿಸಬೇಕಾಗುತ್ತದೆ.

ವಸತಿ

ಆದಿವಾಸಿಗಳ ವಾಸ ಗುಡಿಸಿಲುಗಳಲ್ಲಿ. ಇವನ್ನು ಬಿದಿರು, ಹುಲ್ಲು ಮತ್ತು ಮರ ಗಳಿಂದ ನಿರ್ಮಿಸುತ್ತಾರೆ. ಸಾಮಾನ್ಯವಾಗಿ ಗುಡಿಸಿಲುಗಳ ಒಳಭಾಗದಲ್ಲಿ ಸ್ವಚ್ಛ ವಾದ ಬೆಳಕು ಮತ್ತು ಗಾಳಿ ಕಂಡುಬರುವುದಿಲ್ಲ. ಕೋಣೆ, ಊಟಮಾಡುವ ಮತ್ತು ಮಲಗಲು ಉಪಯೋಗಿಸುವ ಅಂಗಳ ಹಾಗೂ ಸ್ವಲ್ಪ ಎತ್ತರ ಭಾಗದಲ್ಲಿ ಉಗ್ರಾಣದ ಭಾಗಗಳು ಕಂಡುಬರುತ್ತವೆ. ಪ್ರತಿಯೊಂದು ವಸತಿ ಭಾಗದಲ್ಲಿ ಸಾಕಷ್ಟು ಉದ್ದ ಅಗಲವುಳ್ಳ (ಸುಮಾರು ೪೦೦–೫೦೦ ಚ. ಅ. ವಿಸ್ತೀರ್ಣ) ಜಾಗ ಸುತ್ತಲೂ ಇರುತ್ತದೆ. ಗುಡಿಸಿಲ ಸುತ್ತಲೂ ಮರದ ಅಥವಾ ಬೊಂಬಿ ನಿಂದ ಹಾಕಿದ ಬೇಲಿಯುಂಟು. ಗುಡಿಸಿಲಿಗೆ ಸೇರಿದಂತೆ ಎರಡು ಪ್ರಮುಖ ಭಾಗಗಳು ಗುಡಿಸಿಲಿನ ಮುಂಭಾಗದ ಪಕ್ಕದಲ್ಲಿಯೇ ಗೋಚರಿಸುತ್ತವೆ. ಇವು ಗಳಲ್ಲಿ ಒಂದು ಹಂದಿಗಳ ಕೊಠಡಿ, ಮತ್ತೊಂದು ಬಹಿಷ್ಠೆ ಹೆಂಗಸರು ಬಳಸುವ

ಕೊಠಡಿ. ಹೆಂಗಸರು ಬಹಿಷ್ಠೆಯರಾದಾಗ ಈ ಕೊಠಡಿಯನ್ನು ಏಳು ದಿವಸಗಳ ಕಾಲ ಬಳಸುತ್ತಾರೆ. ಇವರು ಮನೆಯೊಳಕ್ಕೆ ಪ್ರವೇಶಿಸಿ ಅಡಿಗೆ ತಯಾರಿಸುವುದಿಲ್ಲ ಮತ್ತು ಕುಡಿಯುವ ನೀರನ್ನು ತರುವುದಿಲ್ಲ. ಊರಿನ ಮುಂಭಾಗದಲ್ಲಿ ದೇವಿಯ ಗುಡಿಯಿರುತ್ತದೆ. ಇದೂ ಗುಡಿಸಿಲೇ. ಬುರ್‌ಹಾ, ಥಾಕೂರ್, ಭೇವಾ, ಡೊಂಗಾರ್, ಚಿಕಿತ್‌ರಾಜ್ ಮತ್ತು ಹಾರ್‍ಯಾರಾಜ್ ದೇವತೆಗಳನ್ನು ಪೂಜಿಸುತ್ತಾರೆ. ಮಕ್ಕಳು ಭೀತಿಗೊಂಡಾಗ ಮತ್ತು ಯಾರಾದರೂ ಅನಾರೋಗ್ಯ ಸ್ಥಿತಿಯಲ್ಲಿದ್ದಾಗ ಸವಿಲುಗರಿಯಿಂದ ಮಂತ್ರಹಾಕಿ ದೇವೀಪೂಜೆ ಮಾಡಿದರೆ ಗುಣಮುಖವಾಗುತ್ತಾರೆಂದು ನಂಬಿಕೆಯಿದೆ. ಖಾಯಿಲೆ ಬಿದ್ದಾಗ ಆಧುನಿಕ ಔಷಧಿಗಳನ್ನು ಬಳಸುವುದಿಲ್ಲ ಮತ್ತು ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಗಿಡಮೂಲಿಕೆಗಳನ್ನು ಬಳಸಿಯೇ ಗುಣಮುಖರಾಗಲು ಯತ್ನಿಸುತ್ತಾರೆ.

ಗೋಟುಲ್ ಪದ್ಧತಿ

ಆದಿವಾಸಿಗಳ ಊರುಗಳಲ್ಲಿ ಪ್ರಮುಖವಾಗಿ ಕಂಡುಬರುವ ಒಂದು ಲಕ್ಷಣವೆಂದರೆ "ಗೋಟುಲ್". ಗೋಟುಲ್ ಅವಿವಾಹಿತ ಹುಡುಗ ಹುಡುಗಿಯರಿಗಾಗಿ ನಿರ್ಮಿಸಿರುವ ಒಂದು ಗುಡಿಸಿಲು. ಇದರ ಪಕ್ಕದಲ್ಲಿಯೇ ಮತ್ತೊಂದು ಗುಡಿಸಿಲು ಇರುತ್ತದೆ. ಇದಕ್ಕೆ "ತಾನಾಗುಡಿ" ಎಂದು ಹೆಸರು. ಇದು ಅತಿಥಿಗಳ "ವಿಶ್ರಾಂತಿಗೃಹ". ಈ ಎರಡು ಗುಡಿಸಿಲುಗಳೂ ಸೇರಿಕೊಂಡಂತೆ ಸುತ್ತಲೂ ಮರಗಳ ಸೀಳುಗಳಿಂದ ಬೇಲಿ ಹಾಕಿದ್ದು ಒಂದು ಭಾಗದಲ್ಲಿ ಮಾತ್ರ ಒಳಕ್ಕೆ ಹೋಗುವುದಕ್ಕೆ ಅನುಕೂಲವಾಗಿರುವಂತೆ ಏತದೋಪಾದಿಯ ಮರ ಹಾಕಿರುತ್ತದೆ. ಈ ಮರವನ್ನು ಹತ್ತಿ ಒಳಕ್ಕೆ ನೆಗೆದುಹೋಗಬೇಕು. ಪ್ರತಿಸಂಜೆ ಈ ಗೋಟುಲ್‌ನಲ್ಲಿ ಊರಿನ ಎಲ್ಲಾ ಅವಿವಾಹಿತ ಹುಡುಗ ಹುಡುಗಿಯರು ನಗಾರಿಶಬ್ದದ ಮೊರೆತವನ್ನು ಕೇಳಿ ಬಂದು ಜೊತೆಗೂಡುವರು. ಆದಿವಾಸಿಗಳ ಬಳಕೆಯಲ್ಲಿರುವ "ಸರ್ಪಿ" (ಒಂದು ಜಾತಿ ತಾಳೆಮರದ ಮದ್ಯ), "ಲಾಂಡಾ" (ಅಕ್ಕಿಯಿಂದ ತಯಾರಿಸಿದ ಮದ್ಯ) ಕುಡಿದು ತಮ್ಮ ವಾಡಿಕೆಯ ಗಾನ ಮತ್ತು ಕುಣಿತಗಳಿಂದ ಒಬ್ಬರಿಗೊಬ್ಬರು ಬೇಧಭಾವನೆಯಿಲ್ಲದೆ ಕುಣಿದು ನಲಿದಾಡುವರು. ಸಾಕಷ್ಟು ವೇಳೆ ಈ "ರಾತ್ರಿಮೇಳ" ಮುಗಿದ ಅನಂತರ ಹುಡುಗ ಹುಡುಗಿಯರು ಜೊತೆಗೂಡಿ ಮಲಗುವುದುಂಟು. ಸಹೋದರತ್ವವಿರುವ ಹುಡುಗ ಹುಡುಗಿಯರು ಗೋಟುಲ್‌ನ ರಾತ್ರಿ ಮೇಳದಲ್ಲಿ ಒಂದುಗೂಡಿದಾಗ ವರಸೆಯಿರುವ ಬೇರೆ ಯುವರ ಸಂಪರ್ಕ ಪಡೆಯುತ್ತಾರೆ.

ಗೋಟುಲನ್ನು ನೋಡಿಕೊಳ್ಳಲು ಊರಿನ ಗಂಡಸರು ಮತ್ತು ಹೆಂಗಸರ ಪೈಕಿ ಹಿರಿಯರಾದವರನ್ನು ಯಜಮಾನರನ್ನಾಗಿ ನೇಮಕ ಮಾಡಿರುವುದುಂಟು. ಅನುಮತಿ ಪಡೆಯದೆ ಗೋಟುಲ್‌ಗೆ ತಪ್ಪಿಸಿಕೊಂಡವರಿಗೆ ಜುಲ್ಮಾನೆಯ ಶಿಕ್ಷೆ ವಿಧಿಸ

ಲಾಗುತ್ತದೆ. ಗೋಟುಲ್‌ನಲ್ಲಿ ಸಂಭೋಗ ಸಂಭವವಿರುವುದರಿಂದ ಯಾವು ದಾದರೂ ಹುಡುಗಿ ಗರ್ಭಿಣಿಯಾದರೆ ಅದಕ್ಕೆ ಕಾರಣನಾದ ಹುಡುಗನನ್ನು ಹೆಸರಿಸುತ್ತಾಳೆ. ಆ ಸಂದರ್ಭದಲ್ಲಿ ಆತ ಮದುವೆಯಾಗಲು ನಿರಾಕರಿಸಿದರೆ ಅವನಿಗೆ ಜುಲ್ಮಾನೆ, ತಪ್ಪಿದರೆ ಕೊಲೆಯ ಶಿಕ್ಷೆ ವಿಧಿಸಲಾಗುತ್ತದೆ. ಠಾಣಾಗುಡಿಗೆ ಬರುವ ಅತಿಥಿಗಳು ಗೋಟುಲ್‌ನಲ್ಲಿ ನಡೆಯುವ ಕಾರ್ಯಕ್ರಮಗಳನ್ನು ನೋಡಿ ಸಂತೋಷ ಪಡೆಯಬಹುದು. ವಿಶ್ರಾಂತಿಗೃಹದಲ್ಲಿ ತಂಗಿದ ಅತಿಥಿಗಳೇನಾದರೂ ಹುಡುಗಿಯರ ಸಹವಾಸ ಮಾಡಿದ ವಿಚಾರ ಗೋಟುಲ್ ಯಜಮಾನನ ಗಮನಕ್ಕೆ ಬಂದರೆ ಕಠಿಣವಾದ ಜುಲ್ಮಾನೆ ಅಥವಾ ಕೊಲೆ ಶಿಕ್ಷೆಯನ್ನು ಅಂತಹ ಅತಿಥಿಗೆ ವಿಧಿಸಲಾಗುವುದು. ಗೋಟುಲ್ ಪದ್ಧತಿಯಿಂದ ವಿವಾಹಕ್ಕಿಂತ ಮುಂಚಿತವಾಗಿ ಜೀವನದಲ್ಲಿ ತರಬೇತಿಯನ್ನು ಪಡೆಯಲು ಸಾಕಷ್ಟು ಅವಕಾಶ ದೊರಕುತ್ತದೆಂದು ಆದಿವಾಸಿಗಳು ಗಾಢವಾದ ನಂಬಿಕೆಯಿಟ್ಟಿದ್ದಾರೆ.

ವಿವಾಹಪದ್ಧತಿ

ಸಾಮಾನ್ಯವಾಗಿ ಆದಿವಾಸಿಗಳಲ್ಲಿ ವಿವಾಹಗಳು ತಂದೆತಾಯಿ ಹಾಗೂ ಊರಿನ ಯಜಮಾನನಿಂದ ತೀರ್ಮಾನವಾಗುತ್ತದೆ. ಹುಡುಗಿಯ ವಯಸ್ಸು ಸುಮಾರು ಎಂಟು ವರ್ಷಗಳಷ್ಟಾದಾಗ ವಿವಾಹದ ಮಾತು ತೀರ್ಮಾನವಾಗುವುದು. ಗಂಡಿನ ತಂದೆ ತಾಯಿಗಳು ಹುಡುಗಿಗೆ ೧೬ ವರ್ಷಗಳು ತುಂಬುವವರೆಗೂ ವಧುವಿನ ಮನೆಗೆ ಭೇಟಿ ಕೊಡುತ್ತಿರುತ್ತಾರೆ. ವಿವಾಹ ವಧುವಿನ ಮನೆಯಲ್ಲಿಯೇ ಜರುಗು ತ್ತದೆ. ವಿವಾಹದ ಮೊದಲನೆಯ ಭೋಜನ ವರನ ಕಡೆಯದು. ವಿವಾಹ ಆದ ಅನಂತರ ವಧುವಿನ ಮನೆಯವರು ಭೋಜನ ಏರ್ಪಾಡು ಮಾಡುತ್ತಾರೆ. ವಿವಾಹ ಕಾರ್ಯ ನಡೆಯುವಾಗ ಡೋಲು ಮತ್ತು ಓಲಗಗಳನ್ನು ಬಾರಿಸುವುದುಂಟು. ವಿವಾಹವಾದಾಗ ವರ ಮತ್ತು ವಧು ಏಳು ಬಾರಿ ಅಗ್ನಿಕುಂಡವನ್ನು ಸುತ್ತಬೇಕು. ವರನ ಕೈಯಿಂದ ವಧುವಿಗೆ ತಾಳಿ ಕಟ್ಟಿಸಲಾಗುವುದು. ವಧುವಿಗೆ ಏಳು ಸಣ್ಣ ಜಡೆಗಳನ್ನು ನೇಯಿಸುತ್ತಾರೆ. ವರ ಈ ಜಡೆಗಳನ್ನು ಬಿಚ್ಚಬೇಕು. ವರ ಮತ್ತು ವಧುವಿನ ಶಕ್ತಿಯನ್ನು ಪರೀಕ್ಷಿಸಲು ಇವರೊಂದು ಪ್ರಯೋಗ ನಡೆಸುವುದುಂಟು. ವಧೂವರರನ್ನು ಶಾಸ್ತ್ರೋಕ್ತವಾಗಿ ಎದುರು ಬದುರು ಕೂರಿಸಿ ಅರಿಶಿನದ ಎಂಟು ಚೂರುಗಳನ್ನು ತೆಗೆದುಕೊಂಡು ಅವುಗಳಲ್ಲಿ ಎರಡೆರಡು ಚೂರುಗಳನ್ನು, ಕಾಲು, ಮಂಡಿ ಮತ್ತು ಭುಜಗಳ ಮೇಲಿಟ್ಟು ಉಳಿದೆರಡರಲ್ಲಿ ಒಂದನ್ನು ತಲೆಯಮೇಲಿಟ್ಟು ಮತ್ತೊಂದನ್ನು ವಧುವಿನ ಅಥವಾ ವರನ ಕೈಮುಷ್ಟಿಯಲ್ಲಿ ಬಿಗಿಯಾಗಿ ಹಿಡಿಯಲು ಕೊಡುತ್ತಾರೆ ಆ ಚೂರನ್ನು ಇನ್ನೊಬ್ಬರು ಬಿಡಿಸಬೇಕು. ಹೀಗೆ ಮೂರು ಮೂರು ಬಾರಿ ಪರೀಕ್ಷಿಸಲಾಗುತ್ತದೆ. ಈ ಪರೀಕ್ಷೆಯಲ್ಲಿ ವಧೂವರರು ಸಮರ್ಪಕವಾಗಿ ಕಂಡು ಬಂದರೆ ವೈವಾಹಿಕ ಜೀವನವನ್ನು ಸುಗಮವಾಗಿ ನಡೆಸುವರೆಂದು ನಂಬಲಾಗುತ್ತದೆ.

ಕೆಲವು ವೇಳೆ ಪ್ರೇಮ ವಿವಾಹಗಳೂ ಆಗುವುದುಂಟು. ವಿವಾಹವಾಗಲು ಬಯಸುವ ಹುಡುಗ ತಲೆಯಲ್ಲಿ ಕನ್ನಡಿ ಮತ್ತು ಬಾಚಣಿಗೆಗಳನ್ನು ಸಿಕ್ಕಿಸಿಕೊಂಡಿರುತ್ತಾನೆ. ಪ್ರೀತಿಸಿದ ಹುಡುಗಿಗೆ ಹುಡುಗ ಬಾಚಣಿಗೆಯನ್ನು ಬಹುಮಾನವಾಗಿ ಕೊಡುತ್ತಾನೆ. ಈ ಬಾಚಣಿಗೆಯನ್ನು ಹುಡುಗಿ ತನ್ನ ತಲೆಯಲ್ಲಿ ಸಿಕ್ಕಿಸಿಕೊಂಡು ಪ್ರದರ್ಶಿಸಿದರೆ ಆಗ ತಾನು ವಿವಾಹವಾಗಲು ಪ್ರೀತಿಸಿದ್ದೇನೆಂದು ಸೂಚನೆ ಕೊಟ್ಟಂತೆ. ಕೆಲವು ವೇಳೆ ಇಬ್ಬರು ಮೂವರು ಪ್ರೇಮಿಗಳು ಕಂಡುಬಂದರೆ ಎರಡು ಮೂರು ಬಾಚಣಿಗೆಗಳನ್ನು ಸಿಕ್ಕಿಸಿಕೊಳ್ಳುವುದುಂಟು. ಪ್ರೇಮಿಸಿದ ಹುಡುಗನಿಗೆ ಸರ ಅಥವಾ ಮಾಲೆಪಟ್ಟಿಯನ್ನು ಬಹುಮಾನವಾಗಿ ಹುಡುಗಿ ಕೊಡುತ್ತಾಳೆ. ಇದನ್ನು ಹುಡುಗ ಕತ್ತಿಗೆ ಅಥವಾ ತಲೆಗೆ ಕಟ್ಟಿಕೊಳ್ಳುವುದರ ಮೂಲಕ ತನ್ನ ಒಪ್ಪಿಗೆ ಸೂಚಿಸುತ್ತಾನೆ. ಅನಂತರ ಅವರಿಬ್ಬರಿಗೂ ವಿವಾಹ ಮಾಡಲಾಗುವುದು. ಕೆಲವು ವೇಳೆ ಸ್ವಯಂವರದ ಮೂಲಕ ಮದುವೆಯಾಗುವುದುಂಟು. ವಿವಾಹವಾಗುವ ಹುಡುಗಿ ಯಾವುದಾದರೊಂದು ಸಾಹಸ ಕೃತ್ಯವನ್ನು ಸೂಚಿಸುವುದುಂಟು. ಆ ಕೃತ್ಯದಲ್ಲಿ ಜಯಗಳಿಸಿದರೆ ವಿವಾಹವಾಗುತ್ತೇನೆಂದು ಹೇಳುವುದುಂಟು.

ವಿವಾಹವಾದ ಅನಂತರ ಗಂಡಂದಿರನ್ನು ಹೆಂಡತಿಯರು ಬಿಡುವುದು ಅಪರೂಪ. ಆದರೆ ಅವಶ್ಯವಾದರೆ ಬಿಟ್ಟುಹೋಗುವುದಕ್ಕೆ ಹಿಂಜರಿಯುವುದಿಲ್ಲ. ಕೆಲವುವೇಳೆ ಒಬ್ಬ ಆದಿವಾಸಿ ಗಂಡಸಿಗೆ ಮೂರು ನಾಲ್ಕು ಪತ್ನಿಯರು ಇರುತ್ತಾರೆ. ಗಂಡಸರು ಕುಡಿದು ಮತ್ತಿನಲ್ಲಿ ಸೋಮಾರಿಗಳಾಗಿ ವರ್ತಿಸುವುದುಂಟು. ಆದಿವಾಸಿ ಹೆಂಗಸರು ಗಂಡಸರಂತೆ ಪ್ರತಿನಿತ್ಯ ಕುಡಿದರೂ ಕೆಲಸಕಾರ್ಯಗಳಲ್ಲಿ ಮಗ್ನರಾಗುತ್ತಾರೆ. ಈ ಜನ ಉಪಯೋಗಿಸುವ ಸೊಪ್ಪು ಗೆಡ್ಡೆಗೆಣಸುಗಳು ಸಂತಾನವನ್ನು ಮಿತಿಯಲ್ಲಿಡಲು ಸಹಾಯಕವಾಗಿವೆ. ಆದ್ದರಿಂದ ಆದಿವಾಸಿಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ. ಅನೇಕ ಆದಿವಾಸಿ ಸಂಸಾರಗಳಲ್ಲಿ ಮೂರುನಾಲ್ಕಕ್ಕಿಂತ ಹೆಚ್ಚು ಮಕ್ಕಳಿರುವುದಿಲ್ಲ.

ಸಂತೆಗಳು

ಆದಿವಾಸಿ ಜೀವನಕ್ಷೇತ್ರದಲ್ಲಿ ಅತಿಪ್ರಮುಖವಾಗಿ ಕಂಡುಬರುವ ಆರ್ಥಿಕ ಚಟುವಟಿಕೆಗಳೆಂದರೆ ವಾರಕೊಮ್ಮೆ ನಡೆಯುವ ಸಂತೆಗಳು. ಹಳ್ಳಿಗಳ ಸುತ್ತಮುತ್ತ ಪ್ರತಿದಿನವೂ ಒಂದಲ್ಲ ಒಂದು ಸಂತೆ ಸುಮಾರು ೩೦ ಮೈಲಿಗಳ ಒಳಭಾಗದಲ್ಲಿ ನಡೆಯುತ್ತದೆ. ಈ ಸಂತೆಗಳಿಗೆ ಹೆಂಗಸರು ಗಂಡಸರೆಲ್ಲರೂ ಸಾಮಗ್ರಿಗಳನ್ನು ಸಂಗ್ರಹಿಸಿ ತಂದು ಮಾರುವುದು ವಾಡಿಕೆ. ಸಂತೆಗೆ ಅಕ್ಕಿ, ರಾಗಿ, ಹಣ್ಣುಗಳು (ಬಾಳೆ, ಪರಂಗಿ, ಹಲಸು ಮೊದಲಾದವು), ತರಕಾರಿಗಳು, ಹುಣಸೆ ಹಣ್ಣು, ಮೊಹುವಾ ಮತ್ತು ಇತರ ಬಗೆಯ ಅರಣ್ಯ ಸಾಮಗ್ರಿಗಳು ಬರುತ್ತವೆ. ಈ ವಸ್ತುಗಳ ಜೊತೆಗೆ ಅಕ್ಕಪಕ್ಕದ ಪಟ್ಟಣಗಳಿಂದ ಉಪ್ಪು, ಮಡಕೆ, ಉಡುಪುಗಳು,

ಆಭರಣ ಇವೇ ಮೊದಲಾದವು ಬರುತ್ತವೆ. ಆದಿವಾಸಿಗಳು ಶೇಕಡ ೯೯.೯೯ರಷ್ಟು ಅನಕ್ಷರಸ್ಥರು. ವಸ್ತುಗಳನ್ನು ಮಾರುವಾಗ ಒಂದು ಬೆಲೆ ಹೇಳಿದರೆ ಅದಕ್ಕೆ ಕಡಿಮೆ ಅಥವಾ ಹೆಚ್ಚಾದ ಬೆಲೆಗೆ ಕೇಳಿದರೆ ಒಪ್ಪರು. ಆದಿವಾಸಿಗಳು ಹೇಳಿದ ಬೆಲೆಗೆ ವಸ್ತುಗಳನ್ನು ಕೊಂಡುಕೊಳ್ಳಬೇಕು. ಈ ಜನರ ವ್ಯಾಪಾರ ಇಪ್ಪತ್ತೈದು ಪೈಸೆಯಿಂದ ಎರಡು ರೂಪಾಯಿವರೆಗೆ ನಡೆಯುತ್ತದೆ. ಈ ವ್ಯಾಪಾರದಲ್ಲಿಯೇ ಅವರು ತೃಪ್ತಿಗೊಂಡು ತಮಗೆ ಬೇಕಾದ ಉಡುವು, ಆಭರಣ ಮತ್ತು ತಿಂಡಿಗಳನ್ನು ಕೊಂಡು ಹೋಗುತ್ತಾರೆ. ಸಂತೆಗಳಿಗೆ ಹೋಗಿಬರುವುದು ಸಾಮಾನ್ಯವಾಗಿ ಕಾಲುನಡಿಗೆಯಲ್ಲೇ. ಸುಮಾರು ೩೦ ಮೈಲಿಗಳಷ್ಟು ದೂರ ನಡೆದುಕೊಂಡೇ ಬರುವುದುಂಟು. ಸಂತೆಗೆ ಬರುವ ಆದಿವಾಸಿಗಳೆಲ್ಲ ವ್ಯಾಪ್ಯಾರಕ್ಕೇ ಬರುವುದಿಲ್ಲ. ಸಾಕಷ್ಟು ಆದಿವಾಸಿಗಳು ನೆಂಟರು ಮತ್ತು ಆಪ್ತರನ್ನು ಕಾಣಲು ಬಂದು ಒಂದು ಪೈಸ ವ್ಯಾಪಾರವನ್ನೂ ಮಾಡದೆ ಹಿಂದಿರುಗುವುದುಂಟು. ಮದುವೆಯ ವಿಚಾರ, ಸಾವಿನ ಸುದ್ದಿ ಹಾಗೂ ಇತರ ಯೋಗಕ್ಷೇಮ ವಿಚಾರಗಳೆಲ್ಲಾ ಅಲ್ಲಿ ವಿನಿಮಯವಾಗುವುವು. ಸಾವಿನ ಸುದ್ದಿಗಳನ್ನು ತಿಳಿಸಿದಾಗ ಸಂತಾಪವನ್ನು ವ್ಯಕ್ತಪಡಿಸುವುದು ವಾಡಿಕೆ. ಹೆಂಗಸರು ಸಂತಾಪ ಸೂಚಿಸಲು ಎದುರುಬದುರಾಗಿ ನಿಂತು ಬಲಗೈಯನ್ನು ಸೊಂಟದ ಮೇಲೂ ಎಡಗೈಯನ್ನು ಕಣ್ಣು ಹುಬ್ಬಿನ ಮೇಲುಭಾಗದ ಹಣೆಯ ಮೇಲೂ ಬಾಗಿದಂತೆ ಇಟ್ಟುಕೊಂಡು ಒಬ್ಬರ ಮುಖವನ್ನು ಒಬ್ಬರು ನೋಡದೆ, ಸಾವನ್ನಪ್ಪಿದ ವ್ಯಕ್ತಿಯ ಬಗ್ಗೆ ಸುಮಾರು ೧೦–೧೫ ನಿಮಿಷಗಳ ವರೆಗೆ ಕೊಂಡಾಡುವ ಪದಗಳನ್ನು ಹೇಳುತ್ತಾ ಅಳುತ್ತಾರೆ. ಅನಂತರ ಮೌನವಾಗಿ ಆ ಜಾಗಬಿಟ್ಟು ಸಂತೆಯಲ್ಲಿ ಅಡ್ಡಾಡಿ ತಮ್ಮ ಊರುಗಳಿಗೆ ಹಿಂದಿರುಗುತ್ತಾರೆ. ಆದಿವಾಸಿಗಳಲ್ಲಿ ಸತ್ತವರನ್ನು ಹೂಳುವ ಸುಡುವ ಪದ್ಧತಿಗಳೆರಡೂ ಉಂಟು.

ಆದಿವಾಸಿಗಳನ್ನು ದಂಗೆಕೋರರು ಮತ್ತು ದರೋಡೆಕಾರರು ಎಂಬುದಾಗಿ ಹೇಳುವುದುಂಟು. ಆದರೆ ವಾಸ್ತವವಾಗಿ ಆದಿವಾಸಿಗಳಿಗೆ ಹೊಸಬರನ್ನು ಕಂಡರೆ ಗಾಬರಿ. ಹೆಂಗಸರು ಓಡಿಹೋಗಿ ಗಿಡಮರಗಳ ಪೊದೆಗಳಲ್ಲಿ ಮರೆಯಾಗುತ್ತಾರೆ. ಪರಿಚಯದ ಅನಂತರ ಯಾವುದಾದರೊಂದು ಕೆಲಸವನ್ನು ಹೇಳಿ ಅದನ್ನು ಮಾಡಬೇಕೆಂದು ನಿರ್ದೇಶನ ಕೊಟ್ಟಾಗ ಪ್ರಾಮಾಣಿಕತನದಿಂದ ತಪ್ಪದೆ ಕೆಲಸವನ್ನು ನಿರ್ವಹಿಸುತ್ತಾರೆ. ನಾಗರಿಕತೆಯ ಅವಾಂತರಕ್ಕೆ ಒಳಗಾಗಿರುವ ಪಟ್ಟಣದ ಸಮೀಪದಲ್ಲಿ ವಾಸಮಾಡುವ ಮತ್ತು ಇತರ ಜನರ ಕಟ್ಟುಪಾಡುಗಳಿಗೆ ಒಳಗಾಗಿರುವ ಆದಿವಾಸಿಗಳು ದರೋಡೆ ಮತ್ತು ದಂಗೆಗಳಲ್ಲಿ ಭಾಗವಹಿಸುವುದುಂಟು. ಅರಣ್ಯದ ಒಳಭಾಗದಲ್ಲಿ ವಾಸಿಸುವ ಆದಿವಾಸಿಗಳು ಸತ್ಯವಂತರು ಮತ್ತು ಶ್ರಮಜೀವಿಗಳು. ಅವರಿಗೆ ಅರಣ್ಯವೇ ಪ್ರಪಂಚ. ನವೀನ ಜೀವನಕ್ರಮಗಳಿಗೆ ಸುಲಭವಾಗಿ ಮಾರು ಹೋಗರು. ನಾಗರಿಕತೆಯ ಪ್ರಭಾವಕ್ಕೆ ಒಳಗಾಗಿ ವೈಜ್ಞಾನಿಕ ಹಾಗೂ ತಾಂತ್ರಿಕ ಜಗತ್ತಿನಲ್ಲಿ ವಾಸಿಸುವ ಜನ ಈ ಗಿರಿನಾಡಿನ ಜನರ ಸಂಸ್ಕೃತಿಯನ್ನು ಕಂಡಾಗ ವಿಸ್ಮಯಗೊಳ್ಳದೆ ಇರಲಾರರು.

ಆದಿವಾಸಿಗಳ ಯೋಗಕ್ಷೇಮ

ಆದಿವಾಸಿಗಳ ಯೋಗಕ್ಷೇಮಾಭಿವೃದ್ಧಿಗೆ ಸೂಕ್ತ ಸಲಹೆ ನೀಡುವುದಕ್ಕಾಗಿ ಇಂಡಿಯ ದೇಶದ ಕೇಂದ್ರ ಸರ್ಕಾರ ಒಂದು ಕೇಂದ್ರ ಸಲಹಾ ಮಂಡಲಿಯನ್ನು ಸ್ಥಾಪಿಸಲು ನಿಶ್ಚಯಮಾಡಿದೆ. ಈ ಮಂಡಲಿಯಲ್ಲಿ ಹದಿನೈದು ಮಂದಿ ಪಾರ್ಲಿಮೆಂಟಿನ ಸದಸ್ಯರೂ ಆರುಮಂದಿ ಪ್ರಜಾನಾಯಕರೂ ಇರಬೇಕು. ಪ್ರತಿ ವರ್ಷವೂ ಈ ಮಂಡಲಿಯ ಸದಸ್ಯರನ್ನು ಒಳಾಡಳಿತ ಸಚಿವ ಶಾಖೆ ಚುನಾಯಿಸುವುದು. ಈ ಶಾಖೆಯ ಸಚಿವರು ಈ ಮಂಡಲಿಯ ಅಧ್ಯಕ್ಷರಾಗಿರುವರು. ಆರು ತಿಂಗಳಿಗೊಮ್ಮೆಯಾದರೂ ಇದು ಸೇರಬೇಕು. ಆದಿವಾಸಿಗಳ ಅಭಿವೃದ್ಧಿಗೆ ಅಗತ್ಯವಾದ ಸೂಚನೆಗಳನ್ನು ಈ ಮಂಡಲಿ ಸರ್ಕಾರಕ್ಕೆ ಕೊಡುವುದು. ಎಲ್ಲೆಲ್ಲಿ ಆದಿವಾಸಿಗಳಿದ್ದಾರೆ? ಅವರ ಸುಖಜೀವನಕ್ಕೆ ಅಗತ್ಯವಾದ ಕಾರ್ಯಕ್ರಮಗಳೇನು? ಅವುಗಳನ್ನು ಆಚರಣೆಯಲ್ಲಿ ತರತಕ್ಕ ಮಾರ್ಗಗಳಾವುವು? ಹೀಗೆ ಸೂಚಿಸಿದ ಮಾರ್ಗಗಳನ್ನು ಆಚರಿಸಲಾಗಿದೆಯೇ? ಹಾಗೆ ಆಚರಿಸಿದ್ದರೆ ಅವುಗಳಿಂದ ಸಾಧಿಸಿದ ಕಾರ್ಯ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ? ಇವೇ ಮುಂತಾದ ವಿಷಯಗಳನ್ನು ಈ ಕೇಂದ್ರ ಮಂಡಲಿ ಕೂಲಂಕಷವಾಗಿ ಪರಿಶೀಲಿಸಿ, ಯುಕ್ತವಾದ ಸಲಹೆಗಳನ್ನು ನೀಡಬೇಕೆಂದು ನಿರ್ಧಾರವಾಗಿದೆ. ಒಳಾಡಳಿತ ಸಚಿವಶಾಖೆಯ ಡೆಪ್ಯುಟಿ ಸೆಕ್ರೆಟರಿಯವರು ಈ ಮಂಡಲಿಯ ಕಾರ್ಯದರ್ಶಿಯಾಗಿ ನೇಮಿತರಾಗಿದ್ದಾರೆ. ಅಂತೂ ಆದಿವಾಸಿಗಳ ಕಷ್ಟಪರಂಪರೆಗಳು ನಿವಾರಣೆಯಾಗುವ ಕಾಲ ಬಂದಂತಿದೆ.

—ಡಿ. ಕೃಷ್ಣ ಐಯ್ಯಂಗಾರ್

‘ಕನ್ನಡ ನಾಡಿನ ಆದಿವಾಸಿಗಳು’, ಮೈಸೂರು ರಾಜ್ಯ; ಮೈಸೂರು ಸರ್ಕಾರದ ವಾರ್ತಾ ಇಲಾಖೆ; ಪು. ೭೧

ಡಿ. ಶ್ರೀನಿವಾಸ

ಅಧಿಕೋತ್ಪಾದನೆಯಲ್ಲಿ ಶ್ರಮಾಧ್ಯಯನದ ಮಹತ್ತ್ವ

ಅಧಿಕೋತ್ಪಾದನೆಯೇ ಸಕಲ ಉದ್ಯಮಗಳ ಹೆಗ್ಗುರಿ. ಸರಳ ಭಾಷೆಯಲ್ಲಿ ಹೇಳುವು ದಾದರೆ ಫಲದಾಯಕ ಉತ್ಪಾದನೆಯೆಂದರೆ ಉದ್ಯಮದಲ್ಲಿ ತೊಡಗಿದ ಪ್ರತಿ ಅಂಶಕ್ಕೂ ಹೆಚ್ಚು ಉತ್ಪತ್ತಿ. ಯಾವ ಕೈಗಾರಿಕೆಯಲ್ಲಿಯೇ ಆಗಲಿ, ಉತ್ಪಾದನೆಗೆ ತೊಡಕುಗಳಿದ್ದೇ ಇರುತ್ತವೆ. ಅವೆಂದರೆ ಕೀಳುದರ್ಜೆಯ ಉತ್ಪನ್ನ, ಕುಂಠಿತ ಪ್ರಮಾಣ ನಿಷ್ಕರ್ಷೆ, ದೋಷಯುಕ್ತ ಗುಣಮಟ್ಟ, ನ್ಯೂನತೆಯಿಂದ ಕೂಡಿದ ಕಾರ್ಯವಿಧಾನ, ಕುಂದುಳ್ಳ ಉಪಕರಣಗಳು, ಅಹಿತಕರ ನಿವೇಶನ, ದುಡಿಮೆಯ ನೀರಸ ಕಟ್ಟುಪಾಡುಗಳು, ಸಾಮಗ್ರಿಗಳ ಕೊರತೆ, ಕಾಯಕಕ್ಕನುಗುಣವಲ್ಲದ ಸ್ಥಿತಿಗತಿಗಳು, ಪದೇಪದೇ ಯಂತ್ರೋಪಕರಣಗಳ ಕುಸಿತ, ಕಾರ್ಮಿಕರ ನಿರ್ಲಕ್ಷ್ಯ ಇತ್ಯಾದಿ.

ಸುದೈವದಿಂದ ಆಡಳಿತವರ್ಗ ಈ ಎಡರುಗಳನ್ನು ಪರಿಣಾಮಕಾರಿಯಾಗಿ ತೊಡೆದುಹಾಕಿ ಉತ್ಪನ್ನವನ್ನು ಹೆಚ್ಚಿಸಿಕೊಳ್ಳಲು ಕೆಲವು ತಂತ್ರಕೌಶಲಗಳನ್ನು ಹೊಂದಿರುತ್ತದೆ. ಈ ತಂತ್ರ ಕೌಶಲಗಳಲ್ಲಿ ಶ್ರಮಾಧ್ಯಯನದ (ವರ್ಕ್ ಸ್ಟಡಿ) ಪಾತ್ರ ಅತ್ಯಂತ ಹಿರಿದು.

ಶ್ರಮಾಧ್ಯಯನದ ಮೂಲಭೂತ ಉದ್ದೇಶ ಕೈಗಾರಿಕೋತ್ಪತ್ತಿಯಲ್ಲಿ ಕಂಡು ಬರುವ ನ್ಯೂನತೆಗಳನ್ನು ಹೋಗಲಾಡಿಸುವುದೇ ಆಗಿದೆ. ಇದು ವಿಧಾನ ಅಧ್ಯಯನ (ಮೆಥಡ್ ಸ್ಟಡಿ) ಮತ್ತು ಶ್ರಮಮಾಪನ (ವರ್ಕ್ ಮೆಷರ್‌ಮೆಂಟ್) ಎಂಬ ಎರಡು ಪ್ರಯೋಗತಂತ್ರಗಳನ್ನೊಳಗೊಂಡಿದೆ. ವಿಧಾನ ಅಧ್ಯಯನ ಉತ್ಪಾದನ ವಿಧಾನಗಳ ಅಭಿವೃದ್ಧಿ ಮತ್ತು ದರ್ಜೆಯ ನಿಗದಿಗೆ ಸಂಬಂಧಿಸಿದ್ದು. ಶ್ರಮ ಮಾಪನ ದರ್ಜೆಯ ನಿಗದಿಯನ್ನು ಗೌಣವಾಗಿ ಕಂಡು ಗೈಮೆಯ ಪರಿಮಾಣಕ್ಕೆ ಹೆಚ್ಚು ಗಮನ ಹರಿಸುತ್ತದೆ. ಅಂತೆಯೇ ವಿಧಾನ ಅಧ್ಯಯನ ಶ್ರಮಮಾಪನಕ್ಕೆ ಪೂರ್ವಭಾವಿಯಾಗಿ ಬರುವ ಅಂಶ. ಯಾವ ಕೈಗಾರಿಕೆಯನ್ನೇ ತೆಗೆದು ಕೊಂಡರೂ ಅಲ್ಲಿ ಚಾಲ್ತಿಯಲ್ಲಿರತಕ್ಕ ವಿಧಿ ವಿಧಾನಗಳ ವೈಜ್ಞಾನಿಕ ತನಿಖೆಯಿಂದ ಅವುಗಳ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸಲು ಉತ್ತಮ ಅವಕಾಶಗಳಿರುತ್ತವೆ.

ಇದು ಅನುಭವದ ಸಂಗತಿ. ಉತ್ಪಾದನೆಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸುವಲ್ಲಿ ಅಧಿಕ ಪರಿಶ್ರಮಕ್ಕಿಂತ ಉತ್ತಮ ವಿಧಾನಗಳಿಂದ ಸಾಧ್ಯ ಎಂಬುದನ್ನು ಅರಿಯುವುದುತ್ತಮ.

ಆಡಳಿತ ವರ್ಗದವರು ತಮ್ಮ ಉತ್ಪನ್ನವನ್ನು ಅಧಿಕಗೊಳಿಸಲು ಶ್ರಮಾಧ್ಯಯನವನ್ನು ವಿವಿಧ ಕ್ಷೇತ್ರಗಳಲ್ಲಿ ಬಳಸಬಹುದು. ಅವೆಂದರೆ—

೧ ಉದ್ಯಮ ವಿಧಾನ ತಂತ್ರಗಳನ್ನು ಅಭಿವೃದ್ಧಿಪಡಿಸಲು;

೨ ತಮ್ಮ ಕಾರ್ಖಾನೆ, ಯಂತ್ರಾಗಾರ ಅಥವಾ ಕಾರ್ಯಾಲಯದ ನಿವೇಶನಗಳನ್ನು ಉತ್ತಮಗೊಳಿಸಲು;

೩ ಯಂತ್ರೋಪಕರಣ, ಸಾಮಾನು ಸರಂಜಾಮು ಅಥವಾ ಕೈಗಾರಿಕೋತ್ಪನ್ನಗಳನ್ನು ಉತ್ತಮಗೊಳಿಸಲು;

೪ ಬಳಕೆಯಲ್ಲಿ ಇಳಿತಾಯ ಪಡೆಯಲು ಮತ್ತು ಕೆಲಸಗಾರರಲ್ಲಿ ಅನಾವಶ್ಯಕ ದಣಿವನ್ನು ಹೋಗಲಾಡಿಸಲು:

೫ ಕಾಯಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು;

೬ ಯಂತ್ರ, ಸಾಮಗ್ರಿ ಮತ್ತು ಮಾನವಶಕ್ತಿಯ ಬಳಕೆಯಲ್ಲಿ ಹಿಡಿತ ಸಾಧಿಸಲು;

೭ ಮಾನವನ ಅಥವಾ ಯಂತ್ರದ ನಿರ್ವಹಣೆಯಲ್ಲಿ ಸಮಂಜಸ ನಿರ್ಧಾರಕ್ಕೆ ಬರಲು;

೮ ಯಂತ್ರೋಪಕರಣಗಳ ಸಾಮರ್ಥ್ಯ, ಅಗತ್ಯ ಮತ್ತು ಅವುಗಳನ್ನು ನಡೆಸುವಲ್ಲಿ ಯೋಗ್ಯ ಚಾಲಕರ ನೇಮಕ ಇವುಗಳ ಬಗ್ಗೆ ನಿರ್ಣಯಿಸಲು;

೯ ಕಾರ್ಮಿಕರ ಬಳಕೆ ಮತ್ತು ಯಂತ್ರಗಳ ಮೇಲೆ ಹತೋಟಿ ಸಾಧಿಸಲು; ಹಾಗೂ

೧೦ ಪ್ರೋತ್ಸಾಹ ವಿಧಾನಗಳು, ಕೂಲಿ ವಿತರಣೆಯ ಮೇಲೆ ಅಂಕೆ ಮತ್ತು ದರಖಾಸ್ತುಗಳ ಅಂದಾಜು ಇವೆಲ್ಲವನ್ನೂ ಆಧರಿಸಲು ಸೂಕ್ತ ತಿಳಿವಳಿಕೆ ಪಡೆಯಲೋಸ್ಕರ.

ಶ್ರಮಾಧ್ಯಯನ ಅಸಾಮಾನ್ಯವೆಂದು ಕಂಡುಬರುವ ಸಾಮಾನ್ಯ ತಿಳಿವಳಿಕೆಯನ್ನು ವ್ಯವಸ್ಥಿತ ರೀತಿಯಲ್ಲಿ ಒದಗಿಸುವ ಸಾಧನ ಮಾತ್ರ. ಇದರ ಮೂಲಭೂತ ಮಾರ್ಗ ಉದ್ಯಮ ಕಾರ್ಯವಿಧಾನಗಳ ವಿಮರ್ಶಾತ್ಮಕ ತುಲನೆಯನ್ನಾಧರಿಸಿದೆ. ಶ್ರಮಾಧ್ಯಯನ ಏನು, ಏಕೆ, ಹೇಗೆ, ಎಂದು, ಎಲ್ಲಿ ಮತ್ತು ಯಾರು ಎಂಬ ಆರು ನಂಬಿಕಸ್ತ ಭಟರನ್ನೊಳಗೊಂಡಿದೆ. ಶ್ರಮಾಧ್ಯಯನದ ಪೂರ್ಣ ಗುರಿ ಅಧಿಕೋತ್ಪಾದನೆಯಾಗಿದ್ದು ತತ್ಸಂಬಂಧವಾಗಿ ಅದು ಉದ್ಯಮದ ನಾನಾ ಚಟುವಟಿಕೆಗಳ ಗುರಿ, ಸಾಧನ, ಕ್ರಮಾನುಗತಿ, ಸ್ಥಳ ಪರೀಕ್ಷೆ, ಉದ್ಯಮಕ್ಕೆ ಸಂಬಂಧಿಸಿದ ವ್ಯಕ್ತಿ

ಗಳು ಇವನ್ನೆಲ್ಲಾ ಪರೀಕ್ಷಿಸಿ ಸೂಕ್ತ ಮಾರ್ಪಾಡುಗಳು, ಹೊಂದಾಣಿಕೆ, ಸಂಯೋಜನೆ, ಬದಲಿ ವ್ಯವಸ್ಥೆ ಇತ್ಯಾದಿ ಸುಗಮ ಹಾದಿಗಳನ್ನೊದಗಿಸುತ್ತದೆ.

ಶ್ರಮಾಧ್ಯಯನದ ಪ್ರಾಮುಖ್ಯಕ್ಕೆ ಕಾರಣವೆಂದರೆ—

೧ ಇದು ಬಂಡವಾಳದ ಅಧಿಕ ವೆಚ್ಚವಿಲ್ಲದೆಯೇ ಕಾರ್ಖಾನೆಯ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯಮಾಡುತ್ತದೆ.

೨ ಇದೊಂದು ಕ್ರಮಬದ್ಧ ವ್ಯವಸ್ಥೆ. ಶ್ರಮಾಧ್ಯಯನ ಉದ್ಯಮಕಾರ್ಯ ಸಾಮರ್ಥ್ಯಕ್ಕೆ ಸಂಬಂಧಿಸಿದ ಯಾವೊಂದು ಅಂಶವನ್ನೂ ಕಡೆಗಣಿಸುವುದಿಲ್ಲ.

೩ ಇದು ಉದ್ಯಮ ನಿರ್ವಹಣ ಸೂತ್ರಗಳನ್ನು ನಿರ್ಣಯಿಸುವಲ್ಲಿ ತುಂಬ ಕರಾರುವಾಕ್ಕಾದ ಸಾಧನ.

೪ ಶ್ರಮಾಧ್ಯಯನದ ಉಚಿತ ರೀತಿಯ ಪ್ರಯೋಗದಿಂದ ಮಿಗಿತಾಯ ಕೂಡಲೇ ಲಭಿಸುತ್ತದೆ.

೫ ಈ ಸಾಧನವನ್ನು ಕಾರ್ಖಾನೆ, ಕಚೇರಿ, ಆಸ್ಪತ್ರೆ ಅಥವಾ ಗೃಹವ್ಯವಹಾರ ಗಳಿಗೆ ಅನ್ವಯಿಸುವಂತೆ ಎಲ್ಲಿ ಬೇಕಾದರಲ್ಲಿ ಜಯಪ್ರದವಾಗಿ ಪ್ರಯೋಗಿಸಬಹುದು.

೬ ಇದೊಂದು ಅತಿ ಸೂಕ್ಷ್ಮ ಅನ್ವೇಷಣ ಸಾಧನ. ಉದ್ಯಮ ಸಂಸ್ಥೆಗಳು ತಮ್ಮ ಕಾರ್ಯಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸಿ ಕೊಳ್ಳಬಹುದಾದ ಉತ್ಕೃಷ್ಟ ಅಸ್ತ್ರವಿದು.

೭ ಶ್ರಮಾಧ್ಯಯನ ಮಾನಸಿಕ ಶಿಸ್ತನ್ನು ಪ್ರೇರಿಸುತ್ತದೆ. ತತ್ಫಲವಾಗಿ ಇದು ಯಂತ್ರ ಸಾಮಗ್ರಿ, ಕಾಲ, ಪರಿಶ್ರಮ ಇವುಗಳ ಯಾವುದೇ ರೀತಿಯ ಅಪವ್ಯಯವನ್ನೂ ಸಹಿಸದು.

ಶ್ರಮಾಧ್ಯಯನ ಸಕಲರಿಗೂ ಒಂದಿಲ್ಲೊಂದು ಬಗೆಯ ವರ ನೀಡುವ ಕಲ್ಪವೃಕ್ಷವೇ ಸರಿ.

೧ ಶ್ರಮಾಧ್ಯಯನದ ಫಲವಾಗಿ ಆಡಳಿತವರ್ಗದವರು ಹೆಚ್ಚಿನ ಕಾರ್ಯ ಸಾಮರ್ಥ್ಯ ಮತ್ತು ಪ್ರತಿಫಲ ಪಡೆಯುವರು.

೨ ''ದಿನಭರ್ತಿ ಕೆಲಸ—ಕೈಭರ್ತಿ ಕೂಲಿ'' ಎಂಬ ಮಾತಿನ ವಿಶೇಷತೆ ಯನ್ನು ಶ್ರಮಾಧ್ಯಯನ ಕಾರ್ಮಿಕನಿಗೆ ಮನಗಾಣಿಸುತ್ತದೆ. ಅಂತೆಯೇ ಅವನಿಗೆ ಅಧಿಕ ಗೈಮೆಯ ಅನ್ಯಾಯದ ಹೊರೆಯಿಂದ ರಕ್ಷಣೆ ದೊರೆಯುತ್ತದೆ. ಅವನ ದುಡಿಮೆ ಸುಲಭವೂ ಹೆಚ್ಚು ಫಲಕಾರಿಯೂ ಆಗುತ್ತದೆ. ದಣಿವಿನಿಂದ ಅವನಿನ್ನು ಸೊರಗಲಾರ. ತೃಪ್ತಿಕರವಾಗಿ ಬಳಸಿಕೊಂಡಲ್ಲಿ ಶ್ರಮಾಧ್ಯಯನ ಅವನ ಗಳಿಕೆಯನ್ನು ಮತ್ತಷ್ಟು ಹೆಚ್ಚಿಸಲೂ ಸಹಾಯ ಮಾಡುತ್ತದೆ.

೩ ಗ್ರಾಹಕನಿಗಾದರೋ ಮೇಲ್ದರ್ಜೆಯ ವಸ್ತುಗಳು ಅಗ್ಗದ ಬೆಲೆಗೆ ದೊರಕುವ ಸುಸಂಧಿಯುಂಟು.

೬ ಶ್ರಮಾಧ್ಯಯನ ಸಂಚಿಕೆಗೆ ಅರ್ಹ ಮತ್ತು ಸ್ಥಿರರೀತಿಯಲ್ಲಿ ಉದ್ಯಮ ನಿರ್ವಹಣೆಯ ಮಟ್ಟವನ್ನು ಒದಗಿಸಿಕೊಡುತ್ತದಾಗಿ ಕಾರ್ಮಿಕ ಸಂಘಗಳು ಇದರ ಪೂರ್ಣಲಾಭ ಪಡೆಯಬಹುದು. ಅಂದರೆ ಅವು ಆಡಳಿತವರ್ಗಗಳೊಂದಿಗೆ ವಾಸ್ತವಿಕ ಸಂಧಾನಗಳನ್ನು ನಡೆಸಿ ಕಾರ್ಮಿಕರಿಗೆ ಸಂಬಂಧಪಟ್ಟ ತೀರ್ಮಾನಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುವು ಮಾಡಿಕೊಡುತ್ತವೆ.

ಶ್ರಮಾಧ್ಯಯನ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಸರ್ವರಿಂದಲೂ ಮಾನ್ಯತೆ ಪಡೆದ ಹಿರಿಯ ಅಸ್ತ್ರವೇ ಸರಿ. ಇದು ಶಸ್ತ್ರವೈದ್ಯನ ಕತ್ತಿಯ ಅಲುಗಿನಷ್ಟೇ ಸೂಕ್ಷ್ಮ. ಇದು ಉದ್ಯಮದ ನ್ಯೂನತೆಗಳನ್ನು ಬಹಿರಂಗಪಡಿಸುತ್ತದೆ. ಇದನ್ನು ಪ್ರಯೋಗಿಸುವವರು ಮಾನವ ವ್ಯವಹಾರದಲ್ಲಿ ಕುಶಲಿಗಳಾಗಿರಬೇಕು. ಶ್ರಮಾಧ್ಯಯನ ಮುಖ್ಯವಾಗಿ ಉದ್ಯಮ ನಿರ್ವಹಣೆಗೆ ಸಂಬಂಧಿಸಿರುತ್ತದೆ. ಇನ್ನಿತರ ತಾಂತ್ರಿಕ ಕಾರ್ಯವಿಧಾನಗಳೆಲ್ಲವೂ ಇದಕ್ಕೆ ಗೌಣ. ಉದ್ಯಮ ನಿರ್ವಹಣೆ ವ್ಯವಸ್ಥಾಪಕರು, ತಂತ್ರಜ್ಞರು, ಕಾರ್ಮಿಕರು ಇತ್ಯಾದಿ ಮಾನವರನ್ನೊಳಗೊಂಡಿರುತ್ತದೆಯಾಗಿ ಶ್ರಮಾಧ್ಯಯನದಲ್ಲಡಗಿರುವ ಮಾನವಿಕ ಅಂಶವನ್ನು ಒತ್ತಿ ಹೇಳುವುದು ಅನಗತ್ಯವೇ ಸರಿ.

ಶ್ರಮಾಧ್ಯಯನವನ್ನು ಅನ್ವಯಿಸುವಲ್ಲಿ ಎರಡು ತೊಡಕುಗಳಿವೆ. ಮೊದಲನೆಯದು ಕಾರ್ಮಿಕರ ವಿರೋಧ. ಎರಡನೆಯ ದೊಡ್ಡ ತೊಡಕೆಂದರೆ ಹೊಸಬಗೆಯ ವಿಚಾರಗಳಿಗೆ ಆಡಳಿತವರ್ಗದವರು ಸಾಮಾನ್ಯವಾಗಿ ತೋರಿಸುವ ವಿರೋಧ. ಶ್ರಮಾಧ್ಯಯನವನ್ನು ಯಶಸ್ವಿಯಾಗಿ ಅನ್ವಯಿಸುವಲ್ಲಿ ಮೇಲಿನಿಂದಾರಂಭಿಸಿ ಎಲ್ಲ ಹಂತಗಳಲ್ಲೂ ಆಡಳಿತವರ್ಗದ ಪೂರ್ಣ ಸಹಕಾರ ಅಗತ್ಯವಿದೆ. ಅದಿಲ್ಲದೆ ಹೋದಲ್ಲಿ ಶ್ರಮಾಧ್ಯಯನ ಗುರುತು ಸಿಗದಂತೆ ನಶಿಸಿಹೋದೀತು!

ಶ್ರಮಾಧ್ಯಯನದ ನಿಜಸಾಮರ್ಥ್ಯ ಶೋಧಕರ ಮನೋವೃತ್ತಿಯನ್ನವಲಂಬಿಸಿದೆ. ಇದರಲ್ಲಿ ಯಶಗಳಿಸಲು ಕ್ರಮಬದ್ಧ ಮತ್ತು ದೃಢ ಅನ್ವೇಷಣೆ ಅಗತ್ಯ. ಶ್ರಮಾಧ್ಯಯನವನ್ನು ಪ್ರಯೋಗಿಸುವಲ್ಲಿ ಪೂರ್ವಾಗ್ರಹಪೀಡಿತರಾಗದೆ, ಅವಸರದ ನಿರ್ಣಯಗಳಿಗೆ ಬದ್ಧರಾಗದೆ, ಊಹೆ ಅಥವಾ ಎಣಿಕೆಗಳನ್ನು ದೂರ ತಳ್ಳಬೇಕು. ಪ್ರತಿಯೊಂದು ವಿವರವನ್ನೂ ಪ್ರಶ್ನಾರ್ಥಕ ದೃಷ್ಟಿಯಿಂದ ಕಂಡು ಅದನ್ನು ಒರೆಹಚ್ಚಿದ ಅನಂತರವೇ ಸಮಾಧಾನಪಟ್ಟುಕೊಳ್ಳಬೇಕು. ಒಟ್ಟಾರೆ ಹೇಳುವಲ್ಲಿ ಶ್ರಮಾಧ್ಯಯನ ನಡೆಸುವ ತಜ್ಞರಿಂದಲೇ (ಉದ್ಯಮ ಚಟುವಟಿಕೆ ಮತ್ತು ವಿಧಿವಿಧಾನಗಳ ತಜ್ಞರು) ಈ ನವ ವಿಧಾನದ ಯಶಸ್ಸು ಸಾಧ್ಯ.

ಎಚ್. ಎಂ. ನಾಗರಾಜರಾವ್

ಶೃಂಗೇರಿಯ ಪ್ರಾಚೀನತೆ

ಭಾರತದ ಪ್ರಸಿದ್ಧ ಯಾತ್ರಾಸ್ಥಳಗಳಲ್ಲೊಂದಾದ ಶೃಂಗೇರಿ ನಿಸರ್ಗಸೌಂದರ್ಯಕ್ಕೆ ಹೆಸರಾದ ಮಲೆನಾಡಿನ ಪ್ರದೇಶದಲ್ಲಿದೆ. ವಿಭಾಂಡಕ ಮಹರ್ಷಿಯ ಮಗನಾದ ಋಷ್ಯಶೃಂಗನ ಜನ್ಮಸ್ಥಳವಾದುದರಿಂದ ಇದಕ್ಕೆ 'ಶೃಂಗಗಿರಿ' ಎಂಬ ಹೆಸರು ಬಂದಿತೆಂದು ಪ್ರತೀತಿ. ಶೃಂಗಗಿರಿ ಕ್ರಮೇಣ ಶೃಂಗೇರಿ ಎಂದಾಗಿದೆ. ಶಾಸನಗಳಲ್ಲಿ ಇದು 'ಶೃಂಗಿಪುರ'ವೆಂಬುದಾಗಿ ಉಲ್ಲೇಖಿತವಾಗಿದೆ.

ಕ್ರಿ.ಶ. ಎಂಟನೆಯ ಶತಮಾನದಲ್ಲಿ ಅದ್ವೈತಸಿದ್ಧಾಂತಪ್ರತಿಪಾದಕರಾದ ಶಂಕರಾಚಾರ್ಯರಿಂದ ಸ್ಥಾಪಿತವಾದ ನಾಲ್ಕು ಆಮ್ನಾಯ ಮಠಗಳಲ್ಲೊಂದಾದ ಶೃಂಗೇರಿ ತನ್ನ ಪ್ರಾಚೀನತೆಯಿಂದ ಅತ್ಯಂತ ಪ್ರಸಿದ್ಧವಾಗಿದೆ. ಇಲ್ಲಿಯಲ್ಲದೆ ಪಶ್ಚಿಮದಲ್ಲಿ ದ್ವಾರಕಾ, ಉತ್ತರದಲ್ಲಿ ಬದರಿ, ಪೂರ್ವದಲ್ಲಿ ಜಗನ್ನಾಥ—ಈ ಸ್ಥಳಗಳಲ್ಲಿಯೂ ಮಠಗಳನ್ನು ಸ್ಥಾಪಿಸಿ, ಕ್ರಮವಾಗಿ ಸುರೇಶ್ವರ, ಪದ್ಮಪಾದ, ತೋಟಕ ಮತ್ತು ಹಸ್ತಾಮಲಕರನ್ನು ಈ ಮಠಗಳ ಅಧಿಪತಿಗಳನ್ನಾಗಿ ನೇಮಿಸಿದರೆಂದು ತಿಳಿದುಬರುತ್ತದೆ. ಇವುಗಳ ಅಭಿಧಾನ, ದೇವ, ದೇವಿ, ಸಂಪ್ರದಾಯ, ವೇದ, ಮಹಾವಾಕ್ಯ, ಪಾವನಕ್ಷೇತ್ರ, ಪುಣ್ಯತೀರ್ಥ, ಗುರುಸ್ವರೂಪ ಹಾಗೂ ಯತಿನಾಮಧೇಯಗಳಲ್ಲಿಯೂ ವ್ಯತ್ಯಾಸಗಳು ಕಂಡುಬರುತ್ತವೆ:

	ಶೃಂಗೇರಿ	ದ್ವಾರಕಾ	ಬದರಿ	ಜಗನ್ನಾಥ
ಅಭಿಧಾನ	ಶಾರದಾಮಠ	ಕಾಳಿಕಾಮಠ	ಶ್ರೀಮಠ	ಗೋವರ್ಧನ ಮಠ
ದೇವ	ವರಾಹ	ಸಿದ್ಧೇಶ್ವರ	ನಾರಾಯಣ	ಜಗನ್ನಾಥ
ದೇವಿ	ಶಾರದಾ	ಭದ್ರಕಾಳಿ	ಪೂರ್ಣಗಿರಿ	ವೃಷಲಾ
ಸಂಪ್ರದಾಯ	ಭೂರಿವಾಲ	ಕೀಟವಾಲ	ನಂದವಾಲ	ಭೋಗವಾಲ
ವೇದ	ಯಜುಸ್	ಸಾಮ	ಅಥರ್ವಣ	ಋಕ್
ಮಹಾವಾಕ್ಯ	ಅಹಂ ಬ್ರಹ್ಮಾಸ್ಮಿ	ತತ್ತ್ವಮಸಿ	ಆತ್ಮಾ ಚ ಬ್ರಹ್ಮ	ಪ್ರಜ್ಞಾನಂ ಬ್ರಹ್ಮ

ಪಾವನಕ್ಷೇತ್ರ	ರಾಮಕ್ಷೇತ್ರ	ದ್ವಾರಕಾ	ಬದರಿಕಾಶ್ರಮ	ಪುರುಷೋತ್ತಮ
ಪುಣ್ಯತೀರ್ಥ	ತುಂಗಭದ್ರಾ	ಗೋಮತೀ	ಅಲಕನಂದಿಕಾ	ಮಹೋದಧಿ
ಗುರುಸ್ವರೂಪ	ಚೈತನ್ಯ ಬ್ರಹ್ಮಚಾರಿ	ಸ್ವರೂಪ ಬ್ರಹ್ಮಚಾರಿ	ಆನಂದ ಬ್ರಹ್ಮಚಾರಿ	ಪ್ರಕಾಶ ಬ್ರಹ್ಮಚಾರಿ
ಯತಿನಾಮಧೇಯ	ಸರಸ್ವತಿ, ಪುರಿ, ಭಾರತಿ, ಅರಣ್ಯ, ಗಿರಿ, ತೀರ್ಥ, ಆಶ್ರಮ	ತೀರ್ಥ, ಆಶ್ರಮ	ಗಿರಿ, ಪರ್ವತ, ಸಾಗರ	ಅರಣ್ಯ, ವನ

ಕಡುಬಿಸಿಲಿಗೆ ಸಿಕ್ಕಿದ್ದ ಮತ್ತು ಪ್ರಸವವೇದನೆಯನ್ನು ಅನುಭವಿಸುತ್ತಿದ್ದ ಕಪ್ಪೆಯೊಂದಕ್ಕೆ ಸರ್ಪವೊಂದು ತನ್ನ ಹೆಡೆಯಿಂದ ನೆರಳನ್ನೊದಗಿಸಿ ನೆರವಾಗುತ್ತಿದ್ದ ಅಸಾಮಾನ್ಯ ಘಟನೆಯೊಂದನ್ನು ನೋಡಿ ವಿಸ್ಮಿತರಾದ ಶಂಕರಾಚಾರ್ಯರು ಪ್ರಕೃತಿಸಹಜ ಶತ್ರುತ್ವವೂ ಇಲ್ಲದಿರುವ ಈ ಸ್ಥಳವನ್ನು ಮಠಯೋಗ್ಯಪ್ರದೇಶ ವೆಂಬುದಾಗಿ ಭಾವಿಸಿ ಇಲ್ಲಿ ಮಠವನ್ನು ಸ್ಥಾಪಿಸಿದರೆಂದು ಪ್ರತೀತಿಯಿದೆ. ಇದಕ್ಕೆ ಆಧಾರವಾಗಿ ಕಪ್ಪೆಶಂಕರ ದೇವಾಲಯವೂ ಇದೆ. ಆದರೆ ಈ ಸ್ಥಳದಲ್ಲಿ ಮಠವನ್ನು ಶ್ರೀ ಶಂಕರರು ಸ್ಥಾಪಿಸಲು ನಿಜವಾದ ಕಾರಣ ಬೇರೆಯಾಗಿದೆ: ಈ ಪ್ರದೇಶದಲ್ಲಿ ಜೈನಮತದ ಪ್ರಾಬಲ್ಯ ಬಹಳವಾಗಿ ಇದ್ದಿತೆಂದು ತೋರುತ್ತದೆ. ಇಂದಿಗೂ ಇಲ್ಲಿನ ಸುತ್ತಮುತ್ತಲಿನ ಪ್ರದೇಶದಲ್ಲಿ ನೂರಾರು ಬಸದಿಗಳನ್ನು ನಾವು ಕಾಣಬಹು ದಾಗಿದೆ. ಅನೇಕ ಜಿನಾಲಯಗಳು ಹಾಳುಬಿದ್ದಿದ್ದರೂ, ಪೂಜೆಪುನಸ್ಕಾರಗಳು ನಡೆಯುತ್ತಿರುವ ಹಲವಾರು ಬಸದಿಗಳಿವೆ. ಜೈನಧರ್ಮದ ಪ್ರಾಬಲ್ಯವನ್ನು ಕುಗ್ಗಿಸಿ ಬದಲಾಗಿ ಅದ್ವೈತಸಿದ್ಧಾಂತವನ್ನು ಜನಾದರಣೀಯಗೊಳಿಸಲು ಶಂಕರಾಚಾರ್ಯರು ಈ ಪ್ರದೇಶದಲ್ಲಿ ಮಠವನ್ನು ಸ್ಥಾಪಿಸಿದರೆಂದು ಊಹಿಸ ಬಹುದಾಗಿದೆ. ಈ ಊಹೆಗೆ ಪಾಳುಬಿದ್ದಿರುವ ಪ್ರಾಚೀನ ಜಿನಾಲಯಗಳು ಸಮರ್ಥನೆ ನೀಡುತ್ತವೆ.

ಕರ್ಣಾಟಕ ಇತಿಹಾಸದ ನಾನಾ ರಂಗಗಳಲ್ಲಿ ಶೃಂಗೇರಿ ಸಂಸ್ಥಾನ ಸಲ್ಲಿಸಿದ ಸೇವೆ, ನಿರ್ವಹಿಸಿದ ಪಾತ್ರ ಅತ್ಯಂತ ಮಹತ್ತ್ವಪೂರ್ಣವಾದುದು ಮತ್ತು ಪ್ರಶಂಸನೀಯವಾದುದು. ವಿಜಯನಗರ ಸಾಮ್ರಾಜ್ಯದ ಉಗಮ ಸಮಯದಲ್ಲಿ ಶೃಂಗೇರಿ ಸಂಸ್ಥಾನ ಪ್ರಮುಖ ಪಾತ್ರವಹಿಸಿತ್ತೆಂದು ನಮಗೆ ತಿಳಿದುಬರುತ್ತದೆ. ವಿಜಯನಗರದರಸರ ಅನೇಕ ಶಾಸನಗಳು, ಅವರು ಶೃಂಗೇರಿ ಪೀಠಕ್ಕೆ ತೋರುತ್ತಿದ್ದ ಆದರ ಮತ್ತು ಗೌರವ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ವಿದ್ಯಾತೀರ್ಥ ಅಥವಾ ವಿದ್ಯಾಶಂಕರತೀರ್ಥರನ್ನು ಸೂರ್ಯನಿಗೆ ಹೋಲಿಸಿ, ಸೂರ್ಯ ತನ್ನ ಬೆಳಕಿನಿಂದ ಹಗಲಿನಲ್ಲಿ ಮಾತ್ರ ಸುತ್ತಮುತ್ತಲಿನ ಅಂಧಕಾರವನ್ನು ದೂರ ಮಾಡುತ್ತಾನೆ; ಆದರೆ ವಿದ್ಯಾತೀರ್ಥರು ಹಗಲು ಮತ್ತು ರಾತ್ರಿಗಳೆರಡರಲ್ಲಿಯೂ ಅಜ್ಞಾನವೆಂಬ ಆಂತರಿಕ ಅಂಧಕಾರವನ್ನು ನಿವಾರಿಸುತ್ತಾರೆ' ಎಂಬುದಾಗಿ

ಎರಡನೆಯ ಹರಿಹರನ ಶಾಸನಗಳು ವರ್ಣಿಸುತ್ತವೆ. ಕ್ರಿ.ಶ. ೧೩೪೬ರಲ್ಲಿ ಹರಿಹರ ಮತ್ತು ಬುಕ್ಕರು ಶೃಂಗೇರಿಗೆ ಭೇಟಿ ನೀಡಿ ಸಂಸ್ಥಾನಕ್ಕೆ ದತ್ತಿಬಿಟ್ಟರೆಂದು ಗೊತ್ತಾಗುತ್ತದೆ.[1] ಕ್ರಿ.ಶ. ೧೩೮೦ರಲ್ಲಿ ವಿಜಯನಗರದ ದೊರೆಯಾದ ಎರಡನೆಯ ಹರಿಹರ ವಿದ್ಯಾರಣ್ಯರನ್ನು ತನ್ನ ರಾಜಧಾನಿಗೆ ರಾಜಮರ್ಯಾದೆಗಳೊಡನೆ ಸ್ವಾಗತಿಸಿ, ಅವರ ಪಾದಾರವಿಂದಗಳಲ್ಲಿ ಎಲ್ಲಾ ರಾಜಚಿಹ್ನೆಗಳನ್ನೂ ಸಮರ್ಪಿಸಿದನೆಂದು ತಿಳಿದುಬರುತ್ತದೆ. ಇಲ್ಲಿಂದ ಮುಂದೆ ಶೃಂಗೇರಿ ಪೀಠಾಧಿಪತಿಗಳು 'ಕರ್ಣಾಟಕ ಸಿಂಹಾಸನ ಸ್ಥಾಪಕಾಚಾರ್ಯ'ರೆಂದು ಕರೆಸಿಕೊಳ್ಳತೊಡಗಿದರು. ಕ್ರಿ.ಶ. ೧೩೮೬ರಲ್ಲಿ ಅಂದರೆ ವಿದ್ಯಾರಣ್ಯರ ಮುಕ್ತಿಯ ಅನಂತರ ಹರಿಹರ ಶೃಂಗೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರಣ್ಯಪುರವೆಂಬ ಅಗ್ರಹಾರವನ್ನು ತನ್ನ ಗುರುವಿನ ಜ್ಞಾಪಕಾರ್ಥವಾಗಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಪುನಃ ಕ್ರಿ.ಶ. ೧೩೯೨ರಲ್ಲಿ ಅವನು ಹರಿಹರಪುರವೆಂಬ ಅಗ್ರಹಾರವನ್ನು ಸ್ಥಾಪಿಸಿದನೆಂದೂ ಅಲ್ಲಿ ಸ್ಥಾಪಿತವಾದ ಮಠದ ಅಧಿಪತಿಗಳಾಗಿ ರಾಮಚಂದ್ರ ಸರಸ್ವತಿಯವರು ನೇಮಿಸಲ್ಪಟ್ಟರೆಂದೂ ಅವನ ಶಾಸನವೊಂದರಿಂದ ನಮಗೆ ಗೊತ್ತಾಗುತ್ತದೆ.[2] ಇದೇ ರೀತಿಯಲ್ಲಿ ಶಕಟಪುರ ಅಥವಾ ಈಗಿನ ಬಂಡಿಗಡಿ, ತೀರ್ಥಮುತ್ತೂರು ಮತ್ತು ಕೂಡಲಿಗಳಲ್ಲಿಯೂ ಶೃಂಗೇರಿ ಗುರುಗಳ ಮಾರ್ಗದರ್ಶನ ಮತ್ತು ಆಶ್ರಿತ ರಾಜರ ಪ್ರೋತ್ಸಾಹದಿಂದಾಗಿ ಮಠಗಳು ಸ್ಥಾಪಿಸಲ್ಪಟ್ಟವು. ಸುಮಾರು ಮೂರು ಸಾವಿರದ ಮುನ್ನೂರು ಪಗೋಡಗಳ ಉತ್ಪತ್ತಿಯುಳ್ಳ ಪ್ರದೇಶವನ್ನು ಶೃಂಗೇರಿ ಸಂಸ್ಥಾನಕ್ಕೆ ದತ್ತಿ ಬಿಟ್ಟಿದ್ದುದುದರಿಂದ ಶೃಂಗೇರಿಗೆ ಮೂರುಸಾವಿರಸೀಮೆ ಎಂಬ ಹೆಸರು ಬಂತು. ಒಂದನೆಯ ನರಸಿಂಹಭಾರತಿಯವರು (೧೩೮೯–೧೪೦೮) ವಿಜಯನಗರದ ದೊರೆಗಳಾದ ವಿರೂಪಾಕ್ಷ ಮತ್ತು ದೇವರಾಯರಿಗೆ ಧಾರ್ಮಿಕ ದೀಕ್ಷೆಯನ್ನು ನೀಡಿದರೆಂದು ನಮಗೆ ಗೊತ್ತಾಗುತ್ತದೆ. ಕ್ರಿ.ಶ. ೧೪೦೪ರಲ್ಲಿ ವಿರೂಪಾಕ್ಷ ಶೃಂಗೇರಿಗೆ ಭೇಟಿ ನೀಡಿದ. ಮಲ್ಲಿಕಾರ್ಜುನ ಮತ್ತು ಬುಕ್ಕರ ಆಹ್ವಾನದ ಮೇರೆಗೆ ಶೃಂಗೇರಿ ಪೀಠಾಧಿಪತಿಗಳಾದ ಶಂಕರಾನಂದ ಭಾರತಿಯವರು ವಿಜಯನಗರಕ್ಕೆ ಭೇಟಿಕೊಟ್ಟರೆಂದು ತಿಳಿದುಬರುತ್ತದೆ.[3] ಕಳಿಂಗದ ವೀರರುದ್ರ ಗಜಪತಿಯ ವಿರುದ್ಧದ ದಂಡಯಾತ್ರೆಗೆ ಮೊದಲು ಕೃಷ್ಣದೇವರಾಯ ಶೃಂಗೇರಿ ಗುರುಗಳಿಂದ ಆಶೀರ್ವಾದ ಪಡೆದನೆಂದು ನಮಗೆ ಗೊತ್ತಾಗುತ್ತದೆ. ಅವನು ಶ್ರೀಮಠಕ್ಕೆ ಬಾರಕೂರು ರಾಜ್ಯದ ಹುಯ್ಯೂರು ಗ್ರಾಮವನ್ನು ನೀಡಿದುದಲ್ಲದೆ,[4]

---

[1] E. C. VI. Sg. 1. ಈ ಶಾಸನದ ಕೆಳಗೆ ಪಾಂಡ್ಯಚಕ್ರವರ್ತಿ ಶ್ರೀ ಕಿಕ್ಕಯಿತಯಿಯು ಶಾಂತಲಿಗೆ ನಾಡಿನ ಹೊಸಪೂರು ಗ್ರಾಮವನ್ನು ದತ್ತಿಬಿಟ್ಟನೆಂದು ತಿಳಿಸುವ ಶಾಸನವಿದೆ. M.A.R. 1916, p. 57

[2] E. C. VI. Koppa. 49

[3] M.A.R. 1934, No. 28

[4] Sg.R. 8 ಮತ್ತು 9

ಬೇರೆಯವರಿಗೆ ಸೇರಿಹೋಗಿದ್ದ ಗವತೂರು, ಗಾಜನೂರು, ಮಂಡಲಿ, ಹರಕೇರ, ಶಿವಮೊಗ್ಗ ಮತ್ತು ಸೊಳ್ಳೆಬೈಲುಗಳನ್ನು ಶೃಂಗೇರಿ ಮಠಕ್ಕೆ ಪುನಃ ಸಂಪಾದಿಸಿ ಕೊಟ್ಟನೆಂದೂ ಗ್ರಾಮಾಧಿಕಾರಿಗಳೆಲ್ಲರೂ ಶೃಂಗೇರಿ ಸಂಸ್ಥಾನಾಧಿಪತಿಗಳನ್ನು ತಮ್ಮ ಗುರುಗಳೆಂದು ಭಾವಿಸಿ ಅವರಿಗೆ ವಿಧೇಯರಾಗಿ ನಡೆದುಕೊಳ್ಳಬೇಕೆಂದು ಆಜ್ಞೆ ಮಾಡಿದನೆಂದೂ ತಿಳಿದುಬರುತ್ತದೆ.[5] ಪೆನುಕೊಂಡದಿಂದ ಆಳುತ್ತಿದ್ದ ಒಂದನೆಯ ಶ್ರೀರಂಗರಾಯನೂ ಕ್ರಿ.ಶ. ೧೫೭೩ರಲ್ಲಿ ಶೃಂಗೇರಿ ಪೀಠಕ್ಕೆ ದಾನವೊಂದನ್ನು ನೀಡಿದನೆಂದು ನಮಗೆ ಗೊತ್ತಾಗುತ್ತದೆ.[6]

ಈ ಹಿಂದೆ ತಿಳಿಸಿದ ಎಲ್ಲಾ ಆಧಾರಗಳ ಮೇಲೆ ಶೃಂಗೇರಿ ಸಂಸ್ಥಾನದ ಅಧಿಪತಿಗಳಿಗೂ ವಿಜಯನಗರದ ದೊರೆಗಳಿಗೂ ಇದ್ದ ನಿಕಟಸಂಬಂಧವನ್ನು ನಾವು ಅರಿಯಬಹುದಾಗಿದೆ. ಶೃಂಗೇರಿ ಸಂಸ್ಥಾನಕ್ಕೆ ವಿಜಯನಗರದ ದೊರೆಗಳು ಅನೇಕ ದತ್ತಿಗಳನ್ನು ಬಿಟ್ಟರು; ಇಲ್ಲಿನ ಆಚಾರ್ಯರ ದರ್ಶನವನ್ನು ಹೊಂದಲು ಮತ್ತು ಆಶೀರ್ವಾದ ಪಡೆಯಲು ಇಲ್ಲಿಗೆ ಭೇಟಿಕೊಟ್ಟರು; ಅನೇಕ ಅಗ್ರಹಾರಗಳನ್ನು ಸ್ಥಾಪಿಸಿದರು.

ಕ್ರಿ.ಶ. ೧೫೬೫ರಲ್ಲಿ ವಿಜಯನಗರಸಾಮ್ರಾಜ್ಯದ ಪತನಾನಂತರ ದೇಶದಲ್ಲಿ ಅರಾಜಕತೆಯುಂಟಾಯಿತು. ಇದರಿಂದಾಗಿ ಶೃಂಗೇರಿ ಸಂಸ್ಥಾನ ತನಗೆ ಸೇರಿದ್ದ ಅನೇಕ ಪ್ರದೇಶಗಳನ್ನು ಕಳೆದುಕೊಳ್ಳಬೇಕಾಯಿತಾದರೂ, ಕರ್ನಾಟಕದ ರಾಜರು, ಅದರಲ್ಲಿಯೂ ವಿಶೇಷವಾಗಿ ಕೆಳದಿಯ ನಾಯಕರು, ಸಂಸ್ಥಾನದ ರಕ್ಷಣೆಗಾಗಿ ಟೊಂಕಕಟ್ಟಿ ನಿಂತರು. ಕೆಳದಿಯ ನಾಯಕರು ವೀರಶೈವ ಮತಕ್ಕೆ ಸೇರಿದವರಾಗಿದ್ದರೂ ಶೃಂಗೇರಿ ಪೀಠಕ್ಕೆ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರೆಂದು ನಮಗೆ ಗೊತ್ತಾಗುತ್ತದೆ. ಸದಾಶಿವನಾಯಕನ ಆಳ್ವಿಕೆಯ ಸಮಯದಲ್ಲಿ ಶೃಂಗೇರಿ ಮಠಕ್ಕೂ ಕೆಳದಿ ನಾಯಕರಿಗೂ ಸಂಪರ್ಕವಾರಂಭವಾಯಿತು. ಒಂದನೆಯ ವೆಂಕಟಪ್ಪನಾಯಕ (ಕ್ರಿ.ಶ. ೧೫೮೬–೧೬೨೯) ಶೃಂಗೇರಿ ಪೀಠದ ಒಂದನೆಯ ಅಭಿನವ ನರಸಿಂಹಭಾರತಿ ಸ್ವಾಮಿಗಳನ್ನು ಆಹ್ವಾನಿಸಿ ಹಸಿರುಧ್ವಜವೇ ಮೊದಲಾದ ಕಾಣಿಕೆಗಳನ್ನಿತ್ತು ಸನ್ಮಾನಿಸಿದ. ಶ್ರೀಮಠದ ಕಟ್ಟಡಗಳನ್ನು ವಿಸ್ತರಿಸಿದುದು ಮಾತ್ರವಲ್ಲದೆ ಇವನು ಅಗ್ರಹಾರವೊಂದನ್ನು ಕಟ್ಟಿಸಿ, ಐವತ್ತು ವಗೋಡಗಳಿಗಿಂತ ಹೆಚ್ಚು ಆದಾಯ ಬರುವ ಮುಕ್ಕನಾಡಿನ ಪ್ರದೇಶಗಳನ್ನು ಕೊಟ್ಟ.[7] ತನ್ನ ವಶದಿಂದ ಬಿಟ್ಟುಹೋಗಿದ್ದ ಪ್ರದೇಶಗಳನ್ನು ಪುನಃ ಪಡೆಯುವಲ್ಲಿ ಶೃಂಗೇರಿ ಮಠಕ್ಕೆ ಇವನು ಬಹುವಾಗಿ ಸಹಾಯಮಾಡಿದ ಶೃಂಗೇರಿ ಸಂಸ್ಥಾನದ ಶ್ರೀಗಳು ನಾಯಕನಿಗೆ 'ವೈದಿಕ-ಅದ್ವೈತ-ಸಿದ್ಧಾಂತ-ಪ್ರತಿಷ್ಠಾಪಕ' ಎಂಬ ಬಿರುದನ್ನು ನೀಡಿದ್ದರೆಂಬು

---

[5] M.A.R. 1904, No. 32

[6] M.A. R. 1916, p. 62

[7] E. C. VI· Sg 5 ಮತ್ತು 11, M.A.R· 1928, pp. 15 ff

ದಾಗಿ ನಮಗೆ ತಿಳಿದುಬರುತ್ತದೆ. ಕೆಳದಿ ಸಿಂಹಾಸನವನ್ನು ವೀರಭದ್ರ ಏರಿದ ಸ್ವಲ್ಪ ಕಾಲದಲ್ಲಿಯೇ ಕಳಸದ ಪಾಳೆಯಗಾರನಾದ ಭೈರವನೆಂಬವನು ನಾಯಕನ ಅನೇಕ ಪ್ರದೇಶಗಳನ್ನು ಆಕ್ರಮಿಸಿದ. ಹೀಗೆ ಆಕ್ರಮಿಸಲಾದ ಪ್ರದೇಶಗಳಲ್ಲಿ ಶೃಂಗೇರಿಯೂ ಒಂದು. ಭೈರವ ಶೃಂಗೇರಿ ಶ್ರೀಗಳು ಮಠದ ಎಲ್ಲಾ ಸಂಪತ್ತುಗಳನ್ನೂ ತನಗೆ ತಂದು ಒಪ್ಪಿಸಬೇಕೆಂದು ಅಪ್ಪಣೆ ಮಾಡಿದ. ಈ ಆಜ್ಞೆಯನ್ನು ಶ್ರೀಗಳು ತಿರಸ್ಕರಿಸಿದರು. ಮಠದ ಸಹಾಯಕ್ಕಾಗಿ ಬಂದ ನಾಯಕನ ಸೈನ್ಯವನ್ನು ಸೋಲಿಸಿ ಭೈರವ ಶೃಂಗೇರಿಗೆ ಮೂರು ಬಾರಿ ದಾಳಿಯಿಟ್ಟು ಮಠದ ಸಂಪತ್ತನ್ನು ಲೂಟಿಹೊಡೆದನೆಂದು ನಮಗೆ ತಿಳಿದುಬರುತ್ತದೆ. ಕ್ರಿ.ಶ. ೧೬೩೦ರಲ್ಲಿ ವೀರಭದ್ರ ನಾಯಕ (ಕ್ರಿ.ಶ. ೧೬೨೯–೪೫) ಶೃಂಗೇರಿಗೆ ಭೇಟಿಕೊಟ್ಟು ಅನೇಕ ದತ್ತಿಗಳನ್ನು ಬಿಟ್ಟ. ತೀರ್ಥಹಳ್ಳಿಮಠದ ಸ್ವಾಮಿಗಳು ತಮಗೆ ಅಧಿಕಾರವಿಲ್ಲದ ಚಿಹ್ನೆಗಳನ್ನು ಉಪಯೋಗಿಸುತ್ತಿದ್ದುದನ್ನು ನಾಯಕ ನಿಲ್ಲಿಸಿದನಲ್ಲದೆ, ಬೇರೆ ಸಂನ್ಯಾಸಿಗಳ ಅವಿಧೇಯತೆಯ ವಿಚಾರದಲ್ಲಿ ನಾಯಕನಿಗೆ ತಿಳಿಸದೆಯೇ ಶ್ರೀಮಠದ ಗುರುಗಳು ಯಾವ ಕ್ರಮವನ್ನು ಬೇಕಾದರೂ ಕೈಗೊಳ್ಳಬಹುದೆಂದು ತಿಳಿಸಿದನೆಂದು ಅವನು ಶ್ರೀಮಠಕ್ಕೆ ಬರೆಸಿದ ಪತ್ರವೊಂದರಿಂದ ಗೊತ್ತಾಗುತ್ತದೆ.[8] ಕೂಡಲಿ ಮಠದ ಸ್ವಾಮಿಗಳು ಬಿಜಾಪುರದ ಅಧಿಕಾರಿಗಳ ಮೇಲೆ ತಮ್ಮ ಪ್ರಭಾವ ಬೀರಿ ಹರಕೆರೆ ಮತ್ತು ಮುಂಡಲಿ ಗ್ರಾಮಗಳ ಒಡೆತನವ ಪಡೆಯಲು ಯತ್ನಿಸಿದಾಗ, ಶೃಂಗೇರಿ ಮಠದ ಸಚ್ಚಿದಾನಂದಭಾರತಿಗಳಿಗೆ ಸೇರಿದ ಯಾವ ಪ್ರದೇಶವನ್ನೂ ಕೂಡ ಕದಲಿಸಕೂಡದೆಂಬುದಾಗಿ ಬಿಜಾಪುರದ ಖೊಡಯಿ ಸಮುಲಖಾನ್, ಆದಂ ಅಫಜಲಖಾನ್ ಮತ್ತು ಖಾನ್ ಆಲಿಷಾರಿಗೆ ಪತ್ರ ಬರೆಸಿದನೆಂದು ನಮಗೆ ತಿಳಿದುಬರುತ್ತದೆ.[9] ಕೆಳದಿ ವಂಶದ ಶಿವಪ್ಪನಾಯಕ (೧೬೪೫–೬೦) ಶ್ರೀಮಠಕ್ಕೆ ಸೇರಿದ ಪ್ರದೇಶಗಳಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ಸರಿಪಡಿಸಿದನಲ್ಲದೆ, ವಿದ್ಯಾರಣ್ಯಪುರ ಅಗ್ರಹಾರವನ್ನು ಜೀರ್ಣೋದ್ಧಾರಮಾಡಿ, ಅಲ್ಲಿಯ ಸದಾಶಿವ ದೇವಾಲಯದ ಕಟ್ಟಡವನ್ನು ಪೂರ್ಣಗೊಳಿಸಲು ವ್ಯವಸ್ಥೆಮಾಡಿದನು. ಶೃಂಗೇರಿಯನ್ನು ತ್ಯಜಿಸಿ ಕಾರ್ಕಳಕ್ಕೆ ಹೋಗಿದ್ದ ಎಲ್ಲಾ ವಿದ್ವಾಂಸರನ್ನೂ ಹಿಂದಕ್ಕೆ ಕರೆಸಿದ. ಸಂಗಮ ಮಠದ ನರಸಿಂಹಯೋಗಿಗಳು ತಮ್ಮ ಗುರುಗಳಿಗೆ ಅವಿಧೇಯರಾಗಿದ್ದರೆಂಬ ಕಾರಣದಿಂದ ಅವರ ಭೂಮಿಕಾಣಿಗಳೆಲ್ಲವನ್ನೂ ಶೃಂಗೇರಿ ಮಠದ ವಶಕ್ಕೆ ಒಪ್ಪಿಸಿದ. ತಮಗೆ ಬರಬೇಕಾಗಿದ್ದ ಬಾಕಿಗಳೆಲ್ಲವನ್ನು ವಸೂಲುಮಾಡಿಕೊಳ್ಳಲು ಶೃಂಗೇರಿ ಸಂಸ್ಥಾನಕ್ಕೆ ಸರ್ವಾಧಿಕಾರವನ್ನು ನೀಡಿದ. ಭದ್ರಪ್ಪನಾಯಕ ಕೆರೆಹಳ್ಳಿ ಮತ್ತು ಗವತೂರು ಗ್ರಾಮಗಳನ್ನು ಸಂಸ್ಥಾನಕ್ಕೆ ಪುನಃ ಕೊಡಿಸಿದನೆಂದು ತಿಳಿದುಬರುತ್ತದೆ. ಅಂತೆಯೇ

---

[8] M.A.R. 1916, p. 65

[9] ಅದೇ

ಕ್ರಿ.ಶ. ೧೬೨೫-೨೬ರಲ್ಲಿ ದೇವಪುರ ಮತ್ತು ದಂಡೂರನ್ನು ತರೀಕೆರೆಯ ಹನುಮಪ್ಪ ನಾಯಕನೂ ಅಮೂಲ್ಯ ಶಿಲೆಗಳಲ್ಲಿ ಕೆತ್ತಲಾದ ಅಪೂರ್ವ ವಿಗ್ರಹಗಳನ್ನು ಮೈಸೂರಿನ ಕಂಠೀರವ ನರಸರಾಜ ಒಡೆಯರೂ ನೀಡಿದರೆಂದು ನಮಗೆ ಗೊತ್ತಾಗುತ್ತದೆ. ಕ್ರಿ.ಶ. ೧೬೪೦ರಲ್ಲಿ ರಣದುಲ್ಲಾಖಾನ ಶೃಂಗೇರಿ ಶ್ರೀಗಳಿಗೆ ತನ್ನ ಪ್ರಣಾಮಗಳನ್ನು ಸಲ್ಲಿಸಿ, ಶಿವಮೊಗ್ಗ ಸೀಮೆಯಲ್ಲಿ ಬೇರೆಯವರು ಆಕ್ರಮಿಸ ಲಾದ ಮಠದ ಪ್ರದೇಶಗಳನ್ನು ಪುನಃ ಶೃಂಗೇರಿ ಮಠಕ್ಕೇ ಕೊಡಿಸಿದನಲ್ಲದೆ, ಶ್ರೀಗಳ ಅನುಜ್ಞೆಗನುಸಾರವಾಗಿ ನಡೆಯಬೇಕೆಂದು ತನ್ನ ಅಧಿಕಾರಿಗಳಿಗೆ ತಿಳಿಸಿದ ನೆಂದೂ ಎಲ್ಲಾ ಸಮಯದಲ್ಲಿಯೂ ಸಂಸ್ಥಾನದ ಸಹಾಯಕ್ಕೆ ತಾನು ಸಿದ್ಧ ನೆಂದು ತಿಳಿಸಿದನೆಂದೂ ನಮಗೆ ಆತನ ಸನದಿಸಿಂದ ಗೊತ್ತಾಗುತ್ತದೆ.[10] ಸೋಮ ಶೇಖರ ನಾಯಕ ಶ್ರೀಮಲಹಾನಿಕರೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ ನೂರಾರು ಪಗೋಡಗಳನ್ನು ಕೊಟ್ಟನೆಂದು ಮತ್ತು ಮಠದ ದತ್ತಿಗಳೆಲ್ಲವನ್ನೂ ಊರ್ಜಿತಗೊಳಿಸಿದನೆಂದು ತಿಳಿದುಬರುತ್ತದೆ.[11] ರಾಣಿ ಚನ್ನಮ್ಮಾಜಿಯ ಪ್ರಾರ್ಥ ನೆಯ ಮೇರೆಗೆ ಶೃಂಗೇರಿ ಮಠದ ಶ್ರೀಗಳು ಬೇಲೂರಿಗೆ ಭೇಟಿಕೊಟ್ಟರು. ಅವಳ ಮಂತ್ರಿಯೊಬ್ಬ ಕಿಗ್ಗದ ಶೃಂಗೇಶ್ವರ ದೇವಾಲಯಕ್ಕೆ ಉತ್ಸವ ವಿಗ್ರಹವನ್ನು ಕೊಟ್ಟ. ಮಠದ ಉಪಯೋಗಕ್ಕಾಗಿ ಕೊಳ್ಳುವ ಪದಾರ್ಥಗಳ ಮೇಲೆ ತೆರಿಗೆ ವಿಧಿಸಕೂಡದೆಂದು ತನ್ನ ಅಧಿಕಾರಿಗಳಿಗೆ ಚನ್ನಮ್ಮಾಜಿ ಅಪ್ಪಣೆ ಮಾಡಿದ ಳೆಂದು ನಮಗೆ ತಿಳಿದುಬರುತ್ತದೆ.[12] ಸಂಸ್ಥಾನದ ಬಾಕಿ ವಸೂಲಿಯ ಸಂಬಂಧದಲ್ಲಿ ಮಠಕ್ಕೆ ಸಹಾಯಮಾಡಬೇಕೆಂದು ತನ್ನ ಅಧಿಕಾರಿಗಳಿಗೆ ನಿರೂಪ ಕಳಿಸಿದನೆಂದು ಗೊತ್ತಾಗುತ್ತದೆ. ಕ್ರಿ.ಶ. ೧೬೮೬ರಲ್ಲಿ ಉಂಟಾದ ತೀವ್ರಕ್ಷಾಮ ಸಮಯದಲ್ಲಿ ಸಹಸ್ರಾರು ಮಂದಿಗೆ ಊಟ ವಸತಿ ಮುಂತಾದ ಸೌಕರ್ಯಗಳನ್ನು ಶೃಂಗೇರಿ ಮಠ ಒದಗಿಸಿತೆಂದು ಗುರುವಂಶ ಕಾವ್ಯದಿಂದ ತಿಳಿದುಬರುತ್ತದೆ. ಸಚ್ಚಿದಾನಂದ ಭಾರತಿಗಳು ಒಂದನೆಯ ಬಸವಪ್ಪನ ರಾಜಧಾನಿಗೆ ಭೇಟಿಕೊಟ್ಟರು. ನೆರೆಂಕಿಯ (ಹಾಲೆಂಕಿ) ಮುಖ್ಯಸ್ಥ ಬಲ್ಲಾಳ, ಚಾವುಟ ಪ್ರಮುಖರು, ಹೆಬ್ರಿಯ ಬಲ್ಲಾಳ, ತರೀಕೆರೆಯ ಪಟ್ಟಭೈರವ, ಬನವಾಸಿ ಪ್ರಮುಖರು ಮುಂತಾದವರು ಶ್ರೀಗಳನ್ನು ತಮ್ಮ ನಗರಗಳಿಗೆ ಬರಮಾಡಿಕೊಂಡು ಸತ್ಕರಿಸಿದರೆಂದು ಗೊತ್ತಾಗು ತ್ತದೆ. ಸೋಮಶೇಖರನ ಕೋರಿಕೆಯಂತೆ ಶ್ರೀಗಳು ಬಿದನೂರಿನಲ್ಲಿ ಸ್ವಲ್ಪಕಾಲ ಇದ್ದರು.[13] ಸೋಮಶೇಖನಾಯಕನೂ ಶೃಂಗೇರಿಗೆ ಭೇಟಿ ನೀಡಿದನೆಂದು ತಿಳಿದು

---

[10] M.A.R. 1934. No. 33, ಮತ್ತು Sardesai : New History of the Marathas I., p. 95.

[11] M.A.R. 1916, p. 67 ; Sg. 18.

[12] M.A.R. 1916, p. 67 ಮತ್ತು Sg. R. 18

[13] ಗುರುವಂಶಕಾವ್ಯ XIII ರಿಂದ XVIII

ಬರುತ್ತದೆ. ವೀರಶೈವ ಮತಕ್ಕೆ ಸೇರಿದ ಮಂತ್ರಿಯೊಬ್ಬ ಶೃಂಗೇರಿಯ ಮಧ್ಯದಲ್ಲಿ ಎರಡು ವೀರಶೈವ ಮಠಗಳನ್ನು ಸ್ಥಾಪಿಸಿದ. ಇದರಿಂದುಂಟಾದ ಅನೇಕ ತೊಂದರೆಗಳ ನಿವಾರಣೆಗಾಗಿ ಬಾಜಿರಾಯ ಪೇಷ್ವೆ ಆ ವೀರಶೈವ ಮಠಗಳನ್ನು ತೆಗೆಸಬೇಕೆಂದು ನಾಯಕನಿಗೆ ವರ್ತಮಾನ ಕಳುಹಿಸಿದ. ಇದೇರೀತಿಯಾಗಿ ನೆರೆ ಹೊರೆಯ ರಾಜರೂ ನಾಯಕನನ್ನು ಒತ್ತಾಯಪಡಿಸಿದರೆಂದು ಮತ್ತು ನಾಯಕ ಆ ವೀರಶೈವ ಮಠಗಳನ್ನು ತೆಗೆಸಲು ಆಜ್ಞೆ ಹೊರಡಿಸಿದ ಅನಂತರ, ಶೃಂಗೇರಿಯನ್ನೇ ಬಿಟ್ಟು ತೆರಳಿದ್ದ ಶ್ರೀಗಳು ಹಿಂದಿರುಗಿದರೆಂದೂ ಗುರುವಂಶಕಾವ್ಯದಿಂದ ನಮಗೆ ಗೊತ್ತಾಗುತ್ತದೆ.

ಕೆಳದಿ ನಾಯಕರು ವೀರಶೈವರಾಗಿದ್ದರೂ ಶೃಂಗೇರಿ ಪೀಠಕ್ಕೆ ವಿಧೇಯ ರಾಗಿದ್ದು, ಅದರ ರಕ್ಷಣೆಗಾಗಿ ಪ್ರಯತ್ನಪಟ್ಟರು. ಒಂದನೆಯ ವೆಂಕಟಪ್ಪ ನಾಯಕ ಶ್ರೀಗಳಿಂದ 'ವೈದಿಕ–ಅದ್ವೈತ–ಸಿದ್ಧಾಂತ–ಪ್ರತಿಷ್ಠಾಪಕ' ಎಂಬ ಬಿರುದನ್ನು ಪಡೆದಿದ್ದ. ರಾಣಿ ಚನ್ನಮ್ಮಾಜಿ ತನ್ನ ದತ್ತುಮಗ ಬಸವಪ್ಪನಿಗೆ ನೀಡಿದ ಬುದ್ಧಿವಾದದಿಂದ ಕೆಳದಿ ನಾಯಕರ ಮೇಲೆ ಶೃಂಗೇರಿ ಮಠದ ಪ್ರಭಾವ ವನ್ನು ನಾವು ಅರಿಯಬಹುದಾಗಿದೆ. ರಾಣಿ ವೀರಮ್ಮಾಜಿ ಶ್ರೀಗಳನ್ನು ರಾಜಧಾನಿಗೆ ಬರಮಾಡಿಕೊಂಡು ಸ್ಫಟಿಕಲಿಂಗ ಮತ್ತು ಮಾಣಿಕ್ಯಗಳಿಂದ ಮಾಡಲಾದ ಕೃಷ್ಣನ ವಿಗ್ರಹವೊಂದನ್ನು ನೀಡಿದಳಲ್ಲದೆ, ಮುನ್ನೂರು ಪಗೋಡ ಆದಾಯವಿದ್ದ ಭೂಮಿ ಕಾಣಿಗಳನ್ನೂ ಕೊಟ್ಟಳೆಂದು ನಮಗೆ ತಿಳಿದುಬರುತ್ತದೆ.

ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರರು ಶ್ರೀಗಳಿಗೆ ಶ್ರೀರಂಗಪಟ್ಟಣ ದಿಂದ ಆನೆ, ರೇಷ್ಮೆವಸ್ತ್ರವೇ ಮೊದಲಾದ ಕಾಣಿಕೆಗಳನ್ನು ಕಳುಹಿಸಿ, ಶೃಂಗಪುರ ರತ್ನಸಿಂಹಾಸನದ ಮೇಲೆ ಕುಳಿತಿರುವ ಯೋಗಸಾಮ್ರಾಜ್ಯಾಧಿಪತಿಯೆಂಬುದಾಗಿ ಶ್ರೀಗಳನ್ನು ವರ್ಣಿಸಿದರೆಂದು ಗೊತ್ತಾಗುತ್ತದೆ.[14] ಶ್ರೀಗಳನ್ನು ರಾಜಧಾನಿಗೆ ಆಹ್ವಾನಿಸಿ, ೧೨೦೦ ಪಗೋಡಗಳ ಆದಾಯವಿದ್ದ ಬೆಳವಾಡಿ ಮತ್ತು ಸುತ್ತ ಮುತ್ತಲಿನ ಪ್ರದೇಶಗಳನ್ನು ದತ್ತಿಬಿಟ್ಟರು.[15] ಆಚಾರ್ಯರ ರಾಮೇಶ್ವರ ಯಾತ್ರೆಯ ಸಮಯದಲ್ಲಿ ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಒದಗಿಸಿಕೊಡಬೇಕೆಂದು ತಮ್ಮ ಅಧಿಕಾರಿಗಳಿಗೆ ನಿರೂಪ ಕಳುಹಿಸಿದರು.

ಶೃಂಗೇರಿ ಸಂಸ್ಥಾನಕ್ಕೂ ಮರಾಠರಿಗೂ ಸಂಪರ್ಕವಿದ್ದಿತೆಂದು ನಮಗೆ ಗೊತ್ತಾಗುತ್ತದೆ. ರಾಜಾರಾಮನ ಮಗನಾದ ಇಮ್ಮಡಿ ಶಿವಾಜಿ ಅನೇಕ ಅಮೂಲ್ಯ ಉಡುಗೊರೆಗಳನ್ನು ಶ್ರೀಗಳಿಗೆ ಕಳುಹಿಸಿದನೆಂದು ಗುರುವಂಶಕಾವ್ಯ ದಿಂದ ತಿಳಿಯುತ್ತದೆ.[16] ಕ್ರಿ ಶ. ೧೭೩೮–೩೯ರಲ್ಲಿ ಕೊಲ್ಲಾಪುರ ಮರಾಠ ಶಾಖೆಯ

[14] M.A.R. 1916, p. 71
[15] M.A.R. 1923, No. 6
[16] ಗುರುವಂಶಕಾವ್ಯ XII, vv. 4–8

ಶಂಭುಛತ್ರಪತಿ ಮಠಕ್ಕೆ ವರ್ಷಕ್ಕೆ ಇನ್ನೂರು ಬೇಣಗಳ ದತ್ತಿಯೊಂದನ್ನು ಬಿಟ್ಟ. ಪೇಷ್ವೆ ಬಾಜೀರಾಯ ಮಠದ ರಕ್ಷಣೆಗಾಗಿ ನಾಯಕನಿಗೆ ಬರೆದ ಪತ್ರವನ್ನು ಈ ಹಿಂದೆ ವಿವರಿಸಲಾಗಿದೆ. ಕ್ರಿ.ಶ. ೧೭೩೯-೪೦ರಲ್ಲಿ ಅಗ್ರಪೂಜೆ ಮೊದಲಾದ ಧಾರ್ಮಿಕ ವಿಧಿಗಳಲ್ಲಿ ಶೃಂಗೇರಿ ಮಠಕ್ಕೇ ಮೊದಲ ಪ್ರಾಧಾನ್ಯ ಕೊಡಬೇಕೆಂದು ಬಾಲಾಜಿರಾಯ ಬಲ್ಲಾಳ ಪ್ರಧಾನ ತಿಳಿಸಿದನೆಂದು[17] ಮತ್ತು ದೇವಿ ಶಾರದೆ ಮತ್ತು ಆಚಾರ್ಯರಿಗೆ ಅಮೂಲ್ಯ ಕಾಣಿಕೆಗಳನ್ನು ಕಳುಹಿಸಿದನೆಂದು ಗೊತ್ತಾಗುತ್ತದೆ. ಪೇಷ್ವೆ ಮಾಧವರಾಯ ಬಲ್ಲಾಳ ಪ್ರಧಾನ ಶ್ರೀಗಳ ಅಗ್ರಪೂಜೆ ಗೋಸ್ಕರವಾಗಿ ವಾರ್ಷಿಕ ದತ್ತಿಯೊಂದನ್ನು ಸ್ಥಾಪಿಸಿದ. ಪೇಷ್ವೆ ರಘುನಾಥ ರಾಯನ ಆಹ್ವಾನವನ್ನು ಮನ್ನಿಸಿ ಕ್ರಿ.ಶ. ೧೭೬೦-೬೧ರಲ್ಲಿ ಶ್ರೀಗಳು ಪುಣೆಗೆ ತೆರಳಿದರು. ಆ ಸಮಯದಲ್ಲಿ ಮೈಸೂರನ್ನಾಳುತ್ತಿದ್ದ ಹೈದರಾಲಿ ಆಚಾರ್ಯರಿಗೆ ಆನೆ, ಕುದುರೆ, ಒಂಟೆ, ಪಾಲಕಿ ಮತ್ತು ರೇಷ್ಮೆವಸ್ತ್ರವೇ ಮೊದಲಾದ ಕಾಣಿಕೆಗಳನ್ನು ಮಾತ್ರವಲ್ಲದೆ, ಪ್ರಯಾಣದ ಖರ್ಚುಗಳಿಗೋಸ್ಕರವಾಗಿ ೧೦,೫೦೦ ರೂಪಾಯಿಗಳನ್ನು ಕಳುಹಿಸಿ ಶ್ರೀಗಳ ಬಗ್ಗೆ ತನಗಿದ್ದ ಆದರ, ಗೌರವಭಾವನೆಗಳನ್ನು ವ್ಯಕ್ತಪಡಿಸಿದನೆಂದು ತಿಳಿದುಬರುತ್ತದೆ.[18] ಪೇಷ್ವೆ ಮಾಧವರಾಯ ಇನ್ನೂರು ರೂಪಾಯಿಗಳಿಂದ ಒಂದು ಸಾವಿರದ ಇನ್ನೂರು ರೂಪಾಯಿಗಳಿಗೆ ಮಠದ ದತ್ತಿಯನ್ನು ಊರ್ಜಿತಗೊಳಿಸಿದ. ಕ್ರಿ.ಶ. ೧೭೬೬ರಲ್ಲಿ ಹೈದರನಿಗೂ ಪೇಷ್ವೆ ಮಾಧವರಾಯ ಮತ್ತು ನಿಜಾಮ್ ಅಲಿಗೂ ಯುದ್ಧ ನಡೆಯುತ್ತಿತ್ತು. ಇಂಥ ಸಮಯದಲ್ಲಿಯೂ ಹೈದರ್ ಶ್ರೀಗಳಿಗೆ ಪತ್ರ ಬರೆಸಿ ಮಠದ ರಕ್ಷಣೆಯನ್ನು ತನ್ನ ಅಧಿಕಾರಿಗಳು ಮಾಡುವರೆಂದು ತಿಳಿಸಿದನೆಂದು ಗೊತ್ತಾಗುತ್ತದೆ. ಮಠಕ್ಕೆ ಎಲ್ಲ ರೀತಿಯ ಸೌಕರ್ಯಗಳನ್ನೂ ಒದಗಿಸಿಕೊಡಬೇಕೆಂದು ತನ್ನ ಅಧಿಕಾರಿಗಳಿಗೆ ಹೈದರ್ ನಿರೂಪ ಕಳುಹಿಸಿದ.

ಹೈದರನ ಮಗನಾದ ಟೀಪುವಿಗೂ ಮರಾಠರು, ನಿಜಾಂ ಮತ್ತು ಇಂಗ್ಲಿಷರಿಗೂ ವಿರಸವಿತ್ತು. ಮೂರನೆಯ ಮೈಸೂರು ಯುದ್ಧದ (೧೭೯೦-೯೨) ಸಮಯದಲ್ಲಿ ಪರಶುರಾಮ ಭಾವೆ ಬಿದನೂರಿನೆಡೆಗೆ ಹೊರಟ. ಒಬ್ಬ ಪಟವರ್ಧನನ ನೇತೃತ್ವದಲ್ಲಿಯ ಅವನ ಸೈನ್ಯಗಳು ಶೃಂಗೇರಿಯ ದೇವಾಲಯಗಳನ್ನು ಲೂಟಿ ಹೊಡೆದರಲ್ಲದೆ, ದೇವಿ ಶಾರದೆಯ ವಿಗ್ರಹವನ್ನು ಪದಚ್ಯುತಗೊಳಿಸಿ ಅಪವಿತ್ರ ಮಾಡಿದವು. ಲೂಟಿಹೊಡೆದ ಸಂಪತ್ತು ಸುಮಾರು ಅರವತ್ತು ಲಕ್ಷ ರೂಪಾಯಿ ಬೆಲೆಬಾಳುತ್ತಿತ್ತೆಂದು ತಿಳಿದುಬರುತ್ತದೆ. ಈ ಲೂಟಿಯ ಸಮಯದಲ್ಲಿ ಅನೇಕ ನಿರಪರಾಧಿ ಬ್ರಾಹ್ಮಣ ಪೂಜಾರಿಗಳು ಕೊಲ್ಲಲ್ಪಟ್ಟರು. ಈ ಸಂದರ್ಭದಲ್ಲಿ ಟೀಪು

17 Sg. R. 68

18 M.A.R. 1916, p. 73

ಶ್ರೀಗಳಿಗೆ ಬರೆದ ಪತ್ರದಿಂದ, ಶ್ರೀಗಳ ಬಗ್ಗೆ ಅವನಿಗಿದ್ದ ಆದರ, ಗೌರವ ಪೂಜ್ಯ ಭಾವನೆಗಳು ವ್ಯಕ್ತವಾಗುತ್ತವೆ. ಶ್ರೀಗಳಂತಹವರಿಗೆ ತೊಂದರೆಯುನ್ನುಂಟು ಮಾಡುವುದು ಸಂಪತ್ತಿನ ನಾಶಕ್ಕೂ ಕುಲಕ್ಷಯಕ್ಕೂ ಕಾರಣವಾಗುತ್ತದೆ ಎಂಬುದಾಗಿ ಟೀಪು ತನ್ನ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾನೆ. ದೇವಾಲಯದ ಜೀರ್ಣೋದ್ಧಾರ ಮತ್ತು ಶಾರದಾ ವಿಗ್ರಹದ ಪ್ರತಿಷ್ಠಾಪನೆಗಳಿಗೆಂದು ನಾನೂರು ರಹತಿಗಳನ್ನೂ ಪಾಲಕಿ, ಆನೆ, ಅಮೂಲ್ಯ ವಸ್ತ್ರಾಭರಣಗಳನ್ನೂ ಕಳುಹಿಸಿ ದನೆಂದು ತಿಳಿದುಬರುತ್ತದೆ.[19] ಹಲವಾರು ಸಂದರ್ಭಗಳಲ್ಲಿ ಟೀಪು ಶೃಂಗೇರಿ ಮಠದ ಗುರುಗಳಿಂದ ಆಶೀರ್ವಾದ ಪಡೆದನೆಂಬುದಾಗಿ ತಿಳಿದುಬರುತ್ತದೆ. ತಾನು ದೇವರ ಕೃಪೆ, ಶ್ರೀಗಳ ಆಶೀರ್ವಾದ ಮತ್ತು ಸ್ವಬಾಹುಬಲ, ಈ ಮೂರು ಮೂಲ ಶಕ್ತಿಗಳನ್ನು ಅವಲಂಬಿಸಿದ್ದೇನೆಂದು ಶ್ರೀಗಳಿಗೆ ಬರೆದ ಪತ್ರವೊಂದರಲ್ಲಿ ತಿಳಿಸುತ್ತಾನೆ.[20] ತನ್ನ ವಿಜಯಕ್ಕಾಗಿ ಶ್ರೀಗಳು ಶತಚಂಡಿ ಮತ್ತು ಸಹಸ್ರಚಂಡಿ ಜಪ ಮತ್ತು ಹೋಮಗಳನ್ನು ಮಾಡಬೇಕೆಂದು ಟೀಪು ಶ್ರೀಗಳನ್ನು ಪ್ರಾರ್ಥಿಸಿದನೆಂದು ಮತ್ತು ಆ ಕಾರ್ಯಗಳಿಗಾಗಿ ಎಲ್ಲಾ ತೆರನಾದ ಸಹಾಯ, ಸೌಲಭ್ಯಗಳನ್ನೊದಗಿಸುವಂತೆ ತನ್ನ ಅಧಿಕಾರಿಗಳಿಗೆ ಅಪ್ಪಣೆಮಾಡಿದನೆಂದು ನಮಗೆ ತಿಳಿದುಬರುತ್ತದೆ.[21] ತನಗೆ ವಿಜಯ ದೊರಕಿದುದು ಮತ್ತು ಮಳೆ ಬೆಳೆ ಸಕಾಲದಲ್ಲಿ ಆದುದು ಶ್ರೀಗಳು ಆಚರಿಸಿದ ಜಪಹೋಮಾದಿಗಳ ಅದ್ಭುತ ಪರಿಣಾಮವೆಂಬುದಾಗಿ ತನ್ನ ಪತ್ರವೊಂದರಲ್ಲಿ ಟೀಪು ವರ್ಣಿಸುತ್ತಾನೆ.[22] ಶ್ರೀಗಳನ್ನು ತನ್ನ ರಾಜಧಾನಿಗೆ ಬರಮಾಡಿಕೊಂಡು ಸತ್ಕರಿಸಿದನೆಂದೂ ಗೊತ್ತಾಗುತ್ತದೆ. ಶ್ರೀಗಳು ಇದ್ದಲ್ಲಿ ಸುಖ ಸಂಪತ್ತುಗಳು ನಿಸ್ಸಂದೇಹವಾಗಿ ನೆಲಸುತ್ತವೆಂಬುದಾಗಿ ಟೀಪು ತಿಳಿಸುತ್ತಾನೆ. ಆಚಾರ್ಯರು ಶೃಂಗೇರಿಯಲ್ಲಿ ಇಲ್ಲದಿರುವಾಗಲೂ ಮಠದ ಧಾರ್ಮಿಕ ವಿಧಿ, ವಿಧಾನ ಮತ್ತು ಉತ್ಸವಾದಿಗಳು ಚಾಚೂ ತಪ್ಪದೆ ನಡೆಯುವಂತೆ ವ್ಯವಸ್ಥೆಮಾಡಬೇಕೆಂದು ನಗರದ ಅಸಾಫನಿಗೆ ಟೀಪು ಅಪ್ಪಣೆಮಾಡಿದ್ದನೆಂದು ಗೊತ್ತಾಗುತ್ತದೆ. ೧೭೯೧ ಮತ್ತು ೧೭೯೮ರ ನಡುವೆ ಟೀಪು ಬರೆಸಿದ ಇಪ್ಪತ್ತೊಂಬತ್ತು ಪತ್ರಗಳೂ, ಶೃಂಗೇರಿ ಸಂಸ್ಥಾನದ ಬಗ್ಗೆ ಅವನಿಗಿದ್ದ ನಿಷ್ಠೆ, ಶ್ರದ್ಧೆಗಳ ಪ್ರತೀಕವಾಗಿವೆ ಎಂದು ಹೇಳಬಹುದು.

ಟೀಪುವಿನ ಪತ್ರಗಳೂ ಶೃಂಗೇರಿ ಗುರುಗಳ ಆಶೀರ್ವಾದ ಮತ್ತು ಅನುಗ್ರಹಕ್ಕಾಗಿ ಹಾತೊರೆಯುತ್ತಿದ್ದರೆಂಬುದು ಗಮನಾರ್ಹ ಸಂಗತಿಯಾಗಿದೆ. ಹೈದರಾಬಾದಿನ ಅಸಾಫ್‌ಜಾಹಿ ವಂಶದ ಸ್ಥಾಪಕನಾದ ನಿಜಾಮ್-ಉಲ್-

---

19 Sg. R. 47 ರಿಂದ 50 ಮತ್ತು 59; M.A.R. 1916, pp. 74–6

20 Sg. R. 65

21 ಅದೇ. 51 ರಿಂದ 53

22 ಅದೇ. 66

ಮುಲ್ಕ್ ಎಂಬವನು ಶೃಂಗೇರಿ ಮಠದ ಗುರುಗಳಿಗೆ ಅನೇಕ ಫರ್ಮಾನ, ಸನದು ಗಳನ್ನೂ ಮತ್ತು ಕೆಲವು ವಿಶೇಷ ಸೌಲಭ್ಯಗಳನ್ನೂ ನೀಡುವುದರ ಮೂಲಕ ತನ್ನ ಗೌರವಗಳನ್ನು ತೋರಿದ. ಅವನ ಈ ನೀಡಿಕೆಗಳನ್ನು ನಿಜಾಂ ಅಲಿ ಖಾನ್ ಊರ್ಜಿತಗೊಳಿಸಿದನೆಂದು ಗೊತ್ತಾಗುತ್ತದೆ.[23]

ಕ್ರಿ.ಶ. ೧೭೮೨–೮೩ರಲ್ಲಿ ಹಿಂದೂರಾವ್ ಘೋರ್ಪಡೆ ಇಲ್ಲಿಯ ಮಠಕ್ಕೆ ನೂರು ವೊಯಿನಗಳ ವರ್ಷಾಶನವನ್ನೂ, ೧೭೮೬–೮೭ರಲ್ಲಿ ದೌಲತ್‌ರಾವ್ ಹಿಂದೂರಾವ್ ಘೋರ್ಪಡೆ ತಿಮ್ಮನಹಟ್ಟಿ ಗ್ರಾಮವನ್ನೂ ನೀಡಿದರೆಂದು ನಮಗೆ ತಿಳಿದುಬರುತ್ತದೆ. ೧೭೯೩-೯೪ರಲ್ಲಿ ಮಹದಾಜಿ ಸಿಂಧೆ ಪಿಂಪಾಲಗಡ ವನ್ನು ದಾನವಿತ್ತ. ಕ್ರಿ.ಶ. ೧೮೦೦ರಲ್ಲಿ ಪೇಷ್ವೆ ಇಮ್ಮಡಿ ಬಾಜಿರಾಯ ಎಲ್ಲ ಧಾರ್ಮಿಕ ಸಭೆಗಳಲ್ಲಿಯೂ ಶೃಂಗೇರಿ ಪೀಠಕ್ಕೇ ಅಗ್ರಪೂಜೆ ಸಲ್ಲಬೇಕೆಂದು ನಿರ್ಧರಿಸಿ, ಅಗ್ರಪೂಜೆಯನ್ನು ಸ್ವೀಕರಿಸಲು ತಮ್ಮ ಪ್ರತಿನಿಧಿಗಳನ್ನು ಶ್ರೀಗಳು ತನ್ನ ಆಸ್ಥಾನಕ್ಕೆ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿದನೆಂದು ಗೊತ್ತಾಗುತ್ತದೆ.[24] ಈಸ್ಟ್ ಇಂಡಿಯ ಕಂಪೆನಿಯ ರಹದಾರಿಯೊಂದರಿಂದ ಪೇಷ್ವೆಗಳಿಗೂ ಶೃಂಗೇರಿ ಪೀಠಕ್ಕೂ ಇದ್ದ ನಿಕಟಸಂಪರ್ಕದ ಅರಿವು ನಮಗೆ ಆಗುತ್ತದೆ.

ಆನೆ ಮತ್ತು ಆಭರಣಾದಿ ಕಾಣಿಕೆಗಳನ್ನು ಶ್ರೀಗಳಿಗೆ ನೀಡುವುದರ ಮೂಲಕ ಶೃಂಗೇರಿ ಪೀಠದ ಬಗ್ಗೆ ತಮಗಿದ್ದ ಪೂಜ್ಯಭಾವನೆಯನ್ನು ಮೈಸೂರಿನ ಚಾಮರಾಜ ಒಡೆಯರರು ವ್ಯಕ್ತಪಡಿಸಿದ್ದಾರೆ. ದಿವಾನ್ ಪೂರ್ಣಯ್ಯನವರು ಮಾಧ್ವಪಂಥಕ್ಕೆ ಸೇರಿದವರಾಗಿದ್ದರೂ ಶ್ರೀಗಳ ಬಗ್ಗೆ ಅಪಾರ ಗೌರವವ ಹೊಂದಿದ್ದರು. ಕ್ರಿ.ಶ. ೧೮೦೩ರ ಕ್ಷಾಮಸಮಯದಲ್ಲಿ ಶ್ರೀಗಳ ಪ್ರಾರ್ಥನೆಯ ಪರಿಣಾಮವಾಗಿ ಮಳೆ ಬೆಳೆ ಆದುದಕ್ಕೆ ತಮ್ಮ ಕೃತಜ್ಞತೆಯನ್ನು ಸೂಚಿಸಿದರಲ್ಲದೆ, ಕ್ರಿ.ಶ. ೧೮೦೫ರಲ್ಲಿ ಆಚಾರ್ಯರ ಯಾತ್ರೆಗೆ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಟ್ಟರೆಂದು ತಿಳಿದು ಬರುತ್ತದೆ. ಮದರಾಸಿನಲ್ಲಿ ಬ್ರಿಟಿಷ್ ಗೌರ್ನರ್ ಶ್ರೀಗಳನ್ನು ಭೇಟಿಮಾಡಿದ ನೆಂದು ಗೊತ್ತಾಗುತ್ತದೆ. ಹಿಂದಿನ ವಿಶೇಷ ಸೌಲಭ್ಯಗಳೆಲ್ಲವೂ ಶೃಂಗೇರಿ ಮಠಕ್ಕೆ ಇದ್ದಿತೆಂದು ಮಾರ್ಕ್ ಕಬ್ಬನನ ಘೋಷಣೆಯಿಂದ ಸ್ಪಷ್ಟವಾಗುತ್ತದೆ.

ಮೇಲೆ ಹೇಳಿದವರಲ್ಲದೆ ಅನೇಕ ಸಣ್ಣಪುಟ್ಟ ರಾಜರುಗಳೂ ಪಾಳೆಯ ಗಾರರೂ ಜಹಗೀರಿದಾರರೂ ಶೃಂಗೇರಿ ಸಂಸ್ಥಾನಕ್ಕೆ ಅನೇಕ ಅಮೂಲ್ಯ ಕಾಣಿಕೆಗಳನ್ನು ನೀಡಿ ಮಠದ ಬಗ್ಗೆ ತಮಗಿದ್ದ ಗೌರವವನ್ನು ತೋರ್ಪಡಿಸಿದರು. ಒಟ್ಟಿನಲ್ಲಿ ಹೇಳುವುದಾದಲ್ಲಿ ಕರ್ನಾಟಕ ಮಾತ್ರವಲ್ಲದೆ ಬೇರೆ ಪ್ರದೇಶಕ್ಕೆ ಸೇರಿ ದವರೂ ಶ್ರೀಮಠಕ್ಕೆ ಬಹುವಾಗಿ ಸಹಾಯ ಮಾಡಿದರು.

---

[23] ನೋಡಿ—M.A.R. 1916, p.71

[24] ಅದೇ

ಶೃಂಗೇರಿಯನ್ನು ದೇವಾಲಯಗಳ ಊರು ಎನ್ನಬಹುದು. ಸುಮಾರು ಐವತ್ತಕ್ಕೂ ಮಿಕ್ಕು ಇಲ್ಲಿ ದೇವಾಲಯಗಳಿವೆ. ಆದರೆ ಬಹುಮುಖ್ಯವಾದ ದೇವಾಲಯಗಳೆಂದರೆ ಜನಾರ್ದನ ದೇವಾಲಯ, ವಿದ್ಯಾಶಂಕರ ದೇವಾಲಯ, ಶಾರದಾ ದೇವಾಲಯ, ಹರಿಹರ ದೇವಾಲಯ ಮತ್ತು ಬೆಟ್ಟದ ಮಲ್ಲಿಕಾರ್ಜುನ ದೇವಾಲಯ.

ಕಲಾದೃಷ್ಟಿಯಿಂದ ನಮ್ಮ ಗಮನ ಸೆಳೆಯುವುದು ಕ್ರಿ.ಶ. ೧೩೫೬–೫೮ರಲ್ಲಿ ವಿದ್ಯಾಶಂಕರ ಸ್ವಾಮಿಗಳ ಸ್ಮರಣಾರ್ಥ ಕಟ್ಟಲಾದ ವಿದ್ಯಾಶಂಕರ ದೇವಾಲಯ. ಆರ್. ನರಸಿಂಹಾಚಾರ್ಯರು ಈ ವಿದ್ಯಾಶಂಕರರು ವಿದ್ಯಾರಣ್ಯರ ಗುರುಗಳಾದ ವಿದ್ಯಾತೀರ್ಥರೇ ಎಂಬುದಾಗಿ ಅಭಿಪ್ರಾಯಪಡುತ್ತಾರೆ. ವಿದ್ಯಾಶಂಕರ ದೇವಾಲಯದ ಶೈಲಿ ಹೊಯ್ಸಳ ಮತ್ತು ದ್ರಾವಿಡ ರೀತಿಗಳೆರಡೂ ಮಿಳಿತವಾದ ಶೈಲಿ. ಈ ದೇವಾಲಯ "ಕ್ರಿ.ಶ. ೯೮ರಲ್ಲಿ ರೋಮನ್ ಚಕ್ರವರ್ತಿಯಾದ ಟ್ರಾಜಾನನಿಂದ ಕಟ್ಟಲ್ಪಟ್ಟ 'ಬಾಸಲಿಕಾ' ಎಂಬ ಕಟ್ಟಡದ ವಿನ್ಯಾಸವನ್ನು ಹೋಲುತ್ತದೆ." ದೇವಾಲಯ ಕಟ್ಟಡದ ವಿನ್ಯಾಸವನ್ನೇ ಹೋಲುವ ಸುಮಾರು ನಾಲ್ಕು ಅಡಿ ಎತ್ತರದ ಜಗತಿಯ ಮೇಲಿದ್ದು ಪೂರ್ವಾಭಿಮುಖವಾಗಿದೆ. ಇದರಲ್ಲಿ ಒಂದು ಗರ್ಭಗುಡಿ, ಒಂದು ಸುಕನಾಸಿ, ಅದನ್ನು ಹೊಂದಿಕೊಂಡಂತೆ ಅರ್ಧವರ್ತುಲಾಕಾರದ ಪ್ರದಕ್ಷಿಣೆ ಮತ್ತು ಅದಕ್ಕೆ ಸೇರಿದಂತೆ ನವರಂಗದ ಚೌಕ ಇವೆ.

ದೇವಾಲಯಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣಭಾಗಗಳಲ್ಲಿ ಪ್ರವೇಶದ್ವಾರಗಳಿವೆ. ಹೀಗೆಯೇ ಪ್ರದಕ್ಷಿಣೆಗೂ ಮೂರು ಬಾಗಿಲುಗಳಿದ್ದು, ಅವು ಗರ್ಭಗೃಹದ ಹೊರಗೋಡೆಯಲ್ಲಿರುವ ಗೂಡುಗಳಿಗೆ ಅಭಿಮುಖವಾಗಿವೆ. ದಕ್ಷಿಣದ ಗೂಡಿನಲ್ಲಿ ಬ್ರಹ್ಮಸರಸ್ವತಿಯರೂ ಪಶ್ಚಿಮ ಮತ್ತು ಉತ್ತರದಲ್ಲಿ ಕ್ರಮವಾಗಿ ಲಕ್ಷ್ಮೀನಾರಾಯಣ ಮತ್ತು ಉಮಾಮಹೇಶ್ವರ ವಿಗ್ರಹಗಳೂ ಇವೆ. ಪ್ರತಿಯೊಂದು ದ್ವಾರದ ಮುಂದೂ ಹತ್ತಿಹೋಗಲು ಇರುವ ಮೆಟ್ಟಲುಗಳ ಎಡಬಲ ಪಾರ್ಶ್ವಗಳಲ್ಲಿ ಸಿಂಹಗಳನ್ನೂ, ಅವುಗಳ ಬಾಯಿಂದ ಹೊರಡುತ್ತಿರುವ ಲತೆಗಳನ್ನೂ ತೋರಿಸಲಾಗಿದೆ. ಗೋಡೆಗಳ ಹೊರಮುಖದಲ್ಲಿ ಸುತ್ತಲೂ ಒಂದರಮೇಲೊಂದರಂತೆ ಎಂಟು ಸಾಲುಳ್ಳ ಚಿತ್ರಪಟ್ಟಿಕೆಗಳಿದ್ದು, ಅವುಗಳಲ್ಲಿ ಅಶ್ವಪಂಕ್ತಿ, ಗಜಪಂಕ್ತಿ ಪುರಾಣೇತಿಹಾಸಗಳ ಘಟನೆಗಳು ಮುಂತಾದವುಗಳನ್ನು ಕೆತ್ತಲಾಗಿದೆ. ಆಚಾರ್ಯ ಶಂಕರರ ಜೀವನಕ್ಕೆ ಸಂಬಂಧಪಟ್ಟ ಅನೇಕ ಘಟನೆಗಳು ಈ ದೇವಾಲಯದಲ್ಲಿ ಕೆತ್ತಲ್ಪಟ್ಟಿವೆ. ಸುಮಾರು ಅರವತ್ತೊಂದು ದೊಡ್ಡ ವಿಗ್ರಹಗಳಿವೆ. ಅವುಗಳಲ್ಲಿ ಕೆಲವು ತುಂಬಾ ಸುಂದರವಾಗಿದ್ದು, ಸಾಮಾನ್ಯರ ಮತ್ತು ಕಲಾತಜ್ಞರ ಗಮನ ಸೆಳೆಯುತ್ತವೆ.

ದೇವಾಲಯದ ನವರಂಗ ಸೊಗಸಾಗಿ ಕೆತ್ತಲಾದ ದ್ರಾವಿಡ ರೀತಿಯ ಹನ್ನೆರಡು ಕಂಬಗಳನ್ನುಳ್ಳದ್ದಾಗಿದೆ. ಈ ಕಂಬಗಳು ಮೇಷಾದಿ ದ್ವಾದಶರಾಶಿಗಳಿಂದ ಗುರುತಿಸಲ್ಪಟ್ಟಿವೆ. ನವರಂಗ ಹದಿನೆಂಟು ಅಡಿ ಎತ್ತರವಾಗಿದ್ದು, ಮಧ್ಯದಲ್ಲಿ ಎರಡು ಅಡಿ ಆಳವಾಗಿರುವ ಮತ್ತು ಐದು ಸುತ್ತು ದಳಗಳುಳ್ಳ ಪದ್ಮವನ್ನು ಕೊರೆದ ಭುವನೇಶ್ವರಿಯಿದೆ.

ನವರಂಗದ ಹಿಂದೆ ಪ್ರದಕ್ಷಿಣಾಪಥವನ್ನು ಪ್ರವೇಶಿಸಲು ಮೂರು ದ್ವಾರಗಳಿವೆ. ಮುಖ್ಯದ್ವಾರದ ಅಕ್ಕಪಕ್ಕಗಳಲ್ಲಿ ಎರಡು ಶೈವ ದ್ವಾರಪಾಲಕ ವಿಗ್ರಹಗಳುಂಟು. ಪ್ರದಕ್ಷಿಣಾ ಪಥ ಇಕ್ಕಟ್ಟಾಗಿದ್ದು ಸುಕನಾಸಿ, ಗರ್ಭಗೃಹಗಳನ್ನು ಬಳಸಿಕೊಂಡು ಹೋಗುತ್ತದೆ. ಗರ್ಭಗೃಹದಲ್ಲಿ ಎತ್ತರವಾದ ವಿದ್ಯಾಶಂಕರ ಲಿಂಗವಿದೆ ಸುಖನಾಸಿ ಯಲ್ಲಿ ಹರಿಹರನ ಉತ್ಸವವಿಗ್ರಹವನ್ನು ಇಡಲಾಗಿದೆ. ಭಿನ್ನವಾದ ಸರಸ್ವತಿ ವಿಗ್ರಹವೊಂದನ್ನು ಅಲ್ಲಿ ಇಟ್ಟಿದೆ. ಅದು ಅತ್ಯಂತ ಪ್ರಾಚೀನವಾದುದೆಂದೂ ಆಭರಣ ಗಳಿಂದ ಅಲಂಕೃತವಾಗಿ ಶಾರದಾ ದೇವಾಲಯದಲ್ಲಿ ಅದನ್ನು ಇಟ್ಟಿತ್ತೆಂದೂ ಮಹಮ್ಮದೀಯರು ಅದನ್ನು ಭಿನ್ನಗೊಳಿಸಿ, ಆಭರಣಗಳನ್ನು ಅಪಹರಿಸಿ, ನದಿಗೆ ಎಸೆದರೆಂದೂ ಅದನ್ನು ಪುನಃ ಪಡೆದು ಅಲ್ಲಿ ಇಡಲಾಯಿತೆಂದೂ ಪ್ರತೀತಿ ಇದೆ. ಭಿನ್ನವಾದ ವಿಗ್ರಹವಾಗಿದ್ದರೂ, ಈ ವಿಗ್ರಹಕ್ಕೆ ಪೂಜೆ ಸಲ್ಲುತ್ತಿದೆ.

ಈ ದೇವಾಲಯದ ಗೋಪುರವೂ ಬಹು ಸುಂದರವಾಗಿದೆ. ಇದರಲ್ಲಿ ಚಾಲುಕ್ಯ ದ್ರಾವಿಡ ರೀತಿಗಳ ಮಧುರ ಸಮನ್ವಯವನ್ನು ನಾವು ಕಾಣಬಹುದು.

ಇಲ್ಲಿಯ ಶಾರದಾ ದೇವಾಲಯ ದ್ರಾವಿಡ ಶೈಲಿಯಲ್ಲಿ ನಿರ್ಮಿತವಾದ ಸುಂದರ ದೇವಾಲಯ. ವಿದ್ಯಾತೀರ್ಥರ ಕಾಲಕ್ಕೆ ಸೇರುವ ಸುಮಾರು ಮೂರು ಅಡಿ ಮತ್ತು ಎರಡೂವರೆ ಅಡಿ ಎತ್ತರವಿರುವ ಎರಡು ಶಾರದಾ ವಿಗ್ರಹಗಳಿವೆ. ಸುಮಾರು ಒಂದು ಅಡಿ ಎತ್ತರವಿರುವ ಬೆಳ್ಳಿಯಿಂದ ಮಾಡಲಾದ ಉತ್ಸವ ವಿಗ್ರಹವೂ ಎರಡು ಅಡಿ ಎತ್ತರವಿರುವ ಕಂಚಿನ ಉತ್ಸವ ವಿಗ್ರಹವೂ ಇವೆ. ಕ್ರಿ.ಶ. ೧೭೯೧ರಲ್ಲಿ ಮರಾಠರ ಧಾಳಿಗೆ ಈ ದೇವಾಲಯ ತುತ್ತಾಗಿ ದೊಡ್ಡ ವಿಗ್ರಹ ಪದಚ್ಯುತ ಗೊಳಿಸಲ್ಪಟ್ಟಿತೆಂದು ಮತ್ತು ಅದರ ಪುನಪ್ರ್ರತಿಷ್ಠಾಪನೆಗೆ ಮೈಸೂರಿನ ಟೀಪು ಬಹುವಾಗಿ ಸಹಾಯಮಾಡಿದನೆಂದು ನಮಗೆ ತಿಳಿದುಬರುತ್ತದೆ.

ವಿದ್ಯಾಶಂಕರ ದೇವಾಲಯದ ಉತ್ತರಕ್ಕೆ ಜನಾರ್ದನ ದೇವಾಲಯವಿದೆ. ಈ ದೇವಾಲಯಕ್ಕೆ ಕ್ರಿ.ಶ. ೧೩೮೭ರಲ್ಲಿ ಇಮ್ಮಡಿ ಹರಿಹರ ದತ್ತಿಯನ್ನು ಬಿಟ್ಟ ನೆಂದು ತಿಳಿದುಬರುವುದರಿಂದ, ಇದು ಕೊನೆಯ ಪಕ್ಷ ಆ ಕಾಲದಲ್ಲಿಯಾದರೂ ಇದ್ದಿರಬೇಕೆಂದು ಊಹಿಸಬಹುದು. ನವರಂಗದ್ವಾರದ ಅಕ್ಕಪಕ್ಕಗಳಲ್ಲಿ ಗರುಡ ಮತ್ತು ಹನುಮಂತನ ದೇವಾಲಯಗಳಿವೆ. ನವರಂಗದ ಬಲಭಾಗದಲ್ಲಿರುವ ಗೂಡಿನಲ್ಲಿ ಶ್ರೀ ಶಂಕರಾಚಾರ್ಯರ ಶಿಲಾವಿಗ್ರಹವಿದೆ. ಇಲ್ಲಿರುವ ಜನಾರ್ದನ ವಿಗ್ರಹ ಇಲ್ಲಿನ ಸುಂದರ ಶಿಲ್ಪಗಳಲ್ಲೊಂದಾಗಿದೆ.

ಹರಿಹರ ದೇವಾಲಯದ ಹರಿಹರನ ವಿಗ್ರಹ, ಚತುರ್ಮುಖ ವಿದ್ಯೇಶ್ವರ ದೇವಾಲಯದ ಚತುರ್ಮುಖ ವಿದ್ಯೇಶ್ವರ ವಿಗ್ರಹ ಮೊದಲಾದ ವಿಗ್ರಹಗಳು ಬಹು ಸುಂದರ ಶಿಲ್ಪಗಳು. ಶೃಂಗೇರಿಯ ಮಧ್ಯದಲ್ಲಿರುವ ಪಾರ್ಶ್ವನಾಥ ಬಸದಿ ಅತ್ಯಂತ ಸುಂದರವಾಗಿದೆ. ಶೃಂಗೇರಿಯಲ್ಲಿ ದೊರೆಯುವ ಅತ್ಯಂತ ಪ್ರಾಚೀನ ಶಾಸನಗಳಲ್ಲೊಂದು ಈ ಬಸದಿಯಲ್ಲಿದೆ.

ಸಮಾಜಸುಧಾರಣಾ ದೃಷ್ಟಿಯಲ್ಲಿ ಶ್ರೀ ಬಸವೇಶ್ವರ ಮತ್ತು ವಿವೇಕಾನಂದ

ಭಾರತೀಯ ಸಂಸ್ಕೃತಿಯ ದಾರ್ಶನಿಕ ಮನೋಭಾವಕ್ಕೆ ಸಾಕ್ಷೀಸ್ವರೂಪವಾಗಿ, ಭಾರತೀಯರ ಬಾಳಿನಲ್ಲಿ ಅಮೃತಧಾರೆಯಾಗಿ ಪ್ರವಹಿಸುತ್ತಿರುವ ಶ್ರೀಮದ್ ಭಗವದ್ಗೀತೆಯಲ್ಲಿ ಭಗವಂತನ ವಾಣಿ ಹೀಗೆ ಉದ್ಘೋಷಿತವಾಗಿದೆ :

> “ ಯದ್ಯದ್ವಿಭೂತಿಮತ್ ಸತ್ತ್ವಂ ಶ್ರೀಮದೂರ್ಜಿತಮೇವ ವಾ
> ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ”

ಲೋಕವನ್ನು ತೆರೆದ ಹೃದಯದಿಂದ ದೃಷ್ಟಿಸಿ ನೋಡಿದಾಗ ಮೇಲಿನ ಮಾತಿಗೆ ಸಮಂಜಸವಾದ ನಿದರ್ಶನವನ್ನು ಎಲ್ಲೆಲ್ಲಿಯೂ ಸಂದರ್ಶಿಸಬಹುದು. ಭಗವಂತನ ಆ ವಿಭೂತಿಶಕ್ತಿಯ ಅವತೀರ್ಣಕ್ಕೆ ಏಕಮಾರ್ಗ ಏಕರೂಪವೆ ಆಗಬೇಕೆಂದಿಲ್ಲ; ಅನಂತಮುಖಗಳಲ್ಲಿ ಅದು ವ್ಯೈದೋರಬಹುದು. ಹೀಗೆ ಬಹುರೂಪಿಯಾಗಿ ಆವಿರ್ಭವಿಸುವ ಆ ವಿಭೂತಿಶಕ್ತಿಯ ವ್ಯಕ್ತಿರೂಪಗಳಲ್ಲಿ ಬಸವೇಶ್ವರರನ್ನೂ ವಿವೇಕಾನಂದರನ್ನೂ ಕಾಣುತ್ತೇವೆ.

ಬಸವೇಶ್ವರರು ೧೨ನೆಯ ಶತಮಾನದಲ್ಲಿ ಕರ್ಣಾಟಕದಲ್ಲಿ ಜನ್ಮತಾಳಿದರು. ನಮ್ಮ ಚಾರಿತ್ರಿಕಬುದ್ಧಿ ಈಗಿನಷ್ಟು ಜಾಗೃತವಲ್ಲದ ಕಾಲವದು. ಆದ್ದರಿಂದ ಅವರ ಜೀವನದ ವಿವರವಿವರಗಳು ನಮಗೆ ಸ್ಪಷ್ಟವಾಗಿ ದೊರಕುವುದಿಲ್ಲ. ಅವರ ಬದುಕನ್ನು ತಿಳಿಯಲು ದೊರಕುವ ಸಾಮಗ್ರಿಗಳೂ ಕೆಲವೊಮ್ಮೆ ಸಾಕಷ್ಟು ಪ್ರಾಮಾಣಿಕವಾಗಿಲ್ಲ. ಮೇಲ್ನೋಟಕ್ಕೆ ಸಾಮಾನ್ಯವಾಗಿ ಕಾಣುವ ಅವರ ದಿನದಿನದ ಜೀವನದಲ್ಲಿ, ಅವರ ಆಂತರಂಗಿಕ ಸಂಪತ್ತಿನಲ್ಲಿ ಮಹತ್ತನ್ನು ದರ್ಶಿಸಲಾರದ ಸಾಮಾನ್ಯ ಜನರ ಸ್ಥೂಲಮತಿ, ಅವರ ಬಾಳಿನಲ್ಲಿ ಅನೇಕ ಪವಾಡಗಳನ್ನು ಆರೋಪಿಸಿ ಅವರ ಮೇಲ್ಮೆಯನ್ನು ಹೆಚ್ಚಿಸಲು ಹೆಣಗಿದೆ; ಅಥವಾ ಅದು ಅವರ ಮಹಿಮೆಗೆ ಒಡ್ಡಿದ ಪ್ರತಿಮಾರೂಪವಾಗಿರಲೂ ಬಹುದು. ಆದರೂ ಅವು ಕೆಲವು ವೇಳೆ ರೂಕ್ಷಪ್ರಯತ್ನವಾಗಿ, ಅವರ ಯೋಗ್ಯತೆಗೆ ಆತಂಕಕಾರಿಯಾಗಿ ಪರಿಣಮಿಸಿರುವುದೂ ಉಂಟು.

ಆದರೆ ಅವರ ವಚನಗಳು ಅವರ ಆಂತರಂಗಿಕ ಸಂಪತ್ತು ಮತ್ತು ಸಾಮಾಜಿಕ ಧಾರ್ಮಿಕ ವಿಚಾರಗಳಲ್ಲಿ ಅವರ ದೃಷ್ಟಿ ಇವನ್ನರಿಯಲು ಪ್ರಮುಖ ಪ್ರಾಮಾಣಿಕ ಆಧಾರವಾಗಿವೆ. ೮೦೦ ವರ್ಷಗಳ ತರುವಾಯದಲ್ಲಿ ನಿಂತು ಅವರು ಸಾಧಿಸಿದ ಕೆಲಸಗಳತ್ತ ದೃಷ್ಟಿ ಹರಿಸಿದಾಗ, ಅಂದಿನ ಕಾಲಧರ್ಮಕ್ಕೆ ಅನುಸಾರವಾಗಿ ಅವರ ಬಾಳು ಕರ್ಣಾಟಕಕ್ಕಷ್ಟೆ ಸೀಮಿತವಾಗಿದ್ದರೂ, ಯೋಗ್ಯತೆಯ ದೃಷ್ಟಿಯಿಂದ ಅವರು ವಿಶ್ವವ್ಯಕ್ತಿಯಾಗಬಲ್ಲವರು ಎಂದೆನಿಸುತ್ತದೆ.

೧೨ನೆಯ ಶತಮಾನದಲ್ಲಿ ಕರ್ಣಾಟಕ ಜನಜೀವನ ಒಂದು ಅಭೂತಪೂರ್ವ ಕ್ರಾಂತಿಗೆ ಒಳಗಾಯಿತು. ಆ ಕ್ರಾಂತಿಯ ಕೇಂದ್ರಶಕ್ತಿಯಾಗಿ ಕರ್ಣಾಟಕ ಜನತೆಯ ಬಾಳನ್ನು ಪ್ರಬೋಧನಗೊಳಿಸಿದ ಪ್ರಮುಖ ವ್ಯಕ್ತಿಯನ್ನಾಗಿ ಬಸವಣ್ಣನವರನ್ನು ಕಾಣುತ್ತೇವೆ. ಆಗಿನ ಜನಸಾಮಾನ್ಯರ ಜೀವನ ತುಂಬ ಶೋಚನೀಯವಾಗಿತ್ತು. ಧರ್ಮವೆಂಬುದು ಒಂದು ವರ್ಗದ ಸ್ವತ್ತಾಗಿ, ಅವರಿಂದ ಉಂಟಾಗುತ್ತಿದ್ದ ಧರ್ಮಭೀತಿಯ ಕರಾಳಛಾಯೆಯ ಅಡಿಯಲ್ಲಿ ಸಿಲುಕಿ ಸಾಮಾನ್ಯ ಜನರು ಮಿಸುಕಾಡುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಈ ಎಲ್ಲ ಅನ್ಯಾಯ ಅನಾಚಾರಗಳನ್ನು ಪ್ರಬಲವಾಗಿ ಪ್ರತಿಭಟಿಸಿ, ಸಾಮಾನ್ಯರನ್ನೂ ಜ್ಞಾನಾರ್ಜನೆಗೆ ಅಧಿಕಾರಿಗಳನ್ನಾಗಿ ಮಾಡಲು ದೀಕ್ಷಾಬದ್ಧರಾಗಿ ಬಸವಣ್ಣನವರು ನೂರಾರು ಸಹಸಾಧಕರೊಡನೆ ಒಂದು ಮಹಾವಿಪ್ಲವವನ್ನು ಆರಂಭಿಸಿದರು. ಇದಕ್ಕೆ ಮೊದಲು ಇಷ್ಟೊಂದು ವ್ಯಾಪಕರೀತಿಯಲ್ಲಿ, ತೀವ್ರಗತಿಯಲ್ಲಿ ಕರ್ಣಾಟಕದಲ್ಲಿ, ಅಥವಾ ಒಂದು ದೃಷ್ಟಿಯಿಂದ ಭರತಖಂಡದಲ್ಲಿಯೆ, ಇಂತಹ ಕ್ರಾಂತಿ ನಡೆದಿರಲಿಲ್ಲ. ಏಕೆಂದರೆ, ವೈದಿಕಧರ್ಮದಲ್ಲಿ ಸಾಮಾನ್ಯಜನರ ಮೇಲೆ ನಡೆಯುತ್ತಿದ್ದ ದೌರ್ಜನ್ಯದಿಂದ ರೋಸಿ, ಜೈನ ಬೌದ್ಧ ಮತಗಳು ಹಿಂದೂಧರ್ಮದಿಂದಲೆ ಸಿಡಿದು ಬೇರೆಯಾಗಿ, ಸಾಮಾನ್ಯಜನರನ್ನು ಧರ್ಮಕ್ಕೆ ಅಧಿಕಾರಿಗಳನ್ನಾಗಿ ಮಾಡಲು ಹೋರಾಡಿವೆ. ಆದರೆ ಹಿಂದೂಧರ್ಮದ ಕಟ್ಟಿಗೆ ಒಳಗಾಗಿ ವೈದಿಕಧರ್ಮದಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ವಿರೋಧಿಸಿ, ಅಲ್ಲದೆ ಮೊದಲೆ ಹೇಳಿದಂತೆ ಇಷ್ಟೊಂದು ವ್ಯಾಪಕರೀತಿಯಲ್ಲಿ ತೀವ್ರಗತಿಯಲ್ಲಿ ಸಾಮಾನ್ಯಜನತೆಯನ್ನು ಮೇಲೆತ್ತಿ ಅವರಿಗೂ ಸಮಾಜದಲ್ಲಿ ಒಂದು ಸ್ಥಾನಮಾನ ದೊರಕಿಸಿ ಕೊಡುವಂತಹ ಇಂತಹ ಕ್ರಾಂತಿ ಭರತಖಂಡದ ಮತ್ತಾವ ಕಡೆಯಲ್ಲಿಯೂ ನಡೆದಂತೆ ತೋರುವುದಿಲ್ಲ. ಈ ದೃಷ್ಟಿಗಳಿಂದ ನೋಡಿದಾಗ, ಬಸವಣ್ಣನವರನ್ನು ಕರ್ಣಾಟಕದಲ್ಲಿ ಮಾತ್ರವಲ್ಲದೆ ಭರತಖಂಡದಲ್ಲಿಯೆ ಸೋದರತೆ ಮತ್ತು ಸಮಾನತೆಯನ್ನು ನೆಲೆಗೊಳಿಸಲು ಹೊರಟ ಪ್ರಪ್ರಥಮ ಪ್ರವರ್ತಕರನ್ನಾಗಿ ಕಾಣುತ್ತೇವೆ.

೧೨ನೆಯ ಶತಮಾನದಲ್ಲಿ ಬಸವಣ್ಣನವರ ಉದಯಕ್ಕೆ ಹಿನ್ನೆಲೆಯಾಗಿದ್ದ ಸ್ಥಿತಿ ೧೯ನೆಯ ಶತಮಾನದಲ್ಲಿ ಇಡೀ ಭರತಖಂಡಕ್ಕೆ ಒದಗಿತ್ತು. ಶತಮಾನದ ಕಾಲ ಆಂಗ್ಲರ ದಬ್ಬಾಳಿಕೆಯ ದಾಸ್ಯದಲ್ಲಿ ನರಳಿದ ಭಾರತೀಯರು ತಮ್ಮತನವನ್ನು ಸೂರೆಗೊಟ್ಟಿದ್ದರು. ಹಿಂದೂಧರ್ಮವೆನ್ನುವುದು ಮೌಢ್ಯಕಂದಾಚಾರಕ್ಕೆ ಮಾತ್ರ

ವಿಾಸಲಾಗಿತ್ತು. ಹಿಂದೂಧರ್ಮದ ಅಮೂಲ್ಯ ತತ್ತ್ವಗಳನ್ನು ಜನರಿಗೆ ನೀಡುವ ಯೋಗ್ಯಪಾತ್ರಗಳಿಲ್ಲದೆ ಅದು ಬೂದಿ ಮುಚ್ಚಿಹೋಗಿತ್ತು. ಇಂತಹ ಸ್ಥಿತಿಯಲ್ಲಿ ವಿಚಾರವಂತ ಜನರ ಮನಸ್ಸು ಸ್ವಾಭಾವಿಕವಾಗಿಯೆ ಭಾರತೀಯತ್ವವನ್ನು ತಿರಸ್ಕರಿಸಿ ಆಂಗ್ಲಾನುಕರಣೆಯತ್ತ ತಿರುಗಿತ್ತು. ಈ ಹಿನ್ನೆಲೆಯಲ್ಲಿ ವಿವೇಕಾನಂದರ ಅವತಾರ ವಾಯಿತು. ಬಂಗಾಳದಲ್ಲಿ ಜನ್ಮತಳೆದ ಅವರು ತಮ್ಮ ಗುರು ಶ್ರೀ ರಾಮಕೃಷ್ಣರಿಂದ ದತ್ತವಾದ ತಮ್ಮ ಪ್ರಚಂಡ ಆತ್ಮಶಕ್ತಿಯಿಂದ ಭರತಖಂಡವನ್ನು, ಅಷ್ಟೇಕೆ, ಸಮಸ್ತ ಜಗತ್ತನ್ನೂ ಜಾಗೃತವಾಗುವಂತೆ ಮಾಡಿದರು. ಅವರ ತೂರ್ಯವಾಣಿಯು ಮೊಳಗಿನಿಂದ ಹಳೆಯ ಪೊರೆಗಳಚಿ ಎಚ್ಚೆತ್ತ ಹಿಂದೂಸಮಾಜ ಹೊಸ ಉತ್ಸಾಹ ಧ್ಯೇಯಗಳಿಂದ ಮುನ್ನಡೆಯಲು ಕಾರಣವಾಯಿತು.

ಹಿಂದೂಧರ್ಮದ ದೊಡ್ಡ ದೋಷವೆಂದರೆ ವರ್ಣವ್ಯವಸ್ಥೆಯ ವಿಕೃತರೂಪ. ಗೀತೆಯಲ್ಲಿ ಹೀಗೆ ಹೇಳಿದೆ: “ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ”. ಅದು ಭಗವಂತನ ವಾಣಿ. ಅಲ್ಲಿ ನಾಲ್ಕು ವರ್ಣಗಳೂ ನನ್ನಿಂದಲೇ ಅಂದರೆ ದೇವರಿಂದಲೆ ಸೃಷ್ಟವಾದುವು ಎಂದು ಹೇಳಿದೆ. ಆದ್ದರಿಂದ ವರ್ಣ ವ್ಯವಸ್ಥೆ ಈಗ ನಮ್ಮಿಂದ ಗಣಿಸಲ್ಪಡುತ್ತಿರುವಂತೆ ಮನುಷ್ಯನಿರ್ಮಿತ ವಿಭಾಗವಲ್ಲ. ಅಲ್ಲಿ ಸ್ಪಷ್ಟವಾಗಿ ಗುಣಕರ್ಮಕ್ಕೆ ಅಂದರೆ ಅವರವರ ಮನೋಧರ್ಮಕ್ಕೆ ಮತ್ತು ಸಂಸ್ಕಾರಕ್ಕೆ ಅನುಸಾರವಾಗಿ ನಾಲ್ಕು ವರ್ಣಗಳೆಂದು ಹೇಳಿದೆ. ಆದ್ದರಿಂದ ಈಗ ನಾವು ಮಾಡುತ್ತಿರುವಂತೆ ಹುಟ್ಟಿಗನುಸಾರವಾಗಿ ಜಾತಿಯನ್ನು ವಿಭಾಗಿಸುವುದಲ್ಲ. ಅಲ್ಲದೆ ಭಗವಂತನಿಂದಲೆ ಅದು ನಿರ್ಮಿತವಾದ ಪಕ್ಷದಲ್ಲಿ, ಅದು ಜಗತ್ತಿಗೆಲ್ಲಾ ಅನ್ವಯವಾಗುವ ನಿಯಮವಾಗಿರಬೇಕು; ಕೇವಲ ಭರತಖಂಡಕ್ಕೆ ಮಾತ್ರವಲ್ಲ. ಅಮೆರಿಕ ರಷ್ಯ ಚೀಣಗಳಲ್ಲಿಯೂ ಗುಣಕರ್ಮಗಳ ಆಧಾರದ ಮೇಲೆ ನಾಲ್ಕು ವರ್ಣಗಳನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ, ಒಬ್ಬನೇ ವ್ಯಕ್ತಿಯಲ್ಲಿಯೂ ಒಂದು ವರ್ಣದ ಗುಣ ಪ್ರಮುಖವಾಗಿದ್ದರೂ, ಬೇರೆ ಬೇರೆ ಕಾಲದಲ್ಲಿ ನಾಲ್ಕು ವರ್ಣಗಳ ಗುಣಗಳೂ ಪ್ರಕಟವಾಗುವುದನ್ನೂ ಕಾಣಬಹುದು.

ಆದರೆ ಕಾಲಕ್ರಮದಲ್ಲಿ ವರ್ಣವ್ಯವಸ್ಥೆಯ ಈ ವಿಶಾಲವಾದ ಅರ್ಥ ಕುಸಿಯಿತು. ಗೀತೋಕ್ತಿಯನ್ನು ಗಾಳಿಗೆ ತೂರಿ, ಕೇವಲ ಹುಟ್ಟಿನಿಂದ ಜಾತಿಯನ್ನು ಅಳೆಯುವ ದುರವಸ್ಥೆ ಪ್ರಾರಂಭವಾಯಿತು. ಆರಂಭದಲ್ಲಿ ಯಾವುದು ಹಿಂದೂ ಸಮಾಜದ ಭದ್ರ ಬುನಾದಿಯಾಗಿತ್ತೊ ಅದು ಬರಬರುತ್ತಾ ಉಂಟಾದ ವಿರೂಪದಿಂದ ಹಿಂದೂಧರ್ಮದ ತಾಯಿಬೇರನ್ನೆ ಹಿಡಿದಿರುವ ರೋಗವಾಗಿ ಪರಿಣಮಿಸಿತು. ಅದೇ ನಮ್ಮ ಸಾಮಾಜಿಕ ಮತ್ತು ರಾಜಕೀಯ ಪ್ರಗತಿಗೆ ಮಾರಕವಾಗಿ ಪರಿಣಮಿಸಿ, ಸಮಾಜದ ಒಂದು ದೊಡ್ಡ ವರ್ಗವನ್ನು ಶತಶತಮಾನಗಳ ಕಾಲ ಅಜ್ಞಾನದಲ್ಲಿ ಮುಳುಗಿಸಿಟ್ಟಿದ್ದು ಹಿಂದೂಧರ್ಮಕ್ಕೆ ಹತ್ತಿದ ಮಹಾಕಳಂಕವಾಗಿದೆ. ಅದರಲ್ಲಿಯೂ ಅಸ್ಪೃಶ್ಯತೆಯಂತೂ ನಮ್ಮ ಸಮಾಜಕ್ಕೆ ತಟ್ಟಿದ ಶಾಪವಾಗಿದೆ. ಭಯಂಕರವಾಗಿ

ಹಬ್ಬುತ್ತಾ ಬಂದ ಈ ರೋಗ ಮುಂದೆ ಪುರಾಣಗಳಲ್ಲಿ ವಿಧಿಸಿದ ಈ ನಿಯಮಗಳಿಂದ ಮತ್ತಷ್ಟು ಭದ್ರವಾಯಿತು: "ವೇದಪಠಣವನ್ನು ಕೇಳಿದ ಶೂದ್ರನ ಕಿವಿಗೆ ಸೀಸ ಕಾಯಿಸಿ ಹೊಯ್ಯಬೇಕು. ವೇದವನ್ನು ಉಚ್ಚರಿಸಿದ ಅಥವಾ ಉದಾಹರಿಸಿದ ನಾಲಗೆಯನ್ನು ಕತ್ತರಿಸಬೇಕು; ಅಧ್ಯಯನಮಾಡಿದವರನ್ನು ವಧಿಸಬೇಕು" ಇತ್ಯಾದಿ. ಈ ಸ್ಥಿತಿಯಲ್ಲಿ ಪುರಾಣದ ಈ ಮಾತುಗಳನ್ನೆಲ್ಲಾ ತಿರಸ್ಕರಿಸಿ, ಅನೇಕ ಕಾಲದಿಂದ ಅಜ್ಞಾನದಲ್ಲಿ ಮುಚ್ಚಿದ್ದ ಮೂಲೆ ಮೂಲೆಗಳಲ್ಲಿ ಸಂದಿಗೊಂದಿಗಳಲ್ಲಿ ಕೇರಿಕೇರಿಗಳಲ್ಲಿ ಅತ್ಯಂತ ಕೀಳುವರ್ಗದ ವರೆಗೂ ಜ್ಞಾನದ ಪ್ರಭೆ ಪ್ರವೇಶಿಸಿ ಪ್ರವಹಿಸುವಂತೆ ಮಾಡಿದ ಪ್ರಬಲ ಶಕ್ತಿಯಾದರು ಬಸವಣ್ಣನವರು.

"ಕೊಲ್ಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ. ಕುಲವೇನೋ ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು" ಎಂಬುದು ಜಾತಿಯನ್ನು ಕುರಿತ ಅವರ ವ್ಯಾಪಕ ವ್ಯಾಖ್ಯಾನ. ಕೇವಲ ಮೂಢ ಮತಾಚರಣೆಯಲ್ಲೇ ತಮ್ಮ ಕುಲದ ಸಮಸ್ತ ಮೇಲ್ಮೆಯೂ ಹುದುಗಿದೆ ಎಂಬುವವರನ್ನು ಕುರಿತು ಅವರು ಹೀಗೆ ಹೇಳುತ್ತಾರೆ: "ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ ಎಂಬ ಅನಾಚಾರಿಯ ಮಾತ ಕೇಳಲಾಗದು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲ ಒಂದೇ ಎಂದು ಕೊಟ್ಟುಕೊಂಬುದು ಸದಾಚಾರ. ಉಳಿದುವೆಲ್ಲ ಅನಾಚಾರ". ನಿರಂತರ ಶ್ರದ್ಧೆ ಪರಿಶ್ರಮಗಳಿಂದ ಮಾತ್ರ ಲಭ್ಯವಾಗುವ ಧರ್ಮದ ಅಂತಸ್ಸತ್ತ್ವವಿಲ್ಲದೆ, ಸುಲಭಮಾರ್ಗವಾದ ಬಾಹ್ಯಾಚರಣೆಗಳನ್ನು ಮಾತ್ರ ಹಿಡಿದು ಧಾರ್ಮಿಕತೆಯ ಸೋಗನ್ನು ಹಾಕುವವರನ್ನು ಕುರಿತು ಮಾದಿಗರೆಂದು ಹೀಗೆ ಹೇಳುತ್ತಾರೆ ಬಸವಣ್ಣ: "ಉಂಬಲ್ಲಿ ಉಡುವಲ್ಲಿ ಕುಲವಳಿಯಿತೆಂಬರು, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ ಮಾದಿಗರನೇನೆಂಬೆನಯ್ಯ? ಇವರನೆಂತು ಭಕ್ತರೆಂಬೆನಯ್ಯ? ಇವರನೆಂತು ಯುಕ್ತರೆಂಬೆನಯ್ಯ...."

ಅವರು ತಮ್ಮ ಈ ವಿಚಾರಗಳನ್ನೆಲ್ಲಾ ಸಮಾಜದ ಮುಂದೆ ಇಡುವ ಮೊದಲು ತಮ್ಮ ಆದರ್ಶಕ್ಕೆ ತಾವೆ ಜೀವಂತ ನಿದರ್ಶನವಾದರು. ಸ್ವತಃ ಮೇಲು ಜಾತಿಯಲ್ಲಿ ಹುಟ್ಟಿದ ಅವರು ತಮ್ಮ ಜಾತೀಯ ಅಹಂಕಾರವನ್ನು ತ್ಯಜಿಸಿ, ಜಾತಿ ಕುಲಗಳೊಂದನ್ನೂ ಲೆಕ್ಕಿಸದೆ ಸಾಮಾನ್ಯರ ಜೊತೆ ಬೆರೆತರು; ಅವರ ಮನೆಯಲ್ಲಿ ಉಂಡರು; ಅವರನ್ನು ಭಕ್ತರೆಂದು ಗೌರವಿಸಿದರು. ಅವರ ವಚನಗಳಲ್ಲಿ ಅನೇಕ ಕಡೆ ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ ಮುಂತಾದವರನ್ನು ತುಂಬ ಗೌರವಭಾವದಿಂದ ನೆನೆಯುವುದನ್ನು ಕಾಣುತ್ತೇವೆ. ಆ ಹೆಸರುಗಳ ಹಿಂದಿರುವ ವಿಶೇಷಣಗಳೆ ಅವರ ವೃತ್ತಿ ಹಾಗೂ ಜಾತಿಯನ್ನು ಸೂಚಿಸುತ್ತವೆ. ಅವರೊಂದಿಗೆ ತಿನ್ನುವುದು ಸೇರುವುದಿರಲಿ, ನೋಡಿದರೂ ಅಮಂಗಳಕರವೆಂದು ಭಾವಿಸುತ್ತಿದ್ದ ಕಾಲವದು. ಆದರೆ ಬಸವಣ್ಣನವರ ಉದಾರವಾದ ಭಕ್ತ ಮನಸ್ಸು ಅದೊಂದನ್ನೂ ಲೆಕ್ಕಿಸದೆ ಅವರ ದಾಸೋಹವನ್ನು ಕೈಗೊಳ್ಳುತ್ತದೆ.

ಬಸವಣ್ಣನವರ ಕ್ರಾಂತಿ ತನ್ನ ಪರಕಾಷ್ಠೆಯನ್ನು ಮುಟ್ಟಿದ್ದು, ತಮ್ಮ ಪೂರ್ವ ಜಾತಿಯಲ್ಲಿ ಬ್ರಾಹ್ಮಣ ಮತ್ತು ಮೊಚ್ಚಿಗರಾಗಿದ್ದ ಮಧುವರಸ, ಹರಳಯ್ಯರ ಮಕ್ಕಳ ವಿವಾಹದ ಏರ್ಪಾಟಿನಲ್ಲಿ. ಆಗಿನ ಸಮಾಜದಲ್ಲಿ ವರ್ಣಸಂಕರ ಪಾಪಕೃತ್ಯ. ಆದರೆ ಬಸವಣ್ಣನವರು ದಿಟ್ಟತನದಿಂದ ಧೀರಹೆಜ್ಜೆಯನ್ನಿಡುತ್ತಾರೆ. ಒಬ್ಬ ಬ್ರಾಹ್ಮಣ ಮತ್ತೊಬ್ಬ ಮೊಚ್ಚಿಗನಾಗಿದ್ದರೇನು, ಅವರಿಬ್ಬರೂ ಒಂದೆ ಜಾತಿ— ಶರಣರಾಗಿ, ಭಕ್ತರಾಗಿ. ಆದ್ದರಿಂದ ಅವರಿಬ್ಬರ ಮಧ್ಯೆ ಯಾವ ಭೇದವೂ ಇಲ್ಲ. ಆದರೆ ಇಂದಿಗೆ ೮೦೦ ವರ್ಷಗಳ ಹಿಂದಿನ ಸಮಾಜ ಬಸವಣ್ಣನವರ ಪ್ರಖರ ವಿಚಾರದ ಪ್ರಭೆಯನ್ನು ತಾಳಲಾರದೆ ಹೋಗುತ್ತದೆ. ಸಮಾಜ ಅಲ್ಲೋಲಕಲ್ಲೋಲವಾಗುತ್ತದೆ. ಬ್ರಾಹ್ಮಣ ಪುರೋಹಿತರ ಹಾಲಾಹಲಸದೃಶ ಹೃದಯದ ಆಕ್ರೋಶ ಅವಿವೇಕಗಳು ರಾಜಶಕ್ತಿಯನ್ನು ತದ್ವಿರುದ್ಧವಾಗಿ ಕೆರಳಿಸಿ, ಮಾಡಬಾರದ ನಾರಕ ಕಾರ್ಯಗಳನ್ನು ಮಾಡಿಸುತ್ತದೆ. ಮುಂದೆ ನಡೆದ ದುರಂತಚಿತ್ರ ಹಿಂದೂಸಮಾಜದ ಮತಮೌಢ್ಯದ ಅವಿವೇಕದ ಪರಮಾವಧಿಗೆ ರುದ್ರಪ್ರತೀಕವಾಗಿದೆ.

ವಿವೇಕಾನಂದರು ಜಾತಿಪದ್ಧತಿಯಿಂದ ಹಿಂದೂ ಸಮಾಜಕ್ಕೆ ಒದಗಿರುವ ದುರಂತಸ್ಥಿತಿಯನ್ನು ಕುರಿತು ಅನೇಕ ಕಡೆ ಕಟುವಾಗಿ ಟೀಕಿಸಿದ್ದಾರೆ. ಒಮ್ಮೆ ಅವರ ಶಿಷ್ಯನೊಬ್ಬನಿಗೆ ಅವರು ಹೀಗೆ ಸಿಡಿದು ಹೇಳುತ್ತಾರೆ: "ಇಲ್ಲಿಯವರೆಗೂ ಬ್ರಾಹ್ಮಣರಿಗೆ ಮೀಸಲಾಗಿತ್ತು ಧರ್ಮ. ಆದರೆ ಪ್ರಬಲ ಕಾಲಚಕ್ರ ಪ್ರವಾಹದಲ್ಲಿ ಅವರು ಇಂದು ಅದೇ ಸ್ಥಳದಲ್ಲಿ ಇರಲಾರರು. ದೇಶದ ಪ್ರತಿಯೊಬ್ಬರೂ ಧರ್ಮವನ್ನರಿಯುವಂತೆ ಮಾಡಲು ತೊಡಗಿ. ಬ್ರಾಹ್ಮಣರಷ್ಟೆ ತಮಗೆ ಹಕ್ಕಿದೆ ಎಂಬ ಭಾವನೆ ಅವರ ಮನಸ್ಸಿನಲ್ಲಿ ನಾಟುವಂತೆ ಮಾಡಿ. ಪ್ರತಿಯೊಬ್ಬರಿಗೂ ಚಂಡಾಲರಿಗೂ ಈ ಪ್ರಜ್ವಲಿಸುವ ಮಂತ್ರದೀಕ್ಷೆ ಕೊಡಿ. ಸರಳ ಮಾತಿನಲ್ಲಿ ಅವರಿಗೆ ಜೀವನ ವ್ಯಾಪಾರ, ವ್ಯವಹಾರ, ವ್ಯವಸಾಯ ಮುಂತಾದುವುಗಳಲ್ಲಿ ಶಿಕ್ಷಣ ಕೊಡಿ. ಇದನ್ನು ನೀನು ಮಾಡಲಶಕ್ತನಾದಲ್ಲಿ ನಿನ್ನ ವಿದ್ಯಾಭ್ಯಾಸ ಮತ್ತು ಸಂಸ್ಕೃತಿಗೆ ಧಿಃಕಾರ! ನಿನ್ನ ವೇದವೇದಾಂತ ವ್ಯಾಸಂಗಕ್ಕೆ ಧಿಃಕಾರ!" ವಿವೇಕಾನಂದರು ಇಂದು ಸಾರಿದ ಆ ಆದರ್ಶವನ್ನು ಅಂದೇ ಅಕ್ಷರಶಃ ಪಾಲಿಸಿದ ಯೋಗ್ಯ ನಿದರ್ಶನವನ್ನಾಗಿ ಬಸವಣ್ಣನವರನ್ನು ಕಾಣುತ್ತೇವೆ.

ಮತ್ತೊಂದು ಕಡೆ ಅವರು ಹೀಗೆ ಹೇಳುತ್ತಾರೆ: "ಇಂದಿನ ಹಿಂದೂಧರ್ಮ ಜ್ಞಾನಮಾರ್ಗವೂ ಅಲ್ಲ, ಭಕ್ತಿಮಾರ್ಗವೂ ಅಲ್ಲ. ಅವರ ಧರ್ಮವೇ ಅಸ್ಪೃಶ್ಯತೆ. 'ನನ್ನನ್ನು ಮುಟ್ಟಬೇಡ, ನನ್ನನ್ನು ಮುಟ್ಟಬೇಡ' ಎಂಬುದರಲ್ಲೇ ಅದರ ವರ್ಣನೆ ಮುಗಿಯುತ್ತದೆ. ಅಸ್ಪೃಶ್ಯತೆ ಎಂಬ ಅಂಧ ಅಧರ್ಮದಲ್ಲಿ ನಿಮ್ಮ ಜೀವನ ನಾಶವಾಗದಂತೆ ಜೋಪಾನವಾಗಿ ನೋಡಿಕೊಳ್ಳಿ."

ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ಕುರಿತು ವಿಡಂಬನಪೂರ್ವಕವಾಗಿ ಕಟುವಾಗಿ ಹೀಗೆ ಹೇಳುತ್ತಾರೆ: "ಬ್ರಾಹ್ಮಣರ ಸ್ವಂತ ಕೆಲಸ

ಸಿದ್ಧಿಸುವುದಾದರೆ ಬ್ರಾಹ್ಮಣೇತರರನ್ನು ಬೇಕಾದರೂ ಮುಟ್ಟಬಹುದು. ನಿಮ್ಮ ಕೆಲಸವಾದ ಮೇಲೆ ಮುಳುಗಿ ಸ್ನಾನಮಾಡಿಬಿಡಬಹುದು. ಏಕೆಂದರೆ ಬ್ರಾಹ್ಮಣೇತರರ ಜಾತಿಯು ಅಶುದ್ಧ. ಬೇರೆ ಸಮಯಗಳಲ್ಲಿ ಅವರನ್ನು ಮುಟ್ಟಬಾರದು! ಬೈರಾಗಿಗಳು, ಸನ್ಯಾಸಿಗಳು ಮತ್ತು ಒಂದು ಪಂಗಡದ ಬ್ರಾಹ್ಮಣರು ಈ ದೇಶವನ್ನು ಹಾಳುಮಾಡಿರುವರು. ಕಳ್ಳತನ, ಮೋಸ ಇವುಗಳನ್ನೇ ಯಾವಾಗಲೂ ಆಲೋಚಿಸುತ್ತಾ ಆ ಜನರು ಧರ್ಮಬೋಧಕರಂತೆ ನಟಿಸುವರು. ತಕ್ಷಣವೇ ನಮ್ಮನ್ನು ಮುಟ್ಟಬೇಡ ಎಂದು ಕಿರುಚುವರು! ಆಃ! ಎಂತಹ ಮಹತ್ಕಾರ್ಯವನ್ನು ಅವರು ಮಾಡುತ್ತಿರುವರು!"

ಕಾಲಕ್ರಮದಲ್ಲಿ ಸಮಸ್ತ ಭರತಖಂಡವನ್ನೂ ಬ್ರಾಹ್ಮಣ್ಯಪದವಿಗೆ ಏರಿಸಬೇಕೆಂಬುದು ಅವರ ಅಭಿಲಾಷೆಯಾಗಿತ್ತು. ಸಾಮಾನ್ಯರನ್ನು ದೂರ ತಳ್ಳಿ ನಾವೇ ದೇಶದ ದುರ್ಗತಿಗೆ ಕಾರಣರಾಗಿದ್ದೇವೆ. ಅವರಿಗೆ ಅಭಯಕೊಟ್ಟು ಮೇಲೆತ್ತಬೇಕು ಎಂಬುದು ಅವರ ಭಾವನೆ. ಅನೇಕರಿಗೆ ಅವರು ತಮ್ಮ ಹಸ್ತದಿಂದಲೇ ಜನಿವಾರಗಳನ್ನು ಕೊಟ್ಟು ಧರಿಸುವಂತೆ ಮಾಡುತ್ತಾರೆ. ಅವರ ಶಿಷ್ಯಕೋಟಿಯಲ್ಲೂ ಅವರು ಕಟ್ಟಿದ ಮಹಾ ಸಂಘದಲ್ಲೂ ಆ ಜಾತಿ ಈ ಜಾತಿ ಎನ್ನದೆ ಎಲ್ಲ ಜಾತಿ ಮತದವರೂ ಸಂಗಮಿಸಿದ್ದನ್ನು ಕಾಣುತ್ತೇವೆ.

ಹೀಗೆ ಇವರಿಬ್ಬರೂ ಜಾತಿಪದ್ಧತಿಯ ದುಷ್ಪರಿಣಾಮದಿಂದ ಸಮಾಜವನ್ನು ಪಾರುಮಾಡಲು ಪ್ರಯತ್ನಿಸಿದರು. ಆದರೆ ಒಂದು ದೃಷ್ಟಿಯಿಂದ—ತಾತ್ವಿಕ ಆಲೋಚನೆಯಿಂದಲ್ಲದೆ ಕೇವಲ ಆಚರಣೆಯ ದೃಷ್ಟಿಯಿಂದ—ನೋಡಿದಾಗ, ವಿವೇಕಾನಂದರಿಗಿಂತ ಬಸವಣ್ಣನವರು ಒಂದು ಹೆಜ್ಜೆ ಮುಂದಿಟ್ಟಂತೆ ತೋರುತ್ತದೆ. ಇದಕ್ಕೆ ಸಾಕಷ್ಟು ಕಾರಣವೂ ಇದೆ. ವಿವೇಕಾನಂದರ ಕಾಲಕ್ಕೆ ಪ್ರಪಂಚವೆಲ್ಲಾ ಒಂದಾಗಿ ಹತ್ತಿರಕ್ಕೆ ಸರಿದ ಸಮಯವಾದ್ದರಿಂದ, ಅವರ ಕಾರ್ಯಕ್ಷೇತ್ರ ಅಷ್ಟೊಂದು ವಿಶಾಲವಾಗಿತ್ತು. ಬಸವಣ್ಣನವರು ಯಾವುದನ್ನು ಸರ್ಕಾರ ಮತ್ತು ಸಮಾಜವನ್ನು ಎದುರು ಹಾಕಿಕೊಂಡು, ಅವರಿಂದ ಉಂಟಾದ ಕಿರುಕುಳವನ್ನೆಲ್ಲಾ ಸಹಿಸಿ ಸಾಧಿಸಬೇಕಾಯಿತೊ, ಅದನ್ನು ವಿವೇಕಾನಂದರ ಕಾಲಕ್ಕಾಗಲೆ ಸರ್ಕಾರವೆ ಕಾನೂನಿನಿಂದಲೆ ಒಪ್ಪಿಕೊಂಡುಬಿಟ್ಟಿತ್ತು. ಪಾಶ್ಚಾತ್ಯ ಸಂಪರ್ಕದಿಂದ ಉಂಟಾದ ಹೊಸ ವಿಚಾರಧಾರೆಯಿಂದ ಸಮಾಜವೂ ತಾತ್ವಿಕವಾಗಿಯಾಗಿಯಾದರೂ ಅದನ್ನು ಒಪ್ಪಿಕೊಳ್ಳುವ ಮಟ್ಟಕ್ಕೆ ಏರಿತ್ತು. ಆದರೆ ಬಸವೇಶ್ವರರ ಕಾಲದಲ್ಲಿ ಹಾಗಲ್ಲ; ಪ್ರಾಯೋಗಿಕವಾಗಂತೂ ಇರಲಿ, ತಾತ್ವಿಕವಾಗಿಯೂ ಅದನ್ನು ಒಪ್ಪುವ ಮಟ್ಟದಲ್ಲಿರಲಿಲ್ಲ—ಅಂದಿನ ಸಮಾಜ ಮತ್ತು ಸರ್ಕಾರ. ಆಗ ವರ್ಣಸಂಕರವೆಂಬುದು ರಾಜದ್ರೋಹ ಮತ್ತು ಸಮಾಜದ್ರೋಹವಾಗಿತ್ತು. ವರ್ಣಸಂಕರವಾಗದಂತೆ ನೋಡಿಕೊಳ್ಳುವುದು ರಾಜನ ಧರ್ಮಪರಿಪಾಲನೆಯ ಆದ್ಯಕರ್ತವ್ಯಗಳಲ್ಲಿ ಒಂದು. ಇಂತಹ ತುಮುಲಗಳ ಮಧ್ಯೆಯೂ ಧೀರ ಸ್ಥಿರಭಾವದಿಂದ ಆ ಸಾಹಸಕಾರ್ಯವನ್ನು

ಎಸಗುತ್ತಾರೆ ಮಹಾಪುರುಷ ಬಸವೇಶ್ವರರು. ಅಸ್ಪೃಶ್ಯರನ್ನು ಸಮಾನಸ್ಥರಂತೆ ಕಂಡು ಅವರಿಗೆ ಸಮಾಜದಲ್ಲಿ ಒಂದು ಉನ್ನತ ಸ್ಥಾನ ದೊರಕಿಸುತ್ತಾರೆ.

ಇತರ ಅನೇಕ ಮಹಾವ್ಯಕ್ತಿಗಳೂ ತಾತ್ವಿಕವಾಗಿ ಈ ಭಾವನೆ ಹೊಂದಿದ್ದು, ತಮ್ಮೆಡೆಗೆ ಬಂದ ಒಬ್ಬಿಬ್ಬರು ಕೆಳವರ್ಗದ ಭಕ್ತರನ್ನು ಆದರಿಸಿದ ಉದಾಹರಣೆಗಳು ಉಂಟು. ಆದರೆ ಬಸವಣ್ಣನವರಂತೆ ತಾವೇ ಅವರ ಬಳಿಗೆ ಇಳಿದುಹೋಗಿ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಈ ಕೆಲಸವನ್ನು ಪ್ರಾರಂಭಿಸಿ, ವರ್ಣಾಶ್ರಮ ಧರ್ಮ ನಿರಾಕರಣೆಯ ಮತ್ತು ಜಾತ್ಯತೀತ ಸಮಾಜ ನಿರ್ಮಾಣದ ಕಾರ್ಯದಲ್ಲಿ ಮುಂದುವರಿದವರನ್ನು ಕಾಣುವುದು ಅಪೂರ್ವ. ಆದರೆ ಅಂತಹ ಬಸವಣ್ಣನವರನ್ನೂ ಮುಂದಿನ ಅವರ ಅನುಯಾಯಿಗಳು ಒಂದು ಸಂಕುಚಿತ ಪಂಗಡಕ್ಕೆ ಒಳಗಾಗಿಸಿ, ಒಂದು ಜಾತಿಯ ವ್ಯಕ್ತಿಯನ್ನಾಗಿ ಮಾಡಿದರು. ಅವರು ಕೈಕೊಂಡ ಕಾರ್ಯ ಅದೇ ರೀತಿಯಲ್ಲಿ ಮುಂದುವರಿಸಿದ್ದರೆ, ಬಹುಶಃ ಈ ದೇಶದಲ್ಲಿ ಇಂದು ಹಿಂದೂ–ಮುಸಲ್ಮಾನ ಸಮಸ್ಯೆಯಾಗಲಿ, ನಾಗಾಲ್ಯಾಂಡಿನಂತಹ ಕ್ರೈಸ್ತ ಸಮಸ್ಯೆಯಾಗಲಿ ಉದ್ಭವಿಸುತ್ತಲೆ ಇರಲಿಲ್ಲವೇನೋ! ಅಲ್ಲದೆ ವೈದಿಕ ಧರ್ಮದ ಅಂಕುಡೊಂಕುಗಳನ್ನು ವಿರೋಧಿಸಿ ಬಸವಣ್ಣನವರು ಯಾವ ಕ್ರಾಂತಿಯನ್ನು ಪ್ರಾರಂಭಿಸಿದರೋ, ಅದು ಬರಬರುತ್ತಾ ಅವರ ಅನುಯಾಯಿಗಳ ಕೈಗೆ ಸಿಕ್ಕಿ ವೈದಿಕಧರ್ಮ ವಿರೋಧಿಯಾಗುವುದಕ್ಕೆ ಬದಲಾಗಿ ಅದಕ್ಕೆ ಪ್ರತಿಸ್ಪರ್ಧಿಯಾಗಿ ಪರಿಣಮಿಸಿತು.

ಗಾಂಧೀಜಿ ತಮ್ಮ ಜೀವಮಾನವನ್ನೆಲ್ಲಾ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಸವೆಸಿದರು. ಗಾಂಧೀಯುಗದ ಅನಂತರ ಬದುಕುತ್ತಿರುವ ನಾವು ಇಂದು ಆತ್ಮಸಾಕ್ಷಿಕವಾಗಿ ಪ್ರಶ್ನಿಸಿಕೊಂಡರೆ, ಅಂದು ಬಸವಣ್ಣನವರು ಸಾಧಿಸಿದ ಕಾರ್ಯದ ಮಹತ್ತು ಗೋಚರಿಸುತ್ತದೆ.

ಶರಣರ ಕಾಯಕ ಸಿದ್ಧಾಂತ ಅವರು ಸಮಾಜಕ್ಕೆ ಕೊಟ್ಟ ಮತ್ತೊಂದು ಅಮೂಲ್ಯ ಕಾಣಿಕೆ. ಯಾವ ವ್ಯಕ್ತಿಯೂ ಕೀಳಲ್ಲ; ಮೇಲು ಕೀಳು ಇರುವುದು ವೃತ್ತಿಯಲ್ಲಲ್ಲ, ಮನೋಧರ್ಮದಲ್ಲಿ. ನಿಷ್ಠೆ ಶ್ರದ್ಧೆಗಳಿಂದ ಯಾವ ವೃತ್ತಿಯನ್ನೇ ಆಗಲಿ ತಮ್ಮ ಮುಕ್ತಿಗೆ ಸಾಧನವನ್ನಾಗಿ ಮಾಡಿಕೊಳ್ಳಬಹುದು. ಸಮಾಜದಲ್ಲಿ ಪ್ರತಿಯೊಬ್ಬರೂ ಸ್ವತಃ ದುಡಿದು ತಿನ್ನಬೇಕು. ಕೊನೆಗೆ "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು." ಈ ಭಾವನೆ ಕೇವಲ ಧಾರ್ಮಿಕ ಪ್ರಗತಿಗಲ್ಲದೆ ಸಮಾಜದ ಆರ್ಥಿಕ ಸುಭದ್ರತೆಗೆ, ದೇಶ ಸ್ವಯಂಪೂರಿಪೂರ್ಣತೆ ಮತ್ತು ಸಮಾನತೆಯನ್ನು ಸಾಧಿಸಲು, ಪರಿಣಾಮಕಾರಿಯಾದ ಸಾಧನವಾಗಿದೆ. ಅದರಲ್ಲೂ ಇಂದು ಈ ಮನೋಧರ್ಮ ದೇಶಕ್ಕೆ ತುಂಬ ಅಗತ್ಯವಾಗಿದೆ. ನಾವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದರೂ, ಮಾನಸಿಕ ದಾಸ್ಯಭಾವನೆಯಿಂದ ಬಿಡುಗಡೆ ಹೊಂದಿಲ್ಲ. ವೃತ್ತಿಯಲ್ಲಿ ಮೇಲು ಕೀಳೆಂಬ ಭಾವನೆ, ಅದರಲ್ಲೂ ದುಡಿಮೆಯನ್ನು ಕುರಿತಾದ ಹೀನಭಾವನೆ ನಮ್ಮಲ್ಲಿ ಅತಿಯಾಗಿದೆ. ಇದು ಸೋಮಾರಿತನಕ್ಕೆ

ದಾರಿ ಮಾಡಿಕೊಡುತ್ತದೆ. ಆರೋಗ್ಯಕರ ಸಮಾಜದ ಲಕ್ಷಣವಲ್ಲ ಇದು. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದು ನಿರ್ದಿಷ್ಟ ಪ್ರಮಾಣದ ಶಕ್ತಿ ಇರುತ್ತದೆ. ಅದು ರಚನಾತ್ಮಕ ಕಾರ್ಯದೆಡೆಗೆ ತಿರುಗಿ ಹೊರಹೊಮ್ಮದಿದ್ದರೆ, ವಿನಾಶಾತ್ಮಕ ಕ್ರಿಯೆಯೆಡೆಗೆ ತಿರುಗುತ್ತದೆ. ಇಂದು ದೇಶದಲ್ಲಿ ನಡೆಯುತ್ತಿರುವ ಅನೇಕ ರಾಷ್ಟ್ರಘಾತಕ ಘಟನೆಗಳಿಗೆ ಇದೂ ಒಂದು ಪ್ರಮುಖ ಕಾರಣ. ಕಾಯಕತತ್ವ ಇವಕ್ಕೆಲ್ಲಾ ಪರಿಹಾರರೂಪವಾಗಿದೆ; ವೃತ್ತಿಗೌರವ, ಆತ್ಮಗೌರವ, ಆಸ್ಥೆಗಳಿಂದ ದೇಶದ ಏಳಿಗೆಗೆ ಕಾರಣವಾಗುತ್ತದೆ.

ಶರಣರು ಪ್ರತಿಯೊಂದು ವೃತ್ತಿಯನ್ನೂ ಅತ್ಯಂತ ಗೌರವಭಾವದಿಂದ ಕಾಣುತ್ತಿದ್ದರು. ಅದರಲ್ಲಿ ಮೇಲುಕೀಳುಗಳಿಲ್ಲ. ಬಸವಣ್ಣನವರು ಒಂದು ಕಡೆ ಹೀಗೆ ಹೇಳುತ್ತಾರೆ: "....ಕಾಸಿ ಕಮ್ಮರನಾದ, ಬೀಸಿ ಮಡಿವಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ....ಇದು ಕಾರಣ ಕೂಡಲಸಂಗಮದೇವಾ ಲಿಂಗಸಂಗವನರಿತವನೆ ಕುಲಜನು." ಆದ್ದರಿಂದ ಅವರ ವೃತ್ತಿಯಿಂದ ಅವರ ಜಾತಿಯನ್ನು, ಅದರಿಂದ ಅವರ ನೀತಿಯನ್ನು ಅಳೆಯಲಾಗುವುದಿಲ್ಲ. ನಾನಾ ವೃತ್ತಿಯ ಜನರನ್ನು ಶರಣರೆಂದು ಗೌರವಿಸಿದ್ದನ್ನು ಕಾಣುತ್ತೇವೆ: ಮೋಳಿಗೆ ಮಾರಯ್ಯ, ಕುಂಬಾರ ಗುಂಡಯ್ಯ, ಮಾದಾರ ಚೆನ್ನಯ್ಯ, ಬೇಟೆಗಾರ ಸಂಗಯ್ಯ, ಮೇದಾರ ಕೇತಯ್ಯ, ಅಗಸರ ಮಾಚಯ್ಯ, ಅಂಬಿಗರ ಚೌಡಯ್ಯ, ಸುಂಕದ ಬಂಕಣ್ಣ, ಸಮಗಾರ ಹರಳಯ್ಯ ಇತ್ಯಾದಿ. ಅವರು ಶರಣರಾದ ಮಾತ್ರಕ್ಕೆ ತಮ್ಮ ವೃತ್ತಿಯನ್ನು ಬಿಟ್ಟು ಪೌರೋಹಿತ್ಯವನ್ನು ಕೈಕೊಳ್ಳಲಿಲ್ಲ. ಅನೇಕರು ತಮ್ಮ ವೃತ್ತಿಯನ್ನು ಸಮಾಜಕ್ಕೆ ಸವಾಲು ಹಾಕಿದಂತೆ ಹೆಮ್ಮೆಯಿಂದಲೆ ತಮ್ಮ ಹೆಸರಿನ ಹಿಂದೆ ಸೇರಿಸಿಕೊಂಡಿದ್ದಾರೆ.

ವಿವೇಕಾನಂದರ ಮಾನಸಪುತ್ರಿಯಾದ ನಿವೇದಿತಾ ತಮ್ಮ ಗುರುವಿನ ಬಗ್ಗೆ ಹೇಳುವ ಈ ಕೆಳಗಿನ ಮಾತು ಕಾಯಕಸಿದ್ಧಾಂತಕ್ಕೆ ತಾತ್ವಿಕ ವ್ಯಾಖ್ಯಾನ ಸ್ವರೂಪವಾಗಿದೆಯೋ ಎಂಬಂತಿದೆ:

"ಏಕ ಮತ್ತು ಅನೇಕ ಇವು ಒಂದೇ ಸತ್ಯದಿಂದ ಆವಿರ್ಭವಿಸಿ, ಬೇರೆ ಬೇರೆ ಭೂಮಿಕೆಗಳಿಗೆ, ಬೇರೆ ಬೇರೆ ಕಾಲದೇಶಗಳಿಗೆ ಅನುಗುಣವಾಗಿ ನಮಗೆ ಗೋಚರಿಸಿಸುತ್ತವೆ."

"ನಮ್ಮ ಆಚಾರ್ಯನ ಜೀವನಕ್ಕೆ ಒಂದು ವಿಶಿಷ್ಟ ವ್ಯಕ್ತಿವಿಶೇಷತ್ವವನ್ನು ತಂದುಕೊಟ್ಟಿರುವುದು ಇದೇ. ಆ ಕಾರಣಕ್ಕಾಗಿಯೆ ಆತ ಪ್ರಾಚೀನ ಮತ್ತು ಅರ್ವಾಚೀನಗಳಿಗೂ, ಪ್ರಾಚ್ಯ ಮತ್ತು ಪಾಶ್ಚಾತ್ಯಗಳಿಗೂ ಸಂಗಮಸ್ಥಾನವಾದ ಸಂಧಿಬಿಂದುವಾಗಿದ್ದಾನೆ. ಏಕ ಮತ್ತು ಅನೇಕ ಇವು ವಸ್ತುತಃ ಏಕಮೇವ ಅದ್ವಯವಾಗಿರುವ ಪಕ್ಷದಲ್ಲಿ, ಆಗ ಎಲ್ಲ ಪೂಜಾವಿಧಾನಗಳು ಮಾತ್ರವಲ್ಲ, ಎಲ್ಲ ರೀತಿಯ ಕೆಲಸಕಾರ್ಯಗಳೂ ಮಾತ್ರವಲ್ಲ, ಎಲ್ಲ ತೆರನ ಹೋರಾಟಗಳೂ

ಎಲ್ಲ ಸೃಷ್ಟಿಕಾರ್ಯಗಳೂ ಸಾಕ್ಷಾತ್ಕಾರದ ಪಥಗಳಾಗಿಬಿಡುತ್ತವೆ. ಅಲ್ಲಿಂದ ಮುಂದೆ ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಇವುಗಳ ಮಧ್ಯೆ ಯಾವ ಭೇದಭಾವವೂ ಉಳಿಯುವುದಿಲ್ಲ. ಕಾಯಕವೆ ಪ್ರಾರ್ಥನೆಯಾಗುತ್ತದೆ; ಭೋಗವೆ ತ್ಯಾಗವಾಗುತ್ತದೆ; ಬದುಕೆಲ್ಲ ತನಗೆ ತಾನೆ ಆಧ್ಯಾತ್ಮಸಾಧನೆಯಾಗುತ್ತದೆ. ಯೋಗ ಮತ್ತು ಕ್ಷೇಮಗಳಂತೆ ತ್ಯಾಗ ಮತ್ತು ಪರಿತ್ಯಾಗಗಳೂ ಸಮನಿಷ್ಠವಾಗಿರುತ್ತವೆ.

"ಈ ತತ್ತ್ವದ ಸಾಕ್ಷಾತ್ಕಾರವೇ ವಿವೇಕಾನಂದರನ್ನು ಮಹಾನಿಷ್ಕಾಮ ಕರ್ಮಬೋಧಕರನ್ನಾಗಿ ಮಾಡಿದೆ–ಜ್ಞಾನ ಮತ್ತು ಭಕ್ತಿಗಳಿಂದ ವಿಲುಪ್ತವಾದುದು ಎಂಬರ್ಥದಲ್ಲಲ್ಲ, ಜ್ಞಾನ ಮತ್ತು ಭಕ್ತಿಗಳ ಅಭಿವ್ಯಕ್ತಿ ಎಂಬರ್ಥದಲ್ಲಿ. ಭಗವತ್ ಸಾಕ್ಷಾತ್ಕಾರ ಮಾಡಲು ಆತನಿಗೆ ಸಂನ್ಯಾಸಿಯ ತಪಸ್ಸಿನ·ಗುಹಾಲಯ ಅಥವಾ ದೇವಸ್ಥಾನದ ಪವಿತ್ರದ್ವಾರ, ಇವುಗಳಷ್ಟೆ ಅರ್ಹವಾದ ಸ್ಥಾನಗಳಾಗುತ್ತವೆ— ಕರ್ಮಾಗಾರವಾಗಲಿ, ಗುರುಕುಲವಾಗಲಿ ಅಥವಾ ಹೊಲಗದ್ದೆಗಳಾಗಲಿ. ಆತನ ದೃಷ್ಟಿಯಲ್ಲಿ ಜನಸೇವೆಗೂ ಜನಾರ್ದನಸೇವೆಗೂ ಮಧ್ಯೆ ಯಾವ ಅಂತರವೂ ಇಲ್ಲ. ಆತನಿಗೆ ಪೌರುಷವೇ ಶ್ರದ್ಧೆ ; ನೈಜ ನೀತಿವಂತಿಕೆಯೆ ಆಧ್ಯಾತ್ಮಿಕತೆ."[1]

ಮತ್ತೊಂದು ಕಡೆ ವಿವೇಕಾನಂದರು ಹೀಗೆ ಹೇಳುತ್ತಾರೆ: " ಈ ಜೀವನದಲ್ಲಿ ಪದವಿ ಯಾವುದಾಗಲಿ, ಅದರ ಕರ್ತವ್ಯಗಳ ಫಲಾಸಕ್ತಿಯಿಲ್ಲದ ಧರ್ಮಾಚರಣೆ

---

[1] The many and the one are the same Reality, perceived by the mind at different times and in different attituides.

It is this which adds it's crowning significance to our Master's life, for here he becomes the meeting-point, not only of East and West, but also of past and future. If the many and the one be indeed the same Reality, then it is not all modes of worship alone, but equally all modes of work, all modes of struggle, all modes of creation, which are paths of realization. No distniction, henceforth, between sacred and secular. To labour is to pray. To conquer is to renounce. Life is itself religion. To have and to hold is as stern a trust as to quit and to avoid.

"This is the realization which makes Vivekananda the great preacher of Karma (detached action), not as divorced form, but as expressing Jnana (self-knowledge) and Bhakti (love of God) To him the workshop, the study, the army and the field are as true and fit scenes for the meeting of God with man as the cell of the monk or the door of the temple. To him there is no difference between service of man and worship of God, between manliness and faith, between true righteousness and spirituality."

ಯಿಂದ ಆತ್ಮಪರಿಪೂರ್ಣತೆಯ ಪರಮಾನುಭೂತಿ ಉಂಟಾಗುತ್ತದೆ....ಅವುಗಳ ವಿಷಯದಲ್ಲಿ ಇದು ಮೇಲು ಇದು ಕೀಳು ಎಂಬುದು ಇರಲಾರದು." ಕರ್ಮ ತತ್ಪರತೆಯನ್ನು ಅವರು ಮತ್ತೆಮತ್ತೆ ಒತ್ತಿ ಹೇಳಿದ್ದಾರೆ. ತಮ್ಮ ಜೀವನವನ್ನೆಲ್ಲಾ ಪ್ರಚಂಡಕರ್ಮದಲ್ಲಿ ಕಳೆದ ಮಹಾ ಕರ್ಮಯೋಗಿಯಾಗಿದ್ದಾರೆ ಅವರು. ಒಂದು ದೃಷ್ಟಿಯಿಂದ ನೋಡಿದಾಗ, ಗೀತೋಪನಿಷತ್ತಿನ ಕರ್ಮಯೋಗವೇ ಸರಳರೂಪದಲ್ಲಿ, ಸಾಮೂಹಿಕ ಆಚರಣೆಯ ಮಟ್ಟದಲ್ಲಿ ನವೀನ ಹೆಸರಿನಿಂದ ಮೈದೋರಿದೆ ಕಾಯಕ ಸಿದ್ಧಾಂತವಾಗಿ.[2]

ನಮ್ಮ ಆಧುನಿಕ ದೃಷ್ಟಿಗೆ ಒಗ್ಗುವ ಮತ್ತು ಆವಶ್ಯಕವಾಗಿರುವ ಮತ್ತೊಂದು ಸಂಗತಿ ಎಂದರೆ, ಸಮಾಜದಲ್ಲಿಯ ಅಂಧಶ್ರದ್ಧೆಯ ವಿರುದ್ಧ ಹೋರಾಡಿದ ಬಸವಣ್ಣ ನವರ ವಿಚಾರಬುದ್ಧಿ. ಸನಾತನವಾದ ಮಾತ್ರಕ್ಕೆ ಸಕಲವೂ ಅಪೌರುಷೇಯವೆಂಬ ಭಾವನೆ ಜನರಲ್ಲಿ ಬೇರೂರಿತ್ತು. ಆತ್ಮಸಾಕ್ಷಿಯ ಒರೆಗೆ ಹಚ್ಚಿ ಪ್ರತಿಯೊಂದನ್ನೂ ಪರೀಕ್ಷಿಸಿ ಒಪ್ಪಿಕೊಳ್ಳುವ ವಿಚಾರಮನೋಧರ್ಮವಿರಲಿಲ್ಲ. ಅದನ್ನು ಕಂಡು ಕನಲಿ ಹೀಗೆ ಹೇಳುತ್ತಾರೆ ಬಸವಣ್ಣನವರು: "ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರೆತ್ತುವೆ; ಆಗಮದ ಮೂಗ ಕೊಯ್ವೆ...."

ವಿವೇಕಾನಂದರಲ್ಲಂತೂ ಈ ವಿಚಾರಬುದ್ಧಿ ಸದಾ ಉಜ್ವಲವಾಗಿರುತ್ತಿತ್ತು. ಈ ಕೆಳಗಿನ ಒಂದು ಸಂದರ್ಭ ಅದಕ್ಕೆ ಉದಾಹರಣೆ. ಒಮ್ಮೆ ವಿವೇಕಾನಂದರು ಹೇಳಿದ ಅಭಿಪ್ರಾಯ ಶಂಕರಾಚಾರ್ಯರದಕ್ಕಿಂತ ಭಿನ್ನವಾಗಿದೆಯಲ್ಲಾ, ಎಂದು ಯಾರೊ ಪ್ರಶ್ನಿಸುತ್ತಾರೆ. ಅವರು ಹೀಗೆ ಗಂಭೀರವಾಗಿ ಉತ್ತರಿಸುತ್ತಾರೆ: "ಶಂಕರಾಚಾರ್ಯರೂ ಒಬ್ಬ ಮನುಷ್ಯ; ನೀನೂ ಒಬ್ಬ ಮನುಷ್ಯ: ನೀನು ನಿನ್ನಂತೆ ಆಲೋಚಿಸಬಹುದು."

ಸಮಾಜದಲ್ಲಿ ಇಂದು ಜ್ಯೋತಿಷ್ಯ, ರಾಹುಕಾಲ, ಗುಳಿಕಕಾಲಗಳ ಹಾವಳಿ ವಿಪರೀತ. ಪ್ರತಿಯೊಂದು ಕೆಲಸಕ್ಕೂ ಅವುಗಳ ಕೈ ಹಾಕ್ಕೈಸುವವರನ್ನು ಕಾಣು ತ್ತೇವೆ. ಚುನಾವಣೆ ಸಮೀಪಿಸುತ್ತಿದ್ದಂತೆ ರಾಜಕೀಯ ಕ್ಷೇತ್ರದಲ್ಲೂ ಇದು ತಪ್ಪಿದ್ದಲ್ಲ. ದೊಡ್ಡ ದೊಡ್ಡ ರಾಜಕಾರಣಿಗಳ ಸೋಗು ಹಾಕುವವರೂ ಗುಪ್ತವಾಗಿ

---

[2] ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ
ಮಾ ಕರ್ಮಫಲ ಹೇತು ರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ

—ಶ್ರೀಮದ್ಭಗವದ್ಗೀತಾ

ಕುರ್ವನ್ನೇವೇಹ ಕರ್ಮಾಣಿ
ಜಿಜೀವಿಷೇಚ್ಛತಂ ಸಮಾಃ |
ಏವಂ ತ್ವಯಿ ನಾನ್ಯಥೇತೋಽಸ್ತಿ
ನ ಕರ್ಮಲಿಪ್ಯತೇ ನರಃ ||

— ಈಶಾವಾಸ್ಯೋಪನಿಷತ್

ಜ್ಯೋತಿಷ್ಯದ ಕೈ ಕಾಯುವುದನ್ನು ಪತ್ರಿಕೆಗಳಲ್ಲಿ ಓದಿರುತ್ತೇವೆ. ಇದು ಸಮಾಜದಲ್ಲಿ ಪುರುಷಪ್ರಯತ್ನ, ಆತ್ಮಪ್ರತ್ಯಯವನ್ನು ಮಣ್ಣುಪಾಲು ಮಾಡಿ, ದೇಶ ಒಂದು ರೀತಿಯ ಜಡತ್ವದತ್ತ ಸರಿಯಲು ದಾರಿ ಮಾಡಿಕೊಡುತ್ತದೆ. ಅಂದೇ ಇದನ್ನೆಲ್ಲಾ ಕುರಿತು ಬಸವಣ್ಣನವರು ವಿಡಂಬನಪೂರ್ವಕವಾಗಿ ಹೀಗೆ ಹೇಳಿದ್ದಾರೆ: "ಹಾವಾಡಿಗನು ಮೂಕೊರತೆಯು ತನ್ನ ಮಗನ ಮದುವೆಗೆ ಶಕುನವ ನೋಡಹೋದಾಗ, ಇದಿರಲೊಬ್ಬ ಮೂಕೊರತೆಯ ಹಾವಾಡಿಗನ ಕಂಡು ಶಕುನ ಹೊಲ್ಲೆಂಬ ಚದುರ ನೋಡಾ ತನ್ನ ಸತಿಯು ಮೂಕೊರತೆ ತನ್ನ ಕೈಯಲ್ಲಿ ಹಾವು ತನ್ನ ಭಿನ್ನವ ನರಿಯದೆ ಅನ್ಯರನೆಂಬ ಕುನ್ನಿಯನೇನೆಂಬ ಕೂಡಲಸಂಗಮದೇವಾ."

ಮತ್ತೊಂದು ಕಡೆ ಹೀಗೆ ಹೇಳುತ್ತಾರೆ: "ಲಗ್ನವೆಲ್ಲಿಯದೊ ವಿಘ್ನವೆಲ್ಲಿಯದೊ ಸಂಗಯ್ಯ? ದೋಷವೆಲ್ಲಿಯದೊ ದುರಿತವೆಲ್ಲಿಯದೊ ಸಂಗಯ್ಯ? ನಿಮ್ಮ ಮಾಣದೆ ನೆನೆವಂಗೆ ಭವಕರ್ಮವೆಲ್ಲಿಯದೋ ಕೂಡಲ ಸಂಗಮದೇವಾ?" ದೇವನನ್ನು ಹೃತ್ಪೂರ್ವಕ ನೆನೆದು ಮಾಡುವ ಕಾಲವೆ ಶುಭಕಾಲ. ಸರ್ವಜ್ಞ, ಸರ್ವಶಕ್ತನಾದ ಅವನನ್ನೂ ಮೀರಿ ನಮಗೆ ಕೆಡುಕು ಅಥವಾ ಒಳಿತನ್ನು ಮಾಡಬಲ್ಲುವೆ ಗ್ರಹ, ನಕ್ಷತ್ರ, ದಿನ, ತಿಥಿಗಳು?

ಈ ವಿಚಾರಗಳನ್ನೆಲ್ಲಾ ಸಮಾಜದಲ್ಲಿ ಜೀವಂತವಾಗಿ ಇಟ್ಟಿರಲು ಮತ್ತು ಪ್ರಚಾರಮಾಡಲು ಅವರು ಸಂಸ್ಥೆಗಳನ್ನು ಕಟ್ಟಿದರು. ಅದರಲ್ಲೂ, ಕಲ್ಯಾಣದಲ್ಲಿ ಸ್ಥಾಪಿತವಾದ 'ಅನುಭವಮಂಟಪ' ಕರ್ಣಾಟಕದ ಧಾರ್ಮಿಕ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಅಲ್ಲಿ ಸ್ತ್ರೀಪುರುಷ ಮೇಲುಕೀಳು ಭಾವವಿಲ್ಲದೆ ಸರ್ವರಿಗೂ ಸಮಾನವಾದ ಅವಕಾಶ. ಮಂತ್ರಿ ಬಸವಣ್ಣ, ಡೋಹರ ಕಕ್ಕಯ್ಯ ಇಬ್ಬರಿಗೂ ಅಲ್ಲಿ ಒಂದೇ ಸ್ಥಾನ. ತಮ್ಮ ತಮ್ಮ ಕೆಲಸಗಳಿಗೆ ಹೋದಾಗ ಮಾತ್ರ ಒಬ್ಬ ಮಂತ್ರಿ, ಮತ್ತೊಬ್ಬ ಡೋಹರವ. ಅಲ್ಲಿ ನಡೆದ ಚರ್ಚೆ ವಿಚರ್ಚೆಯ ವಿಚಾರ ಮಥನದಿಂದ ನಿಜವಾದ ಸತ್ಯಮಾರ್ಗವನ್ನರಿತು, ಅದನ್ನು ಪ್ರಚಾರಕ್ಕೆ ತಂದು ಆಚರಿಸಲು ಪ್ರಯತ್ನಿಸಿದರು ಶರಣರು.

ಸಂಘಬದ್ಧರಾಗಿ ಕೆಲಸಮಾಡುವ ಆವಶ್ಯಕತೆಯನ್ನು ವಿವೇಕಾನಂದರೂ ಮನಗಂಡು, ತಮ್ಮ ಸೋದರ ಸಂನ್ಯಾಸಿಗಳನ್ನೂ ಶಿಷ್ಯರನ್ನೂ ಸೇರಿಸಿ 'ಶ್ರೀ ರಾಮ ಕೃಷ್ಣ ಮಿಶನ್' ಎಂಬ ಮಹಾಸಂಘವನ್ನು ಸ್ಥಾಪಿಸಿದರು. ಪ್ರಾಚೀನ ಸಂಪ್ರದಾಯ ರೀತಿಯ ಸಂನ್ಯಾಸಿಗಳಂತೆ ಬಾಳುವುದಕ್ಕಿಂತ ದೇಶದಲ್ಲಿ ತಾವೂ ಕರ್ಮತತ್ಪರರಾಗಿ ಸೇವೆ ಸಲ್ಲಿಸಬೇಕಾದ ಆವಶ್ಯಕತೆ ಇರುವುದನ್ನು ಅವರು ಮನ ಗಂಡರು. ಉಪನ್ಯಾಸ ಮಾಡುವುದರಿಂದ ಹಿಡಿದು, ರೋಗಿಗಳ ದಲಿತರ ಸೇವಾ ಶುಶ್ರೂಷೆ ಮಾಡುವುದು, ಪುಸ್ತಕಭಂಡಾರ, ಆಸ್ಪತ್ರೆ, ಶಾಲೆಗಳು ಇತ್ಯಾದಿ ಸ್ಥಾಪಿಸು ವವರೆಗೂ ದೇಶದಾದ್ಯಂತ ಸಂಘಗಳ ಮೂಲಕ ಕೆಲಸ ಪ್ರಾರಂಭಿಸಿ, ದೇಶದಲ್ಲಿ ಒಂದು ನವಶಕ್ತಿ ಸಂಚರಿಸುವಂತೆ ಮಾಡಿದರು. ಇಂದೂ ಆ ಸಂಸ್ಥೆ

‘ ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯಚ ’ ಎಂದು ಅವರು ಹಾಕಿದ ಆದರ್ಶದ ತಳಹದಿಯ ಮೇಲೆ ಮೌನವಾಗಿ ತನ್ನ ಕೆಲಸ ಸಾಗಿಸುತ್ತಿರುವುದನ್ನು ಕಾಣುತ್ತೇವೆ.

ಹೀಗೆ ಈ ಇಬ್ಬರು ಮಹಾವಿಭೂತಿಗಳ ನಿಜವಾದ ನೆಲೆ ಆಧ್ಯಾತ್ಮಿಕವಾದರೂ ಸಮಾಜದ ಉದ್ಧಾರಕ್ಕೆ ಮತ್ತು ಪ್ರಗತಿಗೆ ಅವರು ಶ್ರಮಿಸಿದ್ದಾರೆ. ಧಾರ್ಮಿಕತೆಯ ಹೆಸರಿನಲ್ಲಿ ಮತಾಚಾರಗಳ ಉಸುಬಿನಲ್ಲಿ ಸಿಕ್ಕಿಬಿದ್ದಿದ್ದ ಜನತೆಯನ್ನು ಮೇಲೆತ್ತಿ ಶುದ್ಧ ಆಧ್ಯಾತ್ಮಿಕತೆಯಿಂದ ಅವರ ಚೇತನ ಸ್ಫೂರ್ತಿಗೊಳ್ಳುವಂತೆ ಮಾಡಿದ್ದಾರೆ. ವರ್ಣಾಶ್ರಮ ವ್ಯವಸ್ಥೆಯನ್ನೂ ಜಾತಿಪದ್ಧತಿಯ ಅವ್ಯವಸ್ಥೆಯನ್ನೂ ಸಂಪೂರ್ಣ ಮೂಲೋತ್ಪಾಟನೆ ಮಾಡಿ ವೈದಾಂತಿಕವಾದ ವಿಶ್ವಧರ್ಮ ಸ್ಥಾಪನೆಯ ಪುನರುದ್ಧಾರಕ್ಕೆ ಕಾರಣರಾಗಿದ್ದಾರೆ.

ವಸ್ತು ಕೋಶ

ಭವಿಷ್ಯತ್ ಶಾಸ್ತ್ರದ ವರ್ತಮಾನ

ಮನಶ್ಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದ ಅನೇಕ ಶಾಸ್ತ್ರಗಳು ಇಂದು ಕವಲುದಾರಿಯಲ್ಲಿ ನಿಂತಿವೆ. ಗತಕಾಲದ ಸಂಗತಿಗಳನ್ನು ವಿಶ್ಲೇಷಿಸಿ ಅವುಗಳಿಂದ ಹೊಮ್ಮುವ ಸೂತ್ರಗಳನ್ನು ಸೂಚಿಸುವುದಷ್ಟೇ ಅವುಗಳ ಕೆಲಸವಲ್ಲ. ಇಂದು ಈ ನಾನಾ ಕ್ಷೇತ್ರಗಳಲ್ಲಿ ಪ್ರಕಟವಾಗುತ್ತಿರುವ ಸಾಮಗ್ರಿಸಾಹಿತ್ಯಗಳಲ್ಲಿ ಭವಿಷ್ಯದ ಬಗ್ಗೆಯೂ ಅನೇಕ ವಿಚಾರಗಳು ಕಂಡುಬರುತ್ತವೆ. ನಾಳೆಯ ಸಮಸ್ಯೆಗಳನ್ನೂ ಪ್ರವೃತ್ತಿಗಳನ್ನೂ ಇದಿರುಬದಿರಾಗಿ ಅವಲೋಕಿಸಿ ವಿಚಾರಿಸುವುದು ಸಮಾಜ ವಿಜ್ಞಾನದ ಅಧಿಕಾಧಿಕ ಹವ್ಯಾಸವಾಗಿದೆ.

ಪ್ರಕೃತಿವಿಜ್ಞಾನದ ಸೂತ್ರಗಳ ರೀತಿಯಲ್ಲಿ ಬಹುತೇಕ ತ್ರಿಕಾಲಾಬಾಧಿತವಾದ ಸೂತ್ರಗಳನ್ನು ರೂಪಿಸುವುದು ಸಮಾಜ ವಿಜ್ಞಾನಕ್ಕೆ ಸಾಧ್ಯವಿಲ್ಲ, ನಿಜ. ಆದರೂ ಇದರ ನಾನಾ ಶಾಖೆಗಳ ವೈಜ್ಞಾನಿಕ ಸ್ವರೂಪವನ್ನು ಇಂದು ಯಾರೂ ಪ್ರಶ್ನಿಸುವುದಿಲ್ಲ. ಮಾನವನ ಭವಿಷ್ಯಜೀವನವನ್ನು ಕುರಿತು ಇವು ಮಾಡುವ ಜಿಜ್ಞಾಸೆಗಳನ್ನು ತಳ್ಳಿಹಾಕುವಂತಿಲ್ಲ. ಇವನ್ನು ವಿಜ್ಞಾನವೆನ್ನಬಹುದು; ಅಥವಾ ಸಂಪ್ರದಾಯಜ್ಞಾನವೆನ್ನಬಹುದು. ಅದು ಮುಖ್ಯವಲ್ಲ. ಪ್ರತಿಯೊಂದು ವಿದ್ಯೆಯೂ ಸ್ವಯಂಪೂರ್ಣವೆನ್ನುವುದಾದರೆ, ಗತಕಾಲದಿಂದ ವರ್ತಮಾನಕ್ಕೂ ಅಲ್ಲಿಂದ ಭವಿಷ್ಯಕ್ಕೂ ಎಳೆದ ಗೆರೆ ಅಖಂಡವೆನಿಸುತ್ತದೆ. ಭವಿಷ್ಯತ್‌ಶಾಸ್ತ್ರ ಒಂದು ಅವೈಜ್ಞಾನಿಕವಾದ ಕಣಿಯಲ್ಲ. ಭವಿಷ್ಯದ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳ ಪ್ರಯೋಜನ ಪಡೆಯಬೇಕೇ ಬೇಡವೇ ಎಂಬುದನ್ನು ಇಂದು ನಾವು ತೀವ್ರವಾಗಿ ಪರಿಗಣಿಸಬೇಕಾಗಿದೆ.

ಜರ್ಮನ್ ಒಕ್ಕೂಟ ಗಣರಾಜ್ಯದ ವೈಜ್ಞಾನಿಕ ಸಹಕಾರ ಸಂಸ್ಥೆಯ 'ಲಾ ಅಂಡ್ ಸ್ಟೇಟ್' ಎಂಬ ಅರ್ಧವಾರ್ಷಿಕದಲ್ಲಿ (೧೯೭೦) ಬರ್ಲಿನ್ ಸ್ವತಂತ್ರ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಆಸಿಪ್ ಕೆ. ಫ್ಲೆಕ್‌ಥೀಮರು 'ಫ್ಯೂಚರಾಲಜಿ ಟುಡೇ' ಎಂಬ ಲೇಖನದಲ್ಲಿ ಈ ಬಗ್ಗೆ ಸ್ವಾರಸ್ಯಕರವಾದ ಚರ್ಚೆ ನಡೆಸಿದ್ದಾರೆ. ಫ್ಲೆಕ್‌ಥೀಮರು ಇಪ್ಪತ್ತು ವರ್ಷಗಳ ಹಿಂದೆ ಯೌವನಸಹಜವಾದ ಉತ್ಸಾಹದಿಂದ ಫ್ಯೂಚರಾಲಜಿ ಎಂಬ ಶಬ್ದ ಸೃಷ್ಟಿಸಿ ಪ್ರಯೋಗಿಸಿದಾಗ ಇದನ್ನು ಸ್ವಾಗತಿಸಿದವರು ಕೆಲವು ಜನ ಮಾತ್ರ. ಆಲ್ಡಸ್ ಹಕ್ಸ್ಲಿ, ಮ್ಯಾಕ್ಸ್ ಲರ್ನರ್, ಥಾಮಸ್ ಮ್ಯಾನ್, ಎಲ್. ಮಂಫರ್ಡ್, ಹ್ಯಾನ್ ಸೈಮನ್ಸ್,

ಪಿ. ಸೊರೊಕಿನ್ ಮತ್ತು ಆರ್ನಾಲ್ಡ್ ವುಲ್ಫರ್ಸ್ ಇದರ ಬಗ್ಗೆ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತಪಡಿಸಿದರು; ಭವಿಷ್ಯದ ಸಮಾಜ ಮತ್ತು ಸಂಸ್ಕೃತಿಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಬೇಕೆಂಬ ಸಲಹೆಯನ್ನು ಸ್ವಾಗತಿಸಿದರು. ಟಾಯ್ನ್‌ಬಿ, ಆಲ್ಫ್ರೆಡ್ ವೆಬರ್, ಕಾರ್ಲ್ ಮ್ಯಾನ್‌ಹೀಂ, ಫ್ರಾಂ, ರಾಬರ್ಟ್ ಜಂಗ್ಕ್, ಲೂಯಿ ಮಂಫರ್ಡ್ ಮತ್ತು ಫ್ರೆಡ್ ಎಲ್. ಪೊಲಾಕ್ ಮುಂತಾದವರು ನಮ್ಮ ಭಾವೀ ಬೆಳೆವಣಿಗೆಯನ್ನು ಇಡಿಯಾಗಿಯೋ ಬಿಡಿಯಾಗಿಯೋ ಪರಿಶೀಲಿಸಿದ್ದಾರೆ. ಇವರೆಲ್ಲ ಆದ್ಯಪ್ರವರ್ತಕರು. ಬರಲಿರುವ ವರ್ಷಗಳಲ್ಲಿ, ಬಹುಶಃ ದಶಕಗಳಲ್ಲಿ ಕೂಡ, ತಂತಮ್ಮ ಕ್ಷೇತ್ರಗಳಲ್ಲಿ ಕಂಡುಬರುವ ಪ್ರವೃತ್ತಿಗಳನ್ನು ಕುರಿತು ಅರ್ಥಶಾಸ್ತ್ರ, ವ್ಯವಹಾರಶಾಸ್ತ್ರ, ಜನಸಂಖ್ಯಾಶಾಸ್ತ್ರ, ನಗರಯೋಜನೆ ಮುಂತಾದ ಕ್ಷೇತ್ರಗಳಲ್ಲಿನ ಸಂಶೋಧಕರು ಹೆಚ್ಚುಕಡಿಮೆ ನಿಖರವಾಗಿ ಮುನ್ನುಡಿಯಲು ಸಮರ್ಥರಾಗಿದ್ದಾರೆ. ಎರಡನೆಯ ಮಹಾಯುದ್ಧಾಂತ್ಯದಿಂದೀಚೆಗೆ ಭವಿಷ್ಯತ್‌ಶಾಸ್ತ್ರದ ಬಗ್ಗೆ ಅನೇಕ ಪ್ರಕಟನೆಗಳು ಹೊರಬಿದ್ದಿವೆ. ಅನೇಕ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿವೆ. 'ಅಮೆರಿಕ ಎತ್ತ ಸಾಗಿದೆ?', 'ಭವಿಷ್ಯದ ಸಾಧನ ಸಂಪತ್ತು'— ಮುಂತಾದ ಉದ್ಗ್ರಕೃತಿಗಳು ಹಲವು ವರ್ಷಗಳ ಸಂಶೋಧನೆಗಳ ಫಲವಾಗಿ ಹೊರಬಿದ್ದಿವೆ. ಭವಿಷ್ಯತ್‌ಶಾಸ್ತ್ರಕ್ಕೆ ಮೀಸಲಾದ ನಿಯತಕಾಲಿಕಗಳೂ ಅನೇಕ. ಭವಿಷ್ಯದೀಯ (ಫ್ಯೂಚರಿಬಲ್) ಎಂಬ ಪರಿಕಲ್ಪನೆ ಉದಿಸಿದ್ದು ೧೬ನೆಯ ಶತಮಾನದಲ್ಲಿ ಜೀವಿಸಿದ್ದ ಜೆಸೂಟ್ ಲೂಯಿ ಡಿ ಮೊಲಿನ ಎಂಬ ಸ್ಪ್ಯಾನಿಷ್ ಪ್ರಜೆಯಿಂದ. ಭವಿಷ್ಯತ್ತು ಮತ್ತು ಸಾಧ್ಯತೆ ಎಂಬ ಪರಿಕಲ್ಪನೆಗಳಿಂದ ಇದು ಉದ್ಭವಿಸಿದ್ದು. ಇದು ಮುಂದೆ ಆಗಬಹುದಾದ್ದರ ಊಹೆಯೇ ವಿನಾ ಏನು ಆಗಿಯೇ ತೀರುವುದೆಂಬ ಜ್ಯೋತಿಷವಾಗಲಿ ಕಾಲಜ್ಞಾನವಾಗಲಿ ಅಲ್ಲ. ಭವಿಷ್ಯದೀಯಗಳ ಆಸಕ್ತಿಯಿರುವುದು ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಿದ್ಯಮಾನಗಳಲ್ಲಿ. ೧೯೭೧ರಲ್ಲಿ ಯುರೋಪಿನ ಸ್ವರೂಪ, ಆಡಳಿತಶಾಹಿಯ ಪ್ರವೃತ್ತಿಗಳು, ಉಷ್ಣವಲಯ ದೇಶಗಳ ಆರ್ಥಿಕ ಭವಿಷ್ಯ, ಸಂಸ್ಕೃತಿಯ ಭವಿಷ್ಯ, ದೀರ್ಘಕಾಲದ ಯೋಜನೆ—ಮುಂತಾದ ಅನೇಕ ವಿಷಯಗಳನ್ನು ಕುರಿತ ಅಭ್ಯಾಸ ನಡೆದಿದೆ, ಪ್ರಕಟನೆಗಳು ಹೊರಬಿದ್ದಿವೆ, ಸಮ್ಮೇಳನಗಳೂ ವಿಚಾರಸಂಕಿರಣಗಳೂ ಏರ್ಪಟ್ಟಿವೆ.

ಆದರೆ ಈ ಕ್ಷೇತ್ರದಲ್ಲಿ ಆಸಕ್ತಿ ತಳೆದಿರುವ ಸಮಾಜಶಾಸ್ತ್ರಗಳು ತಮ್ಮ ಅಧ್ಯಯನ ವಿಧಾನಗಳಲ್ಲಿ ಎದುರಿಸಬೇಕಾದ ಅನೇಕ ಸಮಸ್ಯೆಗಳಿವೆ. ಮಾನವನ ವಿಶಿಷ್ಟ ಪ್ರಯತ್ನಗಳನ್ನೂ ಸಮಾಜದಲ್ಲಿನ ಪ್ರವೃತ್ತಿಗಳನ್ನೂ ಅರಿಯುವುದರಿಂದಲೇ ಮುಂದೆ ಮಾನವಕುಲಕ್ಕೆ ಸಂಭವಿಸುವ ಶುಭಾಶುಭಗಳನ್ನು ತಿಳಿದುಕೊಳ್ಳುವುದು ಸಾಧ್ಯವೆಂದು ಜಾನ್ ಸ್ಟೂಯರ್ಟ್ ಮಿಲ್ ಹಿಂದೆಯೇ ಹೇಳಿದ್ದ. ಆದರೆ ಇದು ಕೇವಲ ಆಶಾವಾದ. ಮುನ್ನರಿಯುವ ಪ್ರಯತ್ನ ನಡೆಸುವವನ ಪೂರ್ವಾಗ್ರಹಗಳಿಂದ ಇದು ಬಣ್ಣ ತಳೆಯಬಹುದಾದ ಅಪಾಯವಿದೆ. ಸಂಗ್ರಹಿಸಿದ ಸಾಮಗ್ರಿಯ

ಆಧಾರದ ಮೇಲೆ ನಿಯಮಗಳನ್ನು ರೂಪಿಸುವಾಗ ಅವನಿಗೆ ಅನುವಾಗಿ ಒದಗಿ ಬರುವುದೆಂದರೆ ಹಿಂದಿನ ಅನುಭವ. ಕೆಲವು ಸಂಗತಿಗಳು ಪದೇ ಪದೇ ಪುನರಾವರ್ತಿಸುತ್ತಿರುತ್ತವೆ. ಯಾವುದೋ ಒಂದು ವಿದ್ಯಮಾನ ಅಂಥವೇ ಆದ ಇತರ ವಿದ್ಯಮಾನಗಳ ಜಾಡನ್ನೇ ಅನುಸರಿಸುವುದರಿಂದ ಅದರ ಭವಿಷ್ಯತ್ ಸ್ವರೂಪವೆಂಥದಾಗಿರುವುದೆಂಬುದನ್ನು ಹೇಳುವುದು ಸುಲಭ. (ಉದಾಹರಣೆ: ರಾಷ್ಟ್ರದ ಈ ವರ್ಷದ ಆಯ-ವ್ಯಯ ಇದರ ಹಿಂದಿನ ವರ್ಷದ ಆಯ-ವ್ಯಯದಂತೆಯೇ ಇರುವುದಾದ್ದರಿಂದ ಇದನ್ನು ಪೂರ್ವಭಾವಿಯಾಗಿ ರಚಿಸುವುದು ಸಾಧ್ಯ.) ಕೆಲವು ಸಂಗತಿಗಳು ಹಿಂದೆ ಒಂದು ಗೊತ್ತಾದ ರೀತಿಯಲ್ಲಿ ಬದಲಾವಣೆಯಾಗಿರುತ್ತವೆ. ಆದ್ದರಿಂದ ಇದೇ ನಿಯಮವನ್ನನುಸರಿಸಿ ಮುಂದಿನ ಬದಲಾವಣೆಗಳು ಹೇಗಿರುವುವೆಂಬುದನ್ನು ಊಹಿಸಬಹುದು. (ಉದಾ: ರಾಷ್ಟ್ರೀಯ ಉತ್ಪನ್ನ ಅಥವಾ ಜನಸಂಖ್ಯೆ ಒಂದು ಗೊತ್ತಾದ ದರದಲ್ಲಿ ಹೆಚ್ಚುತ್ತದೆ.) ಆದರೆ ಸಾಮೂಹಿಕ ಆಧಾರಾಂಶಗಳೂ ಪ್ರವೃತ್ತಿಗಳೂ ವ್ಯವಸ್ಥೆಗಳೂ ಒಂದು ಗೊತ್ತಾದ ರೀತಿಯಲ್ಲಿ ವ್ಯತ್ಯಾಸವಾಗುವುದಿಲ್ಲ. ಹೊಸ ಅಂಶಗಳು ನಡುವೆ ತಲೆಹಾಕಿ ಭವಿಷ್ಯತ್ತಿನ ಸ್ವರೂಪವನ್ನು ಪಲ್ಲಟಗೊಳಿಸುತ್ತವೆ. ಕೇವಲ ಕೆಲವೇ ಹೊಸ ಅಂಶಗಳಿದ್ದು, ಅವುಗಳಂಥವೇ ಆದ ಬೇರೆ ಅಂಶಗಳಿಂದ ಉಂಟಾದ ಪ್ರಭಾವವೇನೆಂಬುದನ್ನು ಅರಿಯುವುದು ಸಾಧ್ಯವಾದರೆ ಆಗ ಮಾತ್ರ ಸರಿಯಾಗಿ ಮುನ್ನುಡಿಯುವುದು ಸಾಧ್ಯ. ಅತ್ಯಂತ ನೂತನ ವಿದ್ಯಮಾನಗಳನ್ನು ಮುಂದಾಗಿಯೇ ಎಣಿಕೆಗೆ ತಂದುಕೊಳ್ಳುವುದಕ್ಕಾಗುವುದಿಲ್ಲ. ಅವನ್ನು ಊಹೆಯಿಂದ ಚಿತ್ರಿಸಿಕೊಳ್ಳಬೇಕು ಮಾತ್ರ. ಭವಿಷ್ಯತ್ತಿಗೂ ಊಹೆಗೂ ಸಾಮ್ಯವಿದೆಯೇ ಎಂಬುದು ಅಂತರ್ಬೋಧವನ್ನವಲಂಬಿಸಿದೆ; ಮತ್ತು ಅದೊಂದು ಸಂಭವ. ಯಾವುದೋ ಒಂದು ನೈಸರ್ಗಿಕ ಅಪಘಾತ ಅಥವಾ ಕ್ರಾಂತಿಕಾರಿ ಆವಿಷ್ಕಾರಗಳಿಂದ ನಿರೀಕ್ಷೆಗಳು ಸಂಪೂರ್ಣವಾಗಿ ತಲೆಕೆಳಗಾಗಬಹುದು. ಆದರೂ ಖಂಡಿತವೆನಿಸಿದ ಕ್ಷೇತ್ರಗಳಲ್ಲಿ ನಾವೆಲ್ಲ ಅನೇಕ ಬಗೆಯ ಭವಿಷ್ಯ ನುಡಿಯುತ್ತಿರುತ್ತೇವೆ. (ಉದಾಹರಣೆ: ಸ್ವಿಟ್ಜರ್ಲೆಂಡಿನಂಥ ದೇಶ ಹೆಚ್ಚು ಬದಲಾವಣೆಗೊಳ್ಳುವುದಿಲ್ಲವೆಂಬ ನಂಬಿಕೆಯಿಂದ ಅದರ ಬಗ್ಗೆ ಭವಿಷ್ಯ ನುಡಿಯಬಹುದು.) ದೀರ್ಘಕಾಲಿಕ ಮುನ್ನೋಟಗಳಿಗಿಂತ ಅಲ್ಪಕಾಲಾವಧಿಯ ಮುನ್ನೋಟಗಳು ಹೆಚ್ಚು ನಿಖರ. ಆದರೆ ಕೆಲವು ಸಾರಿ ದೀರ್ಘಕಾಲಿಕದ್ದೇ ಹೆಚ್ಚು ನಿಖರವಾಗಿರುವುದುಂಟು.

ಒಟ್ಟಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಭವಿಷ್ಯನುಡಿಗಳು ಮುಖ್ಯ ಪಾತ್ರವಹಿಸುತ್ತವೆ. ವ್ಯಕ್ತಿಯ ಬಾಳಿನಲ್ಲಿ ಅವು ಮುಖ್ಯ. ಮಾನವತೆಯ ಭವಿಷ್ಯತ್ತಿನ ಬಗ್ಗೆಯೂ ಅವು ನಿರ್ಣಾಯಕವಾಗಿರಬಲ್ಲುವು. ಭವಿಷ್ಯತ್ತಿನ ಬಗ್ಗೆ ಅರಿಯಬೇಕೆನ್ನುವವರು ಈ ಬಗ್ಗೆ ಸಾಕಷ್ಟು ಅರಿತುಕೊಳ್ಳುವುದು ಸಾಧ್ಯ. ಇದಕ್ಕೆ ಅಗತ್ಯವಾದ್ದು ನಮ್ಮ ಸಾಧನಗಳ ಕ್ರೋಡೀಕರಣೆ; ಕ್ರಮಬದ್ಧ ಸಂಶೋಧನೆಗಾಗಿ ಹೆಚ್ಚು ಶ್ರಮ ಕಾಲ ಹಣಗಳ ವಿನಿಯೋಗ.

ಫ್ಲೆಕ್‌ಥೀಮರು ಈ ಸಂದರ್ಭದಲ್ಲಿ ಭೂತ–ವರ್ತಮಾನ–ಭವಿಷ್ಯತ್ತುಗಳ ವಿವೇಚನೆಯನ್ನೂ ನಡೆಸಿದ್ದಾರೆ. ವರ್ತಮಾನವೆಂಬುದು ಭೂತಭವಿಷ್ಯತ್ತುಗಳು ಕೂಡುವ ಬಿಂದುವಲ್ಲ. ನಿನ್ನೆಯೆಂಬುದು ನೆನಪು. ನಾಳೆಯೆಂಬುದು ನಮ್ಮ ಆಸೆ ಅಂಜಿಕೆಗಳ ವಸ್ತು. ಅನೇಕರು ಇಂದು–ನಾಳೆಗಳಿಗೆ ಹೆಚ್ಚು ಬೆಲೆ ಕೊಡುವುದಿಲ್ಲ; ಗತಿಸಿದ ಭೂತದ ಬಂದಿಗಳಾಗುತ್ತಾರೆ. ಹಳೆಯದನ್ನೇ ಪುನರುಜ್ಜೀವನಗೊಳಿಸುವ ಯತ್ನವನ್ನು ಕೆಲವರು ಮಾಡಬಹುದು. ಮತ್ತೆ ಕೆಲವರು ಭವಿಷ್ಯತ್ತಿನಲ್ಲೇ ಬದುಕುತ್ತಾರೆ. ಇಂಥವರು ಯುಟೋಪಿಯನರು. ಇಂದಿನದನ್ನೇ ಪ್ರಧಾನವಾಗಿ ಪರಿಗಣಿಸುವವರೂ ಉಂಟು. ತಾವು ಬದುಕಿರುವ ಆ ಕ್ಷಣದ ಕತ್ತಲಿನಲ್ಲಿ ನಿಂತವರು ಅವರು.

ಆದರೆ ನಮಗೆ ಅಗತ್ಯವಾದದ್ದು ಅಖಂಡ ನೋಟ: ಮೂರೂ ಆಯಾಮ ಗಳನ್ನೂ ಪರಸ್ಪರ ಫಲಪ್ರದ ಹಿಡಿತದಲ್ಲಿ ಒಳಗೊಳ್ಳುವ ದೃಷ್ಟಿ. ಆಗ ಭವಿಷ್ಯತ್ತು ಸಾಕಾರವಾಗಿ ಜನ್ಮವೆತ್ತುತ್ತದೆ. ಭವಿಷ್ಯತ್ತು ಶೂನ್ಯವಲ್ಲ; ಜನ್ಮ ತಾಳಲಿರು ವಂಥದು. ಭೂತ ವರ್ತಮಾನಗಳಲ್ಲಿ ತಯಾರಾಗಿರತಕ್ಕದ್ದು, ನಾಳೆ ಭವಿಸು ವಂಥದು.

ಭವಿಷ್ಯತ್ತಿನ ಬಗ್ಗೆ ಹೆಚ್ಚು ಹೆಚ್ಚು ಜ್ಞಾನ ಪಡೆಯುವುದರಿಂದ ನಾವು ಪಲಾಯನವಾದಿಗಳಾಗುವೆವಲ್ಲವೆ?—ಎಂಬುದು ಪ್ರಶ್ನೆ. ಭವಿಷ್ಯತ್ತಿನ ಬಗ್ಗೆ ಸಂಶೋಧನೆ ನಡಸುವುದರಿಂದಲೇ ಯಾರೂ ಅದೃಷ್ಟವಾದಿಗಳಾಗಬೇಕಿಲ್ಲ. ಪರಿಸರ ವನ್ನವಲಂಬಿಸಿದ ಮಾನವ ಅದನ್ನು ತಿದ್ದಲೂ ಪ್ರಯತ್ನಿಸುತ್ತಾನೆ. ಜಗತ್ತನ್ನು ಅವನು ಸದಾ ತಿದ್ದಲೂ ರಕ್ಷಿಸಲೂ ಯತ್ನಿಸುತ್ತಿರುತ್ತಾನೆ. ಅರಳುತ್ತಿರುವ ಭವಿಷ್ಯತ್ತು ಮಾನವನ ಕರ್ಮಾಕರ್ಮಗಳ ಅವಿಭಾಜ್ಯ ಅಂಗ. ನಾಳೆ ಏನಾಗುವು ದೆಂಬುದನ್ನು ಖಂಡಿತವಾಗಿ ಹೇಳುವುದೇ ಭವಿಷ್ಯಜ್ಞಾನದ ಉದ್ದೇಶವಲ್ಲ. ಆಗಬಹು ದಾದ್ದನ್ನು ಅದು ತಿಳಿಸುತ್ತದೆ. ಏನು ಮಾಡಿದರೆ ಏನಾದೀತೆಂಬುದರ ಮುನ್ನರಿವಿದ್ದರೆ ಏನಾಗಬಹುದೆಂಬುದನ್ನು ಅರಿತು ಮನುಷ್ಯ ಸರಿಯಾದ ತೀರ್ಮಾನ ಕೈಕೊಳ್ಳಬಹುದು. ಸಮಯಾನುಚಾರಿ, ಆದರ್ಶವಾದಿ—ಇಬ್ಬರಿಗೂ ಇದರಿಂದ ಪ್ರಯೋಜನವಾಗಬಹುದು. ಉದಾಹರಣೆಗೆ, ಹಿಟ್ಲರ್ ಫ್ರಾನ್ಸನ್ನಾಕ್ರಮಿಸಿದಾಗ ವಾಸ್ತವವಾದಿ ಲಾವಲ್ ಹಿಟ್ಲರನನ್ನನುಸರಿಸಿದ. ಆದರ್ಶವಾದಿ ಡ ಗಾಲ್ ವಿರೋಧಿಸಿ ಇಂಗ್ಲೆಂಡಿಗೆ ಹೋದ. ಒಂದು ಪಕ್ಷ ಹಿಟ್ಲರನೇ ಗೆಲ್ಲುವನೆಂಬುದು ನಿರೀಕ್ಷಕನ ಅಭಿಪ್ರಾಯವಾಗಿದ್ದರೆ ಆಗಲೂ ಡ ಗಾಲ್ ಹಿಟ್ಲರನ ಕಡೆ ಸೇರುತ್ತಿರ ಲಿಲ್ಲ. ಬ್ರಿಟನ್ ಗೆಲ್ಲುವುದೆಂಬುದು ಗೊತ್ತಾಗಿದ್ದರೆ ಲಾವಲನೂ ಬ್ರಿಟನ್ನಿನ ಕಡೆ ಸೇರಿ ಸ್ವಾತಂತ್ರ್ಯಹೋರಾಟಗಾರರ ಕೈ ಪ್ರಬಲಗೊಳಿಸುತ್ತಿದ್ದ. ಹೀಗೆ ವೈಜ್ಞಾನಿಕ ವಾದ ಮುನ್ನುಡಿಯಿಂದ ಆದರ್ಶವಾದಿಯ ತೀರ್ಮಾನವೇನೂ ಬದಲಾಗುತ್ತಿರಲಿಲ್ಲ.

ಸಂಭಾವ್ಯವಾದ್ದನ್ನು ಹೇಳಿದಾಗ ಅಪಾಯವಾಗುವುದೂ ಉಂಟು.

ಉದಾಹರಣೆ: ೧೯೪೦ರಲ್ಲಿ ಬ್ರಿಟನ್ ಸೋಲುವ ಸಂಭವವುಂಟೆಂದು ಹೇಳಿದ್ದಿದ್ದರೆ ಅದರಿಂದ ಜನರಲ್ಲಿ ನಿರಾಶೆ ಮೂಡಿ ಯುದ್ಧದ ಗತಿಯೇ ಬದಲಾಗುತ್ತಿತ್ತು. ಬ್ರಿಟನ್ನು ಬಹುಶಃ ಸೋತೇಹೋಗುತ್ತಿತ್ತು. ಇಂಥ ಉಭಯಸಂಕಟಕಾಲದಲ್ಲಿ ಏನು ಮಾಡಬೇಕೆಂಬುದು ಭವಿಷ್ಯತ್‌ಶಾಸ್ತ್ರಜ್ಞನ ಒಂದು ಸಮಸ್ಯೆ.

ಅಂತೂ ಒಟ್ಟಿನಲ್ಲಿ ಜ್ಞಾನದಿಂದ ಅಪಾಯವೂ ಉಂಟು; ಅಪಾಯದಿಂದ ಅದು ನಮ್ಮನ್ನು ಮುಕ್ತರನ್ನಾಗಿಯೂ ಮಾಡಬಲ್ಲುದು—ಎಂದು ಫ್ಲೆಕ್‌ಥೀಮರ ಪ್ರಬಂಧ ಕೊನೆಗೊಳ್ಳುತ್ತದೆ.

—ಎಚ್. ಎಸ್. ಕೆ.

ಹರಪ್ಪಾ ಸಂಸ್ಕೃತಿಯ ಲಿಪಿ

ಮಾನವಿಕ ಶಾಸ್ತ್ರಗಳಿಗೆ ಸಂಬಂಧಿಸಿದ ಸಂಶೋಧನೆಗಳಲ್ಲಿ ಕಳೆದ ತ್ರೈಮಾಸಿಕ ಅವಧಿಯುಲ್ಲಿ ಸಂಭವಿಸಿದ ಮಹತ್ತ್ವಪೂರ್ಣ ಘಟನೆಯೆಂದರೆ ಶ್ರೀ ಎಸ್. ಆರ್. ರಾಯರು ಹರಪ್ಪಾ ಸಂಸ್ಕೃತಿಯ ಲಿಪಿಯ ಮೇಲೆ ಬೊಂಬಾಯಿ ಮ್ಯೂಸಿಯಂ ಸೊಸೈಟಿಯಲ್ಲಿ ಜೂನ್ ೧೪ರಂದು ಮಾಡಿದ ಭಾಷಣ. ಶ್ರೀಯುತರು ೧೯೫೪ರಿಂದ ಗುಜರಾತ್ ರಾಜ್ಯದ ಅಹ್ಮದಾಬಾದ್ ಜಿಲ್ಲೆಯ ಸರಂಗ್‌ವಾಲಾಗ್ರಾಮಕ್ಕೆ ಸೇರಿದ ಲೋಥಾಲ್ ಗುಡ್ಡದಲ್ಲಿ ೫ ವರ್ಷಕಾಲ ಉತ್ಖನನಗಳನ್ನು ನಡೆಸಿ ಈ ಸಂಸ್ಕೃತಿಯ ಅವಶೇಷಗಳನ್ನು ಬೆಳಕಿಗೆ ತಂದರು. ಈ ಉತ್ಖನನಗಳಲ್ಲಿ ಕಂಡುಬಂದ ಸಂಸ್ಕೃತಿಯ ಪೂರ್ವಾರ್ಧ ಸಿಂಧೂ ಕಣಿವೆಯುಲ್ಲಿಯ ಹರಪ್ಪಾ ಸಂಸ್ಕೃತಿ ಗುಂಪಿಗೆ ಸೇರಿದ್ದು, ಉತ್ತರಾರ್ಧ (ಕ್ರಿ.ಪೂ. ೧೯೦೦–೧೪೫೦) ಉತ್ತರಕಾಲೀನ ಹರಪ್ಪಾ ಸಂಸ್ಕೃತಿ ಯೆಂದು ಹೆಸರಾಯಿತು. ಈ ಅವಧಿಯಲ್ಲಿ ಮೊದಲ ಕಾಲದ ಅನೇಕ ಲಕ್ಷಣಗಳು ಮರೆಯಾಗಿ ಪ್ರಾದೇಶಿಕ ಲಕ್ಷಣಗಳು ಕೆಲವು ಪ್ರಾಮುಖ್ಯ ಪಡೆದುವು. ಆ ಸಂಸ್ಕೃತಿಗೆ ಸೇರಿದ ಮುದ್ರೆಗಳ ಮೇಲೆ ಇದ್ದ ಬರೆವಣಿಗೆಯಲ್ಲಿ ತೋರಿಬಂದ ಬದಲಾವಣೆಗಳು ಇದರಲ್ಲಿ ಮುಖ್ಯವಾದವೆಂದು ಹೇಳಬಹುದು.

ಕಳೆದ ಹತ್ತು ವರ್ಷಗಳಿಂದ ಈ ಉತ್ಖನನಗಳ ವರದಿಯನ್ನು ತಯಾರಿಸು ತ್ತಿರುವ ಶ್ರೀಮಾನ್ ರಾಯರು ಮುದ್ರೆಗಳ ಮೇಲಿನ ಲಿಪಿಯನ್ನು ಗುರುತಿಸಿ ಓದುವ ಪ್ರಯತ್ನ ಮಾಡುತ್ತಿದ್ದರು. ಕ್ರಿ.ಪೂ. ಎರಡನೆಯ ಸಹಸ್ರಮಾನದ ಪ್ರಾರಂಭ ಕಾಲದಲ್ಲಿ ಮಧ್ಯಪ್ರಾಚ್ಯದ ಸಂಸ್ಕೃತಿರಂಗಗಳಲ್ಲೂ ಮಹತ್ತರ ಬದಲಾವಣೆಗಳು ಏರ್ಪಟ್ಟವು. ಆ ಸಂಸ್ಕೃತಿಗಳಲ್ಲಿ ಬಳಕೆಯಲ್ಲಿದ್ದ ಲಿಪಿಗಳಲ್ಲೂ ಚಿತ್ರಲಿಪಿಯ ಹಂತದಿಂದ ವರ್ಣ (ಸಿಲ್ಯಾಬಿಕ್) ಲಿಪಿಹಂತಕ್ಕೆ ಪ್ರಗತಿಯಾಗುತಿತ್ತು. ಅಂತಹುದೇ ಮಾರ್ಪಾಡುಗಳನ್ನು ಹರಪ್ಪಾ ಲಿಪಿಯಲ್ಲೂ ಶ್ರೀಯುತರು ಗುರುತಿಸಿದರು. ಈ ದಿಶೆಯಲ್ಲಿ ತಮ್ಮ ಪ್ರಯತ್ನವನ್ನು ಮುಂದುವರಿಸಿ, ಅವರು ಉತ್ತರ ಕಾಲೀನ ಹರಪ್ಪಾ ಸಂಸ್ಕೃತಿಯ ೮೫ ಮುದ್ರೆಗಳ ಮೇಲಿನ ಲೇಖನಗಳಿಂದ ೩೦೦

ಸಂಕೇತಗಳನ್ನು ಗುರುತಿಸಿ ೭೦ ಪದಗಳನ್ನು ಓದಿದ್ದಾರೆ. ಇವರ ಪ್ರಕಾರ ಈ ಶಾಸನಗಳಲ್ಲಿ ವೈದಿಕ ಸಾಹಿತ್ಯದಲ್ಲಿ ಕಂಡುಬರುವ ಋಷಿ, ಅಸುರ, ರಾಕ್ಷಸ ಮತ್ತು ದೇವತೆಗಳ ಹೆಸರುಗಳು ಕಂಡುಬರುತ್ತವೆ. ಇವಲ್ಲದೆ ಕೆಲವ್ಯಕ್ತಿಗಳ, ಪದಾರ್ಥಗಳ ಮತ್ತು 'ಓಡ್ರ' ದೇಶದ ಹೆಸರನ್ನೂ ಇವರು ಗುರುತಿಸಿದ್ದಾರೆ. ತಾವು ಗುರುತಿಸಿರುವ ೭೦ರಲ್ಲಿ ೬೦ ಪದಗಳು ಇಂಡೋ-ಯೂರೋಪಿಯನ್ ಭಾಷಾಸಂತತಿಗೆ ಸೇರಿದುವೆಂದೂ ಆದುದರಿಂದ ಉತ್ತರಕಾಲೀನ ಹರಪ್ಪಾ ಸಂಸ್ಕೃತಿಯ ಜನರ ಭಾಷೆ ವೈದಿಕ ಭಾಷಾ ಸಂತತಿಗೆ ಸೇರಿದುದೆಂದೂ ಇವರು ಹೇಳಿದ್ದಾರೆ.

ಇತ್ತೀಚೆಗೆ ಹರಪ್ಪಾ ಲಿಪಿಯ ಅಧ್ಯಯನಕ್ಕೆ ಹೆಚ್ಚಿನ ಗಮನವೀಯಲಾಗುತ್ತಿದೆ. ದೆಹಲಿಯ ವಸ್ತುಸಂಗ್ರಹಾಲಯವೊಂದರಲ್ಲಿ ಕ್ಯೂರೇಟರ್ ಆಗಿದ್ದ ಎಸ್. ಎನ್. ರೇ ಅವರು ತಾವು ಹರಪ್ಪಾ ಲಿಪಿಯನ್ನು ಓದಿರುವುದಾಗಿ ಹೇಳಿಕೊಂಡರು. ಕಳೆದ ದಶಕದ ಕೊನೆಯ ಭಾಗದಲ್ಲಿ ರಷ್ಯದ ಪ್ರೊ. ನೂರೋಜೂವ್ ಅವರು ಆ ಲಿಪಿಯನ್ನು ಓದಿದುದಾಗಿಯೂ ಅದು ದ್ರಾವಿಡಭಾಷಾ ಸಂತತಿಗೆ ಸೇರಿದುದಾಗಿಯೂ ಹೇಳಿದರು. ಅದೇ ಸುಮಾರಿನಲ್ಲಿ ಫಿನ್‌ಲೆಂಡಿನ ಡಾ. ಅಸ್ಕೋ ಪರ್ಪೋಲಾ ಅವರು ತಾವು ಆ ಲಿಪಿಯ ಗುಟ್ಟನ್ನು ಭೇದಿಸಿದುದಾಗಿಯೂ ಅದು ದ್ರಾವಿಡ ಭಾಷೆಗಳ ಗುಂಪಿಗೆ ಸೇರಿದುದೆಂದೂ ಹೇಳಿದ್ದಾರೆ. ಬೇರೆ ಬೇರೆ ವಿದ್ವಾಂಸರು ಸ್ವತಂತ್ರವಾಗಿ ಪ್ರಯತ್ನಿಸಿ ಪರಸ್ಪರ ವಿರೋಧಾತ್ಮಕವಾದ ಫಲಿತಾಂಶಗಳನ್ನು ಪಡೆಯುತ್ತಿರುವುದೇ ಈ ಸಮಸ್ಯೆಯ ಕ್ಲಿಷ್ಟತೆಗೆ ಸಾಕ್ಷ್ಯವಾಗಿದೆ. ಆದುದರಿಂದ ಈ ಹಂತದಲ್ಲಿ ಸ್ಥಿರವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ. ಆದರೂ ಈ ಬಹುಮುಖ ಪ್ರಯತ್ನಗಳು ಶೀಘ್ರದಲ್ಲಿಯೇ ಸಫಲತೆಯನ್ನು ಪಡೆಯಬಹುದೆಂದು ಆಶಿಸಬಹುದು.

—ಬಿ. ಕೆ. ಜಿ.

ಭಾರತದ ಜವಳಿ ಮತ್ತು ಬ್ರಿಟನಿನ ಆಮದು ನೀತಿ

ವಿದೇಶೀ ವ್ಯಾಪಾರ ಪ್ರತಿಯೊಂದು ಅರ್ಥವ್ಯವಸ್ಥೆಯಲ್ಲೂ ಬಹಳ ಸೂಕ್ಷ್ಮವಾದ ರಂಗ. ಇಲ್ಲಿ ಆಗುವ ಬದಲಾವಣೆಗಳು ಇಡೀ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತವೆ. ಬ್ರಿಟನ್ ಇತ್ತೀಚೆಗೆ ಭಾರತದ ವಿದೇಶೀ ವ್ಯಾಪಾರದ ಭವಿಷ್ಯಕ್ಕೆ ಘಾತಕವಾದ ನಿರ್ಣಯವೊಂದನ್ನು ಪ್ರಕಟಿಸಿದೆ. ಭಾರತದಿಂದ ಆಮದು ಮಾಡಿಕೊಳ್ಳುವ ಜವಳಿಯ ಮೇಲೆ ೧೯೭೨ರ ಜನವರಿಯಿಂದ ಶೇ. ೧೫ರಷ್ಟು ಆಯಾತ ಸುಂಕ ವಿಧಿಸುವ ನಿರ್ಣಯವನ್ನು ಅಲ್ಲಿಯ ಸರ್ಕಾರ ಕೈಗೊಂಡಿದೆ.

ಭಾರತ-ಬ್ರಿಟನ್ ವಾಣಿಜ್ಯಮೈತ್ರಿ ತೀರ ಹಳೆಯದು. ಬ್ರಿಟನ್ ತನ್ನ ಆರ್ಥಿಕ ಬೆಳೆವಣಿಗೆಯ ದೃಷ್ಟಿಯಿಂದ ನಮ್ಮ ದೇಶದೊಡನೆ ಮೊದಲಿನಿಂದಲೂ ಅನೇಕ ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಂಡು ಬಂದಿದೆ. ಇವುಗಳಲ್ಲಿ ೧೯೩೨ರ

ವಾಣಿಜ್ಯ ಒಪ್ಪಂದ ತುಂಬಾ ಮುಖ್ಯವಾದುದು. ಈ ಒಪ್ಪಂದದ ಪ್ರಕಾರ ಆಯಾತ ಸುಂಕವಿಲ್ಲದೆ ಅನೇಕ ಸರಕುಗಳು ಬ್ರಿಟನಿನ ಮಾರುಕಟ್ಟೆಗಳನ್ನು ಪ್ರವೇಶಿಸಬಹುದು. ಭಾರತ ಈ ಒಪ್ಪಂದದ ಪ್ರಯೋಜನ ಪಡೆದುಕೊಂಡು ಸುಮಾರು ೩೦ ವರ್ಷಗಳಿಂದಲೂ ಜವಳಿಯನ್ನು ಸುಂಕರಹಿತವಾಗಿ ಬ್ರಿಟನಿಗೆ ನಿರ್ಯಾತ ಮಾಡುತ್ತ ಬಂದಿದೆ. ನಮ್ಮ ದೇಶದ ಜವಳಿ ಗಿರಣಿಗಳಲ್ಲಿ ಹಲವು ಬ್ರಿಟನಿನ ಮಾರುಕಟ್ಟೆಯ ಅವಶ್ಯಕತೆಯ ದೃಷ್ಟಿಯಿಂದ ವಿಶಾಲ ಮಗ್ಗಗಳನ್ನು ಅಳವಡಿಸಿಕೊಂಡಿವೆ.

ಬ್ರಿಟನಿಗೆ ಭಾರತ ಮಾಡುತ್ತಿರುವ ಒಟ್ಟು ರಫ್ತಿನಲ್ಲಿ ಜವಳಿಯದು ಸೇಕಡ ೧೨ರಷ್ಟಾಗುತ್ತದೆ. ೧೯೬೯-೭೦ರಲ್ಲಿ ಈ ಮೂಲದಿಂದ ಬಂದ ಒಟ್ಟು ವರಮಾನ ೧೬೫ ಕೋಟಿ ರೂ. ಭಾರತ ಬ್ರಿಟನಿನಿಂದ ೧೦೦ ಕೋಟಿ ರೂ. ಮೌಲ್ಯದಷ್ಟು ಸರಕುಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಬ್ರಿಟನ್ ಆಯಾತಸುಂಕವನ್ನು ಹೇರಿದರೆ ಭಾರತದ ಜವಳಿ ರಫ್ತನ್ನು ಸ್ಪರ್ಧಾತ್ಮಕವಾಗಿ ಮಾಡಲು ಇಡೀ ಕೈಗಾರಿಕೆಯಲ್ಲೇ ಅತ್ಯಂತ ಹೆಚ್ಚಿನ ವೆಚ್ಚದ ತೀವ್ರತರ ಬದಲಾವಣೆಗಳನ್ನು ಮಾಡಬೇಕಾಗುತ್ತದೆ.

ಬ್ರಿಟನಿನ ನಿರ್ಣಯದ ಹಿಂದಿರುವ ಕಾರಣಗಳೇನೇ ಇರಲಿ, ಭಾರತ ಈಗ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳಬೇಕಾದುದು ಅತ್ಯಗತ್ಯ. ಮೊದಲಿನಿಂದಲೂ ಭಾರತ ಬ್ರಿಟನಿನ ಮೇಲೆ ತನ್ನ ಜವಳಿಯ ಮಾರುಕಟ್ಟೆಗೆ ಅವಲಂಬಿತವಾಗಿರುವುದರಿಂದ ಈಗ ಉದ್ಭವವಾಗಿರುವ ಬಿಕ್ಕಟ್ಟು ತೀವ್ರವಾಗಿದೆ. ಆದುದರಿಂದ ನಮ್ಮ ಜವಳಿಯ ರಫ್ತು ಮಾರುಕಟ್ಟೆಯನ್ನು ವಿವಿಧ ರಾಷ್ಟ್ರಗಳಲ್ಲಿ ಬಲಗೊಳಿಸಬೇಕಾದುದು ಮೊದಲನೆಯ ಆವಶ್ಯಕತೆ. ನಮ್ಮ ಜವಳಿ ಈ ದೃಷ್ಟಿಯಿಂದ ಸ್ಪರ್ಧಾತ್ಮಕವಾಗಬೇಕು. ಬ್ರಿಟನಿನಿಂದ ಬರುವ ಸರಕಿಗೆ ಆಯಾತ ಸುಂಕವನ್ನು ಹಾಕುವುದು, ಕಾಮನ್‌ವೆಲ್ತಿನಿಂದ ಹೊರಬರುವುದು—ಇವು ಭಾರತ ಬ್ರಿಟನಿನ ನಿರ್ಣಯಕ್ಕೆ ಪ್ರತಿಯಾಗಿ ಕೈಗೊಳ್ಳಬಹುದಾದ ಕಾರ್ಯಗಳು. ಆದರೆ ಈ ಕ್ರಮಗಳಿಂದ ನಮ್ಮ ರಫ್ತು ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲ. ಜವಳಿಯ ರಫ್ತನ್ನು ವಿವಿಧ ರಾಷ್ಟ್ರಗಳಿಗೆ ಹರಡಿ, ಅಲ್ಲಿ ಅನುಕೂಲವಾದ ವಾತಾವರಣವನ್ನು ಕಲ್ಪಿಸಿಕೊಳ್ಳುವುದು ಭಾರತ ಮಾಡಬೇಕಾಗಿರುವ ಅತಿ ಮುಖ್ಯ ಕಾರ್ಯ.

ಬ್ರಿಟನಿನ ಆಯಾತ ಸುಂಕ ಹೇರಿಕೆಯ ನಿರ್ಣಯ ಆ ರಾಷ್ಟ್ರದ ಘನತೆಯನ್ನು ವಿದೇಶೀ ವಾಣಿಜ್ಯರಂಗದಲ್ಲಿ ಕಡಿಮೆ ಮಾಡುವುದರಲ್ಲಿ ಸಂಶಯವಿಲ್ಲ. ಭಾರತ ಈ ವಿಷಯವನ್ನು ಭಾರತ ಸರ್ಕಾರ ವ್ಯಾಪಾರ ಸುಂಕಗಳ ಸಾಮಾನ್ಯ ಒಪ್ಪಂದ ಸಂಸ್ಥೆಯ ಮುಂದೆ (ಜಿ.ಎ.ಟಿ.ಟಿ.) ತರುವ ಆಲೋಚನೆ ಇದೆ.

ಭಾರತದ ರಾಜ್ಯ ಸರ್ಕಾರಗಳ ಹಣಕಾಸು ಪರಿಸ್ಥಿತಿ

ರಾಜ್ಯ ಸರ್ಕಾರಗಳ ಈ ವರ್ಷದ ಮುಂಗಡ ಪತ್ರಗಳಲ್ಲಿ ಎಂದಿನಂತೆಯೇ ಕೊರತೆ

ಹಣಕಾಸು ಪರಿಸ್ಥಿತಿ ಕಂಡುಬಂದಿದೆ. ಕೊರತೆಯನ್ನು ಮಂಡಿಸುವುದರಲ್ಲಿ ಒಂದು ರಾಜ್ಯ ಮತ್ತೊಂದು ರಾಜ್ಯದೊಡನೆ ಸ್ಪರ್ಧಿಸುವಂತೆ ತೋರುತ್ತದೆ. ಉತ್ತರ ಪ್ರದೇಶದ ಕೊರತೆ ೩೭.೨೦ ಕೋಟಿ ರೂ.ಗಳಾದರೆ ತಮಿಳುನಾಡಿನ ಕೊರತೆ ೪೭ ಕೋಟಿಗಳಷ್ಟಾಗಿದೆ. ಮಹಾರಾಷ್ಟ್ರ ೩೫.೧೮ ಕೋಟಿ ರೂ.ಗಳ ಕೊರತೆಯನ್ನೂ ಪಶ್ಚಿಮ ಬಂಗಾಳ ೨೮.೬೦ ಕೋಟಿ ರೂ. ಕೊರತೆಯನ್ನೂ ತಮ್ಮ ಮುಂಗಡಪತ್ರಗಳಲ್ಲಿ ತೋರಿಸಿವೆ. ಕೇಂದ್ರ ಸರ್ಕಾರದ ಕೊರತೆಯಂತೂ ಈಗಾಗಲೇ ಜನತೆಗೆ ಎಚ್ಚರಿಕೆ ನೀಡುವ ಮೊತ್ತದ್ದಾಗಿದೆ.

ರಾಜ್ಯ ಸರ್ಕಾರಗಳ ಆಯವ್ಯಯಗಳಲ್ಲಿ ಕೊರತೆ ಏರ್ಪಡುವುದು ಅಪಾಯಕಾರಿಯಾದ ವಿಷಯ. ಆದರೆ ಅವು ಕೊರತೆ ತೋರಿದಷ್ಟೂ ಲಾಭ ಎನ್ನುವ ಮನೋವೃತ್ತಿ ತಾಳಿವೆ. ಏಕೆಂದರೆ ಕೊರತೆಯನ್ನು ತುಂಬಲು ಅವು ರಿಸರ್ವ್ ಬ್ಯಾಂಕಿನಿಂದ ಹಣ ತೆಗೆದುಕೊಂಡು ಕೇಂದ್ರ ಸರ್ಕಾರವನ್ನು ಸಂದಿಗ್ಧ ಪರಿಸ್ಥಿತಿಗೆ ತಳ್ಳಬಹುದು. ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಣಕಾಸು ಸಂಬಂಧದಲ್ಲಿ ಉದ್ಭವಿಸಿರುವ ಸಹಜ ತೊಂದರೆ. ರಾಜ್ಯ ಸರ್ಕಾರಗಳಿಗೆ ಕೇಂದ್ರದ ನೆರವು ೧೯೭೦-೭೧ರಲ್ಲಿ ೧೯೫ ಕೋಟಿ ರೂ.ಗಳಷ್ಟಿದ್ದರೂ, ಇದು ಮುಂಗಡಪತ್ರದ ಸಿಗದಿಯಾದ ಹಣಕ್ಕಿಂತ ೭೦ ಕೋಟಿ ರೂ.ಗಳಷ್ಟು ಹೆಚ್ಚಾಗಿದ್ದರೂ ರಾಜ್ಯ ಸರ್ಕಾರಗಳು ರಿಸರ್ವ್ ಬ್ಯಾಂಕಿನಿಂದ ಪಡೆದ ಓವರ್‌ಡ್ರಾಫ್ಟ್ ಹಣ ೧೯೭೧ರ ಮಾರ್ಚ್ ವೇಳೆಗೆ ೨೬೦ ಕೋಟಿ ರೂ.ಗಳಷ್ಟಾಗಿತ್ತು. ೧೯೬೯-೭೦ರಲ್ಲಿ ರಾಜ್ಯ ಸರ್ಕಾರಗಳು ಪಡೆದ ಓವರ್‌ಡ್ರಾಫ್ಟ್ ಹಣ ೧೫೩ ಕೋಟಿ ರೂ. ೫ನೆಯ ಹಣಕಾಸು ಸಮಿತಿಯ ಶಿಫಾರಸಿಗನುಗುಣವಾಗಿ ರಾಜ್ಯ ಸರ್ಕಾರಗಳು ಕೇಂದ್ರ ಸುಂಕ ಹಾಗೂ ಅನುದಾನಗಳ ಮೂಲಕ ೧೯೭೦-೭೧ರಲ್ಲಿ ೮೩೫ ಕೋಟಿ ರೂಗಳನ್ನು ಪಡೆದುವು (ಹಿಂದಿನ ವರ್ಷ ೭೭೪ ಕೋಟಿ ರೂ.ಗಳನ್ನು ಪಡೆದಿದ್ದುವು). ಯೋಜನಾ ಸಹಾಯಧನ ೧೯೭೦-೭೧ರಲ್ಲಿ ರಾಜ್ಯ ಸರ್ಕಾರಗಳಿಗೆ ೬೩೮ ಕೋಟಿ ರೂ.ಗಳಷ್ಟು ದೊರೆಯಿತು (೧೯೬೯-೭೦ ರಲ್ಲಿ ೬೧೫ ಕೋಟಿ ರೂ.ಗಳಷ್ಟಿತ್ತು). ೧೯೭೧-೭೨ರಲ್ಲಿ ರಾಜ್ಯ ಸರ್ಕಾರಗಳು ಈ ಬಾಬ್ತಿಗಾಗಿ ೭೦೦ ಕೋಟಿ ರೂ.ಗಳನ್ನು ಪಡೆಯಲಿವೆ. ಅಂದರೆ ಕೇಂದ್ರ ಸರ್ಕಾರದಿಂದ ವಿವಿಧ ಬಾಬ್ತುಗಳಿಗಾಗಿ ಹೆಚ್ಚಿನ ಹಣವನ್ನು ರಾಜ್ಯ ಸರ್ಕಾರಗಳು ಪಡೆಯುತ್ತಿದ್ದೂ ತಮ್ಮ ಮುಂಗಡಪತ್ರಗಳಲ್ಲಿ ಕೊರತೆಯನ್ನು ಪ್ರಕಟಿಸುವುದು ಆತಂಕವನ್ನುಂಟುಮಾಡುವ ವಿಚಾರ.

ರಾಜ್ಯ ಸರ್ಕಾರಗಳು ಇನ್ನಾದರೂ ತಮ್ಮವೇ ಆದ ಸಂಪನ್ಮೂಲಗಳನ್ನು ಆದಾಯದ ದೃಷ್ಟಿಯಿಂದ ಒದಗಿಸಿಕೊಳ್ಳುವುದು ಅತ್ಯವಶ್ಯ. ಕೇಂದ್ರ ಸರ್ಕಾರದ ನೆರವಿನ ಮೇಲೆ ತಮ್ಮ ಅನೇಕ ಯೋಜನೆಗಳನ್ನು ನಡೆಸಿಕೊಂಡು ಹೋಗುತ್ತೇವೆಂಬ ರಾಜ್ಯ ಸರ್ಕಾರಗಳ ನಂಬಿಕೆ ಅಪಾಯಕಾರಿ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಹಾಗೂ ರಿಸರ್ವ್ ಬ್ಯಾಂಕ್ ಸರಿಯಾದ ಕ್ರಮವನ್ನು ಅನುಸರಿಸ

ಬೇಕಾದುದು ಅತ್ಯವಶ್ಯ. ಕೇಂದ್ರ-ರಾಜ್ಯಗಳ ನಡುವೆ ಸರಿಯಾದ ಒಡಂಬಡಿಕೆಯಾಗಬೇಕು. ರಾಜ್ಯಸರ್ಕಾರಗಳು ಹೊಸ ಮೂಲಗಳಿಂದ ಆದಾಯ ಪಡೆಯುವತ್ತ ತೀವ್ರಗಮನ ಹರಿಸುವುದು ಅವಶ್ಯ.

—ಸಿ. ಕೆ. ರೇಣುಕಾರ್ಯ

ಕನ್ನಡ ವಿಶ್ವಕೋಶ—ಮೂರನೆಯ ಸಂಪುಟ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ತಯಾರಿಸಿದ ಕನ್ನಡ ವಿಶ್ವಕೋಶದ ಮೂರನೆಯ ಸಂಪುಟವನ್ನು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ೧೯೭೧ರ ಮೇ ೨೦ರಂದು ಬಿಡುಗಡೆ ಮಾಡಲಾಯಿತು.

ಮೂರನೆಯ ಸಂಪುಟದಲ್ಲಿ ಮಾನವಿಕ ಮತ್ತು ವಿಜ್ಞಾನ ವಿಭಾಗಗಳೆರಡೂ ಪರಿಪುಷ್ಟವಾಗಿವೆ. ಮಾನವಿಕ ವಿಭಾಗದಲ್ಲಿ ವಿನ್ಯಾಸಗೊಂಡಿರುವ ಲೇಖನಗಳು ಸಂಖ್ಯೆ, ಬಾಹುಳ್ಯ, ವೈವಿಧ್ಯಗಳ ದೃಷ್ಟಿಯಿಂದ ಗಮನಾರ್ಹವಾಗಿವೆ. ಮೊದಲ ಎರಡು ಸಂಪುಟಗಳಲ್ಲಿರುವುದಕ್ಕಿಂತ ಅಧಿಕವಾಗಿವೆ. 'ಎಸ್ಕಿಮೋದಿಂದ ಕಬೀಲಾಗಳ ವರೆಗೆ ಬಗೆಬಗೆಯ ಜನರೂ ಎರಿಟ್ರಿಯದಿಂದ ಕರೀಲಿಯದ ವರೆಗೆ ಹಲವು ವಿಧದ ನಾಡುಗಳೂ ಎಲಿಫೆಂಟದಿಂದ ಕರಹಾಡದ ವರೆಗೆ ಮಾನವಾಭಿವ್ಯಕ್ತಿಯ ನಾನಾ ಪ್ರಭೇದಗಳೂ ಇಲ್ಲಿ ಕಾಣಸಿಗುತ್ತವೆ. ಮಾನವಕುಲವನ್ನೇ ತೊಡೆದುಹಾಕುವಷ್ಟು ಅಗಾಧ ಪ್ರಮಾಣದಲ್ಲಿ ಸಂಭವಿಸಿದ ಎರಡು ಮಹಾಯುದ್ಧಗಳ ಕ್ರಮಬದ್ಧ ವಿವೇಚನೆಯನ್ನೂ ಅವುಗಳ ನಾನಾ ಘಟನೆಗಳ ಮತ್ತು ಘಟ್ಟಗಳ ನಿರೂಪಣೆಯನ್ನೂ ಸಚಿತ್ರವಾಗಿ ಈ ಸಂಪುಟದಲ್ಲಿ ಕೊಡಲಾಗಿದೆ. ಅಷ್ಟೇ ಅಲ್ಲದೆ ಏಷ್ಯ ಖಂಡದ ಭೂಗೋಳ, ಅರ್ಥವ್ಯವಸ್ಥೆ, ಇತಿಹಾಸ, ಪ್ರಾಗಿತಿಹಾಸ, ಭೂ ಇತಿಹಾಸ, ಮಾನವ ಬುಡಕಟ್ಟುಗಳು, ವಾಸ್ತುಶಿಲ್ಪ, ಕಲೆ, ಶಾಸನಗಳು, ನಾಣ್ಯಗಳು—ಇವು ಈ ಅತಿರೇಕದ ಖಂಡದ ಸಮಗ್ರ ಚಿತ್ರವನ್ನು ಕೊಡಲು ಯತ್ನಿಸುತ್ತವೆ. ಐರ್ಲೆಂಡ್, ಐಸ್‌ಲೆಂಡ್ ಮುಂತಾದ ದೇಶಗಳೂ ಏಷ್ಯ ಮೈನರ್ ಮೊದಲಾದ ಪ್ರದೇಶಗಳೂ ಕಾಲದೇಶಗಳಲ್ಲಿ ನಮ್ಮನ್ನು ಬಹುದೂರ ಕೊಂಡೊಯ್ಯುತ್ತವೆ. ಮಾನವನ ಸಾಹಸಯಾತ್ರೆಯ ಕಲಾತ್ಮಕ ಮತ್ತು ವಿನೋದಾತ್ಮಕ ಮುಖಗಳನ್ನೂ ಇಲ್ಲಿ ನಿಚ್ಚಳವಾಗಿ ಕಾಣಬಹುದು. ಮಾನವನ ಉಗಮ, ನಾಗರಿಕತೆಯ ಪ್ರಗತಿ ಮೊದಲಾದವನ್ನು ಕುರಿತ, ಬಹು ಕುತೂಹಲಕಾರಿಯಾದ ಪ್ರಾಚೀನ ದಾಖಲೆಗಳೂ ಹಲವುಂಟು'—ಇದು ಈ ಸಂಪುಟದ ಮಾನವಿಕ ವಿಭಾಗದ ಲೇಖನಗಳ ರೂಪರೇಷೆ.

ಮೂರನೆಯ ಸಂಪುಟದ ಪ್ರಕಟನೋತ್ಸವ ಸಭೆಯ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ದೇಜಗೌ ಸಮಾರಂಭದಲ್ಲಿ ಭಾಗವಹಿಸಿದ್ದರು.

ತುಂಬುಸಂತೋಷದಿಂದ ಸಂಪುಟವನ್ನು ಬಿಡುಗಡೆಮಾಡಿದ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು, ಕನ್ನಡದ ಕೆಲಸಗಳಿಗೆ ತಮ್ಮ ಅಧಿಕಾರಾವಧಿಯಲ್ಲಿ ಕೊಟ್ಟ ಗಮನವನ್ನು ಪ್ರಸ್ತಾಪಿಸಿ, "ರಾಜ್ಯದಲ್ಲಿ ನಾನಾ ಯೋಜನೆಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡುತ್ತಿರುವಾಗ ಕನ್ನಡದ ಕೆಲಸಕ್ಕೆ ಒಂದೆರಡು ಕೋಟಿ ರೂಪಾಯಿಗಳನ್ನು—ಅದೂ ಹತ್ತಾರು ವರ್ಷಗಳ ಅವಧಿಯಲ್ಲಿ—ನೀಡುವುದು ಸರ್ಕಾರಕ್ಕೆ ಕಷ್ಟದ ಕೆಲಸವಲ್ಲ....ಯಾವುದೇ ಸರ್ಕಾರ ಇರಲಿ, ಕನ್ನಡದ ಕೆಲಸಗಳಿಗೆ ಆದ್ಯಗಮನ ಕೊಡುವುದು ಕರ್ತವ್ಯ" ಎಂದು ಹೇಳಿದರು.

ಕನ್ನಡ ವಿಶ್ವಕೋಶದ ಪ್ರಧಾನ ಸಂಪಾದಕರೂ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಆದ ಡಾ. ಹಾ. ಮಾ. ನಾಯಕರು ಮೊದಲು ಸ್ವಾಗತ ಭಾಷಣ ಮಾಡಿ ಕನ್ನಡದ ಕೆಲಸಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟ ಸರಕಾರವನ್ನು ಅಭಿವಂದಿಸಿದರು. "ವಿಶ್ವಕೋಶದ ಎಲ್ಲ ಸಂಪುಟಗಳೂ ಪ್ರಕಟವಾದಾಗ ಸಾಹಿತ್ಯದ ಶ್ರೀಮಂತಿಕೆ ಕಣ್ಣಿಗೆ ಕಟ್ಟುತ್ತದೆ" ಎಂದೂ ನುಡಿದರು. ಸಮಾರಂಭದಲ್ಲಿ ಮಾತನಾಡಿದ, ವಿಶ್ವಕೋಶದ ಸಂಪಾದಕ ಮಂಡಳಿಯ ಸದಸ್ಯ ಶ್ರೀ ಆರ್. ವೈ. ಧಾರವಾಡಕರ ಅವರು "ವಸ್ತುನಿಷ್ಠೆ, ಭಾಷಾಸಿದ್ಧಿ ಮತ್ತು ಸಜೀವತೆ—ಇವು ಮುಪ್ಪುರಿಗೊಂಡಿರುವ ವಿಶ್ವಕೋಶ ಸಂಪುಟಗಳು ಚೈತನ್ಯದ ಚಿಲುಮೆಗಳೂ ಜ್ಞಾನ ವಾಹಿಗಳೂ ಆಗುತ್ತವೆ" ಎಂದರು. ಜ್ಞಾನಗಂಗೋತ್ರಿಯ ಸಂಪಾದಕರಾಗಿದ್ದ ಶ್ರೀ ಎಲ್. ಎಸ್. ಶೇಷಗಿರಿರಾಯರು ಮಾತನಾಡಿ, "ವಿಶ್ವಕೋಶದ ಕಾರ್ಯ ಒಂದು ಭಗೀರಥ ಪ್ರಯತ್ನ" ಎಂದು ಹೇಳಿದರು. ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಮಾತನಾಡಿ "ನುಡಿಯ ಅಭಿವೃದ್ಧಿಯಲ್ಲಿ ಹೆಚ್ಚಿನ ಶ್ರದ್ಧೆ ಮತ್ತು ಆಸಕ್ತಿ ತಾಳಬೇಕು" ಎಂದರು.

—ಎಸ್. ಚನ್ನಪ್ಪ

ಎಸ್. ಎನ್. ಸ್ವಾಮಿ ಅವರಿಗೆ ಸನ್ಮಾನ

ದಿನಾಂಕ ೧೨-೩-೭೮ರಂದು ಮೈಸೂರು ನಗರದ ರಂಗಾಚಾರ್ಲು ಪುರಭವನದಲ್ಲಿ ಖ್ಯಾತ ಕಲಾವಿದ ಪದ್ಮಶ್ರೀ ಎಸ್. ಎನ್. ಸ್ವಾಮಿ ಅವರನ್ನು ಮೈಸೂರು ನಾಗರಿಕರ ಪರವಾಗಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಶ್ರೀ ಧರ್ಮವೀರ ಅವರು ಶ್ರೀ ಸ್ವಾಮಿ ಅವರ ತೌರೂರಾದ ಮೈಸೂರು ತನ್ನ ಕಲಾವಿದನನ್ನು ಮರೆಯದೆ ಸನ್ಮಾನಿಸಿ ಗೌರವಿಸಿದ್ದ ಕ್ಕಾಗಿ ಹರ್ಷಿತರಾದರು. ಗುರುದೇವನಿಂದ ಗಾಂಧೀಜಿಯವರೆಗೆ ವಿಶ್ವದ ಸಮ ಕಾಲೀನ ನಾಯಕರೆಲ್ಲರ ಭಾವಚಿತ್ರಗಳನ್ನು ರಚಿಸಿರುವ ಶ್ರೀ ಸ್ವಾಮಿ ಅವರನ್ನು ರಾಜ್ಯಪಾಲರು 'ಹಿರಿಯ ಕಲಾವಿದ' ಎಂದು ಕರೆದು ಅವರ ಸರಳತೆ ಸೌಜನ್ಯ

ಗಳನ್ನು ಪ್ರಶಂಸಿಸಿದರು. ಯುವ ಕಲಾವಿದರಿಗೆ ಹಾಗೂ ನೊಂದ ಕಲಾವಿದರಿಗೆ ಉತ್ತೇಜನ ನೀಡುವ ಜೀವ ಅವರದು ಎಂದು ನುಡಿದರು.

ಶ್ರೀ ಯು. ಕೆ. ಸುಬ್ಬರಾಯಾಚಾರ್ ಅವರು ಮಾತನಾಡಿ ಬಡತನದಲ್ಲಿ ತೊಳಲಾಡುತ್ತಿರುವ ಶ್ರೀ ಸ್ವಾಮಿ ಅವರಿಗೆ ಸರ್ಕಾರ ಆರ್ಥಿಕ ನೆರವು ನೀಡಬೇಕೆಂದು ಮನವಿ ಮಾಡಿಕೊಂಡರು. ಶ್ರೀ ಸ್ವಾಮಿ ಅವರ ಕಲಾಶಿಷ್ಯ ಪರಂಪರೆಯ ಮೂಲಕ ಅವರ ಕಲಾಸಿದ್ಧಿ ಬೆಳಗಿ ಬಾಳಲು ಅವಕಾಶ ಆಗಬೇಕೆಂದು ಹಾರೈಸಿದರು.

ಎಚ್ಚೆಸ್ಕೆ ಅವರು ಸ್ವಾಮಿ ಅವರ ಕಲಾಸಾಧನೆ ಕಲಾರಾಧನೆಯ ಬಗ್ಗೆ ತಮ್ಮ ಮೆಚ್ಚಿಗೆ ವ್ಯಕ್ತಪಡಿಸಿದರು. ಶ್ರೀ ಸ್ವಾಮಿಯವರ ತಂದೆ ಅರಮನೆಯಲ್ಲಿ ಕಲಾಸೇವೆ ಸಲ್ಲಿಸಿದ ಸ್ವರ್ಣಕಲಾನಿಪುಣ ದಿ. ಸಿಂಗಣ್ಣಾಚಾರ್ಯರು; ಕರ್ಣಾಟಕದ ಕಲಾರಂಗದಲ್ಲಿ ಪ್ರಮುಖ ಸ್ಥಾನಗಳಿಸಿದವರು. ಅಂಥ ಪ್ರಖ್ಯಾತ ವಂಶದಿಂದ ಬೆಳೆದು ಬಂದ ಸ್ವಾಮಿಯವರನ್ನು ಕೊಂಡಾಡಿದರು. ಅವರ ಕಲೆಯ ಬಗ್ಗೆ ಮಾತನಾಡುತ್ತ ಯಾವ ಕಲಾವಿದರಲ್ಲೂ ಕಾಣದ ಒಂದು ವೈಶಿಷ್ಟ್ಯವನ್ನು ಶ್ರೀ ಸ್ವಾಮಿಯವರಲ್ಲಿ ಕಾಣುತ್ತೇನೆ. ಅನಂತಸಾಗರದಂತಿರುವ ಕಲೆಯ ನಾನಾ ಪ್ರಕಾರಗಳಲ್ಲಿ ಒಂದಾದ ಭಾವಚಿತ್ರರಚನೆಯನ್ನೆ ತಮ್ಮ ಕಲಾಸಾಧನೆಯ ಗುರಿಯಾಗಿಟ್ಟುಕೊಂಡು ಅದನ್ನು ಬೆಳೆಸಿಕೊಂಡು ಬಂದು ಇಂದು ಜನಪ್ರಿಯ ಕಲಾವಿದರಾಗಿದ್ದಾರೆ ಎಂದು ನುಡಿದರು. ೧೯೩೪ರಲ್ಲಿ ವಿಶ್ವಕವಿ ರವೀಂದ್ರರ ಭಾವಚಿತ್ರವನ್ನು (ಛಾಯಾಚಿತ್ರ ಒಂದರ ಆಧಾರದಿಂದ) ರಚಿಸಿ, ಅದನ್ನು ಕವಿವರರಿಗೆ ಸಹಿಗಾಗಿ ಕಳುಹಿಸಿಕೊಟ್ಟರು. ಸಹಿಯೊಡನೆ ಚಿತ್ರ ಹಿಂದಿರುಗಿದಾಗ 'ಜಗತ್ತಿನ ಹಿರಿಯ ವ್ಯಕ್ತಿಗಳ ರೂಪಚಿತ್ರಗಳನ್ನು ರಚಿಸಿ ಕೀರ್ತಿ ಪಡೆಯಿರಿ' ಎಂಬ ಸಂದೇಶವೂ ಕಾವ್ಯರ್ಷಿಗಳಿಂದ ಬಂತು. ಅಲ್ಲಿಂದೀಚೆಗೆ ಶ್ರೀ ಸ್ವಾಮಿಯವರ ಕಲಾವಾಹಿನಿ ಹೆಚ್ಚು ಉತ್ಸಾಹದಿಂದ ಹರಿದುಬಂದ ಬಗೆಯನ್ನು ಅವರು ಬಣ್ಣಿಸಿದರು.

ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕ ಅವರು ಶ್ರೀ ಸ್ವಾಮಿಯವರು ರಚಿಸಿದ ರಾಷ್ಟ್ರಕವಿ 'ಕುವೆಂಪು' ಅವರ ರೇಖಾಚಿತ್ರದ ಅನಾವರಣ ಮಾಡಿದರು. ಡಾ. ನಾಯಕ ಅವರು ಶ್ರೀ ಸ್ವಾಮಿಯವರ ಚಿತ್ರಕಲೆಯ ಬಗ್ಗೆ ಮಾತನಾಡುತ್ತ ಶ್ರೀ ಸ್ವಾಮಿಯವರ ಅನೇಕ ಕೃತಿಗಳು ವಿಶ್ವದ ಅನೇಕ ಕಡೆಗಳಲ್ಲಿ ಶೋಭಿಸುತ್ತಿವೆ. ಸುಪ್ರಸಿದ್ಧ ಆಂಗ್ಲ ಸಾಹಿತಿ ಬರ್ನಾರ್ಡ್ ಷಾರವರ ಭಾವಚಿತ್ರವನ್ನು ಶ್ರೀ ಸ್ವಾಮಿಯವರು ಬರೆದು ಅವರ ಬಳಿ ಒಮ್ಮೆ ಸಹಿಗೆ ಕಳುಹಿಸಿದಾಗ ಅವರು 'You have done too much justice to an old man like me' ಎಂದು ಪ್ರಶಂಸೆ ಮಾಡಿದ್ದನ್ನು ನೆನೆದರು. ಶ್ರೀ ಸ್ವಾಮಿಯವರು ಸಮ್ರಾಟ–ಸಮ್ರಾಜ್ಞಿಯರನ್ನು, ರಾಜಕೀಯ ಧುರೀಣರನ್ನು, ತತ್ತ್ವಜ್ಞಾನಿಗಳನ್ನು, ಕವಿಕುಲತಿಲಕರನ್ನು, ನಾಟಕ ಲೇಖಕರನ್ನು,

ಮಹಾ ವಿಜ್ಞಾನಿಗಳನ್ನು, ಸುಪ್ರಸಿದ್ಧ ನಟನಟಿಯರನ್ನು ಭಾವಚಿತ್ರಗಳ ವಸ್ತುವಾಗಿ ಬಳಸಿಕೊಂಡು ಚಿತ್ರದ ರಚನೆಯಲ್ಲಿ ಯಶಸ್ಸನ್ನು ಪಡೆದುದನ್ನು ವಿವರಿಸಿದರು. ತಾವು ಚಿಕ್ಕವರಾಗಿದ್ದಾಗ ಶ್ರೀ ಸ್ವಾಮಿಯವರು ರಚಿಸಿದ ದಿ. ಮಹದೇವ ದೇಸಾಯಿ ಅವರ ಚಿತ್ರದಲ್ಲಿ ಸ್ವಾಮಿ ಅವರ ಸಹಿಯನ್ನು ಮೊದಲ ಬಾರಿಗೆ ನೋಡಿ ಆದರ ಮೋಹಕತೆಗೆ ಮುಗ್ಧರಾದದ್ದನ್ನು ನೆನಪು ತಂದುಕೊಂಡರು.

ಶ್ರೀ ಕುವೆಂಪು ಅವರ ಭಾವಚಿತ್ರವನ್ನು ಶ್ರೀ ಸ್ವಾಮಿಯವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅರ್ಪಿಸಿದರು; ಡಾ. ನಾಯಕರು ವಿಶ್ವವಿದ್ಯಾನಿಲಯದ ಪರವಾಗಿ ಸ್ವೀಕರಿಸಿದರು.

ಶ್ರೀ ಸ್ವಾಮಿ ಅವರು ತಮಗೆ ನೀಡಿದ ಸನ್ಮಾನಕ್ಕೆ ವಂದಿಸಿ ಕಲಾವಿದರ ಆರ್ಥಿಕ ಮುಗ್ಗಟ್ಟನ್ನು ನಿವಾರಿಸಲು ಸರ್ಕಾರ ಸಹಾಯಮಾಡಬೇಕೆಂದರು.

ನಗರದ ಕಲಾವಿದರ ಪರವಾಗಿ ಶ್ರೀ ವೈ. ನಾಗರಾಜು, ಶ್ರೀ ತಿಪ್ಪೇಸ್ವಾಮಿ ಮೊದಲಾದವರು ಹಾರ ಸಮರ್ಪಣೆ ಮಾಡಿದರು.

ಶ್ರೀ ಎಚ್. ಎನ್. ರಾಮಕೃಷ್ಣಶಾಸ್ತ್ರಿ ಅವರು ಮೊದಲು ಸ್ವಾಗತಿಸಿದರು. ಶ್ರೀ ಎಸ್. ಕೆ. ಎಂ. ಆಚಾರ್ಯ ಅವರು ಶ್ರೀ ಸ್ವಾಮಿಯವರಿಗೆ ಬಿನ್ನವತ್ತಳೆ ಅರ್ಪಿಸಿದರು. ಶ್ರೀ ಸಿ. ಕೆ. ಪುಟ್ಟಣ್ಣಯ್ಯ ತಾವು ರಚಿಸಿದ ಸ್ವಾಗತ ಪದ್ಯ ಮಾಲಿಕೆ ಹಾಡಿದರು. ಶ್ರೀ ನಾಗಭೂಷಣರಾವ್ ವಂದಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲೆಗಳ ಕಾಲೇಜಿನ ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಪುರಭವನ ನಗರದ ಕಲಾಭಿಮಾನಿಗಳಿಂದ, ಕಲಾವಿದರಿಂದ ತುಂಬಿ ಶೋಭಿಸುತ್ತಿತ್ತು. ಸಭೆ ರಾಷ್ಟ್ರಗೀತೆಯೊಡನೆ ಮುಕ್ತಾಯಗೊಂಡಿತು.

—ಸಿ. ಆರ್. ತಿಪ್ಪೇಸ್ವಾಮಿ

ಪುಸ್ತಕಲೋಕ

ಗ್ಯಾಲ್‌ಬ್ರೇತರ 'ದಿ ನ್ಯೂ ಇಂಡಸ್ಟ್ರಿಯಲ್ ಸ್ಟೇಟ್'[1]

ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿರುವ ಜಾನ್ ಕೆನ್ನೆತ್ ಗ್ಯಾಲ್‌ಬ್ರೇತ್ ಅವರ ಹೆಸರನ್ನು ಕೇಳದಿರುವ ಅರ್ಥಶಾಸ್ತ್ರ ವಿದ್ಯಾರ್ಥಿಯಿಲ್ಲ. ಕೆನ್ನೆಡಿಯವರ ಆಡಳಿತ ಕಾಲದಲ್ಲಿ ಅಮೆರಿಕದ ರಾಯಭಾರಿಯಾಗಿ ಭಾರತಕ್ಕೆ ಆಗಮಿಸಿದ ಗ್ಯಾಲ್‌ಬ್ರೇತರ ಹೆಸರು ಸಾಮಾನ್ಯ ಜನರ ಕಿವಿಯ ಮೇಲೂ ಬಿದ್ದಿರಲೇಬೇಕು. ಗ್ಯಾಲ್‌ಬ್ರೇತ್ ಅರ್ಥಶಾಸ್ತ್ರದ ಬೆಳೆವಣಿಗೆಗೆ ದುಡಿಯುವ ಹಾಗೂ ಆರ್ಥಿಕ ಸಮಸ್ಯೆಗಳನ್ನು ಬಗೆ ಹರಿಸುವ ಪ್ರಯತ್ನವನ್ನು ಕೈಗೊಂಡ ಅರ್ಥಶಾಸ್ತ್ರಜ್ಞರ ಗುಂಪಿಗೆ ಸೇರಿದವರು. ಅವರ ಗ್ರಂಥಗಳಾದ ಅಮೆರಿಕನ್ ಕ್ಯಾಪಿಟಲಿಸಂ—ದಿ ಕಾನ್ಸೆಪ್ಟ್ ಆಫ್ ಕೌಂಟರ್ ವೇಲಿಂಗ್ ಫೋರ್ಸಸ್, ಎ ಥಿಯೊರಿ ಆಫ್ ಪ್ರೈಸ್ ಕಂಟ್ರೋಲ್, ದಿ ಗ್ರೇಟ್ ಕ್ರ್ಯಾಷ್, ೧೯೨೯, ದಿ ಅಫ್ಲೂಯೆಂಟ್ ಸೊಸೈಟಿ ಮುಂತಾದವುಗಳೇ ಇದಕ್ಕೆ ಸಾಕ್ಷಿ.

ಅವರ ಬರೆವಣಿಗೆ ಸಾಮಾನ್ಯವಾಗಿ ಹೊಸ ಬೆಳಕನ್ನು ಬೀರುವಂಥದು; ಆರ್ಥಿಕತೆಯ ಹೊಸ ನಮೂನೆಗಳನ್ನು(ಮಾಡೆಲ್) ಸೃಷ್ಟಿಸಿ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಸಹಾಯವಾಗುವಂಥದು. ಈಚೆಗೆ ಪ್ರಕಾಶನಗೊಂಡ ದಿ ನ್ಯೂ ಇಂಡಸ್ಟ್ರಿಯಲ್ ಸ್ಟೇಟ್ ಈ ಸಂಪ್ರದಾಯಕ್ಕೆ ಸೇರಿದಂಥ ಗ್ರಂಥ. ಈ ಗ್ರಂಥ ಎರಡು ದೃಷ್ಟಿಗಳಿಂದ ಮಹತ್ತ್ವಪೂರ್ಣವಾದದ್ದು. ಮೊದಲನೆಯದಾಗಿ, ಇದು ಉದ್ಯಮ ಸಂಸ್ಥೆಯ(ಫರ್ಮ್) ಒಂದು ನೂತನ ನಮೂನೆಯನ್ನು ಸೃಷ್ಟಿಸಿ ಅರ್ಥಶಾಸ್ತ್ರದ ತತ್ತ್ವಗಳಿಗೆ—ಮುಖ್ಯವಾಗಿ ವ್ಯಷ್ಟಿ (ಮೈಕ್ರೊ) ಆರ್ಥಿಕ ತತ್ತ್ವಗಳಿಗೆ—ಹೊಸ ಕೊಡುಗೆಯನ್ನು ಒದಗಿಸಿದೆ. ಎರಡನೆಯದಾಗಿ, ಈ ಗ್ರಂಥದಲ್ಲಿ ಸೃಷ್ಟಿಸಲಾದ ಉದ್ಯಮಸಂಸ್ಥೆಯ ನೂತನ ನಮೂನೆ ಹಲವು ಆರ್ಥಿಕ ಧೋರಣೆಗಳ ವಿಷಯದಲ್ಲಿ ಹೊಸ ಬೆಳಕನ್ನು ಚೆಲ್ಲಿ ಅರ್ಥಶಾಸ್ತ್ರದ ಕಾರ್ಯಕ್ಷೇತ್ರವನ್ನು ಬಲಪಡಿಸಲು ಸಮರ್ಥವಾಗಿದೆ.

[1] Galbraith, John Kenneth: *The New Industrial State*; Calcutta: Oxford and I.B.H. Publishing Co., 1967, pp. xiv+427, Rs. 28

ಈ ಗ್ರಂಥದ ಕೊಡುಗೆಯ ಮಹತ್ತ್ವವನ್ನು ಅರ್ಥಮಾಡಿಕೊಳ್ಳಬೇಕಾದರೆ ಅದನ್ನು ಪ್ರಚಲಿತ ವ್ಯಷ್ಟಿ ಆರ್ಥಿಕ ತತ್ತ್ವಗಳ ಹಿನ್ನೆಲೆಯಲ್ಲಿ ವಿವೇಚಿಸುವುದು ಸೂಕ್ತ. ವ್ಯಷ್ಟಿ ಆರ್ಥಿಕ ತತ್ತ್ವಗಳು ಬಹುಪಾಲು ಬಳಕೆದಾರ ಹಾಗೂ ಉದ್ಯಮಸಂಸ್ಥೆಗಳ ಆರ್ಥಿಕ ನಡೆವಳಿಕೆ ಹಾಗೂ ಈ ನಡೆವಳಿಕೆಯ ಪರಿಣಾಮವಾಗಿ ತೋರಿಬರುವ ಬೆಲೆ ವ್ಯವಸ್ಥೆಗಳನ್ನು ನಿರೂಪಿಸುವುದರಲ್ಲಿ ಸಮರ್ಥವಾಗುತ್ತವೆ. ಪ್ರಚಲಿತ ವ್ಯಷ್ಟಿ ಆರ್ಥಿಕ ತತ್ತ್ವಗಳಲ್ಲಿ ಬಳಕೆದಾರ ಹಾಗೂ ಉದ್ಯಮಸಂಸ್ಥೆಗಳ ಸಂಬಂಧದಲ್ಲಿ ಎರಡು ಆಧಾರಭಾವಗಳನ್ನು (ಅಸಂಪ್ಷನ್ಸ್) ಇಟ್ಟುಕೊಳ್ಳಲಾಗಿದೆ. ಒಂದನೆಯದು ತರ್ಕಸಮ್ಮತ ಆಧಾರಭಾವ. ಇಲ್ಲಿ ಬಳಕೆದಾರನ ಧ್ಯೇಯ ತೃಪ್ತಿಯನ್ನು ಪರಮಾವಧಿಗೊಳಿಸುವುದೆಂತಲೂ ಉದ್ಯಮಸಂಸ್ಥೆಯ ಧ್ಯೇಯ ಲಾಭವನ್ನು ಪರಮಾವಧಿಗೊಳಿಸುವುದೆಂದೂ ಭಾವಿಸಲಾಗುವುದು. ಎರಡನೆಯ ಆಧಾರಭಾವ ಬಳಕೆದಾರ ಹಾಗೂ ಉದ್ಯಮಸಂಸ್ಥೆಯ ಸಂಬಂಧವನ್ನು ಕುರಿತಾದದ್ದು. ಪ್ರಚಲಿತ ಭಾವನೆಯ ಪ್ರಕಾರ ಉದ್ಯಮಸಂಸ್ಥೆ ಬಳಕೆದಾರನ ಕೈಗೊಂಬೆ. ಬಳಕೆದಾರ ಕೊಡಲು ಸಿದ್ಧನಾಗಿರುವ ಬೆಲೆಯ ಸೂಚನೆಯನ್ನು ಮನಗಂಡು ಉದ್ಯಮಿ ಯಾವ ವಸ್ತುವನ್ನು ಎಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕು ಎಂಬ ನಿರ್ಧಾರ ಕೈಗೊಳ್ಳಬೇಕು. ಎಂದರೆ ಮಾರುಕಟ್ಟೆಯಲ್ಲಿ ಬಳಕೆದಾರ ಸಾರ್ವಭೌಮ. ಬಳಕೆದಾರನ ಇಚ್ಛಾನುಗುಣವಾಗಿ ಉದ್ಯಮಿ ನಡೆದುಕೊಳ್ಳತಕ್ಕದ್ದು.

ಈ ಎರಡು ಭಾವಗಳ ಆಧಾರದ ಮೇಲೆ ವ್ಯಷ್ಟಿ ಅರ್ಥಶಾಸ್ತ್ರ ಬೆಲೆಗಳ ವ್ಯವಸ್ಥೆಯನ್ನು ರಚಿಸುತ್ತದೆ. ಬಳಕೆದಾರನ ಆರ್ಥಿಕ ನಡೆವಳಿಕೆಯ ಆಧಾರದ ಮೇಲೆ ಬೇಡಿಕೆಯ ಅನುಚಲಿಯನ್ನೂ (ಡಿಮ್ಯಾಂಡ್ ಫಂಕ್ಷನ್) ಉದ್ಯಮಿಯ ಆರ್ಥಿಕ ನಡೆವಳಿಕೆಯ ಮೇಲೆ ನೀಡಿಕೆಯ ಅನುಚಲಿಯನ್ನೂ (ಸಪ್ಲೈ ಫಂಕ್ಷನ್) ನಿಷ್ಪನ್ನ ಮಾಡಲಾಗಿದೆ. ಬಳಕೆದಾರನ ಬೇಡಿಕೆ, ವಸ್ತುವಿನಿಂದ ದೊರಕುವ ತುಷ್ಟಿಗುಣ ಹಾಗೂ ಅದರ ಬೆಲೆಯನ್ನು ಸರಿದೂಗಿಸುವುದನ್ನೇ ಅವಲಂಬಿಸಿದೆ. ಉದ್ಯಮಿಯ ನೀಡಿಕೆ ಉತ್ಪನ್ನವೆಚ್ಚವನ್ನು ಅವಲಂಬಿಸುತ್ತದೆ. ಹೀಗಾಗಿ ಮಾರುಕಟ್ಟೆಯಲ್ಲಿ ಯಾವುದೇ ವಸ್ತುವಿನ ಬೆಲೆ ನೀಡಿಕೆ-ಬೇಡಿಕೆಗಳ ಹಿನ್ನೆಲೆಯಲ್ಲಿ ಅಡಕವಾಗಿರುವ ಈ ಪ್ರೇರಣೆಗಳ ಆಧಾರದ ಮೇಲೆ ನಿರ್ಧಾರವಾಗುತ್ತದೆ.

ಆದರೆ ಉದ್ಯಮಸಂಸ್ಥೆಯ ಗುರಿ ಲಾಭವನ್ನು ಪರಮಾವಧಿಗೊಳಿಸುವುದು ಎಂಬ ಭಾವ ಬಹಳ ಹಿಂದಿನಿಂದಲೂ ಟೀಕೆಗೆ ಗುರಿಯಾಗಿತ್ತು. ವಾಸ್ತವವಾಗಿ, ಲಾಭವನ್ನು ಪರಮಾವಧಿಗೊಳಿಸುವುದನ್ನೇ ಉದ್ಯಮಸಂಸ್ಥೆ ಗುರಿಯಾಗಿಟ್ಟುಕೊಳ್ಳಲು ಸಾಧ್ಯವಿಲ್ಲ ಎಂದು ಪ್ರೊ. ಸಿಟೋವ್‌ಸ್ಕಿ ಅಭಿಪ್ರಾಯಪಡುತ್ತಾರೆ. ಏಕೆಂದರೆ ಉದ್ಯಮಸಂಸ್ಥೆ ಈ ಗುರಿಗೆ ವ್ಯತಿರಿಕ್ತವಾಗುವಂಥ ಇತರ ಧ್ಯೇಯಗಳನ್ನೂ ಸಾಧಿಸುವ ಇಚ್ಛೆಯುಳ್ಳದ್ದಾಗಿರುತ್ತದೆ. ಅಂಥ ಧ್ಯೇಯಗಳು ಯಾವುವೆಂದರೆ: ಕಾರ್ಮಿಕರ ಕ್ಷೇಮಸಾಧನೆ, ಬಳಕೆದಾರರ ಅಭಿಮಾನಸಂಪಾದನೆ ಮೊದಲಾದವು.

ಲಾಭವನ್ನು ಪರಮಾವಧಿಗೊಳಿಸುವುದಲ್ಲದಿದ್ದರೆ ಉದ್ಯಮಸಂಸ್ಥೆಯ ಧ್ಯೇಯ ಮತ್ತಾವುದೆಂಬ ಪ್ರಶ್ನೆಯನ್ನಿಟ್ಟುಕೊಂಡು ಯುದ್ಧಾನಂತರ ಅನೇಕ ಅನುಭವಜನ್ಯ (ಎಂಪಿರಿಕಲ್) ಅಧ್ಯಯನಗಳನ್ನು ಕೈಗೊಳ್ಳಲಾಯಿತು. ಈ ಅಧ್ಯಯನಗಳ ಪರಿಣಾಮವಾಗಿ ಉದ್ಯಮಸಂಸ್ಥೆಯ ಧ್ಯೇಯಗಳನ್ನು ಕುರಿತು ಕೆಲವು ಆಧಾರ ಕಲ್ಪನೆಗಳು (ಹೈಪಾಥಿಸಿಸ್) ಬೆಳಕಿಗೆ ಬಂದಿವೆ. ಇವುಗಳ ಪೈಕಿ ಒಪ್ಪಿಗೆ ಪಡೆದಿರುವ ಆಧಾರಕಲ್ಪನೆ ಎಂದರೆ ಮಾರಾಟದ ಪ್ರಮಾಣದ ರೂಪದಲ್ಲಿ ಅಳೆಯಬಹುದಾದ ಸಂಸ್ಥೆಯ ಬೆಳವಣಿಗೆ ಮುಖ್ಯವಾದ ಧ್ಯೇಯ ಎಂಬುದು. ಆದರೆ ಲಾಭವನ್ನು ಗಳಿಸುವುದು ಉದ್ಯಮ ಸಂಸ್ಥೆಯ ಧ್ಯೇಯವೇ ಅಲ್ಲ ಎಂದರ್ಥವಲ್ಲ. ಲಾಭವನ್ನು ಗಳಿಸುವುದು ಗೌಣವಾದ ಧ್ಯೇಯ. ಉದ್ಯಮಸಂಸ್ಥೆ ಲಾಭವನ್ನು ಗಳಿಸುವುದನ್ನೂ ಒಂದು ಧ್ಯೇಯವನ್ನಾಗಿಟ್ಟುಕೊಂಡಿದೆ. ಆದರೆ ಉದ್ಯಮಸಂಸ್ಥೆ ಲಾಭವನ್ನು ಪರಮಾವಧಿಗೊಳಿಸುವುದಕ್ಕಿಂತ ಯಾವುದೋ ಒಂದು ಮಟ್ಟದ ಲಾಭವನ್ನು ಮಾತ್ರ ಪಡೆಯಲು ಪ್ರಯತ್ನಿಸುತ್ತದೆ ಎಂಬುದು ಈಚಿನ ಮತ.

ಹಾಗೆಯೇ ಬೆಲೆಗಳ ವ್ಯವಸ್ಥೆಗೆ ಸಂಬಂಧಪಟ್ಟ ಎರಡನೆಯ ಭಾವವೂ, ಬಳಕೆದಾರ ತನ್ನ ಕೊಳ್ಳುವಿಕೆಯನ್ನು ವಸ್ತುವಿನಿಂದ ಬರಲಿರುವ ತುಷ್ಟಿಗುಣದ ಆಧಾರದ ಮೇಲಿದೆ ಎಂಬ ಭಾವವೂ—ಟೀಕೆಗೆ ಗುರಿಯಾಗಿದೆ. ಈಚಿನ ವಾದಸರಣಿಯ ಪ್ರಕಾರ ಬಳಕೆದಾರ ಉದ್ಯಮಿ ಕೈಗೊಳ್ಳುವ ಜಾಹೀರಾತು ಮೊದಲಾದ ಮಾರಾಟ ಪ್ರಚೋದಕ ವಿಧಾನಗಳ ಪ್ರಭಾವಕ್ಕೆ ಒಳಗಾಗಿ ತನ್ನ ಕೊಳ್ಳುವಿಕೆಯನ್ನು ನಿರ್ಧರಿಸುತ್ತಾನೆ. ಆದ್ದರಿಂದ ಮಾರುಕಟ್ಟೆಯಲ್ಲಿ ಬಳಕೆದಾರ ಸಾರ್ವಭೌಮನಲ್ಲ. ಈ ಸ್ಥಾನವನ್ನು ಪಡೆಯುವವನು ಉದ್ಯಮಿ.

ಹೀಗೆ ವ್ಯಷ್ಟಿ ಅರ್ಥಶಾಸ್ತ್ರದ ಎರಡು ಮೂಲ ಆಧಾರಭಾವಗಳು ಈಚೆಗೆ ಖಂಡನೆಗೆ ಒಳಗಾದುದರಿಂದ ವ್ಯಷ್ಟಿ ಅರ್ಥಶಾಸ್ತ್ರ ವಿವರಿಸುವಂತೆ ಬೆಲೆಗಳ ವ್ಯವಸ್ಥೆಯನ್ನು ಕಟ್ಟಲಾಗಿಲ್ಲವೆಂಬುದು ವಿದಿತವಾಗುತ್ತದೆ. ಬೆಲೆಗಳ ವ್ಯವಸ್ಥೆಯ ಸರಿಯಾದ ನಿರೂಪಣೆಯನ್ನು ಕೊಡಬೇಕಾದರೆ ಉದ್ಯಮಸಂಸ್ಥೆಯ ಹಾಗೂ ಬಳಕೆದಾರನ ನಡೆವಳಿಕೆಗಳ ಸಂಬಂಧದಲ್ಲಿ ಹೊರಬಿದ್ದ ಹೊಸ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಲ್ಲಿಯ ವರೆಗಿನ ಸಂಶೋಧನೆ ಈ ಹೊಸ ಅಂಶಗಳನ್ನು ಹೊರಗೆಡಹಿದ್ದರೂ ವ್ಯಷ್ಟಿ ಅರ್ಥಶಾಸ್ತ್ರದಲ್ಲಿ ಒಂದು ಕೊರತೆ ಉಳಿದುಕೊಂಡು ಬಂದಿತ್ತು. ಅದೇನೆಂದರೆ, ಮೇಲೆ ಹೇಳಿದ ಹೊಸ ಅಂಶಗಳನ್ನೊಳಗೊಂಡ ಹಾಗೂ ಉದ್ಯಮಸಾಹಸಿಯ ಮತ್ತು ಬಳಕೆದಾರರ ನಿಜಸ್ಥಿತಿಯ ನಡೆವಳಿಕೆಯನ್ನು ತೃಪ್ತಿಕರವಾಗಿ ವಿವರಿಸುವಂಥ ಉದ್ಯಮಸಂಸ್ಥೆಯ ನಮೂನೆ ಸೃಷ್ಟಿಯಾಗಿರಲಿಲ್ಲ. ಈ ಕೊರತೆಯನ್ನು ಗ್ಯಾಲ್‌ಬ್ರೇತರ 'ದಿ ನ್ಯೂ ಇಂಡಸ್ಟ್ರಿಯಲ್ ಸ್ಟೇಟ್' ತೊಡೆದು ಹಾಕುವ ಪ್ರಯತ್ನಮಾಡಿದೆ.

ಗ್ಯಾಲ್‌ಬ್ರೇತ್ ತಮ್ಮ ಗ್ರಂಥದಲ್ಲಿ ಉದ್ಯಮಸಂಸ್ಥೆಯ ಒಂದು ನೂತನ

ನಮೂನೆಯನ್ನು ಸೃಷ್ಟಿಸಿ ವಿವರಿಸಿದ್ದಾರೆ. ಈ ನಮೂನೆಯ ವೈಶಿಷ್ಟ್ಯವೇನೆಂದರೆ, ಅದು ಉದ್ಯಮಸಂಸ್ಥೆ ಮತ್ತು ಬಳಕೆದಾರರನ್ನು ಕುರಿತು ಈಚೆಗೆ ತಿಳಿದುಬಂದಿರುವ ಹೊಸ ಅಂಶಗಳನ್ನು ಒಳಗೊಂಡಿರುವುದಲ್ಲದೆ ಉದ್ಯಮಸಾಹಸಿ ಬಳಕೆದಾರರ ವಾಸ್ತವ ನಡೆವಳಿಕೆಯನ್ನು ತೃಪ್ತಿಕರವಾಗಿ ವಿವರಿಸಲು ಸಮರ್ಥವಾಗಿದೆ. ಗ್ಯಾಲ್‌ಬ್ರೀತ್ ಸೂಚಿಸಿರುವ ಉದ್ಯಮಸಂಸ್ಥೆಯ ನಮೂನೆ ಈ ರೀತಿ ಇದೆ:

ಆಧುನಿಕ ಉದ್ಯಮಸಂಸ್ಥೆಯ (ಕಾರ್ಪೊರೇಷನ್) ಪ್ರಭಾವ ಗ್ಯಾಲ್‌ಬ್ರೀತ್ ವಿವರಿಸುವಂಥ "ಟೆಕ್ನೋಸ್ಟ್ರಕ್ಚರ್" ಎಂಬ ತಾಂತ್ರಿಕ ನಿರ್ಮಿತಿಯ ಸಾಮರ್ಥ್ಯವನ್ನೇ ಅನ್ವಯಿಸಿದೆ. ಈ ಉತ್ಪಾದನಾಂಗ ಉದ್ಯಮಸಂಸ್ಥೆಯ ತಂತ್ರಜ್ಞರು ಹಾಗೂ ಕಾರ್ಯನಿರ್ವಾಹಕ ತಂಡವನ್ನು ಒಳಗೊಂಡಿದೆ. ಉದ್ಯಮಸಂಸ್ಥೆಗೆ ಇವರ ಆವಶ್ಯಕತೆ ತೀವ್ರವಾದದ್ದು. ಏಕೆಂದರೆ ಆಧುನಿಕ ವ್ಯಾಪಾರೋದ್ಯಮ ಅನಿಶ್ಚಿತ ಘಟನೆಗಳನ್ನು ಎದುರಿಸಿ ತನ್ನ ಕಾರ್ಯವನ್ನು ಮುಂದುವರಿಸಬೇಕು. ಈ ಕಾರ್ಯ ಯಶಸ್ವಿಯಾಗಿ ನಡೆಯಬೇಕಾದರೆ ಉತ್ಪಾದನೆ, ಮಾರಾಟ ಮೊದಲಾದ ಚಟುವಟಿಕೆಗಳ ವಿಷಯದಲ್ಲಿ ಯೋಜನೆ ಅತ್ಯಾವಶ್ಯಕ. ಆದರೆ ಯೋಜನೆ ಕಠಿಣವಾದ ಕಾರ್ಯ. ಯೋಜನೆಯನ್ನು ಯಶಸ್ವಿಯಾಗಿ ಕೈಗೊಳ್ಳಬೇಕಾದರೆ ಹಲವಾರು ವಿಷಯಗಳ ಜ್ಞಾನ ಆವಶ್ಯಕ. ಈ ವಿಷಯಗಳ ತಿಳಿವಳಿಕೆಯನ್ನು ನೀಡುವ ವ್ಯಕ್ತಿಗಳೇ ತಂತ್ರೀಯವಿನ್ಯಾಸದಲ್ಲಿರುವ ವ್ಯಕ್ತಿಗಳು. ಈ ವ್ಯಕ್ತಿಗಳ ಸಂಖ್ಯೆ ಅಧಿಕ. ಯೋಜನೆ ಯಶಸ್ವಿಯಾಗಬೇಕಾದರೆ ಈ ವ್ಯಕ್ತಿಗಳೆಲ್ಲರೂ ಒಟ್ಟುಗೂಡಿ ವಿಷಯಗಳ ತಿಳಿವಳಿಕೆಯನ್ನು ನೀಡಬೇಕು. ಇದರ ಆಧಾರದ ಮೇಲೆ ಯೋಜನೆಗೆ ಸಂಬಂಧಪಟ್ಟ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು. ಹೀಗಾಗಿ ಆಧುನಿಕ ಉದ್ಯಮಸಂಸ್ಥೆಯಲ್ಲಿ ಕಂಡುಬರುವುದು ಸಾಮೂಹಿಕ ನಿರ್ಣಯ. ಸಾಮೂಹಿಕ ನಿರ್ಣಯವನ್ನು ಯಶಸ್ವಿಯಾಗಿ ಪ್ರವರ್ತನ ಗೊಳಿಸುವುದರಲ್ಲಿ ತಂತ್ರಜ್ಞರ ಹಾಗೂ ಕಾರ್ಯನಿರ್ವಾಹಕ ಮಂಡಲಿಯ ಪಾತ್ರ ಅತಿ ದೊಡ್ಡದು.

ಗ್ಯಾಲ್‌ಬ್ರೀತರ ದೃಷ್ಟಿಯಲ್ಲಿ ಉದ್ಯಮಸಂಸ್ಥೆಯ ಧ್ಯೇಯ "ತಾಂತ್ರಿಕ ನಿರ್ಮಿತಿ"ಯನ್ನು ಒಳಗೊಂಡಿರುವ ವ್ಯಕ್ತಿಗಳ ಧ್ಯೇಯವನ್ನೇ ಅನ್ವಯಿಸಿದೆ. ಸ್ವಯಮಾಧಿಪತ್ಯ(ಆಟಾನಮಿ), ಉದ್ಯಮಸಂಸ್ಥೆಯ ಬೆಳವಣಿಗೆ (ಗ್ರೋತ್) ಹಾಗೂ ತಾಂತ್ರಿಕ ಕೌಶಲವನ್ನು (ಟೆಕ್ನಿಕಲ್ ವರ್ಚುಯಾಸಿಟಿ) ವ್ಯಕ್ತಪಡಿಸುವ ಅವಕಾಶ —ಇವುಗಳ ಅಪೇಕ್ಷೆ. ಈ ಧ್ಯೇಯಗಳು ಒಂದಕ್ಕೊಂದು ಸಂಬಂಧಿತವಾದುವು. ಸ್ವಯಮಾಧಿಪತ್ಯವನ್ನು ಅಪೇಕ್ಷಿಸುವುದು ತಾಂತ್ರಿಕ ಕೌಶಲವನ್ನು ವ್ಯಕ್ತಪಡಿಸುವ ದೃಷ್ಟಿಯಿಂದ. ನಿತ್ಯದ ಕಾರ್ಯಕಲಾಪಗಳಲ್ಲಿ ಷೇರುದಾರರು ಕೈಹಾಕದಂತೆ ಮಾಡಿ ಉದ್ಯಮದ ಕಾರ್ಯಗಳನ್ನು ಸ್ವತಃ ನಡೆಸಿಕೊಂಡು ಹೋಗುವ ಹಕ್ಕನ್ನು ಪಡೆದರೆ ತಂತ್ರಜ್ಞರ ಮಂಡಲಿ ಸ್ವಯಮಾಧಿಪತ್ಯ ಪಡೆದಂತೆ ಅರ್ಥ. ಸ್ವಯಮಾಧಿ

ಪತ್ಯ ಪಡೆಯಬೇಕಾದರೆ ಉದ್ಯಮಸಂಸ್ಥೆಯ ಬೆಳೆವಣಿಗೆಯನ್ನು ಪ್ರವರ್ತನಗೊಳಿಸುವುದು ಆವಶ್ಯಕ. ಷೇರುದಾರರು ನಿತ್ಯದ ಕಾರ್ಯಕಲಾಪಗಳಲ್ಲಿ ಕೈಹಾಕದಂತಿರಬೇಕಾದರೆ ಅವರನ್ನು ಯಾವುದಾದರೂ ಒಂದು ರೀತಿಯಲ್ಲಿ ತೃಪ್ತಿಪಡಿಸಬೇಕು. ಒಂದು ಸುರಕ್ಷಿತ ಮಟ್ಟದ ಗಳಿಕೆಯನ್ನು ತೋರಿಸುವುದೇ ಆದರೆ ಷೇರುದಾರರು ತೃಪ್ತಿಗೊಂಡು ಉದ್ಯಮದ ನಿತ್ಯದ ಕಾರ್ಯಕಲಾಪಗಳಲ್ಲಿ ಕೈಹಾಕುವುದಿಲ್ಲ. ಈ ಮಟ್ಟದ ಗಳಿಕೆಯನ್ನು ಪಡೆಯಬೇಕಾದರೆ ಉದ್ಯಮಸಂಸ್ಥೆ ಯಾವುದೋ ಒಂದು ಪ್ರಮಾಣದಲ್ಲಿ ಬೆಳೆಯುತ್ತಿರಬೇಕು. ತಂತ್ರಜ್ಞರ ಮಂಡಲಿ ಇಂಥ ಪ್ರಮಾಣದ ಬೆಳೆವಣಿಗೆಯನ್ನು ಪಡೆಯಲಿಚ್ಛಿಸುವುದಕ್ಕೆ ಮತ್ತೊಂದು ಕಾರಣವೂ ಉಂಟು. ಉದ್ಯಮ ಯಾವುದೋ ಕಾರಣದಿಂದ ತೊಂದರೆಗೀಡಾಗಿ ಬಂಡವಾಳದ ಕೊರತೆಯನ್ನನುಭವಿಸಿದರೆ ಷೇರುದಾರರು ಹಾಗೂ ಸಾಲ ತೆತ್ತವರು ಮತ್ತೆ ಪೇಚಿನ ಪ್ರಶ್ನೆಗಳನ್ನು ಹಾಕುವ ಸಂಭವವುಂಟು. ಈ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಸಂಸ್ಥೆ ಒಂದು ಕಾಯ್ದಿಟ್ಟ ನಿಧಿಯನ್ನು ಬೆಳೆಸಿಕೊಂಡಿದ್ದು, ಬಂಡವಾಳ ಕೊರತೆ ಕಂಡುಬಂದಾಗ ಈ ನಿಧಿಯಿಂದ ಹಣ ಪಡೆದುಕೊಳ್ಳುವ ಅನುಕೂಲ ಕಲ್ಪಿಸಿಕೊಳ್ಳುತ್ತದೆ. ಇಂಥ ನಿಧಿಯನ್ನು ಬೆಳೆಸುವ ದೃಷ್ಟಿಯಿಂದಲೂ ಸಂಸ್ಥೆ ಒಂದು ಸುರಕ್ಷಿತ ಮಟ್ಟದ ಗಳಿಕೆ ನೀಡುವಂಥ ಬೆಳೆವಣಿಗೆಯನ್ನು ಪ್ರವರ್ತನಗೊಳಿಸಿಕೊಳ್ಳಬೇಕು.

ಉದ್ಯಮಸಂಸ್ಥೆ ಯಾವಾಗ ಈ ಮಟ್ಟದ ಗಳಿಕೆಯನ್ನು ಪಡೆಯಲು ಪ್ರಾರಂಭಿಸುವುದೋ ಆಗ ತಂತ್ರಜ್ಞರು ತಮಗೆ ಬೇಕಾದ ಧ್ಯೇಯಗಳನ್ನು ಆರಿಸಿಕೊಳ್ಳುವ ಸ್ವಯಮಾಧಿಪತ್ಯ ಪಡೆಯುವರು. ಆದರೆ ಅವರು ಖಂಡಿತವಾಗಿ ಆರಿಸಿಕೊಳ್ಳುವ ಧ್ಯೇಯವೆಂದರೆ ಉದ್ಯಮಸಂಸ್ಥೆಯ ಬೆಳೆವಣಿಗೆ (ಉದ್ಯಮಸಂಸ್ಥೆಯ ಬೆಳೆವಣಿಗೆಯನ್ನು ಮಾರಾಟದ ಪ್ರಮಾಣದಲ್ಲಿ ಅಳೆಯಲಾಗುವುದು). ಈ ಧ್ಯೇಯವೂ ತಂತ್ರಜ್ಞರ ಹಿತವನ್ನು ಪೋಷಿಸುತ್ತದೆ. ಹೇಗೆಂದರೆ, ಉದ್ಯಮದ ಬೆಳೆವಣಿಗೆಯಿಂದ ಅಧಿಕ ಪ್ರಮಾಣದ ಸಂಸ್ಥೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಉದ್ಯೋಗಾವಕಾಶಗಳು ಕಲ್ಪಿತವಾಗುತ್ತವೆ. ಆಗ ತಂತ್ರಜ್ಞರಿಗೆ ಬಡತಿ ಸಿಗುವುದಲ್ಲದೆ ಸಂಬಳಸಾರಿಗೆಗಳೂ ಉತ್ತಮಗೊಳ್ಳುವುವು. ಇದರ ಜೊತೆಗೆ ತಂತ್ರಜ್ಞರು ತಮ್ಮ ತಾಂತ್ರಿಕ ಕೌಶಲವನ್ನು ಯಾವ ತಡೆಯೂ ಇಲ್ಲದಂತೆ ವ್ಯಕ್ತಪಡಿಸಲು ಅವಕಾಶ ಸಿಗುತ್ತದೆ.

ಎಂದರೆ ಉದ್ಯಮಸಂಸ್ಥೆಯ ಬೆಳೆವಣಿಗೆಯನ್ನು ಪ್ರವರ್ತನಗೊಳಿಸುವುದು ಎಲ್ಲ ದೃಷ್ಟಿಗಳಿಂದಲೂ ಆವಶ್ಯಕವೆಂದಾಗುತ್ತದೆ. ಇದರ ಬೆಳೆವಣಿಗೆಯನ್ನು ಪ್ರವರ್ತನಗೊಳಿಸುವ ದೃಷ್ಟಿಯಿಂದ ತಂತ್ರಜ್ಞರು ಯೋಜನೆ ಕೈಗೊಂಡು ಬೇಡಿಕೆಯನ್ನು ಹತೋಟಿಗೊಳಪಡಿಸುವ ಮೂಲಕ ಅನಿಶ್ಚಿತ ಸಂಘಟನೆಗಳನ್ನು ನಿರ್ಮೂಲಮಾಡುವರು ಇಲ್ಲವೆ ಕನಿಷ್ಠ ಪ್ರಮಾಣಕ್ಕೆ ತಂದು ನಿಲ್ಲಿಸುವರು. ಇದನ್ನು

ಸಾಧಿಸುವ ದೃಷ್ಟಿಯಿಂದ ಅತಿವೇಗದಲ್ಲಿ ನವೀನತೆಯನ್ನು (ಇನ್ನೊವೇಷನ್) ಕಲ್ಪಿಸುವುದಲ್ಲದೆ ಜಾಹೀರುಕಾರ್ಯವನ್ನೂ ಕೈಗೊಳ್ಳಲಾಗುವುದು. ಈ ಕಾರ್ಯ ಗತಿಯ ಪರಿಣಾಮವೇನೆಂದರೆ, ಬಯಕೆಗಳ ಸೃಷ್ಟಿ ಮತ್ತು ಅವುಗಳ ಪೂರೈಕೆ. ಇದು ಉದ್ಯಮಸಂಸ್ಥೆಯ ಒಂದು ಮುಖ್ಯವಾದ ಕಾರ್ಯವಾಗುತ್ತದೆ. ಹೀಗಾಗಿ ಆಧುನಿಕ ಮಾರುಕಟ್ಟೆಯ ಪರಿಸ್ಥಿತಿಯಲ್ಲಿ ಬಳಕೆದಾರ ತನ್ನ ಸಾರ್ವ ಭೌಮತ್ವವನ್ನು ಕಳೆದುಕೊಳ್ಳುತ್ತಾನೆ.

ಹೀಗೆ ಗ್ಯಾಲ್‌ಬ್ರೇತ್ ಸೂಚಿಸಿರುವ ಉದ್ಯಮಸಂಸ್ಥೆಯ ನಮೂನೆ ಸಾಂಪ್ರ ದಾಯಿಕ ತರ್ಕಸಮ್ಮತವಾದ ಆಧಾರಭಾವವನ್ನೂ ಉದ್ಯಮಸಂಸ್ಥೆ ಹಾಗೂ ಬಳಕೆ ದಾರರ ವಿಷಯದಲ್ಲಿ ಕಲ್ಪಿಸಿರುವ ಸಂಬಂಧವನ್ನೂ ತೊಡೆದುಹಾಕುವುದು. ಉದ್ಯಮ ಸಂಸ್ಥೆಯ ಗುರಿ ಲಾಭವನ್ನು ಪರಮಾವಧಿಗೊಳಿಸುವುವೆಂಬುದನ್ನು ಸ್ಪಷ್ಟಪಡಿಸುವುದರ ಜೊತೆಗೆ, ಸಂಸ್ಥೆ ಯಾವುದೋ ಒಂದು ಮಟ್ಟದ ಲಾಭವನ್ನು ಪಡೆಯಲು ಶ್ರಮಿಸುವುದೆಂಬ ಅಂಶವನ್ನು ಒತ್ತಿ ಹೇಳಲಾಗಿದೆ. ಈ ಮಟ್ಟದ ಲಾಭವನ್ನು ಗಳಿಸುವ ದೃಷ್ಟಿಯಿಂದ ತಂತ್ರಜ್ಞರ ಹಾಗೂ ಕಾರ್ಯನಿರ್ವಾಹಕರ ತಂಡ ಅನಿಶ್ಚಿತ ಸಂಘಟನೆಗಳನ್ನೂ ಯೋಜನೆಯನ್ನೂ ಕೈಗೊಳ್ಳುವ ಮೂಲಕ ಎದುರಿಸಿ ಹಾಗೂ ನವೀನತೆಯನ್ನು ಕಲ್ಪಿಸುವುದರ ಮೂಲಕ ಬಳಕೆದಾರರಲ್ಲಿ ಹೊಸ ಹೊಸ ಬಯಕೆಗಳನ್ನು ಸೃಷ್ಟಿಸಿ ಉದ್ಯಮಸಂಸ್ಥೆಯ ಬೆಳವಣಿಗೆಯನ್ನು ಪ್ರವರ್ತನಗೊಳಿಸುವುದು. ಈ ಬಗೆಯ ಚಿಂತನೆಯಿಂದ ತಿಳಿದುಬರುವುದೇನೆಂದರೆ ಬಳಕೆದಾರ ಮಾರುಕಟ್ಟೆಯಲ್ಲಿ ಉದ್ಯಮಿಯ ಕೈಗೊಂಬೆಯಾಗಿರುವ ಕಾರಣ ಬೆಲೆಯ ಸರಣಿಯನ್ನು ನಿರ್ಧರಿಸುವುದರಲ್ಲಿ ಆತನ ಪ್ರೇರಣೆಯನ್ನು ಗಮನಿಸುವುದು ಆವಶ್ಯಕವಲ್ಲವೆಂಬುದು. ಎಂದರೆ ಬೆಲೆಯ ವ್ಯವಸ್ಥೆ ಉದ್ಯಮಿಯ ಪ್ರೇರಣೆಯ ಮೇಲೆಯೆ—ಎಂದರೆ ಸುರಕ್ಷಿತ ಮಟ್ಟದ ಲಾಭವನ್ನು ಗಳಿಸುವ ಪ್ರೇರಣೆಯ ಮೇಲೆಯೆ — ಇರುತ್ತದೆ ಎಂದಾಗುತ್ತದೆ. ಹೀಗಾದ ಪಕ್ಷದಲ್ಲಿ ಬೆಲೆಯ ವ್ಯವಸ್ಥೆ ಉತ್ಪಾದನ ವೆಚ್ಚದ ಹಾಗೂ ಉದ್ಯಮಿ ಅಪೇಕ್ಷಿಸುವ ಲಾಭದ ಮಟ್ಟವನ್ನೇ ಅವಲಂಬಿಸುತ್ತದೆ. ಆದಕಾರಣ ಗ್ಯಾಲ್‌ಬ್ರೇತರ ಉದ್ಯಮಸಂಸ್ಥೆಯ ನಮೂನೆ ವ್ಯಷ್ಟಿ ಅರ್ಥಶಾಸ್ತ್ರದ ತತ್ತ್ವಗಳು ಸೃಷ್ಟಿಸುವ ಬೆಲೆವ್ಯವಸ್ಥೆಯನ್ನು ಒಪ್ಪುವುದಿಲ್ಲ ವೆಂಬುದು ಒಂದು ಅಂಶ.

ಅಲ್ಲದೆ ಗ್ಯಾಲ್‌ಬ್ರೇತ್ ಸೂಚಿಸುವ ಉದ್ಯಮಸಂಸ್ಥೆಯ ನಮೂನೆಯಿಂದ ನಿಷ್ಪನ್ನಮಾಡಬಹುದಾದ ಕೆಲವು ಅಂಶಗಳು ಆರ್ಥಿಕತೆಯಲ್ಲಿ ಕಂಡುಬರುವ ಅನೇಕ ಪ್ರವೃತ್ತಿಗಳ ನೂತನ ವಿವರಗಳನ್ನು ಕೊಡಲು ಈ ಪುಸ್ತಕ ಸಮರ್ಥ ವಾಗಿದೆ. ಉದಾಹರಣೆಗೆ, ತಂತ್ರಜ್ಞರ ಗುರಿ ಮಾರಾಟದ ಮೂಲಕ ಅಳೆಯಬಹು ದಾದ ಉದ್ಯಮಸಂಸ್ಥೆಯ ಬೆಳವಣಿಗೆ. ಉದ್ಯಮಸಂಸ್ಥೆಯ ಈ ಅರ್ಥದ ಬೆಳವಣಿಗೆ ಸ್ವಾಭಾವಿಕವಾಗಿಯೆ ಸಮಷ್ಟಿಬೇಡಿಕೆಯನ್ನು ಪೋಷಿಸುವುದನ್ನೇ ಅವಲಂಬಿಸಿದೆ.

ಈ ಕಾರಣದಿಂದಲೇ ಉದ್ಯಮಸಂಸ್ಥೆಗಳು ಯುದ್ಧ ಹಾಗೂಯುದ್ಧಸಿದ್ಧತೆಗಳಿಗೆ ಸಂಬಂಧಿಸಿದ ಸರ್ಕಾರದ ಧೋರಣೆಗಳನ್ನು ಸಮರ್ಥಿಸುವುವೇ ಹೊರತು ಸಮಷ್ಟಿ ಬೇಡಿಕೆಯನ್ನು ಪೋಷಿಸದಿರುವ ಇತರ ಧೋರಣೆಗಳನ್ನು ಸಾಮಾನ್ಯವಾಗಿ ಸಮರ್ಥಿಸುವುದಿಲ್ಲ. ಅಧಿಕಪ್ರಮಾಣದ ವೇತನ ಸಮಷ್ಟಿ ಬೇಡಿಕೆಯನ್ನು ಪೋಷಿಸುತ್ತದೆ ಎಂಬ ಭಾವನೆಯಿಂದಲೂ, ಕಾರ್ಮಿಕರೊಡನೆ ಒಳ್ಳೆಯ ಸಂಬಂಧ ವನ್ನು ಬೆಳೆಸಿಕೊಳ್ಳುವ ದೃಷ್ಟಿಯಿಂದಲೂ, ಅಧಿಕವೇತನದ ಭಾರವನ್ನು ಕಷ್ಟ ವಿಲ್ಲದೆಯೇ ಬಳಕೆದಾರನ ಮೇಲೆ ಹೊರಿಸಬಹುದೆಂಬ ಆಸೆಯಿಂದಲೂ ತಂತ್ರಜ್ಞರು ಕಾರ್ಮಿಕರು ಮಂಡಿಸುವ ಅಧಿಕ ವೇತನದ ಬೇಡಿಕೆಗಳನ್ನು ತೀವ್ರವಾಗಿ ಪ್ರತಿಭಟಿಸುವುದಿಲ್ಲ. ಇತ್ತೀಚೆಗೆ ಕಂಡುಬರುವ, ವೇತನದಿಂದ ದೂಡಲ್ಪಟ್ಟ ಅತಿಪ್ರಸರಣದ ಪ್ರಧಾನತೆಯನ್ನು ಗ್ಯಾಲ್‌ಬ್ರೇತ್ ಮೇಲಿನ ಅಂಶದ ಆಧಾರದ ಮೇಲೆ ವಿವರಿಸುತ್ತಾರೆ. ಅಲ್ಲದೆ ಕಾರ್ಮಿಕ ಸಂಘಗಳ ಸದಸ್ಯತ್ವದಲ್ಲಿ ಈಚೆಗೆ ಕಂಡುಬರುವ ಇಳಿಕೆಯನ್ನು ಈ ಕಾರಣ ಕೊಟ್ಟು ವಿವರಿಸುತ್ತಾರೆ. ಉಚ್ಚ ಶಿಕ್ಷಣ ಈಚೆಗೆ ಜನಪ್ರಿಯವಾಗುತ್ತಿರುವುದನ್ನೂ ಅವರು ಈ ಕೋನದಿಂದಲೇ ವಿವರಿಸುತ್ತಾರೆ.

ಹೀಗೆ ಗ್ಯಾಲ್‌ಬ್ರೇತ್ ಅವರು ಸಮಾಜದಲ್ಲಿ ಕಂಡುಬರುವ ಅನೇಕ ಪ್ರವೃತ್ತಿ ಗಳ ವಿವರಣೆಯನ್ನು ತಮ್ಮ ಉದ್ಯಮಸಂಸ್ಥೆಯ ನಮೂನೆಯ ಮೂಲಕ ವಿವರಿಸು ತ್ತಾರೆ. ಆದರೂ ಗ್ಯಾಲ್‌ಬ್ರೇತ್ ನೀಡುವ ಗುಳಿಗೆಗಳನ್ನು ಆರ್ಥಿಕ ದೃಷ್ಟಿಯಿಂದ ಹಿಂದುಳಿದ ದೇಶಗಳ ಓದುಗರು ನುಂಗುವುದು ಸ್ವಲ್ಪ ಕಷ್ಟವೆನಿಸುತ್ತದೆ. ಆದಾಯ ಅತಿ ಕೆಳಮಟ್ಟದಲ್ಲಿದ್ದು ಅವಶ್ಯಕ ವಸ್ತುಗಳನ್ನು ಕೊಳ್ಳಲೂ ಸಾಲದಿರುವಷ್ಟು ಕೆಳಮಟ್ಟದ ಆದಾಯವಿರುವ ದೇಶಗಳಲ್ಲಿ ಸಮಷ್ಟಿಬೇಡಿಕೆಯನ್ನು ಪೋಷಿಸುವಂಥ ಧೋರಣೆಗಳನ್ನು ಸಮರ್ಥಿಸಿ ಉದ್ಯಮಸಂಸ್ಥೆಯ ಬೆಳವಣಿಗೆಯನ್ನು ಪ್ರವರ್ತನ ಗೊಳಿಸುವುದು ಎಷ್ಟರಮಟ್ಟಿಗೆ ಸಾಧ್ಯವೊ ಹೇಳಲಾಗದು. ಅಲ್ಲದೆ ಇಂಥ ದೇಶ ಗಳಲ್ಲಿ ತಾಂತ್ರಿಕ ನಿರ್ಮಿತಿಯನ್ನೊಳಗೊಂಡಿರುವ ಉದ್ಯಮಸಂಸ್ಥೆಗಳ ಸಂಖ್ಯೆ ಅತಿ ಕಡಿಮೆ. ಕುಟುಂಬದ ಸದಸ್ಯರೇ ನಿರ್ವಹಿಸುವಂಥ ಉದ್ಯಮಸಂಸ್ಥೆಗಳ ಸಂಖ್ಯೆಯೇ ಹೆಚ್ಚು. ಇಂಥ ಉದ್ಯಮಸಂಸ್ಥೆಗಳ ಧ್ಯೇಯವೂ "ತಂತ್ರೀಯ ವಿನ್ಯಾಸ" ನಿರ್ವಹಿಸುವ ಉದ್ಯಮಸಂಸ್ಥೆಗಳ ಧ್ಯೇಯವೂ ಒಂದೇ ಎಂದು ಹೇಳುವುದು ಕಷ್ಟ. ಆದ್ದರಿಂದ ಇಂಥ ದೇಶಗಳಲ್ಲಿಯ ಉದ್ಯಮ ಸಂಸ್ಥೆಯ ಪ್ರೇರಣೆ ಲಾಭವನ್ನು ಪರಮಾವಧಿಗೊಳಿಸುವುದಲ್ಲವೆಂದು ಹೇಳುವುದೂ ಕಷ್ಟ ವಾಗುವುದು. ಈ ಕಾರಣದಿಂದ ಗ್ಯಾಲ್‌ಬ್ರೇತರ ಉದ್ಯಮಸಂಸ್ಥೆಯ ನಮೂನೆ ಬಹುಶಃ ಆರ್ಥಿಕ ದೃಷ್ಟಿಯಿಂದ ಮುಂದುವರಿದ ಅಮೇರಿಕ ಸಂಯುಕ್ತಸಂಸ್ಥಾನ ಹಾಗೂ ಐರೋಪ್ಯ ದೇಶಗಳಲ್ಲಿ ಕಂಡುಬರುವ ಸನ್ನಿವೇಶಗಳಿಗೆ ಹೊಂದಿಕೊಳ್ಳ ಬಹುದೇ ಹೊರತು ಆರ್ಥಿಕ ದೃಷ್ಟಿಯಿಂದ ಮುಂದುವರಿಯುವ ಭಾರತದಂಥ

ದೇಶದ ಸನ್ನಿವೇಶಕ್ಕೆ ಹೊಂದಿಕೊಳ್ಳುವುದಿಲ್ಲ ಎಂಬ ಅಂಶವನ್ನು ಗಮನದಲ್ಲಿಟ್ಟು ಕೊಳ್ಳುವುದು ಸೂಕ್ತ.

—ಡಾ. ಅಬ್ದುಲ್ ಅಜೀಜ್

ಪೇಟಿ ಮತ್ತು ಜಾಹೀರಾತುಗಳು: ಲೇ: ಟಿ. ಎಂ. ಪಂಡಿತ, ಎಂ.ಕಾಂ.; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಸೆಪ್ಟೆಂಬರ್, ೧೯೭೦; ಪುಟ: vi + ೫೪; ಬೆಲೆ: ೨೫ ಪೈಸೆ.

ಬೃಹದ್ಯಾಂತ್ರದಲ್ಲಿ ವಸ್ತುಗಳ ಉತ್ಪಾದನೆ ಮತ್ತು ವಿತರಣೆಯ ಯುಗದಲ್ಲಿ ಇಂದು ನಾವು ಬದುಕುತ್ತಿದ್ದೇವೆ. ಉತ್ಪಾದಿತ ವಸ್ತುಗಳ ಮಾರಾಟ ಮತ್ತು ಅವುಗಳ ಮಾರಾಟಕ್ಕೆ ಉಪಯೋಗಿಸಲಾಗುವ ತಂತ್ರಗಳು ಬಹಳ ಕುತೂಹಲ ಕಾರಿಯಾದವು. ಪ್ರಸ್ತುತ ಗ್ರಂಥ ಪೇಟಿ ಮತ್ತು ಜಾಹೀರಾತು ವಿಧಾನಗಳ ಸರಳ ನಿರೂಪಣೆಯ ಕೈಹೊತ್ತಗೆ. ಇದು ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ ೧೦೪ನೆಯ ಕುಸುಮ.

ಪೇಟಿ ಮತ್ತು ಜಾಹೀರಾತು ವಿಧಾನ ಇಂದು ಅತ್ಯಂತ ಮುಂದುವರಿದಿರುವ ಅಧ್ಯಯನಕ್ಷೇತ್ರಗಳಲ್ಲಿ ಒಂದು. ಈ ಗ್ರಂಥಲೇಖಕರೇ ಹೇಳುವಂತೆ 'ವಿಷಯದ ಎಲ್ಲ ಮುಖಗಳ ಪರಿಶೀಲನೆ ಈ ಗ್ರಂಥದಲ್ಲಿ ನಡೆದಿಲ್ಲ. ಪರಿಮಿತ ವ್ಯಾಪ್ತಿಯಲ್ಲಿ ವಿಷಯದ ವಿರಾಟ್‌ಸ್ವರೂಪದ ಪರಿಚಯವನ್ನು ಮಾಡಿಕೊಡುವ ಯತ್ನ ನಡೆದಿದೆ.'

ಪೇಟಿ ಎಂಬ ಪದಕ್ಕೆ ವಾಣಿಜ್ಯಶಾಸ್ತ್ರದಲ್ಲಿ ನೀಡಲಾಗಿರುವ ವ್ಯಾಖ್ಯೆ, ಅದರ ಸ್ವರೂಪ ಮತ್ತು ವೈಶಿಷ್ಟ್ಯ, ಪೇಟಿಗಳ ವರ್ಗೀಕರಣ, ಜಾಹೀರಾತಿನ ಉದ್ದೇಶ, ಅದರ ವಿವಿಧ ಮಾಧ್ಯಮಗಳು, ಅದರ ಅನುಕೂಲ ಮತ್ತು ಪ್ರತಿ ಕೂಲಗಳನ್ನು ಈ ಗ್ರಂಥ ಪರಿಚಯ ಮಾಡಿಕೊಡುತ್ತದೆ.

ಪೇಟಿಗಳ ವರ್ಗೀಕರಣ ಎನ್ನುವುದು ಎರಡನೆಯ ಅಧ್ಯಾಯ. ಲೇಖಕರು ವ್ಯವಹಾರಸ್ವರೂಪ ಮತ್ತು ಪ್ರಮಾಣವನ್ನು ಆಧರಿಸಿ ಹಾಗೂ ಭೌಗೋಲಿಕ ವಿಕಸನ ವನ್ನು ಆಧರಿಸಿ ಪೇಟಿಗಳನ್ನು ಹೇಗೆ ಅನೇಕ ವಿಧಗಳಾಗಿ ವಿಂಗಡಿಸಬಹುದು ಎನ್ನು ವುದನ್ನು ವಿವರಿಸುತ್ತಾರೆ. ಈ ವಿವರಣೆ ಮುಗಿದ ಅನಂತರವೇ 'ಪೂರ್ಣ ಪೇಟೆಯ ನಿಯಮಗಳನ್ನು' ಲೇಖಕರು ಚರ್ಚಿಸುತ್ತಾರೆ. ನಾವು ಸ್ಪರ್ಧೆಯನ್ನು ಆಧಾರ ವಾಗಿಟ್ಟುಕೊಂಡು ಹೇಗೆ ಪೇಟೆಯನ್ನು 'ಪರಿಪೂರ್ಣ' ಹಾಗೂ 'ಅಪರಿಪೂರ್ಣ ಪೈಪೋಟಿಯ' ಪೇಟಿಗಳಾಗಿ ವಿಂಗಡಿಸಬಹುದು ಎನ್ನುವ ಬಹುಮುಖ್ಯ ವಿಷಯ ವನ್ನು ಹ್ರಸ್ವಗೊಳಿಸಿರುವುದು ಈ ಅಧ್ಯಾಯದ ಮುಖ್ಯ ಕೊರತೆಯೆಂದೇ ಹೇಳ ಬಹುದು. ಪರಿಪೂರ್ಣ ಸ್ಪರ್ಧೆಯ ಮಾರುಕಟ್ಟೆಯಲ್ಲಿ ಜಾಹೀರಾತು ಹೇಗೆ ಅನಾವಶ್ಯಕ, ಅಪರಿಪೂರ್ಣ ಮಾರುಕಟ್ಟೆಯಲ್ಲಿ ಜಾಹೀರಾತು ಸರಕುವಿಕ್ರಯದಲ್ಲಿ

ಹೇಗೆ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಚರ್ಚಿಸಿದ್ದರೆ ಈ ಅಧ್ಯಾಯದ ಮಹತ್ತ್ವ ಹೆಚ್ಚುತ್ತಿದ್ದುದರಲ್ಲಿ ಸಂಶಯವಿಲ್ಲ.

ಜಾಹೀರಾತಿನ ವಿವಿಧ ಮಾಧ್ಯಮಗಳನ್ನು ಕುರಿತ ಅಧ್ಯಾಯ ತುಂಬಾ ಸಮರ್ಪಕವಾಗಿದೆ. ಲೇಖಕರ ಸ್ಪಷ್ಟ ನಿರೂಪಣಶಕ್ತಿ, ವಿಷಯಸಂಗ್ರಹಣೆಯ ಸಾಮರ್ಥ್ಯ—ಇವೆರಡೂ ಈ ಅಧ್ಯಾಯದಿಂದ ಸ್ಪಷ್ಟವಾಗುತ್ತವೆ. ಜಾಹೀರಾತು ಮಾಧ್ಯಮವಾಗಿ ನಮ್ಮ ದೇಶದಲ್ಲಿ ಟೆಲಿವಿಷನ್ ವಹಿಸಬೇಕಾದ ಪಾತ್ರ ಪ್ರಮುಖ ವಾಗಿದೆ ಎಂಬ ನಿಲುವನ್ನು ತಾಳುವ ಲೇಖಕರು 'ರೇಡಿಯೋ ಕೇಂದ್ರಗಳಿರುವಷ್ಟು ಟೆಲಿವಿಷನ್ ನಿಲಯಗಳು ಸ್ಥಾಪಿತವಾಗಬೇಕಾದರೆ ಕನಿಷ್ಠ (ನಮ್ಮ ದೇಶದಲ್ಲಿ) ಇನ್ನೂ ೨೦-೨೫ ವರ್ಷಗಳು ಬೇಕು' (ಪುಟ ೩೯) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಜಾಹೀರಾತುಗಳ ವಿವಿಧ ಮಾಧ್ಯಮಗಳ ಸ್ವರೂಪ ಹಾಗೂ ಅವುಗಳ ವೈಶಾಲ್ಯವನ್ನು ವಿವರವಾಗಿ ಪರಿಚಯ ಮಾಡಿಕೊಟ್ಟ ಅನಂತರ ಲೇಖಕರು 'ಯಾವ ಮಾಧ್ಯಮಗಳು ತನಗೆ ಪರಿಣಾಮಕಾರಿಯಾಗಬಲ್ಲವು ಎಂಬುದನ್ನು ಜಾಹೀರಾತುದಾರ ಬಹು ಸೂಕ್ಷ್ಮವಾಗಿ ಅವಲೋಕಿಸಬೇಕು. ಮಾಧ್ಯಮಗಳ ಆಯ್ಕೆ ತುಂಬ ಜಟಿಲವಾದದ್ದು' (ಪುಟ ೪೮) ಎಂಬ ತಾತ್ತ್ವಿಕ ಸಿದ್ಧಾಂತಕ್ಕೆ ಬರುತ್ತಾರೆ.

ಒಟ್ಟಿನಲ್ಲಿ ಪ್ರಸ್ತುತ ಗ್ರಂಥ ಸಾಮಾನ್ಯ ಓದುಗರ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾದುದೆಂದು ಹೇಳಬಹುದು. ಈ ದೃಷ್ಟಿಯಿಂದ ಲೇಖಕರು ಅಭಿ ನಂದನಾರ್ಹರು. ಅವರ ಸರಳವಾದ ಶೈಲಿ ಆಕರ್ಷಣೀಯ. ಇದಕ್ಕೆ ಉದಾಹರಣೆ ಯಾಗಿ ಅವರ ಈ ವಾಕ್ಯಗಳನ್ನು ಗಮನಿಸಬಹುದು : 'ಜಾಹೀರಾತುದಾರರು ಜಾಹೀರಾತಿನ ಮೇಲೆ ಖರ್ಚು ಮಾಡುವಾಗ ಸೂಕ್ತಸಾಧನಗಳ ಮೂಲಕ ಸನ್ನಿವೇಶವನ್ನರಿತು ಮಾಡಿದರೆ ಮಾತ್ರ ಲಾಭದಾಯಕವಾಗುತ್ತದೆ. ವಿವೇಚನಾ ದೃಷ್ಟಿ ಮತ್ತು ಶಕ್ತಿ ಇಲ್ಲದೆ ಅಯೋಗ್ಯ ಸಾಧನಗಳ ದ್ವಾರ ಸರಕುಗಳನ್ನು ಜಾಹೀರಾತುಪಡಿಸಿದರೆ ದ್ರವ್ಯನಷ್ಟವಾಗಿ ಅದು ಕೇವಲ ದುಂದುವೆಚ್ಚವಾಗಿ ಪರಿಣಮಿಸುತ್ತದೆ. ಇದು ಆರ್ಥಿಕ ಕ್ಷೇಮಕ್ಕೆ ಮಾರಕ..........ಜಾಹೀರಾತು ದಾರನು ಜೀವೋತ್ತಮನಾಗಿ, ಸನ್ಮಿತ್ರನಾಗಿ ಹಾಗೂ ಮಾರ್ಗದರ್ಶಿಯಾಗಿ ತನ್ನ ಕಾರ್ಯ ನಿರ್ವಹಿಸಬೇಕು" (ಪುಟ ೫೭).

—ಸಿ.ಕೆ.ಆರ್.

ಮೈಲಾರ ದೇವರು: ಲೇ. ಡಾ. ಶ್ರೀನಿವಾಸ ರಿತ್ತಿ, ಎಂ.ಎ., ಪಿಎಚ್.ಡಿ. ; ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ೧೯೭೦ ; ಪುಟ : ೫೨ ; ಬೆಲೆ : ೨೫ ಪೈಸೆ

ಪ್ರಸ್ತುತ ಹೊತ್ತಗೆ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆ

ಯಲ್ಲಿ ಡಾ. ರಿತ್ತಿಯವರು ಮೈಲಾರ ದೇವರನ್ನು ಕುರಿತು ಐತಿಹಾಸಿಕ ದೃಷ್ಟಿಯಿಂದ ಬರೆದಿರುವ ಒಂದು ಪ್ರಬಂಧ. ಜನಸಾಮಾನ್ಯರ ಜ್ಞಾನದಾಹವನ್ನು ಕೆರಳಿಸಿ, ಅವರ ಆಸಕ್ತಿಯನ್ನು ಬೆಳೆಸುವುದು ಈ ಉಪನ್ಯಾಸಮಾಲೆಯ ಉದ್ದೇಶ. ಇಂಥ ಉದ್ದೇಶಸಾಧನೆಗೆ ಜನರ ನಿತ್ಯಜೀವನದಲ್ಲಿ ಹಾಸುಹೊಕ್ಕಿನಂತೆ ಸೇರಿಕೊಂಡಿರುವ ಒಬ್ಬ ದೇವತೆಯ ಐತಿಹಾಸಿಕತೆಯನ್ನು ವಿಶ್ಲೇಷಿಸಿ, ಅದರ ನಿಜಸ್ವರೂಪದ ಪರಿಚಯ ಮಾಡಿಕೊಡುವುದು ಒಳ್ಳೆಯ ಮಾರ್ಗವೆನ್ನುವುದರಲ್ಲಿ ಸಂದೇಹವಿಲ್ಲ. ಡಾ. ರಿತ್ತಿಯವರು ಈ ಕಿರುಹೊತ್ತಗೆಯಲ್ಲಿ ಮೈಲಾರ ಮತ್ತು ಆತನ ಪತ್ನಿ ಮಾಳಚಿ—ಇವರ ಜನಪ್ರಿಯತೆ ಮತ್ತು ಪ್ರಾಚೀನತೆಗಳನ್ನು ಸಂದರ್ಭೋಚಿತವಾದ ಐತಿಹ್ಯ, ಸಾಹಿತ್ಯ, ಮತ್ತು ಶಾಸನಗಳ ಆಧಾರದ ಮೇಲೆ ಪರಿಶೀಲಿಸಿ, ಗ್ರಾಮದೇವತೆಗಳಾದ ಇವರು ಕರ್ಣಾಟಕದ ಉತ್ತರಭಾಗ, ಮಹಾರಾಷ್ಟ್ರದ ದಕ್ಷಿಣಭಾಗ ಮತ್ತು ಆಂಧ್ರದ ಕೆಲ ಪ್ರದೇಶಗಳಲ್ಲಿ ಜನರ ಮೇಲೆ ತಮ್ಮ ಪ್ರಭಾವ ಬೀರಿದುದನ್ನು ವಿವರಿಸಿದ್ದಾರೆ. ಮೈಲಾರ ಪಂಥದ ಪ್ರಾಚೀನತೆಯನ್ನು ಪ್ರಸ್ತಾಪಿಸುತ್ತ, ಆದಿಶಂಕರಾಚಾರ್ಯರ ಕಾಲದಲ್ಲೂ (ಕ್ರಿ.ಶ. ೮ನೆಯ ಶತಮಾನ) ಈ ಪಂಥವಿದ್ದುದಾಗಿ ೧೪ನೆಯ ಶತಮಾನದ ಆನಂದಗಿರಿಯ ಶಂಕರವಿಜಯದ ಆಧಾರದ ಮೇಲೆ ಒಪ್ಪಿದ್ದಾರೆ. ಆದರೆ ಕ್ರಿ.ಶ. ೧೧೧೬ಕ್ಕೆ ಮುಂಚಿನ ಆಧಾರಗಳಾವುವೂ ಕಂಡುಬರುವುದಿಲ್ಲ. ಲೇಖಕರೇ ತಿಳಿಸುವಂತೆ ಬ್ರಹ್ಮಶಿವ ಮತ್ತು ಶಂಕರದಾಸಿಮಯ್ಯ—ಇವರ ಕಾಲದಲ್ಲಿ ಮೈಲಾರ ದೇವರಿಗಿದ್ದ ಸ್ಥಾನಮಾನಗಳು ಅದೇ ತಾನೇ ಮೈಲಾರನ ಪ್ರಭಾವ ಹುಟ್ಟಿಕೊಳ್ಳುತ್ತಿದ್ದುದನ್ನು ಸೂಚಿಸುತ್ತವೆ. ಮಹಾನುಭಾವ ಪಂಥದ ಸ್ಥಾಪಕನಾದ ಚಕ್ರಧರನ ಹೇಳಿಕೆಯೂ ಇದೇ ಅಭಿಪ್ರಾಯಕ್ಕೆ ಸಾಧಕವಾಗಿದೆ. ಆದುದರಿಂದ ೧೧ನೆಯ ಶತಕದ ಆದಿಭಾಗದಲ್ಲಿ ಮೈಲಾರಪಂಥ ಬಳಕೆಗೆ ಬಂದಿರಬಹುದೆಂದು ಹೇಳುವುದು ಸಾಧುವಾದೀತು.

ಮೈಲಾರ ಪದದ ಉಗಮದ ವಿಷಯವಾಗಿ ಅನೇಕ ಸಾಧ್ಯತೆಗಳನ್ನು ಪರಿಶೀಲಿಸಿದ್ದಾರೆ. ಮೈಲಾರ-ಸ್ಕಂಧರ ಏಕತೆಯ ಬಗೆಗೂ ಇವರು ಪ್ರಸ್ತಾಪಿಸಿ, ಅವರುಗಳಲ್ಲಿ ಕಂಡುಬರುವ ವೈಷಮ್ಯಗಳನ್ನು ಎತ್ತಿತೋರಿಸಿ ಅವರು ಭಿನ್ನರೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಸಂದರ್ಭದಲ್ಲಿ ತಮಿಳುನಾಡಿನಲ್ಲಿ ದಕ್ಷಿಣ ಆರ್ಕಾಟು ಜಿಲ್ಲೆಯ ತಿಂಡಿವನಂ ಬಳಿಯಿರುವ ಮೈಲಂ ಎಂಬಲ್ಲಿ ಗುಡ್ಡದ ಸ್ಕಂಧ ಷಣ್ಮುಖನ ಗುಡಿಯಿದೆ. ಅಲ್ಲಿಯ ವಾರ್ಷಿಕ ಜಾತ್ರೆ ಸಾವಿರಾರು ಜನರನ್ನು ಆಕರ್ಷಿಸುತ್ತದೆ. ಅಲ್ಲಿ ಸ್ಕಂಧನನ್ನು ಮೈಲರಸ, ಮೈಲನಾಯುಗನೆಂದೂ ಕರೆಯುವ ರೂಢಿಯಿದೆ. ಸ್ಕಂಧ ಕರ್ಣಾಟಕ ಸಂಪ್ರದಾಯದ ಮೇರೆಗೆ ಬ್ರಹ್ಮಚಾರಿಯಾದರೂ ತಮಿಳರ ಪ್ರಕಾರ ಆತನಿಗೆ ಇಬ್ಬರು ಹೆಂಡಿರು. ಸ್ಕಂಧನ ಅಣ್ಣ ಗಣಪತಿ ಬ್ರಹ್ಮಚಾರಿ. ಮದ್ರಾಸ್ ನಗರದ ಭಾಗವಾದ ಮೈಲಾಪುರ ಪ್ರಾಚೀನ ಕಾಲದಿಂದಲೂ ಸುಪ್ರಸಿದ್ಧ ಸ್ಕಂಧಕ್ಷೇತ್ರ. ಈ ಕಾರಣಗಳಿಂದ ಉತ್ತರ ಕರ್ಣಾಟಕದ ಮೈಲಾರನಿಗೂ ತಮಿಳು ದೇಶದ ಸ್ಕಂಧನಿಗೂ ದೂರದ ಸಂಬಂಧವೇನಾದರೂ ಇದ್ದಿರಬಹುದೇನೋ !

ಒಟ್ಟಿನಲ್ಲಿ ಇದೊಂದು ಉಪಯುಕ್ತ ಪ್ರಬಂಧ. ವೈಲಾರನ ವಿಷಯವಾಗಿ ದೊರಕುವ ಎಲ್ಲ ಮಾಹಿತಿಗಳನ್ನೂ ಡಾ. ರಿತ್ತಿಯವರು ಸಂಗ್ರಹಿಸಿ ಪರಿಶೀಲಿಸಿದ್ದಾರೆ. ಕರ್ಣಾಟಕ, ಮಹಾರಾಷ್ಟ್ರ ಮತ್ತು ಆಂಧ್ರದ ಪ್ರಮುಖ ವೈಲಾರ ಕ್ಷೇತ್ರಗಳ ಸಂಕ್ಷಿಪ್ತ ಪರಿಚಯವನ್ನೂ ವೈಲಾರಸಂಬಂಧವಾದ ಎರಡು ಶಾಸನಗಳ ಪಾಠವನ್ನೂ ಪ್ರಮುಖ ಪ್ರಕಟಿತ ಆಧಾರಗಳನ್ನೂ ಪುಸ್ತಕದ ಕಡೆಯಲ್ಲಿ ಕೊಟ್ಟಿದ್ದಾರೆ. ಒಂದೋ ಎರಡೋ ಅಚ್ಚಿನ ದೋಷಗಳು ಉಳಿದುಕೊಂಡಿದ್ದರೂ [ಉದಾ: ಪು. ೧೨ ಕೊನೆಯ ಪಂಕ್ತಿಯಲ್ಲಿ ಕೊಟ್ಪ (ಕೊಟ್ಟ), ೧೩ನೆಯ ಪುಟದ ೧೪ನೆಯ ಸಾಲಿನ ಶಬ್ಧ (ಶಬ್ದ)] ಹೆಚ್ಚು ತಪ್ಪುಗಳಿಲ್ಲದೆ ಸುಂದರವಾಗಿ ಪುಸ್ತಕ ಹೊರಬಂದಿರುವುದು ಶ್ಲಾಘನೀಯ.

—ಬಿ. ಕೆ. ಗುರುರಾಜರಾವ್

Regional Planning (ಪ್ರಾದೇಶಿಕ ಯೋಜನೆ): ಸಂ: ಡಾ. ಆರ್. ಪಿ. ಮಿಶ್ರಾ; ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು; ೧೯೬೯; ಪುಟ: ೬೩೧; ಬೆಲೆ: ರೂ. ೩೫

ಅಭಿವೃದ್ಧಿ ಯೋಜನೆಯ ಮೂಲಕ ಆರ್ಥಿಕ ಬೆಳೆವಣಿಗೆಯನ್ನೂ ಜನರ ಆರ್ಥಿಕ ಕ್ಷೇಮಾಭಿವೃದ್ಧಿಯನ್ನೂ ಗಳಿಸಬಹುದೆಂಬುದು ಹಿಂದುಳಿದಿರುವ ರಾಷ್ಟ್ರಗಳಲ್ಲೆಲ್ಲ ಖಚಿತವಾಗಿ ತಿಳಿದಿರುವ ಸಂಗತಿಯಾಗಿದೆ. ಪ್ರಾದೇಶಿಕ ಯೋಜನೆಯೂ ಇತ್ತೀಚೆಗೆ ಬಹಳ ಪ್ರಾಮುಖ್ಯ ಪಡೆಯುತ್ತಿದೆ. ಆರ್ಥಿಕ ಪ್ರಗತಿಯಲ್ಲಿ ಬಹಳ ಮುಂದುವರಿದಿರುವ ಅಮೆರಿಕ, ಪಶ್ಚಿಮ ಐರೋಪ್ಯ ರಾಷ್ಟ್ರಗಳು ಮತ್ತು ಸೋವಿಯತ್ ದೇಶಗಳಲ್ಲಿಯೂ ಹಿಂದುಳಿದಿರುವ ಪ್ರದೇಶಗಳನ್ನು ಪ್ರಾದೇಶಿಕ ಯೋಜನೆಗಳ ಮೂಲಕ ಅಭಿವೃದ್ಧಿಗೊಳಿಸಲು ಸರ್ಕಾರದವರು ನಾನಾ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಈ ವಿಷಯವನ್ನು ಅರ್ಥಮಾಡಿಕೊಳ್ಳಬೇಕಾದರೆ ಮೊದಲು 'ಪ್ರದೇಶ' ಎಂದರೇನು, ಪ್ರಾದೇಶಿಕ ಯೋಜನೆ ಎಂದರೇನು, ಅದರ ಉದ್ದೇಶವೇನು, ದೇಶದ ಅಭಿವೃದ್ಧಿಕಾರ್ಯದಲ್ಲಿ ಅದರ ಪಾತ್ರವೇನು, ರಾಷ್ಟ್ರೀಯ ಯೋಜನೆಯಲ್ಲಿ ಅದನ್ನು ಹೇಗೆ ಹೊಂದಿಸಿಕೊಳ್ಳಬಹುದು ಎಂಬುದನ್ನು ತಿಳಿಯಬೇಕು. ಈ ಪ್ರಶ್ನೆಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರದ ಪ್ರಾಧ್ಯಾಪಕ ಡಾ ಆರ್. ಪಿ. ಮಿಶ್ರಾರವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಪ್ರಾದೇಶಿಕ ಯೋಜನೆ' ತಕ್ಕಮಟ್ಟಿಗೆ ಉತ್ತರ ನೀಡುತ್ತದೆ. ಈ ಪುಸ್ತಕದಲ್ಲಿ ಪ್ರಾದೇಶಿಕ ಯೋಜನೆಯ ಮೇಲೆ ಮೀಮಾಂಸಾತ್ಮಕವಾದ ಮತ್ತು ಅನುಭವಾತ್ಮಕವಾದ ಲೇಖನಗಳೂ ಇವೆ.

೧೯೬೭ರ ಅಕ್ಟೋಬರ್ ತಿಂಗಳಲ್ಲಿ ಮೈಸೂರು ನಗರದಲ್ಲಿ 'ಪ್ರಾದೇಶಿಕ ಅಭಿವೃದ್ಧಿ ಮತ್ತು ಯೋಜನೆ'ಯ ವಿಚಾರಗೋಷ್ಠಿಗೆ ಸೇರಿದ್ದ ವಿದ್ವಾಂಸರು ಈ

ಪುಸ್ತಕ ಹೊರಬರಲು ತಳಪಾಯ ಹಾಕಿದರು. ಈ ಪುಸ್ತಕ ಅಂತರ ಅಧ್ಯಯನ ವಿಭಾಗೀಯ ಲಕ್ಷಣವುಳ್ಳದ್ದು (ಇಂಟರ್-ಡಿಸಿಪ್ಲಿನರಿ ನೇಚರ್). ಇದರಲ್ಲಿ ಒಟ್ಟು ೩೬ ಲೇಖನಗಳಿವೆ. ಇವುಗಳ ಜೊತೆಗೆ ಕೊನೆಯಲ್ಲಿ ಒಂದು ಅನುಬಂಧವೂ ಪ್ರಾದೇಶಿಕ ಯೋಜನೆಯ ಮೇಲೆ ಒಂದು ಗ್ರಂಥವಿವರಣಪಟ್ಟಿಯೂ ಇವೆ. ಈ ಪುಸ್ತಕದಲ್ಲಿ ಅರ್ಥಶಾಸ್ತ್ರಜ್ಞರು, ಭೂಗೋಳಶಾಸ್ತ್ರಜ್ಞರು, ಆಡಳಿತಾಧಿಕಾರಿಗಳು, ಪ್ರದೇಶ ವಿಜ್ಞಾನಿಗಳು, ನಗರಯೋಜಕರು ಮುಂತಾದವರು ಲೇಖನಗಳನ್ನು ಬರೆದಿದ್ದಾರೆ. ಈ ಗ್ರಂಥವನ್ನು ಅಧ್ಯಯನ ಮಾಡಿದಮೇಲೆ ಇಲ್ಲಿರುವ ಎಲ್ಲ ಲೇಖನಗಳೂ ಒಂದೇ ಮಟ್ಟದಲ್ಲಿ ಇಲ್ಲವೆಂಬುದು ವ್ಯಕ್ತವಾಗುತ್ತದೆ. ಕೆಲವು ಲೇಖನಗಳು ವಿಷಯವನ್ನು ಗಾಢವಾಗಿ ವಿಮರ್ಶೆಮಾಡಿವೆ. ಕೆಲವು ಲೇಖನಗಳು ಓದುಗರಿಗೆ ಹೊಸ ಹೊಸ ವಿಷಯಗಳನ್ನಿಟ್ಟು ಅವುಗಳ ಬಗ್ಗೆ ಹೆಚ್ಚು ಹೆಚ್ಚು ವಿಚಾರ ನಡೆಸುವಂತಿವೆ. ಇನ್ನು ಕೆಲವು ಲೇಖನಗಳು ಬರಿಯ ಅಂಕಿ ಅಂಶಗಳನ್ನೂ ಕೆಲವು ಉದಾಹರಣೆಗಳನ್ನೂ ಒಳಗೊಂಡಿವೆ. ಓದುಗರಿಗೆ ಇವು ಅಷ್ಟಾಗಿ ಉಪಯೋಗವಾಗುವಂತೆ ಕಾಣುವುದಿಲ್ಲ.

'ಪ್ರಾದೇಶಿಕ ಯೋಜನೆ'ಯನ್ನು ಸಂಪಾದಕರು ಐದು ಭಾಗಗಳನ್ನಾಗಿ ವಿಂಗಡಿಸಿದ್ದಾರೆ: ೧ ಪ್ರಾದೇಶಿಕ ಭಾವನೆ ಮತ್ತು ಪ್ರಾದೇಶಿಕ ಯೋಜನೆ; ೨. ಪ್ರಾದೇಶಿಕ ವಿಶ್ಲೇಷಣೆ: ಇದರ ಮಾರ್ಗಗಳು ಮತ್ತು ಪ್ರಯೋಗ ವಿಧಾನಗಳು; ೩ ಕಾರ್ಯನೀತಿಯ ವಿಚಾರಗಳು ಮತ್ತು ಬಂಡವಾಳ ಹೂಡುವಿಕೆಯ ವಿಧಾನಗಳು; ೪ ಪ್ರಾದೇಶಿಕ ಯೋಜನೆಗೆ ಸಂಬಂಧಪಟ್ಟ ಕೆಲವು ಕ್ಷೇತ್ರ ಅಧ್ಯಯನಗಳು (ಏರಿಯ ಸ್ಟಡೀಸ್) ಮತ್ತು ೫ ಪ್ರಾದೇಶಿಕ ಯೋಜನೆಗೆ ಸಂಬಂಧಪಟ್ಟಂತೆ ಕೆಲವು ನಗರಗಳ ಅಧ್ಯಯನ.

ಈ ಪುಸ್ತಕದ ಮೊದಲನೆಯ ಲೇಖನದಲ್ಲಿ ಡಾ. ಮಿಶ್ರಾ ಅವರು 'ಪ್ರದೇಶ' ಮತ್ತು 'ಪ್ರಾದೇಶಿಕ ಯೋಜನೆ' ಎಂದರೇನು ಮತ್ತು ಈಗತಾನೆ ಪ್ರಗತಿಯ ಹಾದಿಯಲ್ಲಿ ಹೆಜ್ಜೆ ಇಡುತ್ತಿರುವ ಭಾರತದ ರಾಜ್ಯಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಈ ಪ್ರಾದೇಶಿಕ ಯೋಜನೆಯ ಬಲಾಬಲಗಳೇನು ಎಂಬುದನ್ನು ಕುರಿತು ವಿಮರ್ಶೆ ನಡೆಸಿದ್ದಾರೆ. ಇವರು ಈ ಲೇಖನ ಬರೆಯಲು ಅನೇಕ ಗ್ರಂಥಗಳನ್ನೂ ಲೇಖನಗಳನ್ನೂ ಅಧ್ಯಯನ ಮಾಡಿರುವುದು ಗಮನಕ್ಕೆ ಬರುತ್ತದೆ. ಈ ಲೇಖನದಲ್ಲಿ 'ಪ್ರದೇಶ'ವನ್ನು ಒಂದು 'areal or spatial organization of varying dimensions' ಎಂದು ಹೇಳಿದ್ದಾರೆ. ಆದರೆ ಮಿಶ್ರಾರವರು ಎಲ್ಲಿಯೂ ಸ್ಥಳ (ಸ್ಪೇಸ್) ಎಂದರೇನು ಎಂಬುದನ್ನು ಸರಿಯಾಗಿ ಸ್ಪಷ್ಟಪಡಿಸಿಲ್ಲ. ಈ ಸ್ಥಳ ಪ್ರಪಂಚದ ಒಂದು ಭಾಗವಾಗಿರಬಹುದು, ರಾಷ್ಟ್ರದ ಒಂದು ಭಾಗವಾಗಿರಬಹುದು, ರಾಜ್ಯದ ಒಂದು ಭಾಗವಾಗಿರಬಹುದು, ಕೆಲವು ರಾಜ್ಯಗಳಿಗೆ ಸೇರಿದ ಒಂದು ಭಾಗವಾಗಿರಬಹುದು ಅಥವಾ ಇನ್ನೊಂದು ರೀತಿಯಲ್ಲಿರಬಹುದು. ಇವರ ಲೇಖನವನ್ನು

ಎಷ್ಟೇ ಆಸಕ್ತಿಯಿಂದ ಓದಿದರೂ ಇದಕ್ಕೆ ಸರಿಯಾದ ಅರ್ಥ ದೊರೆಯುವುದಿಲ್ಲ. ಇದೇರೀತಿ ಕೆಲವರು ಸೆಕ್ಟರ್ ಮತ್ತು ರೀಜನ್‌ಗಳ (ಪ್ರದೇಶ) ನಡುವೆ ಏನೂ ವ್ಯತ್ಯಾಸವಿಲ್ಲವೆಂಬಂತೆ ತಮ್ಮ ಲೇಖನಗಳಲ್ಲಿ ವಿಷಯಗಳನ್ನು ವಿಮರ್ಶಿಸಿದ್ದಾರೆ (ಉದಾಹರಣೆಗೆ ಡಾ. ಇಸಾರ್ಡ್ ಮತ್ತು ಶ್ರೀ ಚಟರ್ಜಿಯವರ ಲೇಖನ, ಪುಟ ೧೨೨-೧೪೪). 'ಪ್ರದೇಶ' ಎಂದರೇನು ಎಂದು ಖಚಿತವಾಗಿ ತಿಳಿಸದಿದ್ದಲ್ಲಿ 'ಪ್ರಾದೇಶಿಕ ಯೋಜನೆ'ಯ ಭಾವನೆ ಅಷ್ಟು ಉಪಯುಕ್ತವಾಗಲಾರದು. ಡಾ. ಎಲ್. ಎಸ್. ಭಟ್ ಮತ್ತು ಶ್ರೀ ರೊಡೋಮನ್‌ರವರು ತಮ್ಮ ಲೇಖನಗಳಲ್ಲಿ ಪ್ರದೇಶ ಮತ್ತು ಪ್ರಾದೇಶಿಕ ಯೋಜನೆಗಳ ಅರ್ಥವನ್ನು ಆದಷ್ಟು ಚೆನ್ನಾಗಿ ವಿವರಿಸಿದ್ದಾರೆ.

ಡಾ. ಟಿ. ಬಿ. ಲಾಹಿರಿ ಮತ್ತು ಶ್ರೀ ಕುಂಡುರವರು ತಮ್ಮ ಲೇಖನವಾದ 'ಯೋಜನಾ ಪ್ರದೇಶಗಳು' ಎಂಬುದರಲ್ಲಿ ಪಶ್ಚಿಮ ಬಂಗಾಳದ ಕೆಲವು ಜಿಲ್ಲೆಗಳನ್ನು ಉತ್ಪಾದನ ಸಂಘಗಳ ಆಧಾರದ ಮೇಲೆ ಹೇಗೆ ಪ್ರದೇಶಗಳನ್ನಾಗಿ ವಿಂಗಡಿಸಬಹುದೆಂಬುದನ್ನು ಕುರಿತು ವಿಮರ್ಶೆ ನಡೆಸಿದ್ದಾರೆ. ಇದಕ್ಕೆ ಶ್ರೀ ವಾಂಕೆ ಮತ್ತು ಡಾ. ಬೆರಿಯವರು ಪ್ರತಿಪಾದಿಸಿರುವ ಗಣಿತ ಶಾಸ್ತ್ರೀಯ ವಿಧಾನಗಳನ್ನೂ ಪರಸ್ಪರ ಸಂಬಂಧದ ಅವಕಲನ ಗುಣಾಂಕದ (ಕಾರಿಲೇಷನ್ ಆಫ್ ಕೊಎಫಿಷಿಯೆಂಟ್) ವಿಧಾನವನ್ನೂ ಉಪಯೋಗಿಸಿ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. ಡಾ. ರೀಡ್, ಡಾ. ಬೆರಿ, ಡಾ. ಲೆವೆನ್ ಮತ್ತು ಡಾ. ಲೆಫೇಬೇರ್‌ರವರ ಲೇಖನಗಳು ಉತ್ತಮ ದರ್ಜೆಗೆ ಸೇರಿದ ಇನ್ನು ಕೆಲವು ಲೇಖನಗಳು. ಡಾ. ರೀಡ್‌ರವರು ಭಾರತದ ಕೆಲವು ನಗರಗಳನ್ನು ಆರಿಸಿಕೊಂಡು ಅವುಗಳಲ್ಲಿ ವಿಮಾನ ಸಂಚಾರದ ಪರಿಚಲನೆಯನ್ನು ತೆಗೆದುಕೊಂಡು 'ಸಮಾಚಾರ ಅಥವಾ ಸಂಪರ್ಕ ಪ್ರದೇಶ' ರಚಿಸಲು ಪ್ರಯತ್ನಮಾಡಿದ್ದಾರೆ. ಡಾ. ಬೆರಿಯವರು ತಮ್ಮ ಲೇಖನದಲ್ಲಿ ಪ್ರಾದೇಶಿಕ ವಿಶ್ಲೇಷಣೆಯ ವಿವಿಧ ಮಾರ್ಗಗಳ ಸಂಕಲನದ ವಿಷಯವಾಗಿ ವಿಚಾರ ಮಾಡುತ್ತಾ ಸಾಮಾನ್ಯ ವ್ಯವಸ್ಥೆಗಳ ಸಿದ್ಧಾಂತದ (ಜನರಲ್ ಸಿಸ್ಟಮ್ಸ್ ಥಿಯೊರಿ) ಕಡೆಗೆ ಕರೆದೊಯ್ಯುತ್ತಾರೆ. ಡಾ. ಲೆವೆನ್ ತಮ್ಮ ಲೇಖನದಲ್ಲಿ ಪ್ರಾದೇಶಿಕ ಆರ್ಥಿಕ ಅಭಿವೃದ್ಧಿನೀತಿಯನ್ನು ನಿರ್ಧರಿಸುವುದರಲ್ಲಿ ವಿವಿಧ ರೀತಿಯ ವಿಶ್ಲೇಷಣೆಗಳ ಪಾತ್ರವೇನೆಂಬುದನ್ನು ಅಳತೆ ಮಾಡಿದ್ದಾರೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಭಿವೃದ್ಧಿಯ ಗುರಿಗಳೂ ನಿರ್ಬಂಧಗಳೂ ಬೇರೆ ಬೇರೆಯಾಗಿರಬಹುದೆಂಬ ಅಂಶವನ್ನು ತೋರಿಸಿದ್ದಾರೆ. ಭಾರತದಲ್ಲಿ ಪ್ರದೇಶಗಳಿಗೆ ಸಾಧನಸಂಪತ್ತುಗಳನ್ನು ಸರಿಯಾಗಿ ಹಂಚುತ್ತಿಲ್ಲವೆಂಬುದು ಪ್ರೊಫೆಸರ್ ಲೆಫೇಬೇರರ ವಾದ. ಇದಕ್ಕಾಗಿ ಸರ್ಕಾರದವರು ವಿವೇಚನೆಯುಳ್ಳ ಬಂಡವಾಳ ಹೂಡುವಿಕೆಯನ್ನೂ ಬೆಲೆ ನೀತಿಗಳನ್ನೂ ಕೈಗೊಳ್ಳಬೇಕೆಂದು ತಮ್ಮ ಲೇಖನದಲ್ಲಿ ಸಲಹೆ ಮಾಡುತ್ತಾರೆ.

ಪ್ರೊ. ಮಿಶ್ರಾರವರು ತಮ್ಮ ಮತ್ತೊಂದು ಲೇಖನದಲ್ಲಿ (೨೦) ಪ್ರಾದೇಶಿಕ

ಸಮಸ್ಯೆಗಳು, ಬಂಡವಾಳ ಹೂಡುವಿಕೆಯ ವಿಧಾನಗಳು ಮತ್ತು ಅಭಿವೃದ್ಧಿಗಾಗಿ ಹೂಡಬೇಕಾಗಿರುವ ತಂತ್ರಗಳು ಎಂಬ ವಿಷಯವನ್ನು ಕುರಿತು ವಿಮರ್ಶಿಸಿದ್ದಾರೆ. ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ನಾವು ಹಿಡಿದಿರುವ ಮಾರ್ಗ ವ್ಯಾವಹಾರಿಕ ಪ್ರಯೋಜನ ದೃಷ್ಟಿಯಿಂದ ಅಷ್ಟು ಸರಿಯಾಗಿಲ್ಲವೆಂಬುದು ಅವರ ಭಾವನೆ. ಈ ಲೇಖನ ಬಹಳ ವಿಚಾರಾತ್ಮಕವಾಗಿದ್ದರೂ ಇದರಲ್ಲಿಯೂ ಕೆಲವು ಅಸಮಂಜಸ ನಿರೂಪಣೆಗಳು ಕಾಣುತ್ತವೆ. ಉದಾಹರಣೆಗೆ, ಇವರು ಪ್ರಾದೇಶಿಕ ಯೋಜನೆಯ ನಾಲ್ಕು ಹಂತಗಳ ವಿಷಯವಾಗಿ ಹೇಳುತ್ತಾ ಕೊನೆಯಲ್ಲಿ, ರಾಷ್ಟ್ರೀಯ ಮತ್ತು ಪ್ರಾದೇಶಿಕ ಗುರಿಗಳು ಕೊನೆಯ ಪಕ್ಷ ತತ್ತ್ವಶಃ ಒಂದಾಗಬೇಕೆನ್ನುತ್ತಾರೆ. ಇವರ ಮೊದಲನೆಯ ಲೇಖನ ಮತ್ತು ಡಾ. ಲಿವೆನ್‌ರವರ ಲೇಖನ ಓದಿದವರಿಗೆ ಇದು ಸ್ವಲ್ಪ ಸಂದೇಹಕ್ಕೆಡೆಯುಂಟಾಗುತ್ತದೆ. ಬಹುಶಃ ಲೇಖನಗಳ ಧಾಟಿಯಲ್ಲಿ ಈ ಲೇಖಕರು ಸಮಂಜಸತೆಗೆ ಅಷ್ಟು ಗಮನಕೊಟ್ಟಹಾಗಿಲ್ಲವೆಂದು ಕಾಣುತ್ತದೆ.

ಈ ಪುಸ್ತಕದ ನಾಲ್ಕನೆಯ ಮತ್ತು ಐದನೆಯ ಭಾಗಗಳಲ್ಲಿ ಪ್ರಾದೇಶಿಕ ಯೋಜನೆಯ ಮೇಲೆ ಉದಾಹರಣೆಯ ರೀತಿಯಲ್ಲಿ, ವ್ಯಾಪನೆಯ ರೀತಿಯಲ್ಲಿ ಅಧ್ಯಯನಗಳನ್ನು ಕಾಣಬಹುದು. ಇವುಗಳಲ್ಲಿ ಆಂಥೊಸಿಕುಲ್ಕಿನ್‌ಸ್ಕಿ, ಸ್ಪೋನಿಯರ್, ಮುಖರ್ಜಿ, ದತ್ತಾತ್ರಿ ಮತ್ತು ರಾಜ್ ಮತ್ತು ಶ್ರೀಮತಿ ಬಾರ್ಬರಾ ವಾರ್ಡ್‌ರವರ ಲೇಖನಗಳು ಬಹಳ ಮಟ್ಟಿಗೆ ಮೆಚ್ಚಿಗೆಗೆ ಅರ್ಹವಾಗಿವೆ.

ಪ್ರಾದೇಶಿಕ ಯೋಜನೆಯ ಮೇಲೆ ಡಾ. ಮಿಶ್ರಾರವರ ಪುಸ್ತಕ ಹೊಸದೇನಲ್ಲ. ಉತ್ತರ ಅಮೆರಿಕ ಮತ್ತು ಯೂರೋಪ್‌ಗಳಲ್ಲಿ ಈಗಾಗಲೇ ಬಹಳ ಒಳ್ಳೆಯ ಗ್ರಂಥಗಳು ಪ್ರಕಟವಾಗಿವೆ. ಆದರೂ 'ಪ್ರಾದೇಶಿಕ ಯೋಜನೆ' ನಮ್ಮ ದೇಶದಲ್ಲಿ ಈ ರೂಪದಲ್ಲಿ ಪ್ರಕಟವಾಗಿರುವುದು ಮೊಟ್ಟಮೊದಲು. ಈ ಪುಸ್ತಕ ಪ್ರಾದೇಶಿಕ ವಿಚಾರ, ಪ್ರಾದೇಶಿಕ ಸಮಸ್ಯೆಗಳು, ಮತ್ತು ಪ್ರಾದೇಶಿಕ ಯೋಜನೆಯ ವಿಷಯವಾಗಿ ಅಧ್ಯಯನ ಮಾಡುವವರಿಗೆ, ನಮ್ಮ ದೇಶದವರಿಗೇ ಅಲ್ಲದೆ ನಮ್ಮ ಹಾಗೆ ಆರ್ಥಿಕ ಪ್ರಗತಿಯಲ್ಲಿ ಹೆಜ್ಜೆ ಇಡುತ್ತಿರುವ ಎಲ್ಲ ದೇಶದವರಿಗೂ ಮಾರ್ಗದರ್ಶಕವಾಗಿದೆ. ಡಾ. ಮಿಶ್ರಾರವರು ಇದೇ ರೀತಿ ಇನ್ನೂ ಒಳ್ಳೆಯ ಮಟ್ಟದಲ್ಲಿ ಪ್ರಾದೇಶಿಕ ಯೋಜನೆಯ ಮೇಲೆ ಪ್ರಕಟನೆಗಳನ್ನು ತಂದು ಜ್ಞಾನಾಭಿವೃದ್ಧಿಗೆ ಮತ್ತಷ್ಟು ನೆರವಾಗುತ್ತಾರೆಂದು ಹಾರೈಸಬಹುದು.

—ಡಾ. ಎಂ. ಮಾದಯ್ಯ

ಸಂಪಾದಕೀಯ

ಅಭಿವೃದ್ಧಿ ಅಧ್ಯಯನ ಸಂಸ್ಥೆ

ಭಾರತ ಸ್ವತಂತ್ರವಾದಂದಿನಿಂದ ಈಚೆಗಿನ ಕಾಲದಲ್ಲಿ ನಮ್ಮ ಜನಜೀವನದ ನಾನಾ ಕ್ಷೇತ್ರಗಳಲ್ಲಿ ಸಂಭವಿಸುತ್ತಿರುವ ಬದಲಾವಣೆಗಳು ಎಷ್ಟೊಂದು ಅಗಾಧವೂ ಮೂಲಭೂತವೂ ಆದಂಥವು—ಎಂಬುದು ಇವುಗಳ ನಡುವೆಯೇ ಜೀವಿಸುತ್ತಿರುವ ಈ ತಲೆಮಾರಿನ ಜನಕ್ಕೆ ಸುಲಭವಾಗಿ ಅರ್ಥವಾಗಲಾರದು. ಆಡಳಿತ, ರಾಜಕೀಯ, ಸಮಾಜ, ಅರ್ಥವ್ಯವಸ್ಥೆ—ಎಲ್ಲವೂ ರೂಢಮೂಲವಾಗಿ ವ್ಯತ್ಯಾಸಗೊಳ್ಳುತ್ತಿವೆ. ವ್ಯಕ್ತಿಸ್ವಾತಂತ್ರ್ಯಕ್ಕೆ ವಿಶೇಷಪ್ರಾಧಾನ್ಯ ನೀಡಿರುವ ನಮ್ಮ ದೇಶದಲ್ಲಿ ಯಾವ ಪರಿವರ್ತನೆಯೇ ಆಗಲಿ, ಸರ್ವಜನಸಮ್ಮತವಲ್ಲದಿದ್ದರೂ ಬಹುಜನ ಸಮ್ಮತವಾದರೂ ಆಗಲೇಬೇಕು. ಅಲ್ಪಸಂಖ್ಯಾತರಿಗೂ ಅಹಿತಕಾರಿಯಾಗದ ಹಾಗೆ ಬಹುಜನಸೌಖ್ಯ ಸಾಧಿಸುವಂಥ ಕ್ರಮಗಳನ್ನು ಕೈಗೊಳ್ಳುವುದು ಹೇಗೆಂಬುದೇ ಪ್ರಜಾಪ್ರಭುತ್ವದ ಕೂಟಪ್ರಶ್ನೆ. ಆಪಾತತಃ ಅಸಾಧ್ಯವೆನಿಸುವ ಆದರ್ಶವಿದು. ಈ ಆದರ್ಶಸಾಧನೆಗೆ ಎಷ್ಟೆಷ್ಟು ಹತ್ತಿರ ಬರುವುದು ಸಾಧ್ಯವೋ ಅಷ್ಟಷ್ಟು ಮಟ್ಟಿಗೆ ನಮ್ಮ ವ್ಯವಸ್ಥೆ ಸಾರ್ಥಕವೆನಿಸುತ್ತದೆ. ವಾದ, ಪ್ರತಿವಾದ, ಪ್ರತಿಭಟನೆ, ಚಳವಳಿ, ವಿಭಿನ್ನಹಿತಾಸಕ್ತಿಗಳ ಪರಸ್ಪರ ತಾತ್ತ್ವಿಕ ಘರ್ಷಣೆ—ಮುಂತಾದ ಒತ್ತಡಗಳಿಗೆ ಸಿಲುಕಿರುವ ನಮ್ಮ ಪರಿವರ್ತನಶೀಲ ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತಿದೆ, ಏನೇನು ಸಾಧಿಸುತ್ತಿದೆ—ಎಂಬುದರ ಸ್ಪಷ್ಟಚಿತ್ರ ಪಡೆಯುವುದು ಕಷ್ಟವಾಗಿದೆ.

ರಾಷ್ಟ್ರಾಭಿವೃದ್ಧಿಯಲ್ಲಿ ಆಸಕ್ತಿ ತಳೆದಿರುವ ಸರ್ಕಾರವೂ ನಾನಾ ಸಂಸ್ಥೆಗಳೂ ಜಾರಿಗೆ ತರುತ್ತಿರುವ ಕಾರ್ಯಕ್ರಮಗಳಿಂದ ಸಾಮಾಜಿಕ ಆರ್ಥಿಕ ವ್ಯವಸ್ಥೆಗಳ ಮೇಲೆ ಆಗುತ್ತಿರುವ ಪರಿಣಾಮವೇನೆಂಬುದನ್ನು ಅಳೆಯುವ ಯಾವ ಸಮಗ್ರ ಪ್ರಯತ್ನವೂ ಇಂದು ಭಾರತದಲ್ಲಿಲ್ಲ. ವಿಶ್ವವಿದ್ಯಾನಿಲಯವೇ ಮುಂತಾದ ಜ್ಞಾನ ಕ್ಷೇತ್ರಗಳಲ್ಲಿ ಅಧ್ಯಯನ ನಿರತರಾದ ವಿದ್ವಾಂಸ ಜನಕ್ಕೆ ವಾಸ್ತವ ಪರಿಸ್ಥಿತಿಯೊಂದಿಗೆ ಹೆಚ್ಚಿನ ಸಂಪರ್ಕ ಸಾಧ್ಯವಿಲ್ಲ. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಅವರಿಗೆ ಸಹಭಾಗಿತ್ವ ಲಭ್ಯವಾಗಿಲ್ಲ. ಪರಿವರ್ತನ ಕಾರ್ಯದಲ್ಲಿ ನಿರತರಾದ ಆಡಳಿತಗಾರರೂ ತಂತ್ರಜ್ಞರೂ ದಿನದಿನವೂ ಅನಿರೀಕ್ಷಿತವಾಗಿ ಎದುರಿಸುವ ಸಮಸ್ಯೆಗಳ ಪರಿಹಾರದಲ್ಲಿ ಸಂಶೋಧಕನ ವಿಶ್ಲೇಷಕಚಿತ್ತವೃತ್ತಿ ತಳೆಯುವುದು ಸಾಧ್ಯವಿಲ್ಲ. ಪೂರ್ವಾಗ್ರಹ ದೂರರಾಗಿ ಸಮಸ್ಯೆಗಳ ಪೂರ್ವಾಪರಗಳನ್ನು ವಿಚಾರಿಸುವ ಅವಧಾನ ಅವರಿಗೆ ಇರುವುದಿಲ್ಲ. ಹೀಗೆ ನಮ್ಮ ಜನಜೀವನದ ಎರಡು ಮುಖ್ಯ ಘಟಕಗಳಲ್ಲಿ ಒಂದಕ್ಕೆ

ಕಣ್ಣುಂಟು, ಕೈಕಾಲುಗಳಿಲ್ಲ; ಇನ್ನೊಂದಕ್ಕೆ ಈ ಅಂಗಗಳಿದ್ದೂ ಅವಲೋಕನ ಶಕ್ತಿಯಿಲ್ಲ. ಗತಕಾಲದ ಬದುಕಿನ ಸಮಸ್ಯೆಗಳ ಆಧಾರದ ಮೇಲೆ ಕಟ್ಟಿದ ಸೂತ್ರಗಳಿಂದ ಇಂದಿನ ಜ್ವಲಂತ ಪ್ರಶ್ನೆಗಳ ಪರಿಹಾರಕ್ಕೆ ಅಷ್ಟಾಗಿ ಪ್ರಯೋಜನವಾಗದೆ ಹೋಗಬಹುದು. ಇಂದಿನ ವಾಸ್ತವ ಸಮಸ್ಯೆಗಳಿಗೂ ಆ ಸೂತ್ರಗಳಿಗೂ ಒಂದು ತಲೆಮಾರಿನ ಅಂತರವೇ ಇದ್ದರೂ ಆಶ್ಚರ್ಯವಿಲ್ಲ. ಇದನ್ನು ತೊಡೆದುಹಾಕಬೇಕಾದರೆ ಜನಜೀವನದ ಈ ಎರಡೂ ವಿಭಾಗಗಳ ಸಹಚಿಂತನೆಯೂ ಸಹಯೋಗವೂ ಅತ್ಯವಶ್ಯ.

ಮಾನವಿಕ ಮತ್ತು ಸಮಾಜವಿಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿ ನಿರತರಾಗಿರುವ ವಿದ್ವಾಂಸರಲ್ಲೇ ಇಂದು ಪರಸ್ಪರವಾಗಿ ಜ್ಞಾನವಿನಿಮಯ ಕಾರ್ಯ ನಡೆಯುವುದು ಅತ್ಯಂತ ಅವಶ್ಯ. ಒಂದೇ ತಾಯಿಬೇರಿನಿಂದ ಹೊರಟ ಈ ಕವಲುಗಳು ಈಗ ಪರಸ್ಪರ ಅಪರಿಚಿತವಷ್ಟೇ ಅಲ್ಲ, ಸ್ಪರ್ಧಾತ್ಮಕವಾಗಿ ಕೂಡ ಪರಿಣಮಿಸಿವೆ. ಸಂಶೋಧನೆಯ ಕಾರ್ಯ ಪಾತಾಳಗರಡಿಯ ಹಾಗೆ, ಎಂಬುದೇನೋ ನಿಜವೇ. ಆಳಕ್ಕೆ ಹೋದಾಗಲೇ ಅದಕ್ಕೆ ಸಿದ್ಧಿ. ಆದರೆ ಈ ಅವಸರದಲ್ಲಿ ಸಮಕಾಲೀನ ಪ್ರಜ್ಞೆಯನ್ನೂ ವಿವಿಧ ಜ್ಞಾನಕ್ಷೇತ್ರಗಳ ಪರಸ್ಪರ ಪೂರಕಗುಣವನ್ನೂ ಸಮಗ್ರವ್ಯವಸ್ಥೆಯಲ್ಲಿ ಈ ಕ್ಷೇತ್ರಗಳ ಸನ್ನಿವೇಶ ಪ್ರಾಮುಖ್ಯವನ್ನೂ ಮರೆತದ್ದೇ ಆದರೆ ಆಗ ಸಂಶೋಧನತಪಸ್ಸು ಜಡವಾಗುತ್ತದೆ, ಬರಿಯ ಜಂಜಡವಾಗುತ್ತದೆ.

ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನವಿಭಾಗಗಳು ಸಮಸಾಮಯಿಕ ಪ್ರಜ್ಞೆ ಬೆಳಸಿಕೊಂಡು ಹೆಚ್ಚಿನ ಸಹಯೋಗದಿಂದ ಕೆಲಸಮಾಡುವುದಲ್ಲದೆ, ಸಾಮಾಜಿಕ-ಆರ್ಥಿಕ ಕ್ಷೇತ್ರಗಳಲ್ಲಿ ಪ್ರಯೋಗಸಾಧ್ಯವಾಗುವಂಥ ಸೂತ್ರಗಳನ್ನು ರೂಪಿಸುವ ಉದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಅಭಿವೃದ್ಧಿ ಅಧ್ಯಯನ ಸಂಸ್ಥೆಯೊಂದು ಸ್ಥಾಪಿತವಾಗಿರುವುದು ಸ್ವಾಗತಾರ್ಹ. ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ ರಾಜ್ಯಪಾಲರೂ ಆದ ಶ್ರೀ ಧರ್ಮವೀರ ಅವರು ಕಳೆದ ತಿಂಗಳ (ಜುಲೈ) ೧೨ರಂದು ಆರಂಭಿಸಿದ ಈ ಸಂಸ್ಥೆ ಆಧುನಿಕ ವಿಶ್ವದ ವರವೂ ಶಾಪವೂ ಆಗಿರುವ ವಿಶೇಷಪ್ರಾವೀಣ್ಯದ (ಸ್ಪೆಷಲೈಸೇಷನ್) ಓರೆಕೋರೆಗಳನ್ನು ನಿವಾರಿಸಿ ಅದಕ್ಕೆ ಹೆಚ್ಚಿನ ಸೃಜನಾತ್ಮಕ ಶಕ್ತಿಯನ್ನು ತುಂಬಲೆಂದು ಹಾರೈಸುತ್ತೇವೆ.

ಈ ಸಂಚಿಕೆಯ ಲೇಖಕರು

೧ ಡಾ. ಬಿ. ಕೆ. ಗುರುರಾಜರಾವ್, ಸಹಸಂಪಾದಕರು, ಕನ್ನಡ ವಿಶ್ವಕೋಶ, ಮೈಸೂರು

೨ ಬಿ. ನಾಗಪ್ಪ, ಮಾನಸಗಂಗೋತ್ರಿಯ ಗ್ರಂಥಾಲಯಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೩ ಡಿ. ಎಸ್. ಜಯಪ್ಪಗೌಡ, ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಎಂ.ಎ. ಪದವೀಧರ

೪ ತಾರಾನಾಥ ಭಟ್ಟ, ಸಂಶೋಧನ ವಿದ್ಯಾರ್ಥಿ, ಜವಾಹರಲಾಲ ನೆಹರೂ ವಿಶ್ವವಿದ್ಯಾಲಯ, ನವದೆಹಲಿ

೫ ಪುಟ್ಟಣ್ಣ ಚಿಕ್ಕಬಿದರೆ, ಶಾರದಾವಿಲಾಸ ಲಾ ಕಾಲೇಜಿನಲ್ಲಿ ನ್ಯಾಯಶಾಸ್ತ್ರ ವಿದ್ಯಾರ್ಥಿ

೬ ಟಿ. ಆರ್. ನಾಗಪ್ಪ, ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಸಹಾಯಕ ಸಂಶೋಧಕರು

೭ ಆರ್. ವಿ. ಹೆಗಡೆ, ಭದ್ರಾವತಿಯ ಭದ್ರಾ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕರು

೮ ಡಾ. ಕೆ. ಎನ್. ವೆಂಕಟರಾಯಪ್ಪ, ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರು

೯ ಎಂ. ಕೃಷ್ಣಪ್ಪ, ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಸಹಾಯಕ ಸಂಶೋಧಕರು

೧೦ ಡಾ. ಕೆ. ಎಚ್. ಚೆಲುವರಾಜು, ಮಾನಸಗಂಗೋತ್ರಿಯ ರಾಜ್ಯಶಾಸ್ತ್ರ ವಿಭಾಗದಲ್ಲಿ ರೀಡರ್

೧೧ ಎಂ. ಶಿವಲಿಂಗಯ್ಯ, ಮಾನಸಗಂಗೋತ್ರಿಯ ಭೂಗೋಳಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೧೨ ಎಚ್. ಎಂ. ನಾಗರಾಜರಾವ್, ಮೈಸೂರು ವಿಶ್ವವಿದ್ಯಾನಿಲಯದ ಭಾರತಶಾಸ್ತ್ರ ಎಂ.ಎ. ಪದವೀಧರ

೧೩ ಡಿ. ಶ್ರೀನಿವಾಸ, ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಅಧ್ಯಾಪಕರು

೧೪ 'ಇಂ', ಕೆ. ಪಿ. ಇಂದುಕಲಾ, ಮೈಸೂರು

೧೫ ಎಚ್.ಎಸ್.ಕೆ., ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಕನ್ನಡ ವಿಶ್ವಕೋಶದ ಮಾನಪಿಕ ಸಂಪಾದಕರು; 'ಮಾನವಿಕ ಕರ್ಣಾಟಕ'ದ ಸಂಪಾದಕರಲ್ಲೊಬ್ಬರು

೧೬ ಬಿ.ಕೆ.ಜಿ., ಡಾ. ಬಿ. ಕೆ. ಗುರುರಾಜರಾವ್

೧೭ ಸಿ. ಕೆ. ರೇಣುಕಾರ್ಯ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕರು

೧೮ ಎಸ್. ಚನ್ನಪ್ಪ, ಕನ್ನಡ ವಿಷಯ ವಿಶ್ವಕೋಶದ ಉಪಸಂಪಾದಕರು

೧೯ ಪಿ. ಆರ್. ತಿಪ್ಪೇಸ್ವಾಮಿ, ಕನ್ನಡ ಜಾನಪದ ವಸ್ತು ಸಂಗ್ರಹಾಲಯದಲ್ಲಿ ಕ್ಷೇತ್ರ ಸಹಾಯಕರು

೨೦ ಡಾ. ಅಬ್ದುಲ್ ಅಜೀಜ್, ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಅರ್ಥಶಾಸ್ತ್ರ ಅಧ್ಯಾಪಕರು

೨೧ ಡಾ. ಎಂ. ಮಾದಯ್ಯ, ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್

೨೨ ಸಿ.ಕೆ.ಆರ್., ಸಿ. ಕೆ. ರೇಣುಕಾರ್ಯ

ಮಾನವಿಕ ಕರ್ಣಾಟಕ

ಸಂಪುಟ ೧

೧೯೭೦–೭೧

ವಿಷಯ ಸೂಚಿ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ, ಮೈಸೂರು

ವಿಷಯ ಸೂಚಿ

ವ್ಯಕ್ತಿ, ಜೀವನ

ಲೇಖನಗಳು

ವಸ್ತುಕೋಶ

ಪುಸ್ತಕಲೋಕ

ಲೇಖಕ ಸೂಚಿ

WO 9157—MUPM—2000 copies—30-7-1971